ಮಂಗಳೂರು
ಗುರುವಾರ, 7 ಮೇ 2026
ಸಂಪುಟ 48, ಸಂಚಿಕೆ 49 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಕಿರುಸುದ್ದಿ

ಐಸ್ ಹಾಕಿ ಸ್ಪರ್ಧೆಯಲ್ಲಿ ನಿಷ್ಕ್ ಹರೀಶ್ ಸಾಲಿಯನ್ ರಾಷ್ಟ್ರಮಟ್ಟಕ್ಕೆ



• **ಬೆಳ್ತಂಗಡಿ:** ಕುತ್ಲೂರು ಗ್ರಾಮದ ಸಮೃದ್ಧಿ ಮನೆಯ ಉದಯೋನ್ಮುಖ ಸ್ಕೇಟರ್ ನಿಷ್ಕ್ ಹರೀಶ್ ಸಾಲಿಯನ್ ಅವರು ಐಸ್ ಹಾಕಿ ಸ್ಪರ್ಧೆಯಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಇವರು ಸಾಫ್ಟ್‌ವೇರ್ ಇಂಜಿನಿಯರ್ ಹರೀಶ್ ಡಾಕಯ್ಯ ಮತ್ತು ಬಿನಾಕಾ ಹರೀಶ್ ದಂಪತಿಯ ಪುತ್ರ. 11 ವರ್ಷದ ನಿಷ್ಕ್ ಅವರು ಏಪ್ರಿಲ್ 20ರಿಂದ 29ರವರೆಗೆ ಡೆಹ್ರಾಡೂನ್‌ನಲ್ಲಿ ನಡೆದ 10 ದಿನಗಳ ಐಸ್ ಹಾಕಿ ರಾಜ್ಯ ಶಿಬಿರದಲ್ಲಿ ಭಾಗವಹಿಸಿ, ಅತ್ಯುತ್ತಮ ಪ್ರದರ್ಶನ ನೀಡುವ ಮೂಲಕ ತಂಡ ವಿಭಾಗದಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ. ಈ ಸಾಧನೆಯ ಹಿನ್ನೆಲೆಯಲ್ಲಿ ಅವರು ರಾಷ್ಟ್ರಮಟ್ಟದ ಟೂರ್ನಿಗೆ ಆಯ್ಕೆಯಾಗಿದ್ದಾರೆ. ಜೂನ್ ತಿಂಗಳ ಕೊನೆಯ ವಾರದಲ್ಲಿ ಡೆಹ್ರಾಡೂನ್‌ನಲ್ಲೇ ನಡೆಯಲಿರುವ ರಾಷ್ಟ್ರೀಯ ಐಸ್ ಹಾಕಿ ಟೂರ್ನಿಯಲ್ಲಿ 14 ವರ್ಷದೊಳಗಿನವರ ಕರ್ನಾಟಕ ತಂಡವನ್ನು ಅವರು ಪ್ರತಿನಿಧಿಸಲಿದ್ದಾರೆ. ಪ್ರಸ್ತುತ ಬೆಂಗಳೂರಿನ ಅಕ್ಷಯನಗರದಲ್ಲಿ ವಾಸವಾಗಿರುವ ನಿಷ್ಕ್ ಅವರು ಇಲೆಕ್ಟ್ರಾನಿಕ್ ಸಿಟಿಯ ಡೆಲ್ಲಿ ಪಬ್ಲಿಕ್ ಸ್ಕೂಲ್‌ನಲ್ಲಿ 6ನೇ ತರಗತಿ ವ್ಯಾಸಂಗ ಮಾಡುತ್ತಿದ್ದಾರೆ. ಸ್ಕೇಟಿಂಗ್ ಕೋಚ್ ಶೈಖ್ ಅಬ್ದುಲ್ ಮತ್ತು ಇನ್‌ಲೈನ್ ಹಾಕಿ ಕೋಚ್ ಅಶ್ವಿನ್ ಅವರ ಮಾರ್ಗದರ್ಶನದಲ್ಲಿ ಅವರು ತರಬೇತಿ ಪಡೆದಿದ್ದಾರೆ. ನಿಷ್ಕ್ ಅವರ ಈ ಸಾಧನೆ ಕುತ್ಲೂರು ಗ್ರಾಮಕ್ಕೆ ಹೆಮ್ಮೆ ತಂದುಕೊಟ್ಟಿದೆ. ಅವರು ಪ್ರಗತಿಪರ ಕೃಷಿಕ ಸಮೃದ್ಧಿ ಡಾಕಯ್ಯ ಪೂಜಾರಿ ಅವರ ಮೊಮ್ಮಗನಾಗಿದ್ದಾರೆ.

ಹುಲಿ ದಾಳಿಗೆ ಹಸು ಬಲಿ

• **ವೀರಾಜಪೇಟೆ:** ಇಲ್ಲಿಗೆ ಸಮೀಪದ ಬಿ.ಶೆಟ್ಟಿಗೇರಿ ಗ್ರಾಮದಲ್ಲಿ ಹುಲಿ ದಾಳಿಗೆ ಹಸು ಬಲಿಯಾಗಿರುವ ಘಟನೆ ಬುಧವಾರ ನಡೆದಿದೆ. ಬಿ.ಶೆಟ್ಟಿಗೇರಿ ಗ್ರಾಮದ ನಿವಾಸಿ ನಾಮೇರ ಜಯ ಎಂಬವರಿಗೆ ಸೇರಿದ ಹಸು ಹುಲಿ ದಾಳಿಗೆ ತುತ್ತಾಗಿದೆ. ಕುಂದ ಬೆಟ್ಟದ ಬಳಿ ಹುಲಿಗಳಿದ್ದು, ಅಲ್ಲಿಂದ ಕೆಳಗೆ ಬಂದಿರಬಹುದು ಎನ್ನಲಾಗುತ್ತಿದೆ. ಕೊಡಗಿನಲ್ಲಿ ನಿರಂತರವಾಗಿ ಒಂದೆಡೆ ಆನೆ ದಾಳಿ, ಮತ್ತೊಂದೆಡೆ ಹುಲಿ ದಾಳಿ ನಡೆಯುತ್ತಿದ್ದರೂ, ವನ್ಯಜೀವಿ ಮಾನವ ಸಂಘರ್ಷ ತಡೆಗಟ್ಟುವಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿಫಲವಾಗಿವೆ. ಸಾರ್ವಜನಿಕರು ನಿರಂತರ ಭಯದ ವಾತಾವರಣದಲ್ಲಿ ಜೀವನ ಸಾಗಿಸಬೇಕಾಗಿದೆ ಎಂದು ಗ್ರಾಮಸ್ಥರು ದೂರಿದ್ದಾರೆ.

ಲಾರಿ ಡಿಕ್ಕಿ: ಪಾದಚಾರಿ ಸಾವು

• **ಬಂಟ್ವಾಳ:** ಫರಂಗಿಪೇಟೆಯಲ್ಲಿ ನಡೆದ ಅಪಘಾತದಲ್ಲಿ ಲಾರಿಯೊಂದು ಡಿಕ್ಕಿಯಾಗಿ ಪಾದಚಾರಿಯೊಬ್ಬರು ಸಾವನ್ನಪ್ಪಿದ್ದಾರೆ. ಸಲಾವುದ್ದೀನ್ ಮೃತಪಟ್ಟವರಾಗಿದ್ದಾರೆ. ಮಂಗಳೂರು ಬೆಂಗಳೂರು ದ್ವಿಪಥ ರಾಷ್ಟ್ರೀಯ ಹೆದ್ದಾರಿಯಲ್ಲಿ ಬಿ.ಸಿ.ರೋಡ್ ಕಡೆಯಿಂದ ಮಂಗಳೂರು ಕಡೆಗೆ ಲಾರಿಯೊಂದನ್ನು ಅದರ ಚಾಲಕ ಎಡಬದಿಗೆ ಚಲಾಯಿಸಿಕೊಂಡು ಬಂದು, ಸೇವಾಂಜಲಿ ಹಾಲ್ ಎದುರು ರಸ್ತೆ ಬದಿ ಪಾದಚಾರಿ ಸಲಾವುದ್ದೀನ್ ಅವರಿಗೆ ಡಿಕ್ಕಿ ಹೊಡೆದಿದೆ. ತೀವ್ರ ಗಾಯಗೊಂಡ ಅವರನ್ನು ಕಾರಿನಲ್ಲಿ ಮಂಗಳೂರಿನ ಖಾಸಗಿ ಆಸ್ಪತ್ರೆಗೆ ಚಿಕಿತ್ಸೆಗೆಂದು ಕರೆದುಕೊಂಡು ಹೋಗಿದ್ದು, ಅಲ್ಲಿ ಪರಿಶೀಲಿಸಿದ ವೈದ್ಯರು ಮೃತಪಟ್ಟಿರುವುದಾಗಿ ತಿಳಿಸಿದ್ದಾರೆ. ಈ ಕುರಿತು ಬಂಟ್ವಾಳ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾದಕ ವಸ್ತು ಸೇವನೆ: ಇಬ್ಬರು ಪೊಲೀಸ್ ವಶಕ್ಕೆ

• **ಮಂಗಳೂರು:** ಮಾದಕ ವಸ್ತು ಸೇವನೆ ಪ್ರಕರಣಕ್ಕೆ ಸಂಬಂಧಿಸಿ ಇಬ್ಬರು ಆರೋಪಿಗಳನ್ನು ಕಾವೂರು ಠಾಣಾ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ಕೊಡ್ಯಡ್ಕ ಮಿತ್ತಬೈಲ್ ನಿವಾಸಿ ಶ್ರವಣ್ (19) ಮತ್ತು ಕಾವೂರು ಮುಲ್ಲಕಾಡು ನಿವಾಸಿ ಪ್ರಥಮ್ (21) ಬಂಧಿತರು. ಮೇ 5ರಂದು ಕಾವೂರು ಠಾಣಾ ಪೊಲೀಸ್ ನಿರೀಕ್ಷಕರಾದ ರಾಘವೇಂದ್ರ ಎಂ. ಬೈಂದೂರು ಅವರು ರಾತ್ರಿ ರೌಂಡ್ಸ್ ಕರ್ತವ್ಯದಲ್ಲಿದ್ದಾಗ ರಾತ್ರಿ 12.15ರ ಸುಮಾರಿಗೆ ಮುಲ್ಲಕಾಡು ಬಸ್ ನಿಲ್ದಾಣದ ಬಳಿ ಆರೋಪಿಗಳು ಮಾದಕ ವಸ್ತು ಸೇವನೆ ಮಾಡುತ್ತಿದ್ದುದು ಕಂಡುಬಂದಿದೆ. ಅವರನ್ನು ವಿಚಾರಣೆಗೊಳಪಡಿಸಿದಾಗ ಮಾದಕ ವಸ್ತು ಸೇವನೆ ಮಾಡಿರುವುದನ್ನು ಒಪ್ಪಿಕೊಂಡಿದ್ದಾರೆ. ಬಳಿಕ ಆರೋಪಿಗಳನ್ನು ವೈದ್ಯಕೀಯ ತಪಾಸಣೆಗೊಳಪಡಿಸಲಾಗಿದ್ದು, ವೈದ್ಯರು ತಪಾಸಣೆ ನಡೆಸಿ ಎಂಬ ಮಾದಕ ವಸ್ತು ಸೇವನೆ ಮಾಡಿರುವುದಾಗಿ ವರದಿ ನೀಡಿದ್ದಾರೆ. ಆರೋಪಿಗಳ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಂತೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಂಜೇಶ್ವರದಲ್ಲಿ 6ರ ಹರೆಯದ ಬಾಲಕ ಸಮುದ್ರದಲ್ಲಿ ಮುಳುಗಿ ಮೃತ್ಯು

• **ಮಂಜೇಶ್ವರ:** ಮಂಜೇಶ್ವರ ಸಮುದ್ರ ತೀರದಲ್ಲಿ ಆಟವಾಡುತ್ತಿದ್ದ ಆರರ ಹರೆಯದ ಬಾಲಕ ಸಮುದ್ರದಲ್ಲಿ ಮುಳುಗಿ ಮೃತಪಟ್ಟ ಘಟನೆ ಸಂಭವಿಸಿದೆ. ಕರ್ನಾಟಕ ನಿವಾಸಿಯಾದ ಫೈಸಾನ್ ಮೃತಪಟ್ಟ ಬಾಲಕ. ಮಂಗಳವಾರ ಸಂಜೆ 6 ಗಂಟೆಗೆ ವೇಳೆ ಈ ದಾರುಣ ಘಟನೆ ಸಂಭವಿಸಿದೆ. ಹೊಸಬೆಟ್ಟುವಿನ ಸಂಬಂಧಿಕರ ಮನೆಗೆ ಫೈಸಾನ್ ಆಗಮಿಸಿದ್ದ. ಇತರ ಮೂರು ಮಕ್ಕಳ ಜೊತೆ ಹೊಸಬೆಟ್ಟು ಸಮುದ್ರ ತೀರದಲ್ಲಿ ಆಟವಾಡುತ್ತಿದ್ದ ಮಧ್ಯೆ ದುರಂತ ಸಂಭವಿಸಿದೆ. ಮೂರು ಮಕ್ಕಳನ್ನು ದಡಕ್ಕೆ ಸೇರಿಸಿ ಆಸ್ಪತ್ರೆಗೆ ತಲುಪಿಸಲಾಗಿತ್ತಾದರೂ ಫೈಸಾನ್‌ನ ಜೀವ ಉಳಿಸಲು ಸಾಧ್ಯವಾಗಿಲ್ಲ. ಮಂಜೇಶ್ವರ ಪೊಲೀಸರು ಸ್ಥಳಕ್ಕಾಗಿಸಿ ತನಿಖೆ ಕೈಗೊಂಡರು.

ಜಾಗದ ತಕರಾರು: ಕತ್ತಿಯಿಂದ ಹಲ್ಲೆ

• **ಶಂಕರನಾರಾಯಣ:** ಜಾಗದ ತಕರಾರಿನ ವಿಚಾರದಲ್ಲಿ ಕತ್ತಿಯಿಂದ ಕಡಿದು ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ಮೇ 4ರಂದು ಮಧ್ಯಾಹ್ನ ವೇಳೆ ನಡೆದಿದೆ. ಹಲ್ಲೆಗೊಳಗಾದವರನ್ನು ಬೆಳ್ವೆ ಗ್ರಾಮದ ಮುರಳೀಧರ ಅಲ್ಸೆ (37) ಎಂದು ಗುರುತಿಸಲಾಗಿದೆ. ಇವರು ತಮ್ಮ ಜಾಗದ ಗಡಿಭಾಗದಲ್ಲಿ ಬೇಲಿಕಂಬವನ್ನು ಸರಿಪಡಿಸುತ್ತಿರುವಾಗ ಅಲ್ಲಿಗೆ ಬಂದ ಆರೋಪಿ ಪ್ರಕಾಶ ಅಲ್ಸೆ, ಮುರಳೀಧರ್ ಅವರನ್ನು ಕೊಲ್ಲುವ ಉದ್ದೇಶದಿಂದ ಕತ್ತಿಯಿಂದ ಕಡಿದು ಹಲ್ಲೆ ಮಾಡಿ ರುವುದಾಗಿ ದೂರಲಾಗಿದೆ. ಗಾಯಗೊಂಡಿರುವ ಮುರಳೀಧರ್ ಅಲ್ಸೆ ಕುಂದಾಪುರದ ಸರ್ಜನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಬಗ್ಗೆ ಶಂಕರನಾರಾಯಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉಡುಪಿಯಲ್ಲಿ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್ ಭರವಸೆ

ಸೀಆರ್‌ಝೆಡ್ ಸಮಸ್ಯೆಗೆ ಪರಿಹಾರ

• **ಉಡುಪಿ :** ಜಿಲ್ಲೆಯಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿಗೆ ಸಿಆರ್‌ಝಡ್ ನಿಯಮಗಳಿಂದ ತೊಂದರೆ ಉಂಟಾಗುತ್ತಿದೆ. ನೆರೆಯ ರಾಜ್ಯಗಳಾದ ತಮಿಳುನಾಡು ಹಾಗೂ ಕೇರಳ ಮಾದರಿಯಲ್ಲಿ ರೂಪಿಸಿರುವ ನಿಯಮಗಳನ್ನು ರಾಜ್ಯದಲ್ಲಿಯೂ ಜಾರಿಗೆ ತಂದರೆ ಕಡಲ ತೀರದಲ್ಲಿ ಪ್ರವಾಸೋದ್ಯಮಕ್ಕೆ ಅನುಕೂಲವಾಗಲಿದೆ. ಈ ಬಗ್ಗೆ ಕೇಂದ್ರ ಸರ್ಕಾರದೊಂದಿಗೆ ಮಾತನಾಡಿ ಸಮಸ್ಯೆಯನ್ನು ಬಗೆಹರಿಸುವುದಾಗಿ ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವ ಹೆಚ್.ಕೆ. ಪಾಟೀಲ್ ತಿಳಿಸಿದರು.

ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿಯಲ್ಲಿ ಪ್ರವಾಸೋದ್ಯಮ ಇಲಾಖೆಗೆ ಸಂಬಂಧಿಸಿದಂತೆ ಚರ್ಚಿಸಲು ಆಯೋಜಿಸಲಾದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಶತಮಾನಗಳ ಹಳೆಯ ಕೈಬರಹದ ಪತ್ರಗಳು, ಹಸ್ತಪ್ರತಿಗಳು, ದಾಖಲೆಗಳ ಸಮೀಕ್ಷೆಯನ್ನು ಕೈಗೊಂಡು ಇವುಗಳನ್ನು ಇಂದಿನ ತಂತ್ರಜ್ಞಾನದ ಮೂಲಕ ಶಾಶ್ವತವಾಗಿ ಉಳಿಸಲಾಗುತ್ತದೆ. ಹಸ್ತಪ್ರತಿಗಳ ಸಮೀಕ್ಷೆ, ಸಂರಕ್ಷಣೆ, ಡಿಜಟಲೀಕರಣ, ನೊಂದಣಿ, ಅನುವಾದ ಮಾಡುವ ಮೂಲಕ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಒಂದೇ ವೇದಿಕೆ ಮೂಲಕ ಜನರ ವೀಕ್ಷಣೆಗೆ ಲಭ್ಯವಾಗುವಂತೆ ಮಾಡಲಾಗುವುದು.

ತಾಳೆಗರಿ, ಹಳೆಯ ಹಸ್ತಪ್ರತಿಗಳು, ಇತರೆ ರೂಪಗಳಲ್ಲಿ ಬರೆಯಲ್ಪಟ್ಟ ಪ್ರಾಚೀನ ವಿಜ್ಞಾನ, ಸಾಹಿತ್ಯ, ವೈದ್ಯಕೀಯ ಹಾಗೂ ಧಾರ್ಮಿಕ ಜ್ಞಾನ ಸಂಗ್ರಹಗೊಂಡಿದೆ. ಇವುಗಳ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು.

ಜಿಲ್ಲೆಯಲ್ಲಿ ಈವರೆಗೂ 6,000ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಪೋರ್ಟ್‌ನಲ್ಲಿ ಡಿಜಿಟಲ್ಲೀಕರಣ ಗೊಳಿಸಲಾಗಿದೆ. ಬಾಕಿ ಉಳಿದಿರುವ ಹಸ್ತ ಪ್ರತಿಗಳನ್ನು ಶೀಘ್ರದಲ್ಲಿ ಡಿಜಿಟಲ್ ಗೊಳಿಸಬೇಕೆಂದು ಸೂಚನೆ ನೀಡಿದರು.



> ಕೆಲವು ದ್ವೀಪಗಳು ಮತ್ತು ಬ್ಯಾಕ್‌ವಾಟರ್ ಪ್ರದೇಶಗಳನ್ನು ಪ್ರವಾಸೋದ್ಯಮ ಅಭಿವೃದ್ಧಿಗೆ ಗುರುತಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದ ಅವರು, 'ಒನ್ ಸ್ಟೇಟ್, ಒನ್ ಡೆಸ್ಟಿನೇಶನ್' ಪ್ರವಾಸೋದ್ಯಮ ಇಲಾಖೆಯ ಈ ಯೋಜನೆಯಡಿಯಲ್ಲಿ ಕಾಪು ಪ್ರಸ್ತುತ ಆಯ್ಕೆಯಾಗಿದೆ. ಮುಂದಿನ ದಿನಗಳಲ್ಲಿ ಬಾರ್ಕೂರನ್ನು ಸಹ ಈ ಯೋಜನೆಗೆ ಸೇರಿಸಲಾಗುವುದು.
> ■ ಹೆಚ್.ಕೆ. ಪಾಟೀಲ್, ಸಚಿವ

ಬಾರ್ಕೂರಿನಲ್ಲಿ ವರ್ಷಕ್ಕೆ ಕನಿಷ್ಠ 100 ರಥೋತ್ಸವಗಳನ್ನು ಆಯೋಜಿಸುವ ಸಾಧ್ಯತೆಯನ್ನು ಸರ್ಕಾರ ಪರಿಶೀಲಿಸುತ್ತಿದೆ ಎಂದ ಅವರು, ಇತಿಹಾಸ ಪ್ರಸಿದ್ಧವಾದ ಬಾರ್ಕೂರು ಒಮ್ಮೆ ಆಳುಪ ವಂಶದ ರಾಜಧಾನಿಯಾಗಿದ್ದು, ಪ್ರತಿದಿನವೂ ರಥೋತ್ಸವ ನಡೆಯುತ್ತಿದ್ದುದಾಗಿ ಪರಂಪರೆಯಲ್ಲಿ ಉಲ್ಲೇಖಗಳಿವೆ ಎಂದರು.

ಈ ಯೋಜನೆಯ ಪ್ರಮುಖ ಉದ್ದೇಶ ಜನರನ್ನು ತಮ್ಮ ಮೂಲಗಳಿಗೆ ಮತ್ತೆ ಸಂಪರ್ಕಿಸುವುದರ ಜೊತೆಗೆ, ಬಾರ್ಕೂರನ್ನು ಪ್ರಮುಖ ಸಾಂಸ್ಕೃತಿಕ ಪ್ರವಾಸೋದ್ಯಮ ತಾಣವನ್ನಾಗಿ ರೂಪಿಸುವುದಾಗಿದೆ. ಇದಕ್ಕಾಗಿ ಸಮಗ್ರ ವರದಿ ಮತ್ತು ಕಾರ್ಯಯೋಜನೆ ಸಿದ್ಧಪಡಿಸಲು ತಜ್ಞರ ಸಮಿತಿಯನ್ನು ರಚಿಸಲಾಗುವುದು ಎಂದರು.

ಜಿಲ್ಲಾಧಿಕಾರಿ ಸ್ವರೂಪ ಕೆ. ಮಾತನಾಡಿ, ಜಿಲ್ಲೆಯ ಪ್ರವಾಸೋದ್ಯಮದ ಅಭಿವೃದ್ಧಿಗೆ ಕೈಗೊಂಡಿರುವ ಯೋಜನೆಗಳು, ಕಾಮಗಾರಿಗಳು ಹಾಗೂ ಪ್ರಸ್ತಾವನೆಯ ಬಗ್ಗೆ ವಿವರವಾಗಿ ತಿಳಿಸಿದರು.

ಸಭೆಯಲ್ಲಿ ಕರಾವಳಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಂ. ಎ. ಗಫೂರ್, ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್, ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ್, ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಪುಲ್ವಾಮದಲ್ಲಿ ಆತ್ಮಹತ್ಯೆಗೆ ಶರಣಾದ ಯೋಧ: ಹುಟ್ಟೂರಿನಲ್ಲಿ ಅಂತ್ಯಕ್ರಿಯೆ



ಮಡಿಕೇರಿ/ ಸೋಮವಾರಪೇಟೆ: ಪುಲ್ವಾಮಾದಲ್ಲಿ ಮೇ 4ರಂದು ಗುಂಡು ಹಾರಿಸಿಕೊಂಡು ಆತ್ಮಹತ್ಯೆಗೆ ಶರಣಾದ ಸಿ.ಆರ್.ಪಿ.ಎಫ್. ಯೋಧ ಕೆ.ಜೆ. ನವೀನ್ ಅವರ ಅಂತ್ಯಕ್ರಿಯೆ ಬುಧವಾರ ಸ್ವಗ್ರಾಮ ಯಡವಾರೆಯಲ್ಲಿ ನೆರವೇರಿತು.

ಬುಧವಾರ ಬೆಳಗಿನ ಜಾವ 1.30ರ ಸುಮಾರಿಗೆ ಮೃತ ನವೀನ್ ಅವರ ಪಾರ್ಥಿವ ಶರೀರ ಸ್ವಗ್ರಾಮಕ್ಕೆ ಆಗಮಿಸಿತು. ಬೆಳಗ್ಗೆ ಮನೆಯ ಮುಂಭಾಗ ಮೃತ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇಡಲಾಗಿತ್ತು. ಕುಟುಂಬಸ್ಥರ ಸಹಿತ ನೂರಾರು ಮಂದಿ ಸಾರ್ವಜನಿಕರು ಆಗಮಿಸಿ ಅಂತಿಮ ದರ್ಶನ ಪಡೆದರು. ಬಳಿಕ ಸಿಆರ್‌ಪಿಎಫ್ ಯೋಧರು ಮೂರು ಸುತ್ತು ಕುಶಾಲತೋಪು ಸಿಡಿಸಿದ ನಂತರ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು.

ಶಾಸಕ ಡಾ. ಮಂಥರ್ ಗೌಡ, ತಾಲೂಕು ಆಡಳಿತದ ಪರವಾಗಿ ತಹಶೀಲ್ದಾರ್ ಕೃಷ್ಣಮೂರ್ತಿ, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪೂರ್ಣಕುಮಾರ್, ಸಬ್‌ಇನ್ಸ್‌ಪೆಕ್ಟರ್ ಖತೀಜಾ, ಸಿಆರ್‌ಪಿಎಫ್‌ನ ಮಾಜಿ ಯೋಧರ ಒಕ್ಕೂಟದ ಪದಾಧಿಕಾರಿಗಳು ಗೌರವ ನಮನ ಸಲ್ಲಿಸಿದರು.

ಪುಲ್ವಾಮಾದಲ್ಲಿ ಕರ್ತವ್ಯದಲ್ಲಿದ್ದ ಸೋಮವಾರಪೇಟೆ ತಾಲೂಕಿನ ಐಗೂರು ಗ್ರಾ.ಪಂ. ವ್ಯಾಪ್ತಿಯ ಯಡವಾರೆ ನಿವಾಸಿ ಕೀಜನ ಜೋಯಪ್ಪ ಹಾಗೂ ವಿಶಾಲಾಕ್ಷಿ ದಂಪತಿಯ ಪುತ್ರ. ಕೆ.ಜೆ. ನವೀನ (40) ಎಂಬವರೇ ಕರ್ತವ್ಯದಲ್ಲಿದ್ದಾಗಲೇ ಆತ್ಮಹತ್ಯೆಗೆ ಶರಣಾದವರು.

ನವೀನ ಅವರು ಮಾ.20ರಿಂದ ಏಪ್ರಿಲ್ 17ರವರೆಗೆ ರಜೆ ಹಾಕಿ ಗ್ರಾಮಕ್ಕೆ ಬಂದಿದ್ದರು. ಆದರೆ ಕಚೇರಿಯಿಂದ ಬಂದ ಸೂಚನೆಯನ್ವಯ ಏ.2ರಂದೇ ಕರ್ತವ್ಯಕ್ಕೆ ಹಾಜರಾಗಿದ್ದರು. ಆದರೆ ಸೋಮವಾರ ಮಧ್ಯಾಹ್ನ 2.05ರ ವೇಳೆಗೆ ಪುಲ್ವಾಮಾದ ವಾಚ್ ಟವರ್‌ನಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗಲೇ ಅವರು ತಮಗೆ ರಕ್ಷಣಾ ಕಾರ್ಯಕ್ಕೆ ನೀಡಿದ್ದ ರೈಫಲ್‌ನಿಂದಲೇ ಗುಂಡು ಹಾರಿಸಿಕೊಂಡು ಆತ್ಮಹತ್ಯೆಗೆ ಶರಣಾಗಿ ರುವುದಾಗಿ ಸಿ.ಆರ್.ಪಿ.ಎಫ್. ಕೇಂದ್ರ ಕಚೇರಿಯಿಂದ ಕುಟುಂಬದವರಿಗೆ ಮಾಹಿತಿ ಬಂದಿದೆ.

ನವೀನ್ ಅವರು 2007ರಲ್ಲಿ ಸಿ.ಆರ್.ಪಿ.ಎಫ್.ಗೆ ಆಯ್ಕೆಯಾಗಿ ದೇಶ ಸೇವೆಗೆ ತೆರಳಿದ್ದರು. ಮೃತರು ಪತ್ನಿ ಸುನೀತಾ, 11 ವರ್ಷದ ಪುತ್ರಿ ಹಮ್ಮಿ, 9 ವರ್ಷದ ಪುತ್ರ ಲವಿನ್ ಅವರುಗಳನ್ನು ಅಗಲಿದ್ದಾರೆ.

ಕನಕದಾಸರ ವೈಜ್ಞಾನಿಕ ಪ್ರಜ್ಞೆ ಕುರಿತು ಅಧ್ಯಯನ ನಡೆಯಲಿ



• **ಕೊಣಾಜೆ:** ಧನ ಸಂಪತ್ತಿಗಿಂತ ಭಕ್ತಿ ಮತ್ತು ಜ್ಞಾನಸಂಪತ್ತು ಶ್ರೇಷ್ಠವಾದದ್ದು ಎಂದು ನಂಬಿದ್ದ ಕನಕದಾಸರ ಕೀರ್ತನೆಗಳಲ್ಲಿ ಭಕ್ತಿಯೊಂದಿಗೆ ಸಾಮಾಜಿಕ ಹಾಗೂ ವೈಜ್ಞಾನಿಕ ಪ್ರಜ್ಞೆಗಳ ಸೂಕ್ಷ್ಮತೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯ ಎಂದು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಸಹ ನಿರ್ದೇಶಕ ಡಾ. ಬಿ.ಎಸ್. ಅನಿಲಕುಮಾರ ಬೊಮ್ಮಾಘಟ್ಟ ಹೇಳಿದರು.

ಅವರು ಮಂಗಳೂರು ವಿಶ್ವವಿದ್ಯಾನಿಲಯದ ಕನಕದಾಸ ಪೀಠ ಮತ್ತು ಕನಕದಾಸ ಸಂಶೋಧನ ಕೇಂದ್ರದ ವತಿಯಿಂದ ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆಯ ಪ್ರೊ. ಬಿ.ಎ. ವಿವೇಕ ರೈ ವಿಚಾರ ವೇದಿಕೆಯಲ್ಲಿ ಬುಧವಾರ ನಡೆದ 'ಕನಕ ಸ್ಮೃತಿ' ವಿಶೇಷ ಉಪನ್ಯಾಸ ಕಾರ್ಯಕ್ರಮ ಹಾಗೂ ಕನಕ ಪುರಸ್ಕಾರ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

ಕಾರ್ಯಕ್ರಮವನ್ನು ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಪಿ.ಎಲ್. ಧರ್ಮ ಉದ್ಘಾಟಿಸಿ ಮಾತನಾಡಿ, ಇಂದಿನ ಆಧುನಿಕತೆಯಲ್ಲಿ ಕಾಲಘಟ್ಟದಲ್ಲಿ ಕನಕದಾಸರಂತಹ ಮಹಾತ್ಮರ ಚಿಂತನೆ, ಮೌಲ್ಯಗಳನ್ನು ಅರ್ಥಮಾಡಿಕೊಳ್ಳುವಲ್ಲಿ ನಾವು ಎಡವುತ್ತಿದ್ದೇವೆ. ಸಮಾಜದಲ್ಲಿ ಕಟ್ಟಡಗಳೊಂದಿಗೆ ಜಾತಿ ಸಂಘಟನೆಗಳೂ ಗಟ್ಟಿಗೊಳ್ಳುತ್ತಿವೆ. ಹೊಸ ಜಾತಿ ಸಮೀಕರಣ ನಡೆಯುತ್ತಿರುವ ಈ ಕಾಲದಲ್ಲಿ ಕನಕರ ಚಿಂತನೆಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಲು ಪೂರಕವಾದ ಕಾರ್ಯಕ್ರಮಗಳು ಹೆಚ್ಚು ನಡೆಯಬೇಕು ಎಂದರು.

ಮುಖ್ಯ ಅತಿಥಿ ವಿದ್ವಾಂಸ ಕಬ್ಬಿನಾಲೆ ವಸಂತ ಭಾರಧ್ವಾಜ್ ಮಾತನಾಡಿ, ಬಾಹ್ಯ ಸೌಂದರ್ಯಕ್ಕಿಂತ ಆಂತರಿಕ ಸೌಂದರ್ಯವೇ ಮುಖ್ಯವಾದುದು. ದಾಸ ಸಾಹಿತ್ಯದ ಆತ್ಮ, ಒಳಹುಗಳನ್ನು ಅನ್ವೇಷಿಸಿ ಹೊಸ ಹೊಸ ಆವಿಷ್ಕಾರ, ಅಧ್ಯಯನಗಳು ಹೊರಬರಲಿ. ನಮ್ಮ ವಿಭಿನ್ನ ಯೋಚನೆಗಳ ಮೂಲಕ ದಾಸಸಾಹಿತ್ಯವನ್ನು ನೋಡಲು ಅನೇಕ ಅವಕಾಶಗಳಿದ್ದು, ವಿದ್ಯಾರ್ಥಿಗಳು ಇದರ ಸದುಪಯೋಗವನ್ನು ಪಡಿಸಿಕೊಳ್ಳಬೇಕು ಎಂದರು.

ವಿಶ್ವವಿದ್ಯಾನಿಲಯದ ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷ ಪ್ರೊ. ನಾಗಪ್ಪ ಗೌಡ .ಆರ್, ಅವರು ಅಧ್ಯಕ್ಷತೆ ವಹಿಸಿದರು.

ಪ್ರಾಧ್ಯಾಪಕ ಪ್ರೊ.ಸೋಮಣ್ಣ ಹೊಂಗಳ್ಳಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂಶೋಧನಾ ವಿದ್ಯಾರ್ಥಿನಿ ಸಾಯಿಸುಮ ನಾವಡ ಕಾರ್ಯಕ್ರಮ ನಿರೂಪಿಸಿದರು. ವಿದ್ಯಾರ್ಥಿ ದುಶ್ಯಂತ್ ಪ್ರಶಸ್ತಿ ಪುರಸ್ಕೃತರ ಹೆಸರು ವಾಚಿಸಿದರು. 2025-26ನೇ ಸಾಲಿನ ಕನಕ ಕೀರ್ತನ ಗಂಗೋತ್ರಿ ಕಾರ್ಯಕ್ರಮದಲ್ಲಿ ವಿಜೇತರಾದವರಿಗೆ 16 ಅಭ್ಯರ್ಥಿಗಳಿಗೆ ಮತ್ತು ಆರು ತಂಡಗಳಿಗೆ 'ಕನಕ ಪುರಸ್ಕಾರ ಪ್ರದಾನ ಮಾಡಲಾಯಿತು.

ಜಿ.ಟಿ.ಟಿ.ಸಿ. ಡಿಪ್ಲೋಮಾ ಕಾಲೇಜಿನಲ್ಲಿ ವಿವಿಧ ಕೋರ್ಸುಗಳು

• **ಮಂಗಳೂರು:** ಬೈಕಂಪಾಡಿಯಲ್ಲಿರುವ ಜಿ.ಟಿ.ಟಿ.ಸಿ. ಡಿಪ್ಲೋಮಾ ಕಾಲೇಜಿನಲ್ಲಿ 2026-27ನೇ ಸಾಲಿನ ಡಿಪ್ಲೋಮಾ ಕೋರ್ಸುಗಳಿಗೆ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಪ್ರಾರಂಭವಾಗಿದ್ದು, ಮೇ 13 ಕೊನೆಯ ದಿನ ಎಂದು ಜಿಟಿಟಿಸಿ ಪ್ರಾಂಶುಪಾಲ ಲಕ್ಷ್ಮೀನಾರಾಯಣ ಸಿ.ಆರ್. ತಿಳಿಸಿದರು.

ಪ್ರಸ್ತುತ ಜಿ.ಟಿ.ಟಿ.ಸಿ. ಕೇಂದ್ರದಲ್ಲಿ ಡಿಪ್ಲೋಮಾ ಇನ್ ಟೂಲ್ ಆ್ಯಂಡ್ ಡೈ ಮೇಕಿಂಗ್, ಡಿಪ್ಲೋಮಾ ಇನ್ ಪ್ರಿಶಿಷನ್ ಮಾನ್ಯುಫ್ಯಾಕ್ಚರಿಂಗ್ ಮತ್ತು ಡಿಪ್ಲೋಮಾ ಇನ್ ಆರ್ಟಿಫೀಶಿಯಲ್ ಇಂಟಲಿಜನ್ಸ್ ಕೋರ್ಸುಗಳಿವೆ. ಮೊದಲ ಎರಡು ಕೋರ್ಸ್‌ಗಳು ಮೆಕ್ಯಾನಿಕ್ ಇಂಜಿನಿಯರಿಂಗ್‌ಗೂ ಮತ್ತು ಮೂರನೆಯದು ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್‌ಗೆ ಸಂಬಂಧಿಸಿದ್ದಾಗಿದೆ ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

ಈ ಎಲ್ಲಾ ಕೋರ್ಸುಗಳಿಗೆ ಸೇರಬಯಸುವ ವಿದ್ಯಾರ್ಥಿಗಳ ಕನಿಷ್ಠ ವಿದ್ಯಾರ್ಹತೆ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗಿರಬೇಕು. ಈ ಕೋರ್ಸುಗಳ ಅವಧಿ 4 ವರ್ಷಗಳಾಗಿದ್ದು, 4ನೇ ವರ್ಷದಲ್ಲಿ ವಿದ್ಯಾರ್ಥಿಗಳನ್ನ ಪ್ರತಿಷ್ಠಿತ ಕೈಗಾರಿಕೆಗಳಿಗೆ ಒಂದು ವರ್ಷದ ಕಡ್ಡಾಯ ಇಂಟರ್ನಶಿಪ್‌ಗೆ ಕಳಿಸಲಾಗುವುದು. ಈ ಅವಧಿಯಲ್ಲಿ ವಿದ್ಯಾರ್ಥಿಗಳು ಪ್ರತಿ ತಿಂಗಳು 18,000 ರೂ.ನಿಂದ 23,000 ರೂ. ವರೆಗೆ ಸ್ಟೈಫಂಡ್ ಪಡೆಯುತ್ತಾರೆ. ಜಿ.ಟಿ.ಟಿ.ಸಿ.ಯಲ್ಲಿ ಕಲಿತ ವಿದ್ಯಾರ್ಥಿಗಳು ಕರ್ನಾಟಕವು ಸೇರಿದಂತೆ ದೇಶ, ವಿದೇಶಗಳಲ್ಲಿನ ಪ್ರತಿಷ್ಠಿತ ಕಂಪೆನಿಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದು ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ಬಹಳಷ್ಟು ಪ್ರಗತಿಯನ್ನು ಸಾಧಿಸಿದ್ದಾರೆ ಎಂದು ವಿವರಿಸಿದರು.

ಅರ್ಹ ವಿದ್ಯಾರ್ಥಿಗಳಿಗೆ ಸರಕಾರದಿಂದ ವಿದ್ಯಾರ್ಥಿವೇತನ ಕಲ್ಪಿಸಿ ಕೊಡುವ ವ್ಯವಸ್ಥೆಯು ಇದೆ. ಹೀಗಾಗಿ ಸ್ಥಳೀಯ ಮತ್ತು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಇದರ ಲಾಭ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಜಿ.ಟಿ.ಟಿ.ಸಿ. ಪ್ಲಾಟ್ ನಂ. 7ಇ, ಕೈಗಾರಿಕಾ ವಲಯ, ಬೈಕಂಪಾಡಿ, ಮಂಗಳೂರು-575011, ದೂ. 9008263660, 0824-2408003, gttcmng@gmail.com ಸಂಪರ್ಕ ಮಾಡಬಹುದು ಎಂದು ಹೇಳಿದ್ದಾರೆ.

ಸಂಸ್ಥೆಯ ಉಪನ್ಯಾಸಕರಾದ ಹೇಮಂತ್ ಕುಮಾರ್, ಸಂಧ್ಯಾ ಕೆ. ಉಪಸ್ಥಿತರಿದ್ದರು.

7.30 ಕೋಟಿ ವೆಚ್ಚದ ಯೋಜನೆಗೆ ಅರಣ್ಯ ಸಚಿವರಿಂದ ಚಾಲನೆ

ದುಬಾರೆ ಪ್ರವಾಸಿ ತಾಣಕ್ಕೆ ತೂಗು ಸೇತುವೆಯ ಭಾಗ್ಯ



• **ಮಡಿಕೇರಿ:** ಕೊಡಗಿನ ಪ್ರವಾಸಿ ತಾಣ ದುಬಾರೆಯ ಕಾವೇರಿ ಹೊಳೆಗೆ ಸುಮಾರು 7.30 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ 'ತೂಗು ಸೇತುವೆ' ಕಾಮಗಾರಿಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಬುಧವಾರ ಭೂಮಿ ಪೂಜೆ ನೆರವೇರಿಸಿದರು.

ಕುಶಾಲನಗರ ತಾಲೂಕಿನ, ಕುಶಾಲನಗರ ವಲಯದ ನಂಜ ರಾಯಪಟ್ಟಣ ಗ್ರಾಮದ ದುಬಾರೆ ಹಾಡಿ ಜನಗಳಿಗೆ ತುರ್ತು ಸಂದರ್ಭ ದಲ್ಲಿ, ವೈದ್ಯಕೀಯ ಚಿಕಿತ್ಸೆಗೆ ಹಾಗೂ ಇನ್ನಿತರ ಕೆಲಸ ಕಾರ್ಯಗಳಿಗೆ ತೆರಳಲು ಹೊಳೆ ದಾಟುವ ಪರಿಸ್ಥಿತಿ ಇತ್ತು. ಇಲ್ಲವೇ ದುಬಾರೆ-ಮಾಲ್ದಾರೆ ಮಾರ್ಗವಾಗಿ ಮೀಸಲು ಅರಣ್ಯದ ಒಳಗಡೆ ಸುಮಾರು 10 ಕಿ.ಮೀ ಗಳು ತೆರಳಬೇಕಾಗಿತ್ತು. ಅಲ್ಲದೇ ಮಳೆಗಾಲದ ಸಂದರ್ಭದಲ್ಲಿ ಶಿಬಿರಕ್ಕೆ ಬರುವ ಪ್ರವಾಸಿಗರಿಗೂ ಅನಾನುಕೂಲವಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ದುಬಾರೆಯಲ್ಲಿ ತೂಗು ಸೇತುವೆ ನಿರ್ಮಿಸಬೇಕೆಂಬುದು ಆ ಭಾಗದ ಜನರ ಬಹು ವರ್ಷಗಳ ಬೇಡಿಕೆಯಾಗಿತ್ತು.

ಇದೀಗ ದುಬಾರೆಯಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಈ ತೂಗುಸೇತುವೆಯನ್ನು ಕೊಡಗು ಫೌಂಡೇಷನ್ ಯೋಜನೆಯಡಿ ಲೋಕೋಪಯೋಗಿ ಇಲಾಖೆಯ ವತಿಯಿಂದ ನಿರ್ಮಿಸಲಾಗುತ್ತಿದ್ದು, ಇದರಿಂದ ದುಬಾರೆ ಹಾಡಿಯಲ್ಲಿ ವಾಸಿಸುತ್ತಿರುವ 150 ಕ್ಕೂ ಅಧಿಕ ಕುಟುಂಬಗಳ ಜನರಿಗೂ, ಸಾಕಾನೆ ಶಿಬಿರದ ಸಿಬ್ಬಂದಿಗಳಿಗೂ ಮತ್ತು ಪ್ರವಾಸಿಗರಿಗೂ ಹೆಚ್ಚು ಅನುಕೂಲವಾಗಲಿದೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯಪಡೆ ಮುಖ್ಯಸ್ಥರಾದ ಮೀನಾಕ್ಷಿ ನೇಗಿ, ಮುಖ್ಯ ವನ್ಯಜೀವಿ ಪರಿಪಾಲಕ ಕುಮಾರ್ ಪುಷ್ಕರ್, ಮನೆಹಳ್ಳಿ ಮಠದ ಶ್ರೀ ಮಹಾಂತ ಶಿವಲಿಂಗ ಸ್ವಾಮೀಜಿ, ಕಲ್ಲಹಳ್ಳಿ ಮಠದ ಶ್ರೀ ರುದ್ರಮುನಿ ಸ್ವಾಮೀಜಿ ಪಾಲ್ಗೊಂಡಿದ್ದರು.

ಮಂಗಳೂರು
ಗುರುವಾರ, 7 ಮೇ 2026
ಸಂಪುಟ 48, ಸಂಚಿಕೆ 49, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ ₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಹಿಂಸೆಯಲ್ಲಿ ಭಾಗಿ ಆದವರನ್ನು ಬಂಧಿಸಿ | ೦೯
ಬಂಗಾಳ ಸಿಎಂ ಪ್ರಮಾಣ ಮೇ 9ಕ್ಕೆ | ೦೯
ಇಂದು ಮೈಸೂರಿಗೆ ಮೋಹನ್ ಭಾಗವತ್ | ೦೫

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಪೂರ್ವಾಷಾಢ

ದಿನದ ಮಾತು

ಏನೇನು ಹೇಳುವುದು? ಭೂಮಿಯಲ್ಲಿ ಹಣವಿಲ್ಲದವನ ಶೀಲ, ಸಾಹಸ, ದೊಡ್ಡಸ್ತಿಕೆ, ಕುಲ, ಕೀರ್ತಿ ಇದೆಲ್ಲ ವ್ಯರ್ಥ.
▲ಕಾವ್ಯಾವಲೋಕನಂ



• ಪುಟ ೦೯

ಸೋತ ಮೇಲಿನ ಮಾತುಗಳೇ ಸೋಲಿಗೆ ಕಾರಣವಲ್ಲವೇ?

ಗುರುತರ
• ಸೋಮಶೇಖರ ಸಿ.ಜೆ.
• ಪುಟ ೬

ಕಿರುಸುದ್ದಿ

ಪಂಜಾಬ್‌ನಲ್ಲಿ ಎರಡು ಕಡೆ ಬಾಂಬ್ ಸ್ಫೋಟ!

• **ಚಂಡೀಗಢ:** ಪಂಜಾಬ್‌ನಲ್ಲಿ ಕೆಲವೇ ಗಂಟೆಗಳ ಅಂತರದಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ಸ್ಫೋಟ ಘಟನೆಗಳು ಭಾರೀ ಭೀತಿ ಸೃಷ್ಟಿಸಿದೆ. ಜಲಂಧರ್‌ನ ಗಡಿ ಭದ್ರತಾ ಪಡೆಯ ಪಂಜಾಬ್ ಗಡಿನಾಡಿನ ಪ್ರಧಾನ ಕಚೇರಿಯ ಹೊರಗೆ ಮಂಗಳವಾರ ರಾತ್ರಿ 8 ಗಂಟೆ ಸುಮಾರಿಗೆ ಮೊದಲ ಸ್ಫೋಟ ಸಂಭವಿಸಿದ್ದು, ಎರಡನೇ ಘಟನೆಯು ಅಮೃತಸರದ ಖಾಸಾ ಕಂಟೋನ್ಮೆಂಟ್ ಪ್ರದೇಶದ ಬಳಿ ಮಂಗಳವಾರ ರಾತ್ರಿ 11 ಗಂಟೆ ಸುಮಾರಿಗೆ ಸಂಭವಿಸಿದೆ. ಘಟನೆಗಳಲ್ಲಿ ಯಾವುದೇ ಸಾವು-ನೋವು ವರದಿಯಾಗಿಲ್ಲ.
• ಪುಟ ೦೯

ರಾಜೀನಾಮೆ ನೀಡಲ್ಲ, ವಜಾಗೊಳಿಸಲಿ: ದೀದಿ
• ಪುಟ ೦೯

ಚೊಚ್ಚಲ ಪ್ರವೇಶದಲ್ಲೇ ಟಿವಿಕೆ ಅಪೂರ್ವ ಸಾಧನೆ
• ಪುಟ ೦೯

ಕೇರಳ ಬಿಜೆಪಿಗೆ 3 ಸ್ಥಾನ, ಗಂಭೀರ ಎಚ್ಚರಿಕೆ: ಸಿಪಿಐ
• ಪುಟ ೦೯

ಜಗದೀಶ್ ಹಿರೇಮನಿ ನಿಧನ
• ಪುಟ ೫

ವನ್ಯಜೀವಿ ದಾಳಿ ತಡೆಗೆ ಕ್ರಮ: ಖಂಡ್ರೆ
• ಪುಟ ೫

ರಾಜ್ಯ ರಾಜಕೀಯ, ಸರ್ಕಾರದ ಬಗ್ಗೆ ವರಿಷ್ಠರ ಜತೆ ಚರ್ಚೆ

ಮೇ 9ಕ್ಕೆ ಸಿಎಂ ದಿಲ್ಲಿಗೆ

• **ಬೆಂಗಳೂರು:** ಪಂಚ ರಾಜ್ಯಗಳ ಚುನಾವಣೆ ಮುಕ್ತಾಯದ ನಂತರ ನಿರೀಕ್ಷೆಯಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ದಿಲ್ಲಿಗೆ ತೆರಳುವುದು ಖಾತ್ರಿಯಾಗಿದ್ದು, ಇದೇ ತಿಂಗಳ 9ರಂದು ದೆಹಲಿಗೆ ತೆರಳಲಿದ್ದಾರೆ ಎನ್ನುವ ಮಾಹಿತಿಯಿದೆ. ಮೇನಲ್ಲಿ ರಾಜ್ಯ ರಾಜಕಾರಣದಲ್ಲಿ ಮಹತ್ತರ ಬೆಳವಣಿಗೆಗಳಿಗೆ ಈ ಭೇಟಿ ನಾಂದಿ ಹಾಡಲಿದೆ ಎಂದು ಹೇಳಲಾಗುತ್ತಿದೆ.



ದಿಲ್ಲಿಗೆ ತೆರಳಿ ಪಕ್ಷದ ವರಿಷ್ಠರನ್ನು ಭೇಟಿ ಮಾಡಿ, ಸಂಪುಟ ವಿಸ್ತರಣೆ ಕುರಿತು ಚರ್ಚಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗಾಗಲೇ ಸಾಕಷ್ಟು ಬಾರಿ ಹೇಳಿದ್ದು, ಇದರ ಜತೆಗೆ ಹೈಕಮಾಂಡ್ ತೀರ್ಮಾನವೇ ಅಂತಿಮ ಎಂದು ಹೇಳಿದ್ದಾರೆ. ಈ ನಡುವೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಹುಟ್ಟುಹಬ್ಬಕ್ಕೆ ಹೈಕಮಾಂಡ್ ಶುಭ ಸಂದೇಶ ನೀಡಲಿದೆ ಎಂದು ಅವರ ಬೆಂಬಲಿಗರು ಹೇಳುತ್ತಿದ್ದಾರೆ. ದಿಲ್ಲಿಯಿಂದ ಉಭಯ ನಾಯಕರಿಗೆ ಬುಲಾವ್ ಬಂದಿರುವ ಬಗ್ಗೆ ಇನ್ನೂ ಸ್ಪಷ್ಟತೆ ಸಿಕ್ಕಿಲ್ಲ, ಒಂದು ವೇಳೆ ಇಬ್ಬರು ನಾಯಕರನ್ನು ಹೈಕಮಾಂಡ್ ಕರೆಸಿಕೊಂಡರೆ ಯಾವ ಸೂತ್ರದಲ್ಲಿ ಮಾತುಕತೆ ನಡೆಯಬಹುದು, ಯಾರಿಗೆ ಶುಭ ಸಂದೇಶ ಸಿಗಬಹುದು ಅಥವಾ ರಾಜ್ಯದಲ್ಲಿ ಬದಲಾವಣೆಯೋ, ಪುನರ್ ರಚನೆಯೋ ಎಂಬ ಬಗ್ಗೆ ಹೈಕಮಾಂಡ್ ನಿರ್ಧರಿಸಲಿದೆ. ಸಚಿವ ಸ್ಥಾನಕ್ಕಾಗಿ ಹಿರಿಯ ಶಾಸಕರು ಈಗಾಗಲೇ ದಿಲ್ಲಿಗೆ ತೆರಳಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ವರಿಷ್ಠರನ್ನು ಭೇಟಿಯಾಗಿ ಒತ್ತಡ ತಂದಿದ್ದಾರೆ. ಅಲ್ಲದೆ, ಕಳೆದ ವಾರ ಸಚಿವರಾದ ಎಚ್.ಸಿ. ಮಹಾದೇವಪ್ಪ, ಸತೀಶ್ ಜಾರಕಿಹೊಳಿ ಮತ್ತು ಕೆ.ಎಚ್. ಮುನಿಯಪ್ಪ ಅವರು ಸಹ ದಿಲ್ಲಿಗೆ ಭೇಟಿ ನೀಡಿ ನಾಯಕತ್ವ ಬದಲಾವಣೆ ಬಗ್ಗೆ ಇರುವ ಗೊಂದಲಗಳ ಬಗ್ಗೆ ಸ್ಪಷ್ಟನೆ ನೀಡಬೇಕೆಂದು ಮನವಿ ಮಾಡಿದ್ದಾರೆ.
➡ಪುಟ ೨



> ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಐದು ವರ್ಷಗಳ ಆಡಳಿತವನ್ನು ಪೂರ್ಣಗೊಳಿಸಲಿದೆ. ನಾನು ಮುಖ್ಯಮಂತ್ರಿಯಾಗಿ ಐದು ವರ್ಷದ ತನಕ ಮುಂದುವರಿಯಬೇಕೇ, ಬೇಡವೇ ಎಂಬುದರ ಬಗ್ಗೆ ಪಕ್ಷದ ಹೈಕಮಾಂಡ್ ತೀರ್ಮಾನಿಸುತ್ತದೆ. ಹೈಕಮಾಂಡ್ ಹೇಳಿದರೆ 5 ವರ್ಷವೂ ನಾನೇ ಸಿಎಂ ಆಗಿ ಇರುತ್ತೇನೆ. ನಾನು ಹೈಕಮಾಂಡ್ ತೀರ್ಮಾನಕ್ಕೆ ಬದ್ಧನಾಗಿದ್ದೇನೆ.
> ■ **ಸಿದ್ದರಾಮಯ್ಯ**, ಸಿಎಂ

ಹೈಕಮಾಂಡ್ ಹೇಳಿದಂತೆ ಕೇಳುವೆ: ಸಿದ್ದರಾಮಯ್ಯ

• **ಮೈಸೂರು:** ನಾನು ಮುಖ್ಯಮಂತ್ರಿಯಾಗಿ ಮುಂದುವರಿಯಬೇಕಾ, ಬೇಡವಾ ಎಂಬುದನ್ನು ನಮ್ಮ ಪಕ್ಷದ ಹೈ ಕಮಾಂಡ್ ತೀರ್ಮಾನಿಸುತ್ತದೆ. ನಾನು ಹೈಕಮಾಂಡ್ ಹೇಳಿದಂತೆ ಕೇಳುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಗುರುವಾರ ನಗರದ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಮಾತನಾಡಿದ ಅವರು, ನಮ್ಮ ಸರ್ಕಾರ ಹಾಗೂ ಕಾರ್ಯಕ್ರಮಗಳನ್ನು ಜನರು ಮೆಚ್ಚಿದ್ದಾರೆ. ಹಾಗಾಗಿ ಎರಡು ಉಪಚುನಾವಣೆಯಲ್ಲಿ ಜನರು ನಮ್ಮ ಪಕ್ಷವನ್ನು ಗೆಲ್ಲಿಸಿದ್ದಾರೆ. ಜನರ ಪ್ರೀತಿ, ಅಭಿಮಾನ, ಆಶೀರ್ವಾದ ನಮ್ಮ ಮೇಲಿದೆ ಎಂದರು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ 5 ವರ್ಷ ಆಡಳಿತವನ್ನು ಪೂರ್ಣಗೊಳಿಸಲಿದೆ. ನಾನು ಸಿಎಂ ಆಗಿ 5 ವರ್ಷದ ತನಕ ಮುಂದುವರಿಯಬೇಕೇ, ಬೇಡವೇ ಎಂಬುದರ ಬಗ್ಗೆ ಪಕ್ಷದ ಹೈಕಮಾಂಡ್ ತೀರ್ಮಾನಿಸುತ್ತದೆ. ಹೈಕಮಾಂಡ್ ಹೇಳಿದರೆ 5 ವರ್ಷವೂ ನಾನೇ ಸಿಎಂ ಆಗಿ ಇರುತ್ತೇನೆ. ನಾನು ಹೈಕಮಾಂಡ್ ತೀರ್ಮಾನಕ್ಕೆ ಬದ್ಧನಾಗಿದ್ದೇನೆ. ಹೈಕಮಾಂಡ್ ಹೇಳಿದಂತೆ ಕೇಳುತ್ತೇನೆ. ಹೈಕಮಾಂಡ್ ದೆಹಲಿಗೆ ಕರೆದರೆ ಹೋಗುತ್ತೇನೆ. ನಾನೇ ದೆಹಲಿಗೆ ಹೋಗಬೇಕಾದರೆ ರಾಹುಲ್ ಗಾಂಧಿಯವರ ಅಪಾಯಿಂಟ್‌ಮೆಂಟ್ ಬೇಕಾಗುತ್ತದೆ.
➡ಪುಟ ೨

> ಹೈಕಮಾಂಡ್ ಕರೆದಾಗ ಸಿಎಂ ಸಿದ್ದರಾಮಯ್ಯ ನಾವು ಹೋಗುತ್ತೇವೆ. ಕರೆಯದೆ ಹೋಗುವುದು ಸರಿಯಲ್ಲ. ಕರೆಯುತ್ತಾರೆ. ಕರೆದಾಗ ನಾವು ಹೋಗುತ್ತೇವೆ.
> ■ **ಡಿ.ಕೆ ಶಿವಕುಮಾರ್**, ಉಪಮುಖ್ಯಮಂತ್ರಿ

ಶುಭ ಸುದ್ದಿಗೆ ಕಾಯುತ್ತಿರುವೆ: ಡಿ.ಕೆ.ಸುರೇಶ್

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಹೋದರ ಡಿ.ಕೆ. ಸುರೇಶ್ ಕೂಡ ಶುಭ ಸುದ್ದಿಗಾಗಿ ಕಾಯುತ್ತಿರುವುದಾಗಿ ತಿಳಿಸಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆ, ತಾಳ್ಮೆ ಮುಖ್ಯ ಎಂದು ಒತ್ತಿ ಹೇಳಿದ್ದು, ತಾಳಿದವನು ಬಾಳಿಯಾನು ಎಂಬ ನುಡಿ ಉಲ್ಲೇಖಿಸುತ್ತಾ, ಎಲ್ಲಕ್ಕೂ ಒಂದು ಕಾಲ ಬರುತ್ತದೆ ಎಂದು ಹೇಳಿರುವುದು ಕುತೂಹಲ ಕಾರಿಯಾಗಿದೆ.

ರಾಜ್ಯಪಾಲರ ಭೇಟಿಯಾದ ಮುಖಂಡರು

ಸರ್ಕಾರ ರಚನೆಗೆ ಹಕ್ಕು ಮಂಡಿಸಿದ ವಿಜಯ್

• **ಚೆನ್ನೈ:** ಟಿವಿಕೆ ಮುಖ್ಯಸ್ಥ ವಿಜಯ್ ಅವರು ಬುಧವಾರ ತಮಿಳುನಾಡು ರಾಜ್ಯಪಾಲ ರಾಜೇಂದ್ರ ವಿಶ್ವನಾಥ ಆರ್ಲೇಕರ್ ಅವರನ್ನು ಭೇಟಿ ಮಾಡಿ ರಾಜ್ಯದಲ್ಲಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು. ಇತ್ತೀಚಿನ ವಿಧಾನಸಭೆ ಚುನಾವಣೆಯಲ್ಲಿ ಅವರ ಪಕ್ಷ ಏಕೈಕ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದರೂ ಸರಳ ಬಹುಮತಕ್ಕಿಂತ ಕಡಿಮೆ ಸ್ಥಾನಗಳನ್ನು ಪಡೆದಿದೆ.

ಟಿವಿಕೆ ಸ್ಥಾಪಕರಾದ ವಿಜಯ್ ಅವರು ಲೋಕಭವನದಿಂದ ಆಹ್ವಾನ ಬಂದ ಹಿನ್ನೆಲೆಯಲ್ಲಿ ಮಧ್ಯಾಹ್ನ 3.15ಕ್ಕೆ ರಾಜ್ಯಪಾಲರನ್ನು ಭೇಟಿ ಮಾಡಿದರು. ಈ ವೇಳೆ ಪಕ್ಷದ ನಾಯಕರಾದ ಬಸ್ಸಿ ಎನ್. ಆನಂದ್, ಆಧವ್ ಅರ್ಜುನಾ, ಕೆ.ಎ. ಸೇಂಗೊಟ್ಟಯ್ಯನ್, ಸಿ.ಟಿ. ನಿರ್ಮಲ್ ಕುಮಾರ್ ಸೇರಿದಂತೆ ಇತರರು ಜತೆಯಾಗಿದ್ದರು. ಕಾಂಗ್ರೆಸ್ ಬೆಂಬಲ ಘೋಷಿಸಿದ ಕೆಲವೇ ಗಂಟೆಗಳಲ್ಲಿ ವಿಜಯ್ ಅವರು ರಾಜ್ಯಪಾಲರನ್ನು ಭೇಟಿಯಾದರು. ಅದಕ್ಕೂ ಮೊದಲು ಚೆನ್ನೈನಲ್ಲಿ ಟಿವಿಕೆ ಮತ್ತು ಕಾಂಗ್ರೆಸ್ ನಾಯಕರ ನಡುವೆ ಸಭೆ ನಡೆದಿತ್ತು.

ಬೆಂಬಲ ನಿರಾಕರಿಸಿದ ಎಡಪಕ್ಷಗಳು, ಐಯುಎಂಎಲ್: ಟಿವಿಕೆ ಆಹ್ವಾನ ನೀಡಿದರೂ ಎಡಪಕ್ಷಗಳು ಮತ್ತು ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಬೆಂಬಲ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿವೆ. ಅಲ್ಲದೆ, ಸಿಪಿಐ(ಎಂ), ಸಿಪಿಐ ಮತ್ತು ಐಯುಎಂಎಲ್ ಶಾಸಕರು ಡಿಎಂಕೆ ಮುಖ್ಯಸ್ಥ ಎಂ.ಕೆ. ಸ್ಟಾಲಿನ್ ಅವರನ್ನು ಭೇಟಿ ಮಾಡಿ, ಡಿಎಂಕೆ ಬೆಂಬಲಿಸುವುದಾಗಿ ತಿಳಿಸಿದ್ದಾರೆ.
➡ಪುಟ ೨



ಟಿವಿಕೆಗೆ ಕೈ ಬೆಂಬಲ

ನಟ-ರಾಜಕಾರಣಿ ವಿಜಯ್ ನೇತೃತ್ವದ ಟಿವಿಕೆ ಪಕ್ಷವು ತಮಿಳುನಾಡಿನಲ್ಲಿ ಸರ್ಕಾರ ರಚಿಸಲು ಕಾಂಗ್ರೆಸ್ ಪಕ್ಷ ಬುಧವಾರ ತನ್ನ ಬೆಂಬಲ ಘೋಷಿಸಿದೆ ಮತ್ತು ಡಿಎಂಕೆ ಜತೆಗಿನ ಸುದೀರ್ಘ ಮೈತ್ರಿಯನ್ನು ಕೊನೆಗೊಳಿಸಿದೆ. ಟಿವಿಕೆ ಮುಖ್ಯಸ್ಥ ವಿಜಯ್ ಅವರ ಅಧಿಕೃತ ಮನವಿಯ ಮೇರೆಗೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ, ಎಂದು ಎಐಸಿಸಿ ತಮಿಳುನಾಡು ಉಸ್ತುವಾರಿ ಗಿರೀಶ್ ಚೋಡಂಕರ್ ಘೋಷಿಸಿದ್ದಾರೆ. ಈ ಮೈತ್ರಿ, ಕೇವಲ ಪ್ರಸ್ತುತ ಸರ್ಕಾರ ರಚನೆಗೆ ಮಾತ್ರವಲ್ಲದೆ, ಭವಿಷ್ಯದ ಸ್ಥಳೀಯ ಸಂಸ್ಥೆ ಚುನಾವಣೆಗಳು, ಲೋಕಸಭೆ ಮತ್ತು ರಾಜ್ಯಸಭೆ ಚುನಾವಣೆಗಳಿಗೂ ಅನ್ವಯಿಸಲಿದೆ. ಕೋಮು ಶಕ್ತಿಗಳನ್ನು ಮೈತ್ರಿಯಿಂದ ಹೊರಗಿಡಬೇಕು ಎಂಬ ಷರತ್ತನ್ನು ಕಾಂಗ್ರೆಸ್ ವಿಧಿಸಿದೆ.

ಸರ್ಕಾರ ರಚನೆಗೆ ಡಿಎಂಕೆ, ಎಐಎಡಿಎಂಕೆ ಮಾತುಕತೆ!

• **ಚೆನ್ನೈ:** ಟಿವಿಕೆ ಸರ್ಕಾರ ರಚಿಸಲು ಬೆಂಬಲ ಪಡೆದುಕೊಳ್ಳುವ ಪ್ರಯತ್ನದಲ್ಲಿ ತೊಡಗಿರುವ ನಡುವೆಯೇ, ಡಿಎಂಕೆ ತನ್ನ ದೀರ್ಘಕಾಲದ ರಾಜಕೀಯ ಪ್ರತಿಸ್ಪರ್ಧಿಯಾದ ಎಐಎಡಿಎಂಕೆ ಜತೆ ಗುಪ್ತ ಮಾತುಕತೆಗಳನ್ನು ಆರಂಭಿಸಿದೆ ಎಂದು ವರದಿಯಾಗಿದೆ.
➡ಪುಟ ೨

ಬೆನ್ನಿಗೆ ಇರಿದ ಕಾಂಗ್ರೆಸ್: ಡಿಎಂಕೆ ಟೀಕಾಪ್ರಹಾರ
• ಪುಟ ೨

ಸಾವಿರ ಮಠಾಧೀಶರು ಭಾಗಿ | ಭಾರೀ ಸ್ಪಂದನೆ: ವಿಜಯೇಂದ್ರ

ಅಭಿಮಾನೋತ್ಸವಕ್ಕೆ ಸಕಲ ಸಿದ್ಧತೆ

• **ಚಿತ್ರದುರ್ಗ:** ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ 50 ವರ್ಷದ ರಾಜಕೀಯ ಜೀವನದ ಹಿನ್ನೆಲೆಯಲ್ಲಿ ಮೇ 9ರಂದು ನಡೆಯಲಿರುವ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಬೇಕಾದ ಸಕಲ ಸಿದ್ಧತೆಗಳು ಭರದಿಂದ ನಡೆಯುತ್ತಿವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ ತಿಳಿಸಿದರು.



ಚಿತ್ರದುರ್ಗ ನಗರದ ಹೊರವಲಯದ ಶ್ರೀ ಮಾದಾರ ಚೆನ್ನಯ್ಯ ಗುರುಪೀಠದ ಪಕ್ಕದಲ್ಲಿರುವ ಮೈದಾನದಲ್ಲಿ ನಡೆಸಲು ಉದ್ದೇಶಿಸಿರುವ ಅಭಿಮಾನೋತ್ಸವ ಕಾರ್ಯಕ್ರಮದ ಸಿದ್ಧತೆ ಪರಿಶೀಲಿಸಿದ ನಂತರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.
➡ಪುಟ ೨



ಬಿಎಸ್‌ವೈ ಕುರಿತ 2 ಪುಸ್ತಕ ಲೋಕಾರ್ಪಣೆ

• **ಬೆಂಗಳೂರು:** ಬಿ.ಎಸ್. ಯಡಿಯೂರಪ್ಪ ಅವರ 50 ವರ್ಷಗಳ ಸಾರ್ವಜನಿಕ ಜೀವನ ಪಯಣದ ನೆನಪಿಗಾಗಿ ಮೇ 9ರಂದು ಚಿತ್ರದುರ್ಗದಲ್ಲಿ ನಡೆಯುವ ಬಿಎಸ್‌ವೈ ಅಭಿಮಾನೋತ್ಸವದಲ್ಲಿ ಅವರು ನಡೆದು ಬಂದ ಹಾದಿಯ ವಿವರಗಳನ್ನೊಳಗೊಂಡ ಎರಡು ಪುಸ್ತಕಗಳು ಲೋಕಾರ್ಪಣೆಯಾಗಲಿವೆ.
➡ಪುಟ ೨

ಶಾಸಕ ಜೀವರಾಜ್‌ಗೆ ಪ್ರಮಾಣವಚನ ಬೋಧಿಸಿದ ಸ್ಪೀಕರ್

ಶೃಂಗೇರಿ ಶಾರದೆ ಹೆಸರಲ್ಲಿ ಪ್ರಮಾಣ

• **ಬೆಂಗಳೂರು:** ಅಂಚೆ ಮತ ಮರು ಎಣಿಕೆಯಲ್ಲಿ ಗೆಲುವು ಸಾಧಿಸಿದ ಬಿಜೆಪಿಯ ಡಿ.ಎನ್. ಜೀವರಾಜ್ ಅವರು ಶೃಂಗೇರಿ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಶೃಂಗೇರಿ ಶಾರದಾಂಬೆ ಹೆಸರಿನಲ್ಲಿ ಬುಧವಾರ ಪ್ರಮಾಣವಚನ ಸ್ವೀಕರಿಸಿದ್ದಾರೆ. ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು ಪ್ರಮಾಣ ವಚನ ಬೋಧಿಸಿದರು. ಜೀವರಾಜ್ ಅವರ ಪ್ರಮಾಣವಚನ ಸ್ವೀಕಾರ ಕುರಿತು ಗೊಂದಲ ಉಂಟಾದ್ದರಿಂದ ಮಂಗಳವಾರ ಬಿಜೆಪಿ ನಿಯೋಗ ರಾಜ್ಯಪಾಲರನ್ನು ಭೇಟಿ ಮಾಡಿತ್ತು. ಈ ನಡುವೆ ಬೆಂಗಳೂರಿಗೆ ಆಗಮಿಸಿದ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು ನೂತನ ಶಾಸಕ ಡಿ.ಎನ್. ಜೀವರಾಜ್ ಅವರಿಗೆ ಪ್ರಮಾಣವಚನ ಬೋಧಿಸಿದರು. ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್.ಅಶೋಕ, ವಿಧಾನಪರಿಷತ್ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕ ಎಸ್. ಮುನಿರಾಜು, ವಿಧಾನಸಭೆಯ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಮತ್ತಿತರರು ಉಪಸ್ಥಿತರಿದ್ದರು.
➡ಪುಟ ೨



ಕೋರ್ಟ್‌ಗೆ ಮೊರೆ: ಸಿಎಂ

• **ಮೈಸೂರು:** ಶೃಂಗೇರಿ ಮರುಎಣಿಕೆಯಲ್ಲಿ ಬಿಜೆಪಿ ಅಭ್ಯರ್ಥಿಗೆ ಗೆಲುವಾಗಿರುವುದಕ್ಕೆ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ, ಅಂಚೆ ಮತಗಳನ್ನು ಖುದ್ದು ಬಿಜೆಪಿ ಜೀವರಾಜ್, ಚುನಾವಣಾ ಸಿಬ್ಬಂದಿ ಸೇರಿ ತಿದ್ದಿದ್ದಾರೆ. ಈ ಬಗ್ಗೆ ನಾವು ಕೋರ್ಟ್‌ಗೆ ಹೋಗಲಿದ್ದೇವೆ ಎಂದರು.
➡ಪುಟ ೨

ಮೇ 10ಕ್ಕೆ ಬೆಂಗಳೂರಿಗೆ ಮೋದಿ

• **ಹೊಸದಿಲ್ಲಿ/ಬೆಂಗಳೂರು:** ನಗರದಲ್ಲಿರುವ ದಿ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ 45ನೇ ವಾರ್ಷಿಕೋತ್ಸವ ಮತ್ತು ಅದರ ಸಂಸ್ಥಾಪಕ ರವಿ ಶಂಕರ್ ಗುರೂಜಿ 70ನೇ ಜನ್ಮದಿನದ ಅಂಗವಾಗಿ ಮೇ 10ರಂದು ಆಯೋಜಿಸಲಾದ ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳಲಿದ್ದಾರೆ.



ದಿ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಪ್ರಕಟಣೆ ಈ ಮಾಹಿತಿ ನೀಡಿದೆ. ಸರ್ಕಾರದ ನಾಯಕರು ಮತ್ತು ನಾಗರಿಕ ಸೇವಾ ಅಧಿಕಾರಿಗಳು, ರೈತರು ಮತ್ತು ಇಂಜಿನಿಯರ್‌ಗಳು ಗೃಹಿಣಿಯರು ಮತ್ತು ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಹಿರಿಯ ನಾಗರಿಕರಲ್ಲದೆ, ಸಾವಿರಾರು ಅಂತಾರಾಷ್ಟ್ರೀಯ ಪ್ರತಿನಿಧಿಗಳನ್ನು ಒಳಗೊಂಡಿರುವ ಈ ಕಾರ್ಯಕ್ರಮವು ಒಂದು ವಿಶಿಷ್ಟ ಸಮಾವೇಶವಾಗಿದೆ ಎಂದು ತಿಳಿಸಿದೆ. ಈ ಕಾರ್ಯಕ್ರಮದಲ್ಲಿ ಮೋದಿಯವರು ಪ್ರಧಾನ ಭಾಷಣ ಮಾಡಲಿದ್ದಾರೆ.
➡ಪುಟ ೨


ಪ್ರತಿದಿನ 18 ಜನ ಕಾಣೆ | ಮಹಿಳೆಯರೇ ಹೆಚ್ಚು

ಬೆಂಗ್ಳೂರಲ್ಲಿ ಹದಿನೈದು ಸಾವಿರ ಮಂದಿ ನಾಪತ್ತೆ!

▶ ಚಂದನ್ ಲಕ್ಕೂರು

ದಿಗಂತ ವಿಶೇಷ

• **ಬೆಂಗಳೂರು:** ಸಿಲಿಕಾನ್ ಸಿಟಿಯಲ್ಲಿ ನಾಪತ್ತೆ ಪ್ರಕರಣಗಳ ಸಂಖ್ಯೆ ಆತಂಕಕಾರಿ ರೀತಿಯಲ್ಲಿ ಏರಿಕೆಯಾಗುತ್ತಿದೆ. ಅದರಲ್ಲೂ ವಿಶೇಷವಾಗಿ ಪುರುಷರಿಗಿಂತ ಮಹಿಳೆಯರು ಮತ್ತು ಯುವತಿಯರು ಕಾಣೆಯಾಗುತ್ತಿದ್ದಾರೆ. ಪ್ರತಿದಿನ ಸರಾಸರಿ 18 ಜನ ಕಣ್ಮರೆಯಾಗುತ್ತಿದ್ದಾರೆ. ನಾಪತ್ತೆಯಾದವರ ಪೈಕಿ ಮಹಿಳೆಯರ ಸಂಖ್ಯೆಯೇ ಅಗ್ರಸ್ಥಾನದಲ್ಲಿದೆ. 2024ರಲ್ಲಿ ಒಟ್ಟು 3,530 ಮಹಿಳೆಯರು ಕಾಣೆಯಾಗಿದ್ದರೆ, 2025ರ ವೇಳೆಗೆ ಈ ಸಂಖ್ಯೆ 3,661ಕ್ಕೆ ಏರಿಕೆಯಾಗಿದೆ. 2026ರ ಏಪ್ರಿಲ್ ಅಂತ್ಯದ ವೇಳೆಗೆ 1,239 ಮಹಿಳೆಯರು ನಾಪತ್ತೆಯಾಗಿದ್ದು, ಇದು ವರ್ಷಾಂತ್ಯಕ್ಕೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆಯಿದೆ.



ಮಕ್ಕಳ ಸುರಕ್ಷತೆ ಎಲ್ಲಿದೆ?: ಕೇವಲ ಹಿರಿಯರಷ್ಟೇ ಅಲ್ಲದೆ, ಸಣ್ಣ ವಯಸ್ಸಿನ ಹುಡುಗ-ಹುಡುಗಿಯರು ನಾಪತ್ತೆಯಾಗುತ್ತಿರುವುದು ಪೋಷಕರಲ್ಲಿ ಆತಂಕ ಹೆಚ್ಚಿಸಿದೆ. ಕಳೆದ ಎರಡು ವರ್ಷಗಳಲ್ಲಿ ಸರಾಸರಿ 450ಕ್ಕೂ ಹೆಚ್ಚು ಮಕ್ಕಳು ನಾಪತ್ತೆಯಾಗಿದ್ದಾರೆ. 2026ರ ಕೇವಲ ನಾಲ್ಕು ತಿಂಗಳ ಅವಧಿಯಲ್ಲೇ 146ಕ್ಕೂ ಹೆಚ್ಚು ಮಕ್ಕಳು ಕಾಣೆಯಾಗಿದ್ದಾರೆ.
➡ಪುಟ ೨

ಮಾನವ ಕಳ್ಳಸಾಗಣೆ ಜಾಲಕ್ಕೆ ಮಕ್ಕಳ ಮಾರಾಟ?
• ಪುಟ ೨

ಮಗನನ್ನು ಪತ್ತೆ ಹಚ್ಚಿದ ನ್ಯಾಟ್‌ಗ್ರೀಡ್ ತಂತ್ರಾಂಶ



• **ಬೆಳಗಾವಿ:** ಇತ್ತೀಚಿನ ದಿನಗಳಲ್ಲಿ ಸಾಲ ಮಾಡುವುದು ಶೋಕಿಯಾಗಿದೆ. ಮೈತುಂಬ ಸಾಲವನ್ನು ಮಾಡಿಕೊಂಡ ಯುವಕನೊಬ್ಬ, ನನಗೆ ಸಾಲ ಬಹಳ ಆಗಿದೆ ಎಂದು ಮೂರು ವರ್ಷಗಳ ಹಿಂದೆ ಮನೆ ಬಿಟ್ಟು ಹೋಗಿದ್ದ ಯುವಕನನ್ನು ಬೆಳಗಾವಿ ಪೊಲೀಸರು ನ್ಯಾಟ್ ಗ್ರೀಡ್ ತಂತ್ರಾಂಶದ ಮೂಲಕ ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ.


> ಸಾಲ ಮಾಡಿ ಮನೆ ಬಿಟ್ಟು ಹೋಗಿದ್ದ ಯುವಕ

ಮುಸ್ತಫಾ ಅಪ್ಪಾಸಾಹೇಬ ಅಲಿಯಾಸ್ ಅಪ್ಪಾಸಾಬ ಜಮಾದಾರ (22) ಕಾಣೆಯಾಗಿದ್ದ ಯುವಕ, ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಸಂಕೇಶ್ವರ ಪಟ್ಟಣದ ಶಿಂದೆ ಚಾಳ ಹಲಿಮಾ ಅಪ್ಪಾಸಾಹೇಬ ಜಮಾದಾರ ಅವರು ಮಗ ಕಾಣೆ ಆಗಿದ್ದಾನೆ ಎಂದು ದೂರು ದಾಖಲಿಸಿದ್ದರು.
➡ಪುಟ ೨

ಏನಿದು ನ್ಯಾಟ್ ಗ್ರೀಡ್ ತಂತ್ರಾಂಶ?
• ಪುಟ ೨

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,56,700 (2,46,500) ಅಪರಂಜಿ ಚಿನ್ನ 14,975 (14,688) ಆಭರಣ ಚಿನ್ನ: 13,945 (13,675) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 77,958 (940↑) ಎನ್‌ಎಸ್‌ಇ 24,330 (298↑) $1 = ₹95.09



ವಂಗಭಂಗದಿಂದ ಭ್ರಮಾಭಂಗದವರೆಗೆ
ನಾಗರಿಕತೆಯ ಹೋರಾಟ

ಪಶ್ಚಿಮ ಬಂಗಾಳದಲ್ಲಿ ಬಂಗಾಳಿ ನಾಗರಿಕತೆಯ ಸಂರಕ್ಷಣೆಗೆ 2026ರಲ್ಲಿ ವೇದಿಕೆಯಾಗಿದ್ದು ಭಾರತೀಯ ಜನತಾ ಪಕ್ಷ. ಹೀಗೆ ಇಂದಿನ ಪ.ಬಂಗಾಳದ ಫಲಿತಾಂಶ ಹಲವು ಸಂಗತಿಗಳನ್ನು ಧ್ವನಿಸುತ್ತದೆ. ಅಂತಿಮವಾಗಿ ಹೇಳಬೇಕೆಂದರೆ ಪ್ರತೀ ಬಂಗಾಳಿಗೂ ಬಿಜೆಪಿ ಮಾತ್ರ ಬಂಗಾಳವನ್ನು ಉಳಿಸಬಹುದು ಎನಿಸಿ ಅದಕ್ಕೆ ಮತದಾನ ಮಾಡಿದರೇ ವಿನಹ ರಾಜಕೀಯಕ್ಕಾಗಿ ಮಾತ್ರ ಬಿಜೆಪಿಯಾಗಿರಲಿಲ್ಲ.

ಅರುಣ್ ಬಿನ್ನಡಿ



ಪಶ್ಚಿಮ ಬಂಗಾಳದ ಚುನಾವಣೆಯನ್ನು ಹಿಮ್ಮುಖ ಚಲನೆಯಾಧಾರದಲ್ಲಿ (reverse order), ಅಂದರೆ ಫಲಿತಾಂಶಕ್ಕೆ ಮುಂಚಿನಿಂದ ಶತಮಾನಗಳ ಹಿಂದಿನ ನಾಗರಿಕತೆಯ ಸಂಘರ್ಷದ ಕಾಲದಿಂದ ವಿಶ್ಲೇಷಿಸಬೇಕಾಗಿದೆ. ಎಲ್ಲವನ್ನೂ ಭೂತಕಾಲದಿಂದ ವಿಶ್ಲೇಷಿಸುವ ಒಂದು ಕ್ರಮ ತಜ್ಞರಲ್ಲಿ ಮತ್ತು ಸಮಾಜದ ಚಿಂತಕವರ್ಗದಲ್ಲಿದೆ. ಆದರೆ ಇದು ಹಾಗೂ ಅಲ್ಲ! ಅದನ್ನು ಓರ್ವ ಸಾಮಾನ್ಯ ಬಂಗಾಳಿ ವ್ಯಕ್ತಿಯ ದೃಷ್ಟಿಕೋನದಿಂದ ಕೂಡ ವಿಶ್ಲೇಷಣೆ ಮಾಡಬೇಕಾಗಿದೆ. ಆ ದೃಷ್ಟಿಗೆ ಹೊರತಾಗಿ ಪ.ಬಂಗಾಳದ ಚುನಾವಣೆಯನ್ನು ವಿಶ್ಲೇಷಣೆ ಮಾಡತೊಡಗಿದರೆ ಅದು ಬಂಗಾಳಿ ಜನರಿಗೆ ಮಾಡುವ ಅವಮಾನವೂ ಆದೀತು ಮತ್ತು ವಿಶ್ಲೇಷಣೆಯ ದಾರಿಯೂ ಕೂಡ ತಪ್ಪುತ್ತದೆ. ಆದರೆ ಪಶ್ಚಿಮ ಬಂಗಾಳದಲ್ಲಿ ಚುನಾವಣೆ ಘೋಷಣೆಯಾದ ನಂತರ ಬಹುತೇಕರು ನಡೆಸಿದ ಚರ್ಚೆಗಳೆಲ್ಲವೂ ಅದಕ್ಕೆ ಹೊರತಾಗಿಯೇ ನಡೆಯಿತು. ವಿಶೇಷವಾಗಿ ಸೋಕಾಲ್ಡ್ ರಾಜಕೀಯ ಪಂಡಿತರು, ನರೇಟಿವ್‌ಗಾಗಿ ಕೆಲಸ ಮಾಡುವವರು, ನಾಗರಿಕತೆಯ ವ್ಯಾಖ್ಯಾನದಲ್ಲೇ ಎಡವಿದ ಅನನುಭವಿಗಳೆಲ್ಲರೂ ಈ ಚುನಾವಣೆಯನ್ನು ತಮ್ಮದೇ ಆದ ರೀತಿಯಲ್ಲಿ ಮಂಡಿಸುತ್ತಾ ಸಾಗಿದರು. ಆದರೆ ಫಲಿತಾಂಶ ಬಂದಾಗ ಅವರೆಲ್ಲರ ಗ್ರಹಿಕೆಗಳು ಸುಳ್ಳಾದವು. ಮಾಧ್ಯಮಗಳು ಮತ್ತು ಸರ್ವೇಕ್ಷಣಾ ತಂಡಗಳ ಗ್ರಹಿಕೆ ಮತ್ತು ಲೆಕ್ಕಾಚಾರಗಳು ತಪ್ಪಿದವು. ಪೂರ್ವಗ್ರಹ ಅಥವಾ ಚುನಾವಣೆಗಳೆಲ್ಲವೂ ಒಂದೇ ಎನ್ನುವ ಧೋರಣೆಯೇ ಇದಕ್ಕೆ ಕಾರಣವಾಗಿದ್ದವು. ವಿಶ್ಲೇಷಕರೆಲ್ಲರೂ ಬಿಜೆಪಿಯು ಪ.ಬಂಗಾಳದ ಚುನಾವಣೆಯನ್ನು ಹೇಗೆ ಎದುರಿಸುತ್ತದೆ ಎನ್ನುವುದನ್ನು ಚರ್ಚಿಸುವುದರಲ್ಲೇ ಹೆಚ್ಚು ಆಸಕ್ತರಾಗಿದ್ದಂತಿದ್ದರು. ಆದರೆ ಬಂಗಾಳದಲ್ಲಿ ಚುನಾವಣೆ ಬಿಜೆಪಿಯದ್ದು ಅಥವಾ ಯಾವುದೋ ಒಂದು ಪಕ್ಷಕ್ಕೆ ಮಾತ್ರ ಸಂಬಂಧಪಟ್ಟ ಸಂಗತಿಯಾಗಿರಲಿಲ್ಲ. ಈ ಚುನಾವಣೆಯನ್ನು ಮತ್ತು ಫಲಿತಾಂಶದ ಮೂಲಕ ಒಂದು ರಾಜಕೀಯ ಪಕ್ಷದ ವೃತ್ತಿಪರತೆ ಮತ್ತು ರಾಜಕೀಯ ತಂತ್ರಗಾರಿಕೆಯನ್ನು ಅಳೆಯಬೇಕಾಗಿರಲಿಲ್ಲ. ಏಕೆಂದರೆ ಆ ಸ್ಥಿತಿಯಿಂದ ಪ.ಬಂಗಾಳ ಯಾವತ್ತೋ ಮುಂದೆ ಸಾಗಿ ಬಂದುಬಿಟ್ಟಿತ್ತು. ಸಾಮಾನ್ಯವಾಗಿ ದೇಶದ ಇತರೆಡೆಗಳ ಚುನಾವಣೆಗಳಲ್ಲಿ ನಡೆಯುವುವಂತೆ ಅಲ್ಲಿ ಯಾವುದೂ ಇರಲಿಲ್ಲ. ಸಿದ್ಧ ಮಾದರಿಯ ಯಾವ ಸಂಗತಿಗಳೂ ಇರಲಿಲ್ಲ. ಏಕೆಂದರೆ ಅದು ಸಾಮಾನ್ಯ ಜನರು ತಮಗಾಗಿ, ತಮ್ಮ ಉಳಿವಿಗಾಗಿ ನಡೆಸಿದ ಚುನಾವಣೆಯಾಗಿತ್ತು. ದುರದೃಷ್ಟವೆಂದರೆ ಅದನ್ನು ಯಾರೂ ಅರಿಯಲಾರದೆ ಹೋದರು. ಹಾಗಾಗಿ ಎಲ್ಲರೂ ಸಹಜವಾಗಿ ತಪ್ಪು ಲೆಕ್ಕಾಚಾರದಲ್ಲಿ ತೊಡಗಿದರು.



ಹಾಗಾದರೆ ಅಲ್ಲಿ ಬಿಜೆಪಿಯ ಪಾತ್ರವೇನು ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಪ.ಬಂಗಾಳದಲ್ಲಿ ಬಿಜೆಪಿಯು ಬಂಗಾಳಿಗಳ ಧ್ವನಿಯಾಗಿತ್ತೇ ಹೊರತು ಇನ್ನೇನೂ ಆಗಿರಲಿಲ್ಲ ಎಂಬ ಸತ್ಯ ಮಾತ್ರ ಚುನಾವಣೆ ಮತ್ತು ಇಂದಿನ ಫಲಿತಾಂಶದ ಅಂತಿಮ ವ್ಯಾಖ್ಯಾನ! ಬಂಗಾಳಿಗಳ ಹಿಂದಿನ ಶಕ್ತಿಯಾಗಿ, ಬೆನ್ನೆಲುಬಾಗಿ ನಿಲ್ಲುವ ಕೆಲಸವನ್ನು ಮಾಡುವುದಷ್ಟೇ ಅಲ್ಲಿ ಮಾಡಬೇಕಾದ ಕೆಲಸವಾಗಿತ್ತು. ಬಿಜೆಪಿ ಅದನ್ನು ಮಾಡಿತು. ಪರಿಣಾಮ, ಐದು ದಶಕಗಳ ಭಯದ ಸಂಕೋಲೆ ಮುರಿದುಬಿತ್ತು. ಅದರ ಜೊತೆಗೆ ಕಪಟ-ಛದ್ಮವೇಷದ ರಾಜಕಾರಣದ ಕೊನೆಯೂ ಆಯಿತು.

ಬಂಗಾಳ ಚುನಾವಣಾ ಸಂದರ್ಭದಲ್ಲಿ ಬಿಜೆಪಿ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್ ಸಂತೋಷ್ ಅವರು “ಬಂಗಾಳ ಗೆಲ್ಲಬೇಕಾಗಿರುವುದು ಅಧಿಕಾರಕ್ಕಾಗಿ ಅಲ್ಲ, ನಮ್ಮ ನಾಗರಿಕತೆಯ ರಕ್ಷಣೆಗಾಗಿ” ಎಂದಿದ್ದರು. ಪ್ರಧಾನಮಂತ್ರಿ ನರೇಂದ್ರ ಮೋದಿಯವರೂ “ನೀವು ನಮಗೆ ಮತ ನೀಡಿ, ನಾವು ನಿಮಗೆ ಸ್ವಾತಂತ್ರ್ಯ ತಂದು ಕೊಡುತ್ತೇವೆ” ಎಂದಿದ್ದರು. ಗೃಹ ಸಚಿವ ಅಮಿತ್ ಶಾ ಅವರು “ಬಂಗಾಳ ಗೆದ್ದೇ ಸಿದ್ಧ” ಎಂದು ಶಪಥವಿತ್ತರು. ಈ ಪ್ರತಿಜ್ಞೆಗಳು ಈಗ ಈಡೇರಿವೆ. ಅಂದರೆ ಬಂಗಾಳಿಗಳು ಬಂಗಾಳಕ್ಕಾಗಿ ಮತ ನೀಡುವ ಮೂಲಕ ಅವರ ಸ್ವಾತಂತ್ರ್ಯವನ್ನು ಮರಳಿ ಗಳಿಸಿಕೊಂಡಿದ್ದಾರೆ. ಬಂಗಾಳಿ ನಾಗರಿಕತೆಯ ರಕ್ಷಣೆಯಾಗಿದೆ. ಬಂಗಾಳದ ನಾಗರಿಕತೆಯನ್ನು ಬಂಗಾಳಿಗಳೇ ರಕ್ಷಿಸಿಕೊಂಡಿದ್ದಾರೆ. ಹಾಗಾಗಿ ಇದು ನಾಗರಿಕತೆಯ ಗೆಲುವು ಕೂಡ! ಕಳೆದ ಎಂಟು ದಶಕಗಳ ನಿರಂತರ ಹೋರಾಟಕ್ಕೆ ಸಿಕ್ಕ ಗೆಲುವು. ಹಾಗಾಗಿ ಇದು ಸಾಮಾನ್ಯವಾದ ಗೆಲುವಲ್ಲ. ಬಂಗಾಳದ ಇತಿಹಾಸವನ್ನು ಬಲ್ಲವರಿಗೆ ಮಾತ್ರ ಈ ಚುನಾವಣಾ ಫಲಿತಾಂಶವನ್ನು ಸರಿಯಾಗಿ ಗ್ರಹಿಸಲು ಸಾಧ್ಯವಾಗುತ್ತದೆ. ಹೇಗೆ ವಂಗಭಂಗವಾದಾಗ ಬಂಗಾಳದ ಮನೆಮನೆಗಳಲ್ಲಿ ಕ್ರಾಂತಿಯ ಕಿಡಿ ನಾನಾ ಸ್ವರೂಪಗಳ ಮೂಲಕ ಅರಸೊತ್ತಿಗೆಗೆ ಬಿಸಿ ಮುಟ್ಟಿಸುವುದರಲ್ಲಿ ಯಶಸ್ವಿಯಾಗಿತ್ತೋ ಇದೂ ಅಂಥದ್ದೇ ಕೆಚ್ಚಿನ ಗೆಲುವು. ಅಂದು ಹೇಗೆ ಪ್ರತಿಯೊಬ್ಬ ಬಂಗಾಳಿಗೆ ತನ್ನ ಬಂಗಾಳ ಒಡೆದರೆ ತಾವು ಉಳಿಯುವುದಿಲ್ಲ ಎಂಬುದು ಅರಿವಾಗಿ ಸ್ವಾತಂತ್ರ್ಯ ಜ್ವಾಲೆಯಾಗಿ ಉರಿಯಿತೋ ಈಗ ಉರಿದಿದ್ದೂ ಕೂಡ ಅಂಥದ್ದೇ ಜ್ವಾಲೆ. ಅಂದು ಹೇಗೆ ವಿಭಜನೆಗೊಂಡ ಬಂಗಾಳಕ್ಕಾಗಿ ರಾಜಕೀಯ ನಡೆಯಲಿಲ್ಲವೋ ಇಂದೂ ಬಂಗಾಳಿಗಳು ಬಂಗಾಳಕ್ಕಾಗಿ ರಾಜಕೀಯ ಮಾಡಲಿಲ್ಲ. ರಾಜಕೀಯವಾಗಿ ಒಡೆದುಹೋಗಲಿಲ್ಲ. ಅಂದು ದೇಶವಿಭಜನೆಯ ದಳ್ಳುರಿಗೆ ಬಂಗಾಳ ಹೇಗೆ ಬೆಂದಿತ್ತೋ ಇಂದು ಸ್ವತಂತ್ರ ಭಾರತದಲ್ಲೂ ಬಂಗಾಳ ಬೇಯುತ್ತಿತ್ತು. ಆ ಬೇಗೆಯಿಂದ ಹೊರಬರಲು ಬಂಗಾಳ ಹೇಗೆ ಏಕತ್ರವಾಯಿತೋ, ಇಂದು ಕೂಡ ಬಂಗಾಳ ಏಕತ್ರವಾಗಿದ್ದು ಹಾಗೆಯೇ! ರಾಜಕೀಯದಿಂದ ದೂರವಿದ್ದು, ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಶ್ಯಾಮಪ್ರಸಾದ್ ಮುಖರ್ಜಿಯವರಂಥ ನಾಯಕರು ಅಂದು ಬೀದಿಗಿಳಿಯಲು ಕಾರಣವಾಗಿದ್ದು ಒಂದು ನಾಗರಿಕತೆ ಉಳಿಯಬೇಕು ಎಂಬ ಒಂದೇ ಕಾರಣಕ್ಕಾಗಿ. ಆಗಲೂ ಮುಖರ್ಜಿಯವರಿಗೆ ಹಿಂದು ಮಹಾಸಭಾ, ಪ್ರಜಾ ಪರಿಷತ್ ಮುಂತಾದ ಸಂಘಟನೆಗಳು ವೇದಿಕೆಯಾಗಿದ್ದಂತೆ 2026ರಲ್ಲಿ ಬಂಗಾಳಿ ನಾಗರಿಕತೆಯ ಸಂರಕ್ಷಣೆಗೆ ವೇದಿಕೆಯಾಗಿದ್ದು ಭಾರತೀಯ ಜನತಾ ಪಕ್ಷ. ಹೀಗೆ ಇಂದಿನ ಪ.ಬಂಗಾಳದ ಫಲಿತಾಂಶ ಹಲವು ಸಂಗತಿಗಳನ್ನು ಧ್ವನಿಸುತ್ತದೆ. ಅಂತಿಮವಾಗಿ ಹೇಳಬೇಕೆಂದರೆ ಪ್ರತೀ ಬಂಗಾಳಿಗೂ ಬಿಜೆಪಿ ಮಾತ್ರ ಬಂಗಾಳವನ್ನು ಉಳಿಸಬಹುದು ಎನಿಸಿ ಅದಕ್ಕೆ ಮತದಾನ ಮಾಡಿದರೇ ವಿನಹ ರಾಜಕೀಯಕ್ಕಾಗಿ ಮಾತ್ರ ಬಿಜೆಪಿಯಾಗಿರಲಿಲ್ಲ.

ವಲಸಿಗರ ಹೆಬ್ಬಾಗಿಲಾದ ಬಂಗಾಳ

1948ರಲ್ಲಿ ಹೇಗೆ ಮುಸ್ಲಿಂ ಲೀಗಿನ ಡೈರೆಕ್ಟ್ ಆಕ್ಷನ್ ಡೇ ಹಿಂಸಾಚಾರಕ್ಕೆ ಬಂಗಾಳ ನಡುಗಿತ್ತೋ ಇಂದಿನ ಬಂಗಾಳವೂ ಹಾಗೆ ನಡುಗಿದ ಕಾರಣಕ್ಕೆ ಆತ ಬಿಜೆಪಿಯನ್ನು ಈ ಪರಿಯಲ್ಲಿ ಗೆಲ್ಲಿಸಿದ. ಹೀಗೆ ಪ.ಬಂಗಾಳದ ಚುನಾವಣಾ ಫಲಿತಾಂಶವನ್ನು ವಿಶ್ಲೇಷಣೆ ಮಾಡುತ್ತಾ ಹೋದರೆ ಭಾರತೀಯ ಇತಿಹಾಸದ ಪ್ರಮುಖ ಪುಟಗಳು ತೆರೆಯುತ್ತಾ ಹೋಗುತ್ತದೆ. ಇವುಗಳ ನಡುವೆ ಅಲ್ಲಲ್ಲಿ ಪ್ರಶ್ನೆಗಳು ಕೂಡ ಏಳುತ್ತಲೂ ಹೋಗುತ್ತವೆ. ಉದಾಹರಣೆಗೆ ಸದಾ ಸಂಘರ್ಷವನ್ನು ಎದುರಿಸುತ್ತಾ ಬಂದ ಬಂಗಾಳದ ನಾಗರೀಕತೆ ಸ್ವಾತಂತ್ರ್ಯಾನಂತರ ಕಾಂಗ್ರೆಸ್-ಕಮ್ಯುನಿಸ್ಟ್ ಮತ್ತು ತೃಣಮೂಲ ಕಾಂಗ್ರೆಸ್ ಕಾಲಘಟ್ಟದಲ್ಲಿ ತನ್ನ ವೈಭವವನ್ನು ಕಂಡಿರಬೇಕಲ್ಲವೇ, ಕೇವಲ ಬಿಜೆಪಿ ಜಯಗಳಿಸಿದಾಗ ಮಾತ್ರ ಅದನ್ನು ನಾಗರಿಕತೆಯ ವಿಜಯ ಎಂದು ಬಣ್ಣಿಸಬೇಕೆ ಎಂಬ ಪ್ರಶ್ನೆಗಳೂ ಹುಟ್ಟಬಹುದು. ಆದರೆ ಕಳೆದ ಏಳು ದಶಕಗಳಲ್ಲಿ, ಈ ಮೂರು ಪಕ್ಷಗಳ ಆಡಳಿತಾವಧಿಯಲ್ಲಿ ಬಂಗಾಳದ ಪರಿಸ್ಥಿತಿಯನ್ನು ಪೂರ್ವಗ್ರಹಗಳಿಲ್ಲದೆ ಅವಲೋಕಿಸಬೇಕು. ಹಿಂದಿನ ಸಂದರ್ಭಗಳಲ್ಲಿ ಬಂಗಾಳಿ ಅಸ್ಮಿತೆಗೆ ಅಪಾಯ ಬಂದಾಗಲೆಲ್ಲಾ ಒಗ್ಗೂಡುತ್ತಿದ್ದ ಬಂಗಾಳಕ್ಕೆ ಸ್ವಾತಂತ್ರ್ಯಾನಂತರ ಮಹಾಮರೆವು ಆವರಿಸಿತು. ಅದು ಕೇವಲ ಬಂಗಾಳಕ್ಕೆ ಸೀಮಿತವಾಗಿರಲಿಲ್ಲವೆಂಬುದು ಸತ್ಯವಾದರೂ ಬಂಗಾಳದ ಪ್ರಜ್ಞೆಗೆ ಕತ್ತಲಾವರಿಸಿದರೆ ಪರಿಣಾಮ ಘೋರವಾಗಿರುತ್ತದೆ. ಸ್ವಾತಂತ್ರ್ಯಪೂರ್ವದ ಬಂಗಾಳದ ಪ್ರಜ್ಞೆಗೆ ಭಾರತ ನಮ್ಮದು ಎಂಬುದು ಮುಖ್ಯವಾಗಿದ್ದರೆ, ನಂತರದ ಬಂಗಾಳಕ್ಕೆ ಬಂಗಾಳ ಮಾತ್ರ ನಮ್ಮದು ಎಂಬ ಪೊರೆ ಆವರಿಸಿತು. ಶ್ರೇಷ್ಠವಾದ ಬಂಗಾಳದ ಸಾಮಾಜಿಕ ಲೋಕಕ್ಕೆ ಒಗ್ಗದ ವಿದೇಶಿ ಸಿದ್ಧಾಂತದ ಹುಚ್ಚು ಹಿಡಿಯಿತು. ಬಂಗಾಳದ ಸಾಂಸ್ಕೃತಿಕ ಚೈತನ್ಯ ಪತನವಾಗತೊಡಗಿತು. ಸಾಂಸ್ಕೃತಿಕ ಮತ್ತು ಧಾರ್ಮಿಕ ನೆಲೆಗಟ್ಟಿನ ರಾಜಕಾರಣದ ಜಾಗದಲ್ಲಿ ವಿದೇಶಿ ಚಿಂತನೆಗಳ ರಾಜಕಾರಣ ನೆಲೆಯಾಯಿತು. ಕಮ್ಯುನಿಸಮ್ಮಿನ ಬೀಜಗಳು ಬಿತ್ತನೆಯಾಗಿ ಅದು ರಾಜಕಾರಣವನ್ನು ಕ್ರಿಮಿನಲ್ ಸ್ವರೂಪಕ್ಕಿಳಿಸಿತು. ಸಿದ್ಧಾಂತದ ಹೆಸರಿನಲ್ಲಿ ಕೊಲೆ ಬಂಗಾಳದಲ್ಲಿ ಸಹಜವೆಂಬಂತೆ ನಡೆಯತೊಡಗಿತು. ಬಣ್ಣಬಣ್ಣದ ಮಾತುಗಳಿಗೆ ಬಂಗಾಳ ಬಲಿಯಾಯಿತು. ಕಾಂಗ್ರೆಸಿನಿಂದ ಅಧಿಕಾರವನ್ನು ಪಡೆದ ಕಮ್ಯುನಿಸ್ಟ್ ಆಡಳಿತದ ಅವಧಿ ಭಾರತದ ಇತಿಹಾಸದ ಅತ್ಯಂತ ಕರಾಳ ಅಧ್ಯಾಯ. ದೀರ್ಘಾವಧಿಯವರೆಗೆ ಅಧಿಕಾರದಲ್ಲಿದ್ದರೂ ಬಂಗಾಳ ಅಭಿವೃದ್ಧಿ ಕಾಣಲಿಲ್ಲ. ಅಧಿಕಾರದಲ್ಲಿದ್ದ ಮುಖ್ಯಮಂತ್ರಿಗಳೇನೋ ಮುತ್ಸದ್ಧಿಗಳೆನಿಸಿಕೊಂಡರು. ಆದರೆ ಬಂಗಾಳ ಬಡವಾಗುತ್ತಾಹೋಗುತ್ತಿತ್ತು. ಚುನಾವಣಾ ಅಕ್ರಮಗಳ ಮೂಲಕ, ಮತಪೆಟ್ಟಿಗೆ ಅಪಹರಣಗಳ, ಅತಿಯಾದ ಮುಸಲ್ಮಾನ ಓಲೈಕೆಯ ಕಾರಣದಿಂದ ಬಾಂಗ್ಲಾ ವಲಸಿಗರ ಹೆಬ್ಬಾಗಿಲಾಗಿ ಬಂಗಾಳ ಬದಲಾಯಿತು.



ಟಿಎಂಸಿ ಸೋಲಿಗೆ ಇವೂ ಕಾರಣ

- ಟಿ.ಎಂಸಿ ಕಚೇರಿಯ ಮೇಲೆ ಇಡಿ ದಾಳಿಯಾದಾಗ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಫೈಲುಗಳನ್ನು ಎತ್ತಿ ಓಡುವ ದೃಶ್ಯ ಮತ್ತು ಕೋಪಾವಿಷ್ಟರಾಗಿ ಪತ್ರಿಕಾಗೋಷ್ಠಿ ನಡೆಸಿದ್ದನ್ನು ಪ್ರಬುದ್ಧ ಬಂಗಾಳಿ ನೋಡಿ ಅಹಸ್ಯಪಟ್ಟುಕೊಂಡ.
- ಬಾಂಗ್ಲಾದೇಶದಲ್ಲಿ ಹಿಂದು ಯುವಕ ದೀಪುಚಂದ್ರನ ಭೀಕರ ಹತ್ಯೆಯನ್ನು ಪಶ್ಚಿಮ ಬಂಗಾಳದ ಹಿಂದು ಗಂಭೀರವಾಗಿ ತೆಗೆದುಕೊಂಡ. ದೀಪುಚಂದ್ರನನ್ನು ಕೊಂದವರ ಬಂಧುಗಳ ಜೊತೆಯಲ್ಲಿ ತಾವು ಕೂಡ ಬದುಕುತ್ತಿದ್ದೇವೆ ಎಂಬ ಆತಂಕ ಅವರನ್ನು ಕಾಡಿತು.
- ಚುನಾವಣಾ ಆಯೋಗ ಈ ಬಾರಿ ಕೇಂದ್ರೀಯ ಮೀಸಲು ಪಡೆಯ ಬೃಹತ್ ಸಂಖ್ಯೆಯ ಯೋಧರನ್ನು ಕರೆಸಿ ರಾಜ್ಯದಲ್ಲಿ ಕಟ್ಟುನಿಟ್ಟಿನ ಭದ್ರತೆಯನ್ನು ಒದಗಿಸಿದ್ದು ಜನರಲ್ಲಿ ಧೈರ್ಯ ತುಂಬಿತು. ತಾವಿನ್ನು ನಿರ್ಭಯವಾಗಿ ಮತಗಟ್ಟೆಗೆ ಹೋಗಬಹುದು ಎಂಬ ವಿಶ್ವಾಸ ಅವರಿಗೆ ಬಂತು.
- ಈಶಾನ್ಯದ ಸಿಲಿಗುರಿ ಗಡಿಯಲ್ಲಿ ಚೀನಾವು ಬಾಂಗ್ಲಾದೇಶಕ್ಕಾಗಿ 16 ಕಿ.ಮೀ ಉದ್ದದ ಏರ್ ಬೇಸನ್ನು ನಿರ್ಮಿಸಿಕೊಡುತ್ತಿದೆ. ಅದರ ಜೊತೆಗೆ ತೀಸ್ತಾನದಿ ಯೋಜನೆಯನ್ನು ನಿರ್ಮಿಸುವ ಉದ್ದೇಶವನ್ನೂ ಚೀನಾ ಇಟ್ಟುಕೊಂಡಿದೆ. ಇದು ಕೂಡ ಪ.ಬಂಗಾಳ ಚುನಾವಣೆಯ ಮೇಲೆ ಪರಿಣಾಮ ಬೀರಿದೆ.
- ಬಾಂಗ್ಲಾದೇಶ ಗಡಿ ಭಾಗಗಳಲ್ಲಿ ವಲಸಿಗರಿಗೆ ನೆಲೆ ನೀಡುವ ಯೋಜನೆಯನ್ನು ಮಮತಾ ಸರ್ಕಾರ ಮಾಡುತ್ತಲೇ ಬಂತು. ಇದು ಚಿಕನ್ ನೆಕ್ ಸೂಕ್ಷ್ಮ ಪ್ರದೇಶದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂಬುದು ಜನರಿಗೆ ಮನವರಿಕೆಯಾಯಿತು.



ಕಮ್ಯುನಿಸ್ಟರಿಗಿಂತ ಕುಲಗೆಡಿಸಿದ ಮಮತಾ

ಆ ದಿನಗಳಲ್ಲಿ ಬಾಂಗ್ಲಾ ವಲಸಿಗರ ವಿರುದ್ಧ ಧ್ವನಿ ಎತ್ತಿದ ಮಮತಾ ಬ್ಯಾನರ್ಜಿಯವರಿಗೆ ತನ್ನೆಲ್ಲಾ ಶಕ್ತಿಯನ್ನು ಧಾರೆ ಎರೆದದ್ದು ಭಾರತೀಯ ಜನತಾ ಪಕ್ಷ. ಕಾಂಗ್ರೆಸನ್ನು ಬಿಟ್ಟ ಮಮತಾ ತೃಣಮೂಲ ಕಾಂಗ್ರೆಸ್ ರಚನೆ ಮಾಡುವಾಗಲೂ ಆಕೆಯ ಹಿಂದಿದ್ದ ಶಕ್ತಿ ಬಿಜೆಪಿ. ಎನ್‌ಡಿಎ ಮೈತ್ರಿಕೂಟದ ಭಾಗವಾಗಿ ಕೇಂದ್ರ ಸಚಿವೆಯೂ ಆದ ಮಮತಾ ರಾಜ್ಯದಲ್ಲಿ ಅಧಿಕಾರಕ್ಕೇರುವವರೆಗೂ ಬಿಜೆಪಿ ಆಕೆಯ ಇಂಧನಶಕ್ತಿಯಾಗಿತ್ತು. ಇವೆಲ್ಲವನ್ನೂ ಮಾಡಲು ಬಿಜೆಪಿಗಿದ್ದ ಏಕೈಕ ಕಾರಣ ಕಮ್ಯುನಿಸ್ಟರು ತೊಲಗಬೇಕು ಮತ್ತು ಬಂಗಾಳ ಮರಳಿ ಭಾರತದ ಶಕ್ತಿಯಾಗಬೇಕೆಂಬುದು ಮಾತ್ರ. ವಿಪರ್ಯಾಸವೆಂದರೆ ಕಮ್ಯುನಿಸ್ಟರ ವಿರುದ್ಧ ಹೋರಾಡುತ್ತಾ ಬಂದ ಮಮತಾ ಬ್ಯಾನರ್ಜಿ ತಾನು ಕಮ್ಯುನಿಸ್ಟರಿಗಿಂತ ಬಂಗಾಳವನ್ನು ಕುಲಗೆಡಿಸಿದರು. ವಲಸಿಗರ ವಿರುದ್ಧ ಸಿಡಿದೇಳುತ್ತಿದ್ದ ಮಮತಾ ಅದೇ ಬಾಂಗ್ಲಾ ವಲಸಿಗರಿಗೆ ಮಣೆ ಹಾಕತೊಡಗಿದರು.

ಬಾಂಗ್ಲಾ ವಲಸಿಗರೇ ಬಾಡಿಗೆ ಗೂಂಡಾಗಳು

ಮತದಾರರ ಪಟ್ಟಿ ಪರಿಷ್ಕರಣೆಯಿಂದ ಪ.ಬಂಗಾಳದಲ್ಲಿ ನೆಲೆಸಿದ್ದ ಸುಮಾರು 92 ಲಕ್ಷ ಅಕ್ರಮ ಮತದಾರರನ್ನು ಕಿತ್ತೊಗೆಯಲಾಯಿತು. ಇದು ಓಲೈಕೆಯ ತೃಣಮೂಲ ಸರ್ಕಾರಕ್ಕೆ ಹಿನ್ನೆಡೆಯಾಗಿ ಪರಿಣಮಿಸಿತು. ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ಅಕ್ರಮ ಮತದಾರರ ಪ್ರಮಾಣ ಹೆಚ್ಚಾಗುತ್ತಲೇ ಇತ್ತು. ಅಕ್ರಮವಾಗಿ ನೆಲೆಸಿದ್ದ ಬಾಂಗ್ಲಾದೇಶಿ ವಲಸಿಗರಿಗೆ ಸಕಲ ಸವಲತ್ತುಗಳನ್ನು ನೀಡುತ್ತಿದ್ದ ಮಮತಾ ಸರ್ಕಾರ ಚುನಾವಣಾ ಸಮಯದಲ್ಲಿ ಅವರನ್ನು ಬಾಡಿಗೆ ಗೂಂಡಾಗಳಾಗಿ ಬಳಸಿಕೊಳ್ಳುತ್ತಿತ್ತು.

2014ರ ನಂತರ ಬಿಜೆಪಿ

2004ರವರೆಗೂ ಮಮತಾ ಬ್ಯಾನರ್ಜಿಯ ಆಟಾಟೋಪಗಳನ್ನು ಸಹಿಸಿದ ಬಿಜೆಪಿ ಸ್ವತಃ ತಾನೇ ಬಂಗಾಳದ ರಕ್ಷಣೆಗಿಳಿಯಿತು. ಯೋಜನಾಬದ್ಧವಾಗಿ ಸಂಘಟನಾ ಕಾರ್ಯವನ್ನು ಆರಂಭಿಸಿತು. ಆದರೆ ಬಿಜೆಪಿ ಎಲ್ಲವನ್ನೂ ಸೊನ್ನೆಯಿಂದ ಆರಂಭಿಸಬೇಕಿತ್ತು. ಏಕೆಂದರೆ ಬಿಜೆಪಿ ಎಲ್ಲವನ್ನೂ ಟಿಎಂಸಿಗೆ ಕೊಟ್ಟಾಗಿತ್ತು. ಅದರ ಪರಿಣಾಮವಾಗಿ 2006ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮೂರು ಸೀಟುಗಳನ್ನು ಗೆದ್ದಿತು. ಅದರ ನಂತರ ಕೆಲವೇ ವರ್ಷಗಳಲ್ಲಿ ಬಂದ ಪಂಚಾಯತ್ ಚುನಾವಣೆಗಳಲ್ಲಿ ಬಿಜೆಪಿ ಪ್ರಬಲ ಪೈಪೋಟಿಗಿಳಿಯಿತು. ಮೊಟ್ಟಮೊದಲ ಬಾರಿಗೆ ಬಂಗಾಳದ ಹಳ್ಳಿಗಳಲ್ಲಿ ಬಿಜೆಪಿ ಕಾರ್ಯಕರ್ತ ಪಕ್ಷದ ಬಾವುಟವನ್ನು ಹಿಡಿದು ನಿಂತ. ಆದರೆ ಅದರ ಪರಿಣಾಮವನ್ನು ಆ ಕಾರ್ಯಕರ್ತ ಅನುಭವಿಸಿದ್ದು ಮಾತ್ರ ಅತ್ಯಂತ ಭೀಕರ. ಚುನಾವಣೆಯ ನಂತರ ಸುಮಾರು 300 ಕಾರ್ಯಕರ್ತರ ಹತ್ಯೆಯಾಯಿತು. ಮನೆಗಳ ಧ್ವಂಸ ನಡೆಯಿತು. ಆತನ ಬೆಳೆಗಳನ್ನು ನಾಶಪಡಿಸಲಾಯಿತು. ಗ್ರಾಮಗ್ರಾಮಗಳನ್ನೇ ಟಿಎಂಸಿ ಕಾರ್ಯಕರ್ತರು ಸುಟ್ಟು ಹಾಕಿದರು. ಹೆಣ್ಣುಮಕ್ಕಳ ಮೇಲೆ ಅತ್ಯಾಚಾರಗಳು ನಡೆಯಿತು. ಈ ಸಂಘರ್ಷದ ಚುನಾವಣೆಯ ನಂತರ ಪ್ರತಿ ರಾಷ್ಟ್ರೀಯವಾದಿಯೂ ಬಿಜೆಪಿಯತ್ತ ನೋಡಲಾರಂಭಿಸಿದ. ಸುಮಾರು 2017ರ ಹೊತ್ತಿಗೆ ಬಂಗಾಳದ ಪ್ರಬುದ್ಧ ವರ್ಗ ಬಿಜೆಪಿಯನ್ನು ಒಪ್ಪುವ ಹಂತಕ್ಕೆ ಬಂತು. ದೊಡ್ಡ ಕೇಡರ್ ಬಿಜೆಪಿಯತ್ತ ಹರಿದುಬರತೊಡಗಿತು.

2021ರ ಚುನಾವಣೆಯ ಹೊತ್ತಿಗೆ ಬೇರೆಬೇರೆ ಸಿದ್ಧಾಂತಗಳ ಜನರೂ ಬಿಜೆಪಿಯೊಂದೇ ಪರಿಹಾರ ಎನ್ನುವ ಪರಿಸ್ಥಿತಿಗೆ ಬಂದರು. ಆದರೆ 2021ರ ಚುನಾವಣೆ ಸಂದರ್ಭದಲ್ಲಿ ಕೂಡ ಪಕ್ಷದ ಸಂಘಟನೆಗೊಂದು ನಿಶ್ಚಿತ ಆಕಾರವಿರಲಿಲ್ಲ. ಮೋದಿ ಮತ್ತು ರಾಷ್ಟ್ರೀಯತೆಗಳೆಂಬ ಘೋಷಣೆಗಳೇ ಬಿಜೆಪಿಗೆ 77 ಸೀಟುಗಳನ್ನು ದೊರಕಿಸಿಕೊಟ್ಟಿತು. ಶೇ. 38ರಷ್ಟು ಪ್ರಮಾಣದ ವೋಟುಗಳು ಬಿಜೆಪಿಗೆ ಬಂದು. ಎಂದಿನಂತೆ ಆ ಚುನಾವಣೆಯ ನಂತರ ಕೂಡ ರಾಜ್ಯದಲ್ಲಿ ಭೀಕರ ಗಲಭೆ ನಡೆಯಿತು. ಸರ್ಕಾರಿ ಪ್ರಾಯೋಜಿತ ಕೊಲೆಗಳು ನಡೆದು ಸುಮಾರು 300ಕ್ಕೂ ಹೆಚ್ಚಿನ ಕಾರ್ಯಕರ್ತರ ಹತ್ಯೆ ನಡೆಯಿತು. ಇಡೀ ಬಂಗಾಳ ಹೊತ್ತಿ ಉರಿಯಿತು. ರಾಜ್ಯದ ಪೊಲೀಸ್ ವ್ಯವಸ್ಥೆ ಟಿಎಂಸಿಯ ಅಂಗಸಂಸ್ಥೆಯಂತೆ ಕಾರ್ಯನಿರ್ವಹಿಸುತ್ತಿತ್ತು. ಸಾವಿರಾರು ಕಾರ್ಯಕರ್ತರನ್ನು ಪಕ್ಷ ವರ್ಷಗಟ್ಟಲೆ ಅಸ್ಸಾಮಿನಲ್ಲಿಟ್ಟು ರಕ್ಷಣೆ ಮಾಡುವ ಹಂತಕ್ಕೆ ಪರಿಸ್ಥಿತಿ ಮುಟ್ಟಿತ್ತೆಂದರೆ ಬಂಗಾಳದ ಪರಿಸ್ಥಿತಿ ಹೇಗಿದ್ದಿರಬಹುದೆಂಬುದನ್ನು ಯೋಚಿಸಬಹುದು. ಇಂಥ ರಾಜಕೀಯ ಹತ್ಯೆಗಳನ್ನು ಗಂಭೀರವಾಗಿ ಪರಿಗಣಿಸಿದ ಸಿಬಿಐ 600ಕ್ಕೂ ಹೆಚ್ಚಿನ ಪ್ರಕರಣಗಳನ್ನು ತನಿಖೆಗೊಳಪಡಿಸಿ 6000ಕ್ಕೂ ಹೆಚ್ಚು ಟಿಎಂಸಿ ಗೂಂಡಾಗಳನ್ನು ಬಂಧಿಸಿತು. ಇದು ಶಾಂತಿ ಸ್ಥಾಪನೆಯ ಬದಲು ತೃಣಮೂಲ ಕಾಂಗ್ರೆಸ್ ಕಾರ್ಯಕರ್ತರನ್ನು ಮತ್ತಷ್ಟು ಸಿಟ್ಟಿಗೇಳಿಸಿತು. ಇದರ ಪರಿಣಾಮವಾಗಿ 24ರ ಲೋಕಸಭಾ ಚುನಾವಣೆಯಲ್ಲಿ ಎಷ್ಟೋ ಬೂತ್‌ಗಳಲ್ಲಿ ಹಿಂದುಗಳು ವೋಟ್ ಹಾಕಲು ಬರದ ಪರಿಸ್ಥಿತಿ ನಿರ್ಮಾಣವಾಯಿತು. ಬೂತ್ ಏಜೆಂಟರ ಕೊರತೆಯಾಯಿತು. ಕಾರ್ಯಕರ್ತರ ಮೇಲೆ ಸುಳ್ಳು ಕೇಸುಗಳನ್ನು ಹಾಕಲಾಯಿತು. ಇವೆಲ್ಲದರ ತರುವಾಯ ಕೂಡ ಬಿಜೆಪಿ 12 ಸೀಟುಗಳನ್ನು ಗೆದ್ದಿತು. ಈ ಬದಲಾವಣೆ ಕೂಡ ಬಿಜೆಪಿಯ ಮುಂದಿನ ಹೋರಾಟಕ್ಕೆ ಪ್ರೇರಣೆ ನೀಡಿದವು.

ಇಂದು ಶ್ಯಾಮಪ್ರಸಾದ್ ಮುಖರ್ಜಿಯವರ ಕನಸು ನನಸಾಗಿದೆ. ಪ್ಲಾಸಿ ಕದನಕ್ಕೂ ಮುಂಚಿನಿಂದಲೂ ಬಂಗಾಳ ಪಡುತ್ತಿದ್ದ ಬವಣೆ ನೀಗಿದೆ. ಚುನಾವಣೆಯ ಸಮಯದಲ್ಲಿ ಬಂಗಾಳಿಗಳು ಬಿಜೆಪಿಯ ಮೇಲೆ ಯಾವ ಭರವಸೆಯನ್ನು ಇಟ್ಟಿದ್ದರೋ ಅದನ್ನು ಈಡೇರಿಸುವುದು ಮಾತ್ರ ಇನ್ನುಳಿದಿರುವ ಕೆಲಸ. ಆದುದರಿಂದ ಈ ಫಲಿತಾಂಶ ಕೇವಲ ರಾಜಕೀಯ ಅಂಕೆಸಂಖ್ಯೆಯ ಆಟವಾಗಿಲ್ಲ. ಅದೊಂದು ಮಹಾತಪಸ್ಸು, ಮಹಾಸಂಕಲ್ಪ. ಶತಮಾನಗಳ ಕಾಲದ ಸಂಘರ್ಷದ ಅಂತಿಮ ಹಂತ. ಈ ಎಲ್ಲಾ ಕಾರಣಗಳಿಂದ ಮೊನ್ನೆ ಬಂಗಾಳದ ಚುನಾವಣೆ ಎಲ್ಲಾ ಚುನಾವಣೆಗಳಂತೆ ಅಲ್ಲ. ಕೇವಲ ರಾಜಕೀಯ ವಿಶ್ಲೇಷಣೆಗಳಿಂದ ಅದನ್ನು ಅಳೆಯಲಾಗದು.

2026ರ ಹೆದ್ದೆರೆ

ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಕಾರ್ಯಕರ್ತ ಎಲ್ಲಾ ಅಡೆತಡೆಗಳನ್ನು ಮೀರಿ ನಿಂತ. ಮಾಡು ಇಲ್ಲವೇ ಮಡಿ ಎನ್ನುವಂತೆ ಕೆಲಸ ಮಾಡಿದ. ಸಂಘಟನೆ ಹಿಂದೆಂದಿಗಿಂತಲೂ ಗಟ್ಟಿಗೊಂಡಿತು. 80 ಸಾವಿರ ಬೂತ್‌ಗಳಲ್ಲಿ 70 ಸಾವಿರ ಬೂತ್ ಕಮಿಟಿಗಳನ್ನು ರಚನೆ ಮಾಡಲಾಯಿತು. ಮೊದಲ ಬಾರಿಗೆ ಬಂಗಾಳದಲ್ಲಿ ಮೂರುಮೂರು ಬಾರಿ ಮನೆಮನೆ ಪ್ರಚಾರ ನಡೆಯಿತು. ರಾಜ್ಯದಲ್ಲಿ ಒಟ್ಟು 80 ಸಾವಿರಕ್ಕೂ ಹೆಚ್ಚಿನ ಸಣ್ಣ ಸಭೆಗಳು ನಡೆದವು. ಕ್ಷೇತ್ರ ಮಟ್ಟದಲ್ಲಿ ನಡೆಯುತ್ತಿದ್ದ ಸಭೆಗಳಿಗೆ ಸಾವಿರಾರು ಜನರು ಸೇರತೊಡಗಿದರು. ಅದರಲ್ಲೂ ಕಳೆದ ರಾಮನವಮಿಯ ದಿನವಂತೂ ಮಾಲ್ಡಾ, ಸಿಲಿಗುರಿ ಅಯೋಧ್ಯೆಯಂತೆ ಸಿಂಗಾರಗೊಂಡು ಉತ್ಸವವನ್ನು ಆಚರಿಸಿತು.





ಕಿರುಸುದ್ದಿ

ಮೈಸೂರಿಗಿಂದು ಮೋಹನ್ ಭಾಗವತ್

ಮೈಸೂರು: ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಅವರು ಗುರುವಾರ ಮೈಸೂರಿಗೆ ಆಗಮಿಸಲಿದ್ದು, ನಗರದ ಚಾಮುಂಡಿಬೆಟ್ಟದ ತಪ್ಪಲಲ್ಲಿರುವ ಸುತ್ತೂರು ಮಠದಲ್ಲಿ ನಡೆಯಲಿರುವ ಸುವರ್ಣ ಮಹೋತ್ಸವ ಉಪನ್ಯಾಸ ಕಾರ್ಯಕ್ರಮದಲಿ ಪಾಲ್ಗೊಳ್ಳಲಿದ್ದಾರೆ. ಬೆಳಗ್ಗೆ 10 ಗಂಟೆಗೆ ನಡೆಯಲಿರುವ ಜೆಎಸ್ ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದ 15ನೇ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿದಲ್ಲಿ ರಾಷ್ಟ್ರೀಯ ಅಭಿವೃದ್ಧಿಗೆ ಸಾಮಾಜಿಕ ಸೌಹಾರ್ದತೆ ಪ್ರೇರಕ ವಿಷಯ ಕುರಿತು ಮೋಹನ್ ಭಾಗವತ್ ಅವರು ಮಾತನಾಡಲಿದ್ದಾರೆ. ಬಳಿಕ ಪ್ರಶ್ನೋತ್ತರಕ್ಕೆ ಅವಕಾಶವಿದೆ. ಇದೇ ಸಂದರ್ಭದಲ್ಲಿ ಮುದ್ದೇನಹಳ್ಳಿ ಸತ್ಯಸಾಯಿ ಆಶ್ರಮದ ಸದ್ಗುರು ಶ್ರೀಮಧುಸೂದನ ಸಾಯಿ ಅವರು ನೀಡಿದ್ದ 14ನೇ ವಿಶೇಷ ಉಪನ್ಯಾಸದ ಆತ್ಮಾನೋ ಮೋಕ್ಷಾರ್ಥಂ ಜಗತ್ ಹಿತಾಯ ಚ ಕೃತಿಯನ್ನು ಬಿಡುಗಡೆ ಮಾಡುವರು. ಸುತ್ತೂರು ಮಠದ ಪೀಠಾಧಿಪತಿಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಯವರು ಸಾನ್ನಿಧ್ಯ ವಹಿಸಲಿದ್ದಾರೆ. ಕಾರ್ಯಕ್ರಮಕ್ಕೆ ಬೆಳಗ್ಗೆ 9.15ರ ನಂತರ ಆಗಮಿಸುವವರು ಪಿಂಜರಾಪೋಲ್ ರಸ್ತೆ, ಅರಮನೆ ಪಂಚಗವಿಮಠದ ರಸ್ತೆಯ ಮೂಲಕ ಶ್ರೀಮಠವನ್ನು ತಲುಪಬಹುದಾಗಿದೆ ಎಂದು ಜೆಎಸ್‌ಎಸ್ ಮಹಾ ವಿದ್ಯಾಪೀಠದ ಕಾರ್ಯ ನಿರ್ವಾಹಕ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ವಿಜಯೇಂದ್ರ ಸಂತಾಪ

/ಬೆಂಗಳೂರು: ರಾಜ್ಯ ಬಿಜೆಪಿ ಮಾಜಿ ಕಾರ್ಯದರ್ಶಿ ಜಗದೀಶ್ ಹಿರೇಮನಿ ಅವರ ನಿಧನವು ತೀವ್ರ ದುಃಖ ತಂದಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸಂತಾಪ ಸೂಚಿಸಿದ್ದಾರೆ. ಪಕ್ಷಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡು ಸದಾ ಕ್ರಿಯಾಶೀಲವಾಗಿ ಇರುತ್ತಿದ್ದರು ಎಂದು ವಿವರಿಸಿದ್ದಾರೆ.

ಆನೆ ಕಂದಕ ನಿರ್ಮಾಣಕ್ಕೆ ಹಣಕಾಸಿನ ಕೊರತೆ ಇಲ್ಲ: ಸಚಿವ ಖಂಡ್ರೆ

ವನ್ಯಜೀವಿ ದಾಳಿ ತಡೆಗೆ ಕ್ರಮ

ದುಬಾರೆ (ಕೊಡಗು): ವನ್ಯಜೀವಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದ್ದು, ಜನರ ಅಮೂಲ್ಯ ಜೀವ, ಬೆಳೆ ಹಾನಿ ತಪ್ಪಿಸಲು ಆಯ್ದ ಪ್ರದೇಶದಲ್ಲಿ, ಆಯ್ದ ವನ್ಯಜೀವಿಗಳ ಸಂತಾನ ನಿಯಂತ್ರಣದ ಸಲಹೆಗಳು ಬಂದಿದೆ. ಈ ಬಗ್ಗೆ ಸಾರ್ವಜನಿಕವಾಗಿ ತಜ್ಞರ ಮಟ್ಟದಲ್ಲಿ ಚರ್ಚೆಯಾಗುವ ಅಗತ್ಯವಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಹೇಳಿದ್ದಾರೆ.

ದುಬಾರೆಯಲ್ಲಿ ನೂತನ ತೂಗುಸೇತುವೆ ಮತ್ತು ಅಧಿಕಾರಿಗಳ ವಸತಿಗೃಹಕ್ಕೆ ಶಂಕುಸ್ಥಾಪನೆ ನೆರವೇರಿಸಿ, ನೂತನ ವಾಹನಗಳಿಗೆ ಹಸಿರು ನಿಶಾನೆ ತೋರಿ ಮಾತನಾಡಿದ ಅವರು, ಆನೆ-ಮಾನವ ಸಂಘರ್ಷ ನಿಯಂತ್ರಿಸಲು ತಜ್ಞರ ಸಮಿತಿ ರಚಿಸಲಾಗಿದ್ದು, ವರದಿಯೂ ಲಭ್ಯವಾಗಿದೆ. ಕಾಡಿನಂಚಿನ ಜನರು ಕೂಡಾ ಈ ಬಗ್ಗೆ ಸಲಹೆ ನೀಡಬೇಕು ಎಂದರು.

ರೈಲ್ವೆ ಬ್ಯಾರಿಕೇಡ್, ಆನೆ ಕಂದಕ ನಿರ್ಮಾಣಕ್ಕೆ ಹಣಕಾಸಿನ ಕೊರತೆ ಇಲ್ಲ. ಅನುದಾನದ ಕೊರತೆಯೂ ಇಲ್ಲ. ಹೆಚ್ಚಿನ ಅನುದಾನ ನೀಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದು, ಆದಷ್ಟು ಶೀಘ್ರ ಹೆಚ್ಚಿನ ಬ್ಯಾರಿಕೇಡ್ ಅಳವಡಿಸಲಾಗುವುದು ಎಂದರು.

ಪ್ರಥಮ ಆದ್ಯತೆ ನೀಡಿ: ಅರಣ್ಯವಾಸಿಗಳು ಮತ್ತು ಅರಣ್ಯದಂಚಿನ ಜನರು ದೀರ್ಘ ಕಾಲದಿಂದ ಅರಣ್ಯವನ್ನು ಸಂರಕ್ಷಿಸಿದ್ದಾರೆ. ಆದರೆ ಇಂದು ಮಾನವ-ವನ್ಯಜೀವಿ ಸಂಘರ್ಷದಿಂದ ಅಮೂಲ್ಯ ಜೀವಹಾನಿ ಆಗುತ್ತಿದ್ದು, ಅಧಿಕಾರಿ ಮತ್ತು ಸಿಬ್ಬಂದಿಗಳು ಜನರ ಜೀವ ಉಳಿಸಲು ಪ್ರಥಮ ಆದ್ಯತೆ ನೀಡಬೇಕು ಎಂದರು. ಪ್ರವಾಸಿಗರ ಅನುಕೂಲಕ್ಕಾಗಿ ಮತ್ತು ದುಬಾರೆ ಹಾಡಿಯಲ್ಲಿರುವ 150 ಮನೆಗಳ ನಿವಾಸಿಗಳಿಗೆ ತುರ್ತು ಸಂದರ್ಭದಲ್ಲಿ ನಗರಕ್ಕೆ ಬರಲು ಅನುಕೂಲವಾಗುವಂತೆ 7 ಕೋಟಿ 30 ಲಕ್ಷ ರೂ. ವೆಚ್ಚದಲ್ಲಿ ಗುಣಮಟ್ಟದ ತೂಗು ಸೇತುವೆ ನಿರ್ಮಿಸಲಾಗುತ್ತಿದೆ. ಈ ಮೂಲಕ ದೀರ್ಘ ಕಾಲದ ಬೇಡಿಕೆಯನ್ನು ಈಡೇರಿಸಲಾಗುತ್ತಿದೆ ಎಂದು ಸಚಿವರು ನುಡಿದರು.



> **ಪರಿಸರ ಸಂರಕ್ಷಣೆ ಎಲ್ಲರ ಕರ್ತವ್ಯ**
>
> ಇಂದು ನಾವು ಜಾಗತಿಕ ತಾಪಮಾನ ಏರಿಕೆ, ಹವಾಮಾನ ಬದಲಾವಣೆಯ ಪರಿಣಾಮ ಎದುರಿಸುತ್ತಿದ್ದೇವೆ. ಬೆಂಗಳೂರು ನಿವೃತ್ತರ ಸ್ವರ್ಗವಾಗಿತ್ತು. ಆದರೆ ಇಂದು ತಾಪಮಾನ ಏರಿಕೆ ಆಗುತ್ತಿದೆ. ರಾಜ್ಯದಲ್ಲಿ ಬಿಸಿಲ ಝಳ ಹೆಚ್ಚಳವಾಗುತ್ತಿದೆ. ಇದೆಲ್ಲ ಕಾಡು ನಾಶದ ಪರಿಣಾಮವಾಗಿದೆ. ಹೀಗಾಗಿ ಅರಣ್ಯ, ಪರಿಸರ ಸಂರಕ್ಷಣೆ ಎಲ್ಲರ ಕರ್ತವ್ಯವಾಗಿದೆ ಎಂದು ಸಚಿವರು ನುಡಿದರು.

ಕೊಡಗು ಜಗತ್ತಿನ ಜೀವವೈವಿಧ್ಯತೆಯ ತಾಣ ಹಾಗೂ ಹಲವು ನದಿಗಳ ಮೂಲವಾದ ಪಶ್ಚಿಮಘಟ್ಟವನ್ನು ಒಳಗೊಂಡ ಸುಂದರ ಪ್ರದೇಶ. ಇಲ್ಲಿ ನೂರಾರು ಪ್ರಭೇದದ ಸಸ್ಯಸಂಕುಲ, ಪ್ರಾಣಿ ಸಂಕುಲ, ಪಕ್ಷಿ ಸಂಕುಲ, ಕೀಟ ಸಂಕುಲವಿರುವ ಸುಂದರ ಪರಿಸರದಲ್ಲಿರುವ ಇಲ್ಲಿನ ಜನರು ನಿಜಕ್ಕೂ ಅದೃಷ್ಟವಂತರು ಎಂದು ಬಣ್ಣಿಸಿದರು.

ಇಂದಿರಾಗಾಂಧಿ ಪ್ರಧಾನ ಮಂತ್ರಿಗಳಾಗಿ ವನ್ಯಜೀವಿ ಸಂರಕ್ಷಣಾ ಕಾಯಿದೆ, ಅರಣ್ಯ ಸಂರಕ್ಷಣಾ ಕಾಯಿದೆ ಜಾರಿಗೆ ತಂದ ಪರಿಣಾಮವಾಗಿ ಕಾಡು, ವನ್ಯಜೀವಿ ಉಳಿದಿದೆ. ಪರಿಸರ ಸಮತೋಲನ ಕಾಪಾಡುವಲ್ಲಿ ವನ್ಯಜೀವಿಗಳ ಪಾತ್ರ ಮಹತ್ವದ್ದಾಗಿದ್ದು, ಕಾಡಿನಂಚಿನ ಜನರು ವನ್ಯಜೀವಿಗಳೊಂದಿಗೆ ಸಹಬಾಳ್ವೆ ನಡೆಸಬೇಕು ಎಂದು ತಿಳಿಸಿದರು.

ಅರಣ್ಯ ಇಲಾಖೆ ಆನೆಗಳ ಚಲನವಲನದ ಬಗ್ಗೆ ನಿಗಾ ಇಡಲು ಅತ್ಯಾಧುನಿಕ ತಂತ್ರಜ್ಞಾನ ಬಳಕೆ ಮಾಡಿಕೊಳ್ಳುತ್ತಿದೆ. ನವೆಂಬರ್, ಡಿಸೆಂಬರ್ ಜನವರಿಯಲ್ಲಿ ಆನೆಗಳು ಕಾಡಿನಿಂದ ಹೊರಬರುತ್ತವೆ. ಆಗ ಸಂಘರ್ಷ ಹೆಚ್ಚಾಗುತ್ತದೆ, ಕಾರಣ ಆನೆಗಳು ತೆನೆ ತಿನ್ನಲು ಬರುತ್ತವೆ. ತೋಟದ ಮಾಲಕರು, ಜಮೀನು ಮಾಲಕರು ಕೂಡಾ ಆನೆಗಳ ವಿಚಾರದಲ್ಲಿ ಸೌಹಾರ್ದತೆಯಿಂದ ನಡೆದುಕೊಳ್ಳಬೇಕು ಎಂದರು.

ದುಬಾರೆ ಆನೆ ಶಿಬಿರಕ್ಕೆ 100 ವರ್ಷಗಳ ಇತಿಹಾಸವಿದೆ. ಇಲ್ಲಿ 15 ಕುಮ್ಕಿ ಆನೆಗಳಿದ್ದು, ದಸರಾ ಮಹೋತ್ಸವದಲ್ಲಿ, ವಿವಿಧ ಕಾರ್ಯಾಚರಣೆಗಳಲ್ಲಿ ಭಾಗಿಯಾಗುತ್ತಿವೆ. ಆನೆಗಳಿಗೆ ಪೂಜ್ಯ ಸ್ಥಾನ ಇದೆ. ಹೀಗಾಗಿ ನಾವು ವನ್ಯಜೀವಿಗಳ ಸಂರಕ್ಷಣೆಗೂ ಮುಂದಾಗಬೇಕು ಎಂದರು.

ಕಾಡಿನಂಚಿನ ಜನರೊಂದಿಗೆ ಅರಣ್ಯ ಅಧಿಕಾರಿಗಳು ಮತ್ತು ಸಿಬ್ಬಂದಿ ಸೌಜನ್ಯದಿಂದ ವರ್ತಿಸಬೇಕು. ಕಾನೂನು ಪಾಲಿಸಿ, ಜನರಿಗೆ ಅರಿವು ಮೂಡಿಸಿ, ಆದರೆ ಹೆದರಿಸಬೇಡಿ ಎಂದು ಕಿವಿ ಮಾತು ಹೇಳಿದರು. ಸೆಕ್ಷನ್ 4, ಡೀಮ್ಡ್ ಅರಣ್ಯ ಮೊದಲಾದ ವಿಚಾರಗಳ ಬಗ್ಗೆ ಶಾಸಕರು ಪ್ರಸ್ತಾಪಿಸಿದ್ದು, ಈ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಹೇಳಿದ ಅವರು, ಇಂದು ಯಸಳೂರಿನಲ್ಲಿ ಅರ್ಜುನ ಆನೆಯ ಸ್ಮಾರಕ ಉದ್ಘಾಟನೆ ಮಾಡಲಿರುವುದಾಗಿ ಸಚಿವರು ತಿಳಿಸಿದರು.

ಶಾಸಕ ಡಾ. ಮಂಥರ್ ಗೌಡ ಮಾತನಾಡಿ, ಅರಣ್ಯ ಇಲಾಖೆಯಲ್ಲಿ ಸಾಕಷ್ಟು ಸುಧಾರಣೆಯನ್ನು ಈಶ್ವರ ಖಂಡ್ರೆ ತಂದಿದ್ದಾರೆ. ಕೊಡಗಿನಲ್ಲಿ ಆನೆ-ಮಾನವ ಸಂಘರ್ಷ ಹೆಚ್ಚಾಗಿದ್ದು, ತೋಟದ ಆನೆಗಳನ್ನು ಸ್ಥಳಾಂತರಿಸಲು ಕ್ರಮ ವಹಿಸಬೇಕು. ಬೆಳೆ ಹಾನಿಗೆ ಶೀಘ್ರ ಪರಿಹಾರ ನೀಡಬೇಕು ಎಂದು ಮನವಿ ಮಾಡಿದರು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯಪಡೆ ಮುಖ್ಯಸ್ಥರಾದ ಮೀನಾಕ್ಷಿ ನೇಗಿ, ಮುಖ್ಯ ವನ್ಯಜೀವಿ ಪರಿಪಾಲಕ ಕುಮಾರ್ ಪುಷ್ಕರ್, ಮನೆಹಳ್ಳಿ ಮಠದ ಶ್ರೀ ಮಹಾಂತ ಶಿವಲಿಂಗ ಸ್ವಾಮೀಜಿ, ಕಲ್ಲಹಳ್ಳಿ ಮಠದ ಶ್ರೀ ರುದ್ರಮುನಿ ಸ್ವಾಮೀಜಿ ಮತ್ತಿತರರು ಪಾಲ್ಗೊಂಡಿದ್ದರು.

ಕೇಂದ್ರ ಸಚಿವರ ಹೆಸರಿನಲ್ಲಿ ವಂಚನೆ

ಬೆಳಗಾವಿ: ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರ ನಕಲಿ ವಿಡಿಯೋ ಸೃಷ್ಟಿಸಿ ಬೆಳಗಾವಿಯ ವಂಟಮೂರಿ ಕಾಲೋನಿಯ ಪ್ರಕಾಶ ಗುಬ್ಬಿ (76) ಅವರನ್ನು ವಂಚಿಸಿರುವ ಪ್ರಕರಣ ಬೆಳಕಿಗೆ ಬಂದಿದೆ. ಕೊಲ್ಹಾಪುರ ಮೂಲದ ಆದರ್ಶ ಆನಂದ ಹಾಗೂ ಮಹಾರಾಷ್ಟ್ರದ ಬುಲ್ಡಾಣಾ ಮೂಲದ ದಾಮೋದರ ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದೆ.

ಕೈ ನಂಬಿಕೆಗೆ ಅರ್ಹವಲ್ಲ: ಅಶೋಕ

ಬೆಂಗಳೂರು: ಕಾಂಗ್ರೆಸ್ ಪಕ್ಷ ನಂಬಿಕೆಗೆ ಅರ್ಹವಲ್ಲ ಎಂಬುದು ಸ್ಪಷ್ಟವಾಗಿದೆ. ತಮಿಳುನಾಡಲ್ಲಿ ಡಿಎಂಕೆ ಜೊತೆ ಚುನಾವಣೆ ಎದುರಿಸಿದ ಕಾಂಗ್ರೆಸ್, ಈಗ ಅದೇ ಪಕ್ಷಕ್ಕೆ ಕೈ ಕೊಟ್ಟಿದೆ. ಇಂಡಿ ಒಕ್ಕೂಟದ ಮಿತ್ರಪಕ್ಷಗಳು ಈ ಬಗ್ಗೆ ಪರಾಮರ್ಶೆ ಮಾಡಬೇಕಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.



ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮಿಳುನಾಡಲ್ಲಿ ಕಾಂಗ್ರೆಸ್‌ನ ಬಣ್ಣ ಬಯಲಾಗಿದೆ. ಕಾಂಗ್ರೆಸ್‌ನ ಸ್ನೇಹ ಮಾಡಿದ ಡಿಎಂಕೆ ಪಕ್ಷದ ನಾಯಕರು ಈಗ ಸಪ್ಪೆ ಮೋರೆ ಹಾಕಿಕೊಂಡಿದ್ದಾರೆ. ಚುನಾವಣೆ ಬಳಿಕ ಒಂದಾಗಿ ಸರ್ಕಾರ ರಚಿಸಬೇಕೆಂದು ತೀರ್ಮಾನವಾಗಿತ್ತು. ಫಲಿತಾಂಶ ಬಂದ ನಂತರ ಕಾಂಗ್ರೆಸ್ ಗೆದ್ದೆತ್ತಿನ ಬಾಲ ಹಿಡಿದಿದೆ ಎಂದರು.

ಯಾವುದೇ ಸಿದ್ಧಾಂತವನ್ನು ಕಾಂಗ್ರೆಸ್ ಪಕ್ಷ ಅನುಸರಿಸುತ್ತಿಲ್ಲ. ಇವರನ್ನು ನಂಬಿದ ಡಿಎಂಕೆ ಬೆನ್ನಿಗೆ ಚೂರಿ ಹಾಕಿದ್ದು, ಕಾಂಗ್ರೆಸ್ ಕೈ ಕೊಡುವ ಪಕ್ಷ ಎಂದು ಜನರಿಗೆ ಗೊತ್ತಾಗಿದೆ. ಇಂಡಿ ಒಕ್ಕೂಟದಲ್ಲಿರುವ ಬೇರೆ ಪಕ್ಷಗಳು ಈ ಬಗ್ಗೆ ಪರಾಮರ್ಶೆ ಮಾಡಿಕೊಳ್ಳಬೇಕಿದೆ. ಕಾಂಗ್ರೆಸ್ ಹೇಗೆ ಕೈ ಕೊಡುತ್ತದೆ ಎಂದು ಗಮನಿಸಬೇಕಾಗುತ್ತದೆ. ಇಲ್ಲವಾದರೆ ಮಿತ್ರಪಕ್ಷಗಳಿಗೂ ಡಿಎಂಕೆ ಸ್ಥಿತಿಯೇ ಬರಲಿದೆ ಎಂದು ಹೇಳಿದರು.

ಮಲ್ಲಿಕಾರ್ಜುನ ಖರ್ಗೆ ಪ್ರವೇಶದ ಬಳಿಕ ಮುಖ್ಯಮಂತ್ರಿ ಕುರ್ಚಿ ಬಗ್ಗೆ ಯಾರೂ ಮಾತಾಡುತ್ತಿಲ್ಲ. ಡಿ.ಕೆ.ಶಿವಕುಮಾರ್ ಅವರ ಕನಸು ಭಗ್ನವಾಗಿದೆ ಎಂದರು.

ಜಗದೀಶ್ ಹಿರೇಮನಿ ನಿಧನ

ಬೆಂಗಳೂರು: ರಾಜ್ಯ ಬಿಜೆಪಿಯ ನಿಕಟಪೂರ್ವ ಕಾರ್ಯದರ್ಶಿಗಳಾಗಿದ್ದ ಜಗದೀಶ್ ಹಿರೇಮನಿ (52) ಅವರು ಬುಧವಾರ ಬೆಳಗ್ಗೆ 10.30ಕ್ಕೆ ಖಾಸಗಿ ಆಸ್ಪತ್ರೆಯಲ್ಲಿ ತೀವ್ರ ಹೃದಯಾಘಾತದಿಂದ ನಿಧನರಾಗಿದ್ದಾರೆ.



ಮೂಲತಃ ಬಾಗಲಕೋಟೆಯವರಾದ ಜಗದೀಶ್ ಹಿರೇಮನಿ ಅವರು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಮೂಲಕ ವಿದ್ಯಾರ್ಥಿ ದಿಸೆಯಲ್ಲಿ ಸಾರ್ವಜನಿಕ ಜೀವನ ಪ್ರವೇಶಿಸಿದರು. ಕೇಂದ್ರ ಸರ್ಕಾರದ ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. ಬಿಜೆಪಿಯ ಪ್ರಶಿಕ್ಷಣ ವಿಭಾಗದ ಸಂಚಾಲನಾ ತಂಡದಲ್ಲಿದ್ದರು.

ಹುಟ್ಟೂರಲ್ಲಿ ಇಂದು ಅಂತ್ಯಸಂಸ್ಕಾರ: ಗುರುವಾರ ಬಾಗಲಕೋಟೆಯಲ್ಲಿ ಅಂತ್ಯಸಂಸ್ಕಾರದ ವಿಧಿವಿಧಾನಗಳನ್ನು ಪೂರೈಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗಣ್ಯರಿಂದ ಅಂತಿಮ ದರ್ಶನ: ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ ಮತ್ತು ಶೋಭಾ ಕರಂದ್ಲಾಜೆ ಅಂತಿಮ ಗೌರವ ಸಲ್ಲಿಸಿದರು.

ನನ್ನ ಗೆಲುವಿಗಿಂತ ರಾಜ್ಯದ ಅಭಿವೃದ್ಧಿಗೆ ಒತ್ತು: ಕಿಮ್ಮನೆ

ಮಂಡ್ಯ: ರಾಜಕಾರಣಿಗಳು ತಮ್ಮ ಭವಿಷ್ಯಕ್ಕಿಂತ ಸಮಾಜದ ಹಾಗೂ ಜನರ ಭವಿಷ್ಯ ಮುಖ್ಯವೆಂಬುವಂತೆ ಕಾಣಬೇಕು ಅಥವಾ ನೋಡಬೇಕು. ನನ್ನ ಗೆಲುವು ಮುಖ್ಯವಾಗುವುದಿಲ್ಲ ಬದಲಿಗೆ ಕರ್ನಾಟಕದ ಅಭಿವೃದ್ಧಿಗೆ ನಿಲ್ಲುತ್ತೇನೆಂಬ ನಿಟ್ಟಿನಲ್ಲಿ ರಾಜಕಾರಣಿಗಳು ನಡೆದುಕೊಳ್ಳಬೇಕಿದೆ ಎಂದು ಮಾಜಿ ಸಚಿವ ಕಿಮ್ಮನೆ ರತ್ನಾಕರ್ ಅಭಿಪ್ರಾಯಪಟ್ಟರು. ನಗರದ ಕೆವಿಎಸ್ ಭವನದಲ್ಲಿ ಕರ್ನಾಟಕ ಸಂಘದ ವತಿಯಿಂದ ನಡೆದ ಎಸ್.ಎಂ.ಕೃಷ್ಣ ಪ್ರಶಸ್ತಿ-2026 ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು. ಸಾರ್ವಜನಿಕ ಬದುಕು ಅನುಭವಿಸಿದವರಿಗಷ್ಟೇ ಗೊತ್ತು. ಅದು ರಾಜಕಾರಣಿಗಳಿಗೆ ಹೆಚ್ಚು ಗೊತ್ತಿರುತ್ತದೆ. ಇದೆಲ್ಲವನ್ನೂ ಎಸ್.ಎಂ.ಕೃಷ್ಣ ಅವರು ಹೇಗೆ ನಿರ್ವಹಿಸಿದರು ಎಂಬ ಪ್ರಶ್ನೆ ಕಾಡುತ್ತಿದೆ. ಯುವ ಸಮೂಹವು ದೇಶದ ರಾಜಕಾರಣವನ್ನು ಹೇಗೆ, ಯಾವ ಕಡೆ ಕೊಂಡೊಯ್ಯಬೇಕೆಂದು ಆಲೋಚನೆ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಬಿಎಸ್‌ವೈರವರು ದೇವ ದುರ್ಲಭ ಕಾರ್ಯಕರ್ತ

ಬಿದರೆಪ್ರಕಾಶ್, ಸಂಪಾದಕರು, ಕಮಲ ಪಥ ಮತ್ತು ರಾಜ್ಯ ಸಂಚಾಲಕರು, ಪ್ರಕಾಶನ ಪ್ರಕೋಷ್ಠ



1997ರ ಚಿಕ್ಕನಾಯಕನಹಳ್ಳಿ ವಿಧಾನಸಭಾ ಸ್ಥಾನದ ಉಪಚುನಾವಣೆ. ಬಿಜೆಪಿಗೆ ಅಷ್ಟೇನೂ ಪೂರಕವಾದ ವಾತಾವರಣವಿಲ್ಲದಿದ್ದರೂ ಬಿಜೆಪಿಯ ಎಲ್ಲಾ ರಾಜ್ಯ ನಾಯಕರು ಚುನಾವಣೆಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದರು. ಅರವಿಂದ ಲಿಂಬಾವಳಿಯವರು ಚಿಕ್ಕನಾಯಕನಹಳ್ಳಿಯಲ್ಲಿಯೇ ಬೀಡು ಬಿಟ್ಟು ಚುನಾವಣೆಯ ಉಸ್ತುವಾರಿಯನ್ನು ವಹಿಸಿಕೊಂಡಿದ್ದರು. ಸಾಮಾನ್ಯ ಕಾರ್ಯಕರ್ತನಾಗಿದ್ದ, ಹಿಂದುಳಿದ ವರ್ಗಕ್ಕೆ ಸೇರಿದ್ದ ಶಂಕರಪ್ಪನವರನ್ನು ಪಕ್ಷದ ಅಭ್ಯರ್ಥಿಯನ್ನಾಗಿಸಲಾಗಿತ್ತು. ಬಿ.ಎಸ್‌ಯಡಿಯೂರಪ್ಪ ಹಾಗೂ ಅನಂತಕುಮಾರ್ ಪ್ರಚಾರದಲ್ಲಿ ಪೂರ್ಣಪ್ರಮಾಣದಲ್ಲಿ ತೊಡಗಿಸಿಕೊಂಡಿದ್ದರು. ಯಡಿಯೂರಪ್ಪನವರಿಗೆ ಕಾರ್ಯಕರ್ತರ ಬಗ್ಗೆ ಇದ್ದ ಕಾಳಜಿಯ ದ್ಯೋತಕ ಎನ್ನಬಹುದಾದ ಘಟನೆಯಿದು. ಬಿಎಸ್‌ವೈರವರು ಕಾರ್ಯಕರ್ತರ ನಾಯಕ ಎನ್ನುವುದಕ್ಕೆ ಇದಕ್ಕಿಂತ ಮತ್ತೊಂದು ಉದಾಹರಣೆ ಇಲ್ಲ ಎನ್ನಬಹುದು.

ಸಣ್ಣ ಸಣ್ಣ ಊರಿಗೂ ಬಂದು ಚುನಾವಣಾ ಪ್ರಚಾರದಲ್ಲಿ ಭಾಗಿಯಾಗುತ್ತಿದ್ದ ಬಿಎಸ್‌ವೈರವರು ಅಂದು ತಾಲೂಕಿನ ಕರಡಾಳು ಗ್ರಾಮದ ಸಂತೆ ಮೈದಾನದಲ್ಲಿ ಭಾಷಣ ಮಾಡಬೇಕಿತ್ತು. ಭಾಷಣ ಮಾಡಲು ತಿಪಟೂರಿನ ನಾಯಕರಾಗಿದ್ದ ನಂಜಾಮರಿಯವರ ಟಾಟಾಮೊಬೈಲ್ ವಾಹನವನ್ನು ನಿಗದಿ ಪಡಿಸಿ ಅದಕ್ಕೆ ಧ್ವನಿವರ್ಧಕ ಹಾಗೂ ಹಿಂಬದಿಯಲ್ಲಿ ಕಮಲದ ಚಿನ್ಹೆಯನ್ನು ಅಳವಡಿಸಲಾಗಿತ್ತು. ನಿಗದಿಯಾದ ಸಮಯವಾದರೂ ಆ ವಾಹನ ಸಭೆ ನಡೆಯುವ ಸ್ಥಳಕ್ಕೆ ಬರಲೇ ಇಲ್ಲ. ಮೊಬೈಲ್ ಇಲ್ಲದಿದ್ದ ಆ ಕಾಲದಲ್ಲಿ ಸ್ಥಿರ ದೂರವಾಣಿ ಮೂಲಕ ಮಾತನಾಡಿದರೆ ಆಗಲೇ ತಿಪಟೂರಿನಿಂದ ವಾಹನ ಬಿಟ್ಟಿದೆ ಎಂಬ ಸಂದೇಶ ಬರುತ್ತಿತ್ತು. ಆದರೆ ವಾಹನ ಕರಡಾಳು ಗ್ರಾಮಕ್ಕೆ ಬಂದಿರಲಿಲ್ಲ. ಸಮಯವಾಯಿತು. ಬಿಎಸ್‌ವೈರವರು ಬಂದೇ ಬಿಟ್ಟರು. ಅವರು ಅಂದಿನ ಸಭೆಯನ್ನು ಮುಗಿಸಿ ಮತ್ತೊಂದು ಕಡೆಗೆ ಪ್ರಯಾಣಿಸಬೇಕಿತ್ತು. ಬಂದವರೇ ಅಲ್ಲಿನ ಕಾರ್ಯಕರ್ತರನ್ನು ಧ್ವನಿವರ್ಧಕ ಮತ್ತು ವಾಹನದ ಬಗ್ಗೆ ಪ್ರಸ್ತಾಪಿಸಿದರು. ಯಡಿಯೂರಪ್ಪನವರ ಸಿಟ್ಟನ್ನು ಅರಿತ ಎಲ್ಲರೂ ವಾಹನ ಬಂದಿಲ್ಲವೆಂಬ ವಿಷಯವನ್ನು ಹೇಳಲು ಹಿಂಜರಿಯುತ್ತಿದ್ದರು. ಕಾರ್ಯಕರ್ತರೊಬ್ಬರು ಧೈರ್ಯ ಮಾಡಿ ಇನ್ನೂ ವಾಹನ ಬಂದಿಲ್ಲವೆಂದು ಮೆಲುದನಿಯಲ್ಲಿ ಹೇಳಿದರು. ತರಾತುರಿಯಲ್ಲಿದ್ದ ಯಡಿಯೂರಪ್ಪನವರಿಗೆ ಸಿಟ್ಟು ನೆತ್ತಿಗೇರಿತು. 'ಸರಿಯಾಗಿ ಗಮನಿಸಬೇಕಲ್ಲವೇ, ಯಾರು ಇದರ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿರುವವರು?' ಎಂಬ ಆಕ್ರೋಶ ಅವರಿಂದ ಹೊರಬಂತು. ಆದರೆ ಯಾರಿಗೂ ಹೇಳಲು ಧೈರ್ಯವಿಲ್ಲ. ಮೆಲ್ಲಗೆ ಅಲ್ಲಿದ್ದ ಕಾರ್ಯಕರ್ತನೊಬ್ಬನ ಕಡೆಗೆ ಎಲ್ಲರೂ ತಿರುಗಿದರು. ಆ ಕಾರ್ಯಕರ್ತ ಬೆವತು ಹೋದ. 'ಸರಿಯಾಗಿ ಯೋಜನೆ ಮಾಡಬೇಕಲ್ಲವೆ?' ಎಂದು ಅವನನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಜವಾಬ್ದಾರಿ ಹೊತ್ತ ಆ ಕಾರ್ಯಕರ್ತ ಯಡಿಯೂರಪ್ಪನವರ ಆಕ್ರೋಶ ಕಂಡು ಬೆವತು ಹೋದ. ಅವರಾಡಿದ ನುಡಿಗಳು ಅವನ ಕಣ್ಣನ್ನು ತೇವವಾಗಿಸಿತು. ಇಷ್ಟೆಲ್ಲಾ ಆಗುವ ವೇಳೆಗೆ ವಾಹನ ಬಂತು. ಯಡಿಯೂರಪ್ಪನವರು ಭಾಷಣ ಮಾಡಿ ನಂತರ ತೆರಳಿದರು.



ರಾತ್ರಿ ಅವಲೋಕನ ಬೈಠಕ್. ಬಿಎಸ್‌ವೈರವರೂ ಉಪಸ್ಥಿತರಿದ್ದರು. ಬೆಳಿಗ್ಗೆ ಯಡಿಯೂರಪ್ಪನವರ ಕಾರ್ಯಕ್ರಮಕ್ಕೆ ಧ್ವನಿವರ್ಧಕದ ವಾಹನ ತಡವಾದ ಕಾರಣ ಪ್ರಸ್ತಾಪವಾಯಿತು. ಮಾರ್ಗ ಮಧ್ಯದಲ್ಲಿ ಆ ವಾಹನದ ಮುಂದಿನ ಚಕ್ರ ಪಂಚರ್ ಆಗಿ ಅದನ್ನು ಬದಲಾಯಿಸಿಕೊಂಡು ಬರಬೇಕಾಗಿದ್ದರಿಂದ ಆ ವಾಹನ ತಡವಾಯಿತು ಎಂಬ ವಿಷಯ ಯಡಿಯೂರಪ್ಪನವರಿಗೆ ಗೊತ್ತಾಯಿತು. ಬೆಳಿಗ್ಗೆ ಅವರಿಂದ ಬೈಯಿಸಿಕೊಂಡ ಕಾರ್ಯಕರ್ತನೂ ಅಲ್ಲಿಯೇ ಇದ್ದ. ಆದರೆ ಬೆಳಿಗ್ಗೆ ಯಡಿಯೂರಪ್ಪನವರ ಸಿಟ್ಟನ್ನು ನೋಡಿದ್ದ ಅವನಿಗೆ ಅವರೆದುರು ಬರಲು ಅಳುಕು ಕಾಡುತ್ತಿತ್ತು. ಬೈಠಕ್ ಮುಗಿಯಿತು. ಯಡಿಯೂರಪ್ಪನವರು ತಮ್ಮ ಮುಂದೆ ಕಾಣಿಸಿಕೊಳ್ಳಲು ಹಿಂದೇಟು ಹಾಕುತ್ತಿದ್ದ ಆ ಕಾರ್ಯಕರ್ತನನ್ನು ಗಮನಿಸಿದರು. ಅವನ ಬಳಿಗೇ ಬಂದರು. ಕಾರ್ಯಕರ್ತನ ಹೆಗಲ ಮೇಲೆ ಕೈಹಾಕಿದರು. ಬೆಳಿಗ್ಗೆ ನಡೆದ ಘಟನೆಯ ಬಗ್ಗೆ ನಿನ್ನದೇನೂ ತಪ್ಪಿಲ್ಲ, ಬೇಜಾರು ಮಾಡಿಕೊಳ್ಳಬೇಡ ಎಂದರು. ಮತ್ತೆರಡು ಸಾಂತ್ವನದ ಮಾತುಗಳು ಅವರ ಬಾಯಿಯಿಂದ ಬಂತು. ಕಾರ್ಯಕರ್ತರ ಬಗ್ಗೆ ಯಡಿಯೂರಪ್ಪನವರ ಬಗ್ಗೆ ಇದ್ದ ಕಳಕಳಿಗೆ ಇದಕ್ಕಿಂತ ಮತ್ತೊಂದು ಉದಾಹರಣೆ ಬೇಕಿಲ್ಲ ಎನಿಸುತ್ತದೆ. ಅಷ್ಟೊಂದು ದೊಡ್ಡ ನಾಯಕರು ನಡೆದ ಸಣ್ಣ ಘಟನೆಯನ್ನೂ ಮತ್ತು ಆ ಕಾರ್ಯಕರ್ತನನ್ನೂ ನೆನಪಿನಲ್ಲಿಟ್ಟುಕೊಂಡು ರಾತ್ರಿ ಕಾರ್ಯಕರ್ತನಿಗೆ ಸಾಂತ್ವನ ಹೇಳಬೇಕಿರಲಿಲ್ಲ. ಆದರೆ ಯಡಿಯೂರಪ್ಪನವರು ಕಾರ್ಯಕರ್ತರ ನಾಯಕ. ಅದಕ್ಕಾಗಿಯೇ ಬೆಳಿಗ್ಗೆ ಅವನದಲ್ಲದ ಕಾರಣಕ್ಕೆ ಬೈಸಿಕೊಂಡ ಕಾರ್ಯಕರ್ತನ ಬಗ್ಗೆ ಕಾಳಜಿಯಿತ್ತು. ಇದೇ ಅವರ ದೊಡ್ಡಗುಣ. ನೋವನ್ನು ಅನುಭವಿಸಿದ, ನಂತರ ಯಡಿಯೂರಪ್ಪನವರ ಸಾಂತ್ವನದಿಂದ ಸಂತುಷ್ಟಗೊಂಡ ತಿಪಟೂರು ತಾಲೂಕು ಬಿಳಿಗೆರೆ ಗ್ರಾಮದ ಕಾರ್ಯಕರ್ತ ಪ್ರತಾಪ್ ಸಿಂಗ್ ಈ ಘಟನೆಯನ್ನು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಬಿಜೆಪಿಯಲ್ಲಿ ಕಾರ್ಯಕರ್ತ ಎಂಬ ಪದಕ್ಕೆ ಅರ್ಥ, ಮಹತ್ವ ತಂದು ಕೊಟ್ಟ ಅನೇಕರಿದ್ದಾರೆ. ಆದರೆ ಕಾರ್ಯಕರ್ತನಿಗೆ ದೇವದುರ್ಲಭ ಎಂದು ಗುಣವಾಚನವನ್ನಿಟ್ಟವರು ಯಡಿಯೂರಪ್ಪನವರೇ. ಅವರು ಮಾಡಿದ ಯಾವುದೇ ಸಾರ್ವಜನಿಕ ಭಾಷಣಗಳಲ್ಲಿ ಈ ಗುಣವಾಚಕದಿಂದ ಕಾರ್ಯಕರ್ತನನ್ನು ಸಂಭೋಧಿಸದೆ ಇರುತ್ತಿರಲಿಲ್ಲ. ಕಾರ್ಯಕರ್ತರೆಲ್ಲರೂ ಯಡಿಯೂರಪ್ಪನವರನ್ನು ದೇವದುರ್ಲಭ ನಾಯಕನೆಂದರೆ, ಸ್ವತಃ ಯಡಿಯೂರಪ್ಪನವರು ಬಿಜೆಪಿ ಕಾರ್ಯಕರ್ತರನ್ನೇ ದೇವದುರ್ಲಭ ಕಾರ್ಯಕರ್ತರು ಎನ್ನುತ್ತಿದ್ದರು.

> **ವರ್ಷ ಪೂರ್ತಿ ಕಾರ್ಯಕರ್ತರ ಜೊತೆ**
>
> ಒಬ್ಬ ಸಾಮಾನ್ಯ ಕಾರ್ಯಕರ್ತ ರಾತ್ರಿ ಊರು ಸುತ್ತಿ, ಪೋಸ್ಟರ್ ಹಚ್ಚಿ, ಮೀಟಿಂಗ್ ಜೋಡಿಸಿ ಆಯಾಸಗೊಂಡಾಗ – ಅವನ ಮನೆಯ ಸ್ಥಿತಿ ಏನಿರಬಹುದು ಎಂದು ಯಡಿಯೂರಪ್ಪ ಯೋಚಿಸುತ್ತಿದ್ದರು. ಅದಕ್ಕೇ ಅವರು ಚುನಾವಣಾ ಕಾಲದಲ್ಲಿ ಮಾತ್ರವಲ್ಲ, ವರ್ಷ ಪೂರ್ತಿ ಕಾರ್ಯಕರ್ತರ ಜೊತೆ ಇರುತ್ತಿದ್ದರು. ಕಾರ್ಯಕರ್ತರ ಸಮಸ್ಯೆಗಳನ್ನು ಕೇಳಿ ತಮ್ಮ ಸಹಾಯಕರಿಗೆ ನೋಟ್ ಮಾಡಿಸಿ ಮರೆತುಬಿಡುವ ನಾಯಕರುಗಳ ಮಧ್ಯೆ, ಅವನ ಸಮಸ್ಯೆಗಳಿಗೆ ಸ್ಪಂದಿಸಿ ಮಾಡಬೇಕಾದ ಸಹಾಯವನ್ನು ತಕ್ಷಣ ಮಾಡಿಸುತ್ತಿದ್ದರು. ಬಿಜೆಪಿಯ ಬಹುತೇಕ ಕಾರ್ಯಕರ್ತರಿಗೆ ಬಿಎಸ್‌ವೈರವರಿಂದ ತಮ್ಮ ಮನೆಯ ಶುಭದಲ್ಲಿ ಶುಭಾಶಯ, ಸಂಕಷ್ಟದಲ್ಲಿ ಸಾಂತ್ವನ ಯಾವಾಗಲೂ ಇರುತ್ತಿತ್ತು. ಕಾರ್ಯಕರ್ತ ಬೆಳೆದರೆ ಪಕ್ಷ ಬೆಳೆಯುತ್ತದೆ. ಪಕ್ಷ ಬೆಳೆದರೆ ನಾವು ಬೆಳೆಯುತ್ತೇವೆ. ಅದಕ್ಕಾಗಿ ನನ್ನ ಕಾರ್ಯಕರ್ತ ಯಾವತ್ತೂ ನನಗೆ ಮೊದಲು. ಇದು ಅವರು ಸಂಘಟನೆಯ ವೈಚಾರಿಕ ಸಿದ್ಧಾಂತದೊಂದಿಗೆ ಅಳವಡಿಸಿಕೊಂಡಿದ್ದ ಮತ್ತೊಂದು ಸಿದ್ಧಾಂತ.

ರಾಜಕೀಯದ ಮೆಟ್ಟಿಲು ಏರುವುದು ಅನೇಕರಿಗೆ ಸಾಧ್ಯ. ಆದರೆ ಆ ಮೆಟ್ಟಿಲ ಕೆಳಗೆ ನಿಂತಿರುವ ಅಸಂಖ್ಯಾತ ಕಾರ್ಯಕರ್ತರ ಬೆವರನ್ನು, ನೋವನ್ನು, ತ್ಯಾಗವನ್ನು ಅರ್ಥ ಮಾಡಿಕೊಳ್ಳುವ ನಾಯಕರು ಬೆರಳೆಣಿಕೆಯಷ್ಟು ಮಂದಿ ಮಾತ್ರ. ಬಿ.ಎಸ್. ಯಡಿಯೂರಪ್ಪನವರು ಅಂಥ ಅಪರೂಪದ ನಾಯಕ. ಅವರಿಗೆ ಕಾರ್ಯಕರ್ತರು ಕೇವಲ ಮತ ಕ್ರೋಢೀಕರಿಸುವ ಸಾಧನಗಳು ಮಾತ್ರವಲ್ಲ, ಕಾರ್ಯಕತರು ಅವರ ಕುಟುಂಬ, ಅವರ ಶಕ್ತಿ, ಅವರ ಸ್ಫೂರ್ತಿ. ಇದು ಅವರ ರಾಜಕೀಯ ಜೀವನದಲ್ಲಿ ಅಳವಡಿಸಿಕೊಂಡ ಕಾರ್ಯಪದ್ಧತಿ. ಏಕೆಂದರೆ ಯಡಿಯೂಖುಪ್ಪನವರು ಕಾರ್ಯಕರ್ತರಾಗಿ ನಾಯಕರಾದವರೇ. ಅವರ ರಾಜಕೀಯ ಜೀವನ ಆರಂಭಗೊಂಡಿದ್ದು ಸಭೆ-ಸಮಾರಂಭಗಳಲ್ಲಿ ಭಾಷಣ ಮಾಡುವ ಮೂಲಕ ಅಲ್ಲ, ಬದಲಾಗಿ ಬೀದಿ ಬೀದಿ ತಿರುಗಿ ಕಾರ್ಯಕರ್ತರೊಂದಿಗೆ ಕಷ್ಟ-ಸುಖ ಹಂಚಿಕೊಳ್ಳುವ ಮೂಲಕ. ಅವರು ಸ್ವತಃ ತಳಮಟ್ಟದಿಂದ ಬಂದ ಕಾರಣ, ಆ ಮಟ್ಟದ ಕಾರ್ಯಕರ್ತರ ಸಂಕಟ ಅವರಿಗೆ ಚೆನ್ನಾಗಿ ಅರ್ಥವಾಗುತ್ತಿತ್ತು.

ಯಡಿಯೂರಪ್ಪನವರ ಅದ್ಭುತ ಗುಣ ಎಂದರೆ ಅವರ ಸ್ಮರಣಶಕ್ತಿ. ಒಮ್ಮೆ ಭೇಟಿಯಾದ ಕಾರ್ಯಕರ್ತನ ಹೆಸರು, ಅವನ ಊರು, ಅವನ ಕುಟುಂಬದ ವಿಷಯ – ಇವೆಲ್ಲ ಅವರ ಮನಸ್ಸಿನ ಮೂಲೆಯಲ್ಲಿ ಭದ್ರವಾಗಿ ಕುಳಿತಿರುತ್ತಿದ್ದವು. ವರ್ಷಗಳ ನಂತರ ಭೇಟಿಯಾದಾಗಲೂ ಅವರ ಹೆಸರು ಹೇಳಿ ಮಾತನಾಡಿಸುತ್ತಿದ್ದರು. ಈ ಒಂದು ಗುಣ ಕಾರ್ಯಕರ್ತರ ಹೃದಯದಲ್ಲಿ ಅಪಾರ ವಿಶ್ವಾಸ ಬಿತ್ತುತ್ತಿತ್ತು. 'ನಾಯಕ ನಮ್ಮನ್ನು ಮರೆತಿಲ್ಲ' ಎಂಬ ಭಾವನೆ ಒಬ್ಬ ಕಾರ್ಯಕರ್ತನಿಗೆ ಎಷ್ಟು ಶಕ್ತಿ ಕೊಡುತ್ತದೆ ಎಂಬುದನ್ನು ಯಡಿಯೂರಪ್ಪ ಅರ್ಥ ಮಾಡಿಕೊಂಡಿದ್ದರು. ಅದಕ್ಕಾಗಿ ಅವರು ಉದ್ದೇಶಪೂರ್ವಕವಾಗಿಯೇ ಈ ವೈಯಕ್ತಿಕ ಸಂಪರ್ಕ ಕಾಪಾಡಿಕೊಳ್ಳುತ್ತಿದ್ದರು.

ಯಡಿಯೂರಪ್ಪ ಕಾರ್ಯಕರ್ತರ ಬೆಳವಣಿಗೆಗೆ ಕೊಟ್ಟ ಮಹತ್ವ ಅಪ್ರತಿಮ. ಅವರು ನಂಬಿದ್ದು – ಒಬ್ಬ ಸಮರ್ಥ ಕಾರ್ಯಕರ್ತ ಇಂದಿನ ಕಾರ್ಯದರ್ಶಿಯಾದರೆ, ನಾಳೆ ಅವನು ಮಂಡಲ ಅಧ್ಯಕ್ಷ, ನಂತರ ಜಿಲ್ಲಾ ಪದಾಧಿಕಾರಿ, ಒಂದಿನ ಶಾಸಕ ಕೂಡ ಆಗಬಲ್ಲ ಎಂದು. ಯುವ ಕಾರ್ಯಕರ್ತರನ್ನು ಗುರುತಿಸಿ, ಅವರಿಗೆ ಜವಾಬ್ದಾರಿ ನೀಡಿ, ವೇದಿಕೆ ಕೊಡುತ್ತಿದ್ದರು. ಸಭೆಗಳಲ್ಲಿ ಹಿರಿಯ ನಾಯಕರ ಜೊತೆ ಕೂರಿಸಿ ಅನುಭವ ಕೊಡಿಸುತ್ತಿದ್ದರು. 'ನೀನು ಮಾಡಬಲ್ಲೆ' ಎಂದು ಧೈರ್ಯ ಹೇಳುತ್ತಿದ್ದರು. ಈ ಪ್ರೋತ್ಸಾಹ ಅನೇಕ ಕಾರ್ಯಕರ್ತರನ್ನು ದೊಡ್ಡ ನಾಯಕರನ್ನಾಗಿ ರೂಪಿಸಿತು.

ಯಡಿಯೂರಪ್ಪ ತಮ್ಮ ರಾಜಕೀಯ ಜೀವನದಲ್ಲಿ ಅನೇಕ ಬಾರಿ ಕಷ್ಟದ ಸಮಯ ಎದುರಿಸಿದ್ದಾರೆ – ಚುನಾವಣೆ ಸೋಲು, ಪಕ್ಷದ ಒಳ ಜಗಳ, ಸರ್ಕಾರ ಉರುಳಿಸುವ ಪ್ರಯತ್ನ, ನ್ಯಾಯಾಲಯದ ಮೆಟ್ಟಿಲೇರಬೇಕಾದ ಪ್ರಸಂಗ. ಇಂಥ ಕ್ಷಣಗಳಲ್ಲಿ ಕಾರ್ಯಕರ್ತರು ಮಾತ್ರ ಅವರ ಜೊತೆ ದೃಢವಾಗಿ ನಿಂತರು. ಅದೇ ರೀತಿ ಯಡಿಯೂರಪ್ಪ ಕೂಡ ಕಾರ್ಯಕರ್ತರ ಕಷ್ಟ ಕಾಲದಲ್ಲಿ ಕೈ ಬಿಡಲಿಲ್ಲ. ಇದು ಒಂದು ಭಾವನಾತ್ಮಕ ಬಂಧವನ್ನು ನಿರ್ಮಿಸಿತು – ಇದು ಕೇವಲ ರಾಜಕೀಯ ಸಂಬಂಧ ಮಾತ್ರವಲ್ಲ, ಮಾನವೀಯ ಸಂಬಂಧ.

ಯಡಿಯೂರಪ್ಪನವರು ಸ್ವತಃ ಭಾವುಕ ಮನಸ್ಸಿನ ವ್ಯಕ್ತಿ. ಅವರ ಭಾಷಣದಲ್ಲಿ ಅದು ವ್ಯಕ್ತವಾಗುತ್ತಿತ್ತು. ಈ ಭಾವನಾತ್ಮಕ ಸಂಪರ್ಕ ಕಾರ್ಯಕರ್ತರ ಮನಸ್ಸಿನಲ್ಲಿ ಶಾಶ್ವತ ನಿಷ್ಠೆ ಬಿತ್ತಿತು. ರಾಜಕಾರಣದಲ್ಲಿ ಭಾವನೆಗಳೆಂದೂ ದೌರ್ಬಲ್ಯವಲ್ಲ ಎಂದು ಭಾವಿಸಿ ಅದನ್ನು ಶಕ್ತಿಯಾಗಿಸಿಕೊಂಡವರು ಯಡಿಯೂರಪ್ಪನವರು. ನಾಯಕ ಕಾರ್ಯಕರ್ತನಿಗಾಗಿ ಮಿಡಿದಾಗ ಕಾರ್ಯಕರ್ತ ಜೀವ ಕೊಡಲು ಸಿದ್ಧನಾಗುತ್ತಾನೆ. ಇದು ಯಡಿಯೂರಪ್ಪನವರ ರಾಜಕೀಯ ಜೀವನದಲ್ಲಿ ಜೊತೆಯಾಗಿಸಿಕೊಂಡ ಸತ್ಯದ ಸಂಗತಿ. ಅವರ ಮತ್ತು ಕಾರ್ಯಕರ್ತರ ನಂಟು ಕೇವಲ ರಾಜಕೀಯ ಸಂಬಂಧ ಅಲ್ಲ – ಅದೊಂದು ಭಾವನಾತ್ಮಕ ಕುಟುಂಬ ಸಂಬಂಧ. ಒಂದು ಕಡೆ ನಾಯಕ ತನ್ನ ಕಾರ್ಯಕರ್ತನನ್ನು ಮಗನಂತೆ ನೋಡಿಕೊಂಡರೆ, ಇನ್ನೊಂದು ಕಡೆ ಕಾರ್ಯಕರ್ತ ನಾಯಕನನ್ನು ತಂದೆಯಂತೆ ಗೌರವಿಸಿದ ರಾಜಕಾರಣದ ಅಪರೂಪದ ಮಾದರಿ. ಇದು ಪ್ರತಿಯೊಬ್ಬ ರಾಜಕೀಯ ನಾಯಕನಿಗೂ ಅನುಕರಣೀಯ.



ಸಂಪಾದಕೀಯ

ಪಥದರ್ಶಿ ಕಾರ್ಯಾಚರಣೆ

ಕೆಲವು ಸೈನಿಕ ಕಾರ್ಯಾಚರಣೆಗಳು ಭಾರತದ ಇತಿಹಾಸದಲ್ಲಿ ಅಚ್ಚಳಿಯದ ನೆನಪಾಗಿ ಉಳಿದಿದೆ. ದೇಶದ ಗತಿಯನ್ನೆ ಬದಲಿಸಿದ್ದಿವೆ. ಭವಿಷ್ಯದ ಕಾರ್ಯಾಚರಣೆಗಳಿಗೆ ಮಾದರಿಯಾಗಿ ನಿಂತಿದೆ. 'ಆಪರೇಷನ್ ಸಿಂದೂರ್' ಕೂಡಾ ನಿಶ್ಚಿತವಾಗಿ ಅದರಲ್ಲೊಂದು. ಒಂದು ವರ್ಷದ ಹಿಂದೆ ಇದೇ ದಿನ ಆರಂಭಿಸಿದ ಆಪರೇಷನ್ ಸಿಂದೂರ್ ಕಾರ್ಯಾಚರಣೆಯು ನೆರೆಯ ಪಾಕಿಸ್ತಾನಕ್ಕೆ ಮತ್ತು ಪಾಕ್ ಪ್ರೇರಿತ ಭಯೋತ್ಪಾದಕರಿಗೆ ಎಂದೂ ಮರೆಯಲಾರದ ಪಾಠವೊಂದನ್ನು



ಕಲಿಸಿದ್ದಷ್ಟೇ ಅಲ್ಲದೆ, ಜಗತ್ತಿಗೂ ಭಾರತದ ಸೈನಿಕ ಶಕ್ತಿ ಸಾಮರ್ಥ್ಯದ ಅರಿವು ಮಾಡಿಕೊಟ್ಟಿತು. ಭಾರತದ ವಿದೇಶಾಂಗ ನೀತಿಯಲ್ಲಿ ಹಾಗೂ ಭಯೋತ್ಪಾದನಾ ವಿರೋಧಿ ನೀತಿಯಲ್ಲಿ ಕೂಡಾ ಮಹತ್ತರ ಬದಲಾವಣೆಯನ್ನು ಸಂಕೇತಿಸಿತು. ಪಾಕಿಸ್ತಾನ 'ಪರಮಾಣು ಬ್ಲ್ಯಾಕ್ ಮೇಲ್'ನ್ನು ತಾನು ಲೆಕ್ಕಿಸುವುದೇ ಇಲ್ಲವೆಂಬ ಸ್ಪಷ್ಟ ಸಂದೇಶ ಸಾರಿತು. ದೇಶದ ಹಿತಾಸಕ್ತಿಯ ವಿಷಯ ಬಂದಾಗ ಯಾವುದೇ ಜಾಗತಿಕ ಒತ್ತಡಕ್ಕೂ ಮಣಿಯುವುದಿಲ್ಲವೆಂಬ ಗಟ್ಟಿ ನಿಲುವನ್ನು ಪ್ರದರ್ಶಿಸಿತು.

ಪಹಲ್ಗಾಂನಲ್ಲಿ ಪಾಕಿಸ್ತಾನಿ ಪ್ರೇರಿತ ಭಯೋತ್ಪಾದಕರು 26 ಮಂದಿ ಅಮಾಯಕ ಪ್ರವಾಸಿಗರನ್ನು ಕ್ರೂರವಾಗಿ ಹತ್ಯೆಗೈದಾಗ ಭಾರತದ ತಾಳ್ಮೆಯ ಕಟ್ಟೆಯೊಡೆದುದು ಸಹಜವೇ ಆಗಿತ್ತು. ಹಾಗಾಗಿ ಭಾರತದ ಪ್ರತಿಕ್ರಿಯೆ ಕೂಡಾ ಅಷ್ಟೇ ಕಠೋರವಾಗಿತ್ತು. 2025ರ ಮೇ 7ರಂದು ಪಾಕಿಸ್ತಾನದ 9 ಭಯೋತ್ಪಾದಕರ ನೆಲೆಗಳ ಮೇಲೆ ಕ್ಷಿಪಣಿ ದಾಳಿ ಮತ್ತು ಡ್ರೋನ್ ದಾಳಿ ನಡೆಸಲಾಯಿತು. ಅದುವರೆಗೆ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಮಾತ್ರ ಸರ್ಜಿಕಲ್ ದಾಳಿ ನಡೆಸಿದ್ದ ಭಾರತ ಈ ಬಾರಿ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯಕ್ಕೂ ನುಗ್ಗಿ ದಾಳಿ ನಡೆಸಿತು. ಆರಂಭದಲ್ಲಿ ಪಾಕಿಸ್ತಾನದ ಮಿಲಿಟರಿ ಗುರಿಗಳ ಮೇಲೆ ದಾಳಿ ನಡೆಸಲಿಲ್ಲವಾದರೂ, ಪಾಕಿಸ್ತಾನವು ಭಾರತದ ನಾಗರಿಕ ಪ್ರದೇಶಗಳ ಮೇಲೆ ದಾಳಿ ನಡೆಸಲಾರಂಭಿಸಿದ ಬಳಿಕ ಭಾರತವು ಪಾಕಿಸ್ತಾನದ ಮಿಲಿಟರಿ ಕೇಂದ್ರಗಳ ಮೇಲೂ ದಾಳಿ ನಡೆಸಿತು. ಪಾಕಿಸ್ತಾನದ ಪರಮಾಣು ಕಾರ್ಯಕ್ರಮದ ಕೇಂದ್ರವಾದ ನೂರ್ ಖಾನ್ ನೆಲೆಯ ಮೇಲೂ ಕ್ಷಿಪಣಿ ದಾಳಿ ನಡೆಸಲಾಯಿತು. ಭಾರತದ 88 ಗಂಟೆಗಳ ಕಾರ್ಯಾಚರಣೆ ಅದೆಷ್ಟು ಆಕ್ರಮಣಕಾರಿಯಾಗಿತ್ತೆಂದರೆ ಪಾಕಿಸ್ತಾನವು ಮೊಣಕಾಲೂರಿ ಸಮರ ನಿಲ್ಲಿಸಲು ಕೋರಿಕೊಂಡಿತು. ಕದನವಿರಾಮ ಘೋಷಿಸುವಂತೆ ಮಾಡಲು ಅಮೆರಿಕ ಮೊದಲಾದ ರಾಷ್ಟ್ರಗಳ ಕೈಕಾಲು ಹಿಡಿಯಿತು.

ಭಾರತವು ಪಾಕಿಸ್ತಾನದ ಶಕ್ತಿ ಉಡುಗಿಸಿದ ಬಳಿಕ ಸಮರ ವಿರಾಮ ಘೋಷಿಸಿದ್ದು, ಆ ಕಾಲದಲ್ಲಿ ಕೆಲವೆಡೆ ಟೀಕೆಗೆ ಗುರಿಯಾಯಿತಾದರೂ ಅದು ಪ್ರಬುದ್ಧ ನಿಲುವಾಗಿತ್ತು ಎನ್ನುವುದು ಈಗ ಸ್ಪಷ್ಟವಾಗುತ್ತಿದೆ. ರಷ್ಯಾ, ಉಕ್ರೇನ್, ಇರಾನ್, ಅಮೆರಿಕಗಳು ತಾವು ಆರಂಭಿಸಿದ ಯುದ್ಧವನ್ನು ನಿಲ್ಲಿಸಲು ಹೆಣಗುತ್ತಿರುವಾಗ ಭಾರತವು ತನ್ನ 'ನಿಶ್ಚಿತ ಗುರಿ' ಸಾಧಿಸಿದೊಡನೆ ಸಮರ ನಿಲ್ಲಿಸಿ ವಿವೇಕ ಪ್ರದರ್ಶಿಸಿತು. ಒಟ್ಟಿನಲ್ಲಿ 'ಆಪರೇಷನ್ ಸಿಂದೂರ್' ಭಾರತದ ಕ್ಷಿಪ್ರ ಮತ್ತು ನಿರ್ಣಾಯಕ ಮಿಲಿಟರಿ ಕಾರ್ಯಾಚರಣೆಗೆ ಸಂಕೇತವಾಗಿದೆ.

ಸೋತ ಮೇಲಿನ ಮಾತುಗಳೇ ಸೋಲಿಗೆ ಕಾರಣವಲ್ಲವೇ?

ಗುರುತರ
• ಸೋಮಶೇಖರ ಸಿ.ಜಿ.
sompreethi@gmail.com



ಬಹಳಷ್ಟು ಬಾರಿ ಕೆಲಸವಿಲ್ಲದ ವೇಳೆಯಲ್ಲಿ ಕುಳಿತು ಕೆಲವೊಂದು ಹಗಲುಗನಸು ಕಾಣುತ್ತಿರುತ್ತೇವೆ. ಎಂಥಾ ವಿಚಿತ್ರ ಕನಸುಗಳು ಎಂದರೆ, ರಾತ್ರಿ ಕಳೆದು ಬೆಳಗಾಗುವಷ್ಟರಲ್ಲಿ ಕೋಟಿ ಕೋಟಿ ಗಳಿಸಿದ್ದು, ದೇಶದ ಪ್ರಧಾನಮಂತ್ರಿಯೇ ಆಗಿದ್ದು, ಯಾರೋ ಒಬ್ಬರು ಬಂದು ಈ ಎಲ್ಲವನ್ನು ಮಾಡಿಸಿದ್ದು... ಹೀಗೆ ಕನಸುಗಳ ಪಟ್ಟಿ ಬೆಳೆಯುತ್ತಾ ಹೋಗುತ್ತಿರುತ್ತದೆ. ಆದರೆ, ಪ್ರಧಾನಿಯಾಗದಿದ್ದರೂ, ಹಣ ದುಡಿಯಲು ಅವಕಾಶಗಳಿವೆ. ದಾರಿ ಹುಡುಕಿಕೊಂಡು ಹೋಗಿ, ಉದ್ಯಮವೋ, ಸ್ಟಾರ್ಟ್‌ಅಪ್ ರೀತಿಯ ಯಾವುದಾದರೂ ವ್ಯಾಪಾರ ನಡೆಸಿದರೆ, ನಾಳೆ ಬೆಳಗ್ಗೆಯೇ ಆಗದಿದ್ದರೂ ಒಂದಷ್ಟು ವರ್ಷಗಳಲ್ಲಾದರೂ ಸಿರಿವಂತರಾಗಬಹುದು, ಕೋಟಿ ಕೋಟಿ ಗಳಿಸಬಹುದು. ಆದರೆ, ಇದಕ್ಕೆ ಶ್ರಮವನ್ನೇ ಹಾಕದೇ, ದಿನವಿಡೀ ಯಾರೋ ಬರ್ತಾರೆ, ಅವರು ಕೋಟಿ ಕೊಡ್ತಾರೆ ಅಂತ ಕುಳಿತುಕೊಂಡರೆ, ಏನೂ ಆಗದು. ಕೋಟಿ ಸಿಗದೇ ಇದ್ದಾಗ ಮಾತ್ರ, ಜಗತ್ತಿನ ಎಲ್ಲರಿಗೂ ಬೈದುಕೊಂಡು, ನನಗೇಕೆ ಕೋಟಿ ಕೋಟಿ ಸಿಗಲಿಲ್ಲ, ಇಲ್ಲಿ ಯಾರೋ ಮೋಸ ಮಾಡ್ತಿದ್ದಾರೆ ಅಂದುಕೊಂಡ್ರೆ ಅಷ್ಟೇ.

ಈಗಲೂ ನೋಡಿ, ಪಂಚ ರಾಜ್ಯ ಚುನಾವಣಾ ಫಲಿತಾಂಶ ಹೊರಬಿದ್ದು, ಎರಡು ದಿನಗಳಾಗಿದ್ದರೂ, ಕೆಲವರು ತಾವು ಸೋತದ್ದು ಏಕೆ ಎಂಬ ಆತ್ಮಾವಲೋಕನ ಮಾಡದೇ, ಬೇರೊಬ್ಬರ ಮೇಲೆ ಸೋಲಿನ ಹೊಣೆ ಹೊರಿಸಿಕೊಂಡು ಕುಳಿತಿದ್ದಾರೆ. ಚುನಾವಣೆಗಳಿಗಾಗಿ ಹಗಲು ರಾತ್ರಿ ಪರಿಶ್ರಮ ಹಾಕಿರುವಂಥವರಿಗೆ ಕಳ್ಳತನದ ಪಟ್ಟ ಹೊರಿಸುವುದು ಅಲ್ಲದೇ, ಈ ಚುನಾವಣೆಗಳನ್ನು ಗೆಲ್ಲಲು ತಾವೇನು ಮಾಡಿದ್ದೇವೆ ಎಂಬುದನ್ನೇ ಮರೆಯುತ್ತಾರೆ. ಇದೊಂದು ರೀತಿಯಲ್ಲಿ ಸಂವಿಧಾನ ರಕ್ಷಣೆ ಮಾಡುತ್ತೇವೆ ಎಂಬವರ ವಿರೋಧಾಭಾಸ ನಡೆಗಳಲ್ಲವೇ? ಈಗ ಫಲಿತಾಂಶ ಮತ್ತದರ ಸುತ್ತಲಿನ ಬೆಳವಣಿಗೆಗಳಿಗೆ ಬರೋಣ, ಪಂಚರಾಜ್ಯಗಳ ಚುನಾವಣಾ ಫಲಿತಾಂಶಗಳು ಕೇವಲ ಐದು ರಾಜ್ಯಗಳ ರಾಜಕೀಯ ಬದಲಾವಣೆಗಳಲ್ಲ, ಅವು ವಿಪಕ್ಷಗಳ ರಾಜಕೀಯ ಸಂಸ್ಕೃತಿಯನ್ನೂ ಬೆತ್ತಲಾಗಿಸಿವೆ. ಈ ತೀರ್ಪುಗಳಲ್ಲಿ ಒಂದೇ ಸಾಮಾನ್ಯ ಸಂದೇಶ ಇದೆ. ಮತದಾರರು ಯಾರಿಗೂ ಶಾಶ್ವತ ಹಕ್ಕುಪತ್ರ ಕೊಡುವುದಿಲ್ಲ. ಆಡಳಿತ ಸರಿಯಾಗಿಲ್ಲವೇ, ಪಕ್ಷ ಜನರಿಂದ ದೂರವಾಗಿದ್ದೇವೆಯೇ, ನಾಯಕತ್ವ ವಿಶ್ವಾಸ ಕಳೆದುಕೊಂಡಿದೆಯೇ? ಈ ಎಲ್ಲವನ್ನೂ ಮತದಾರರು ಮೌನವಾಗಿ ಗಮನಿಸುತ್ತಾರೆ ಮತ್ತು ಮತಗಟ್ಟೆಯಲ್ಲಿ ಉತ್ತರ ಕೊಡುತ್ತಾರೆ. ಆದರೆ ಸೋತವರು ಆ ಉತ್ತರವನ್ನು ಓದಲು ಸಿದ್ಧರಿಲ್ಲದಾಗ, ಪ್ರಜಾಪ್ರಭುತ್ವದ ನಿಜವಾದ ಸಂಕಟ ಆರಂಭವಾಗುತ್ತದೆ.

ವಿಪಕ್ಷಗಳ ಈ ಬಾರಿಯ ಪ್ರತಿಕ್ರಿಯೆ ರಾಜಕೀಯ ಸೋಲಿಗಿಂತಲೂ ಗಂಭೀರವಾದ ನೈತಿಕ ಸೋಲನ್ನು ತೋರಿಸಿದೆ. ಪಶ್ಚಿಮ ಬಂಗಾಳದಲ್ಲಿ ಸೋಲಿನ ನಂತರ ಮಮತಾ ಬ್ಯಾನರ್ಜಿ ಅವರು ಇವಿಎಂ ಅಕ್ರಮ, ಎಸ್‌ಐಆರ್, ಸಂಸ್ಥೆಗಳ ದುರುಪಯೋಗ ಮತ್ತು ಚುನಾವಣಾ ಆಯೋಗದ ವಿರುದ್ಧ ತೀವ್ರ ಆರೋಪಗಳನ್ನು ಮಾಡುತ್ತಲೇ ಇದ್ದಾರೆ. ಜತೆಗೆ ಸಿಎಂ ಸ್ಥಾನಕ್ಕೂ ರಾಜೀನಾಮೆ ಕೊಡಲ್ಲ ಎಂದಿದ್ದಾರೆ. ಅವರು ಮುಖ್ಯ ಚುನಾವಣಾ ಆಯುಕ್ತರನ್ನು ಈ ಚುನಾವಣೆಯ ವಿಲನ್ ಎಂದು ಕರೆದಿದ್ದಾರೆ.

ಇದು ಸಾಮಾನ್ಯ ಅಸಮಾಧಾನವಲ್ಲ, ಇದು ಜನತೆಯ ತೀರ್ಪನ್ನು ತಿರಸ್ಕರಿಸುವ ಧೋರಣೆ. ತಾವು ಗೆದ್ದಾಗ ಮತಯಂತ್ರ ಪವಿತ್ರ, ಸೋತಾಗ ಮತಯಂತ್ರ ಸಂಶಯಾಸ್ಪದ, ಈ ಎರಡುಮುಖದ ರಾಜಕೀಯಕ್ಕೆ ಪ್ರಜಾಪ್ರಭುತ್ವದಲ್ಲಿ ಸ್ಥಾನವಿಲ್ಲ. ಚುನಾವಣಾ ಪ್ರಕ್ರಿಯೆಯಲ್ಲಿ ದೋಷವಿದ್ದರೆ ನ್ಯಾಯಾಲಯವಿದೆ, ಚುನಾವಣಾ ಆಯೋಗದ ನಿಯಮಗಳಿವೆ, ಸಾಕ್ಷ್ಯಾಧಾರಗಳೊಂದಿಗೆ ಹೋರಾಡುವ ಮಾರ್ಗವಿದೆ. ಆದರೆ ಫಲಿತಾಂಶ ಬಂದ ತಕ್ಷಣವೇ ನಾವು ಸೋತಿಲ್ಲ, ನೈತಿಕವಾಗಿ ನಾವು ಗೆದ್ದಿದ್ದೇವೆ, ಚುನಾವಣೆ ಕದಿಯಲಾಗಿದೆ ಎಂಬ ಮಾತುಗಳು ಜನರ ಮತದಾನ ಬುದ್ಧಿವಂತಿಕೆಗೆ ನೇರ ಅವಮಾನ ಮಾಡಿದಂತೆ. ಇದು ರಾಜಕೀಯ ಜಾಗರೂಕತೆ ಅಲ್ಲ, ಇದು ಸೋಲಿನ ಮುನ್ನವೇ ಸೋಲಿಗೆ ನೆಪ ಕಟ್ಟುವ ತಂತ್ರ. ಚುನಾವಣಾ ಫಲಿತಾಂಶ ಬರುವುದಕ್ಕೂ ಮುಂಚೆ ಅಕ್ರಮ, ಫಲಿತಾಂಶ ಬಂದ ನಂತರ ಕಳ್ಳತನ, ಸೋಲಿನ ನಂತರ ಸಂಚು ಎಂಬ ಈ ಸರಣಿ ಈಗ ವಿಪಕ್ಷಗಳ ಸಿದ್ಧ ಮಾದರಿಯಂತಾಗಿದೆ. ಜನತೆ ತಮ್ಮ ಪರವಾಗಿ ಮತ ಹಾಕಿದಾಗ ಜನಶಕ್ತಿ, ವಿರುದ್ಧವಾಗಿ ಮತ ಹಾಕಿದಾಗ ಮತಚೌರಿ ಎಂಬ ವ್ಯಾಖ್ಯಾನವೇ ಪ್ರಜಾಪ್ರಭುತ್ವದ ಅವಮಾನ.

ಇದಕ್ಕಿಂತ ಗಂಭೀರವಾದದ್ದು ರಾಹುಲ್ ಗಾಂಧಿಯವರ ಪ್ರತಿಕ್ರಿಯೆ. ಅವರು ಅಸ್ಸಾಂ ಮತ್ತು ಬಂಗಾಳ ಚುನಾವಣೆಗಳು ಬಿಜೆಪಿ ಮತ್ತು ಚುನಾವಣಾ ಆಯೋಗದ ಬೆಂಬಲದಿಂದ ಕದ್ದುಕೊಳ್ಳಲ್ಪಟ್ಟಿವೆ ಎಂದು ಆರೋಪಿಸಿ, ಬಂಗಾಳದಲ್ಲಿ 100ಕ್ಕೂ ಹೆಚ್ಚು ಸ್ಥಾನಗಳು ಕದ್ದುಕೊಳ್ಳಲ್ಪಟ್ಟಿವೆ ಎಂಬ ಮಮತಾ ಬ್ಯಾನರ್ಜಿ ಅವರ ಆರೋಪಕ್ಕೆ ಬೆಂಬಲ ನೀಡಿದ್ದಾರೆ. ಈಗಲೂ ಲೋಕಸಭೆ ಚುನಾವಣೆಯಲ್ಲೂ ಮತಚೋರಿಯಾಗಿತ್ತು ಎಂಬ ಆರೋಪವನ್ನೂ ನಡೆಸಿ, ಪ್ರತಿ ಆರರಲ್ಲಿ ಒಬ್ಬ ಬಿಜೆಪಿ ಸಂಸದ ಮತಚೋರಿಯಿಂದ ಗೆದ್ದಿದ್ದಾರೆ ಎಂದು ಬಿಟ್ಟಿದ್ದಾರೆ.

ಇಂತಹ ಹೇಳಿಕೆಗಳು ಸಾಮಾನ್ಯ ರಾಜಕೀಯ ಟೀಕೆಗಳಲ್ಲ. ದೇಶದ ಚುನಾವಣಾ ವ್ಯವಸ್ಥೆಯ ಮೇಲಿನ ಸಾರ್ವಜನಿಕ ವಿಶ್ವಾಸವನ್ನು ಕುಂದಿಸುವ ಗಂಭೀರ ಆರೋಪಗಳು. ಇಷ್ಟು ದೊಡ್ಡ ಆರೋಪಗಳನ್ನು ಮಾಡುವಾಗ ಸಾಕ್ಷ್ಯವೂ ಅಷ್ಟೇ ದೊಡ್ಡದಾಗಿರಬೇಕು. ಇಲ್ಲದಿದ್ದರೆ ಅದು ಪ್ರಜಾಪ್ರಭುತ್ವದ ರಕ್ಷಣೆಯ ಹೆಸರಿನಲ್ಲಿ ಪ್ರಜಾಪ್ರಭುತ್ವದ ಅಡಿಪಾಯವನ್ನೇ ದುರ್ಬಲಗೊಳಿಸುವ ಕೆಲಸವಾಗುತ್ತದೆ. ಸೋತ ಪಕ್ಷಗಳು ತಮ್ಮ ಸೋಲಿನ ಕಾರಣಗಳನ್ನು ಪರಿಶೀಲಿಸುವ ಬದಲು ಚುನಾವಣಾ ಆಯೋಗ, ಇವಿಎಂ, ಕೇಂದ್ರ ಸಂಸ್ಥೆಗಳು, ಮಾಧ್ಯಮ, ಆಡಳಿತ ಸೇರಿ ಎಲ್ಲರ ಮೇಲೂ ಹೊಣೆ ಹಾಕಿದರೆ, ಅಂತಿಮವಾಗಿ ಹೊಣೆಗಾರಿಕೆ ಎಂಬ ರಾಜಕೀಯ ಗುಣವೇ ನಾಶವಾಗುತ್ತದೆ. ಇಲ್ಲಿ ವಿಚಿತ್ರ ವಿರೋಧಾಭಾಸ ಇದೆ. ತಮಿಳುನಾಡಿನಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿಲ್ಲ, ಟಿವಿಕೆ ದೊಡ್ಡ ಶಕ್ತಿಯಾಗಿ ಹೊರಹೊಮ್ಮಿದೆ. ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಅಧಿಕಾರಕ್ಕೇರಲು ಸಿದ್ಧವಾಗಿದೆ. ಆದರೂ ಈ ಚುನಾವಣೆಗಳಲ್ಲಿ ವೋಟ್ ಚೋರಿಯಾಗಿದೆ ಅಂತ ಕಾಂಗ್ರೆಸ್ ಆಗಲಿ, ಮಮತಾ ಬ್ಯಾನರ್ಜಿಯಾಗಲಿ ಹೇಳುತ್ತಲೇ ಇಲ್ಲ. ಇದರಿಂದ ಸ್ಪಷ್ಟವಾಗುವುದು ಏನೆಂದರೆ, ಕೆಲವು ವಿಪಕ್ಷಗಳಿಗೆ ಸಮಸ್ಯೆ ಫಲಿತಾಂಶದ ಸ್ವರೂಪದಲ್ಲಿಲ್ಲ, ಸಮಸ್ಯೆ ತಮ್ಮ ನಿರೀಕ್ಷೆಗೆ ವಿರುದ್ಧವಾದ ಜನಮತದಲ್ಲಿದೆ.

ವಿಪಕ್ಷಗಳ ಈ ಮೊಂಡಾಟದ ಮೂಲದಲ್ಲಿ ಒಂದು ಅಪಾಯಕಾರಿ ಅಹಂಕಾರ ಅಡಗಿದೆ. ನಾವು ಸೋಲಲು ಸಾಧ್ಯವೇ ಇಲ್ಲ; ಸೋತಿದ್ದರೆ ವ್ಯವಸ್ಥೆಯೇ ತಪ್ಪು ಎಂಬ. ಮನೋಭಾವವು ಅವರನ್ನು ಜನರಿಂದ ದೂರ ಮಾಡುತ್ತಿದೆ. ಜನರು ಬೆಲೆ ಏರಿಕೆ, ಉದ್ಯೋಗ, ಭದ್ರತೆ, ಪ್ರಾದೇಶಿಕ ಅಸ್ಮಿತೆ, ಭ್ರಷ್ಟಾಚಾರ, ಆಡಳಿತದ ದಕ್ಷತೆ, ನಾಯಕತ್ವದ ವಿಶ್ವಾಸಾರ್ಹತೆ ಇವುಗಳ ಆಧಾರದ ಮೇಲೆ ಮತ ಹಾಕುತ್ತಾರೆ. ಆದರೆ ಸೋತ ಪಕ್ಷಗಳು ಈ ಸಂದೇಶವನ್ನು ಕೇಳಲು ಸಿದ್ಧವಿಲ್ಲ. ಅವುಗಳಿಗೆ ಜನರ ಧ್ವನಿಗಿಂತ ತಮ್ಮದೇ ಆರೋಪಗಳ ಪ್ರತಿಧ್ವನಿ ಹೆಚ್ಚು ಸಿಹಿಯಾಗಿ ಕೇಳಿಸುತ್ತಿದೆ. ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ತಮ್ಮ ಭದ್ರತೆಯ ಕ್ಷೇತ್ರ ಭವಾನಿಪುರದಲ್ಲೇ ಸೋತಿದ್ದಾರೆ. ಬಿಜೆಪಿ ರಾಜ್ಯದಲ್ಲಿ ಮೊದಲ ಬಾರಿಗೆ ಆಡಳಿತ ಹಿಡಿಯಲು ಸಜ್ಜಾಗಿದೆ. ಇಂತಹ ತೀರ್ಪನ್ನು ಕೇವಲ ಇವಿಎಂ, ಸಂಚು, ಮತಚೌರಿ ಎಂದು ತಳ್ಳಿ ಹಾಕುವುದು ರಾಜಕೀಯ ವಾಸ್ತವದಿಂದ ಓಡಿಹೋಗುವುದು. ಒಬ್ಬ ನಾಯಕ ಅಥವಾ ಪಕ್ಷ ಅಜೇಯವಲ್ಲ. ಜನರು ಅಧಿಕಾರ ಕೊಡುತ್ತಾರೆ, ಜನರೇ ಅದನ್ನು ಹಿಂಪಡೆಯುತ್ತಾರೆ. ಇದೇ ಪ್ರಜಾಪ್ರಭುತ್ವದ ಸೌಂದರ್ಯ. ಅದನ್ನೇ ಒಪ್ಪದವರು ಪ್ರಜಾಪ್ರಭುತ್ವದ ಹೆಸರು ಜಪಿಸಿದರೂ ಅದರ ಆತ್ಮವನ್ನು ಗೌರವಿಸುವುದಿಲ್ಲ. ವಿಪಕ್ಷಗಳ ಕರ್ತವ್ಯ ಕೇವಲ ಆರೋಪ ಮಾಡುವುದು ಅಲ್ಲ, ಜನರಿಗೆ ವಿಶ್ವಾಸಾರ್ಹ ಪರ್ಯಾಯ ಒದಗಿಸುವುದು. ಸೋಲಿನ ನಂತರ ಸಂಯಮ ತೋರಿಸುವುದು, ಕಾರ್ಯಕರ್ತರನ್ನು ಶಾಂತವಾಗಿಡುವುದು, ಮತದಾರರಿಗೆ ಧನ್ಯವಾದ ಹೇಳುವುದು, ತಪ್ಪುಗಳ ಬಗ್ಗೆ ಆತ್ಮಾವಲೋಕನಮಾಡಿಕೊಳ್ಳುವುದು ರಾಜಕೀಯ ಪ್ರೌಢಿಮೆಯ ಲಕ್ಷಣಗಳು. ಆದರೆ ಸೋಲಿನ ತಕ್ಷಣವೇ ಚುನಾವಣಾ ಆಯೋಗವನ್ನು ಶತ್ರುವಿನಂತೆ ಚಿತ್ರಿಸುವುದು, ಜನರ ತೀರ್ಪನ್ನು ಅಕ್ರಮ ಎಂದು ಕರೆಯುವುದು, ಮತದಾರರ ನಿರ್ಧಾರವನ್ನು ಅನುಮಾನದಲ್ಲಿ ಮುಚ್ಚಿಡುವುದು ಇವು ಜವಾಬ್ದಾರಿಯುತ ವಿರೋಧ ಪಕ್ಷದ ಲಕ್ಷಣಗಳಲ್ಲ. ಈ ಮೊಂಡಾಟದಿಂದ ಗೆದ್ದವರಿಗೆ ಲಾಭವಾಗಬಹುದು, ಆದರೆ ಪ್ರಜಾಪ್ರಭುತ್ವಕ್ಕೆ ಹಾನಿ. ಏಕೆಂದರೆ ಜನರು ಒಂದು ಹಂತದ ನಂತರ ಪ್ರಶ್ನಿಸುತ್ತಾರೆ. ಪ್ರತಿ ಸೋಲಿಗೂ ಕಳ್ಳತನವೇ ಕಾರಣವೇ? ಹಾಗಾದರೆ ನಿಮ್ಮ ರಾಜಕೀಯ ವೈಫಲ್ಯಕ್ಕೆ ನೀವು ಯಾವಾಗ ಹೊಣೆ ಹೊರುತ್ತೀರಿ? ಈ ಪ್ರಶ್ನೆಗೆ ವಿಪಕ್ಷಗಳು ಉತ್ತರ ಕೊಡದಿದ್ದರೆ, ಜನರು ಮುಂದಿನ ಚುನಾವಣೆಯಲ್ಲೂ ಇನ್ನಷ್ಟು ಕಠಿಣ ಉತ್ತರ ನೀಡುತ್ತಾರೆ.

ಈ ಚುನಾವಣಾ ಫಲಿತಾಂಶಗಳು ಸೋತ ಪಕ್ಷಗಳಿಗೆ ಕೊಟ್ಟಿರುವ ಸಂದೇಶ ಸ್ಪಷ್ಟವಾಗಿದೆ. ಮತದಾರರನ್ನು ದೂಷಿಸಬೇಡಿ, ಮತಯಂತ್ರವನ್ನು ಶಪಿಸಬೇಡಿ, ಆಯೋಗವನ್ನು ನಿರಂತರವಾಗಿ ಅಪಮಾನಿಸಬೇಡಿ. ಮೊದಲು ಕನ್ನಡಿಯಲ್ಲಿ ನಿಮ್ಮ ಮುಖ ನೋಡಿ. ಸಂಘಟನೆ ದುರ್ಬಲವಾಗಿದೆಯೇ? ನಾಯಕತ್ವ ಸರಿ ಇಲ್ಲವೇ? ಜನರ ನೋವುಗಳಿಂದ ಪಕ್ಷ ದೂರವಾಗಿದೆಯೇ? ಅಭ್ಯರ್ಥಿ ಆಯ್ಕೆ ತಪ್ಪಿದೆಯೇ? ಮೈತ್ರಿಗಳು ಕೇವಲ ಹೆಸರಿಗಷ್ಟೇ ಇದ್ದವೇ, ಜನಮನ ಗೆಲ್ಲುವ ನೀತಿ ಇರಲಿಲ್ಲವೇ? ಇವೆಲ್ಲ ಪ್ರಶ್ನೆಗಳಿಗೆ ಉತ್ತರ ಕೊಡದೆ ವೋಟ್ ಚೋರಿ ಎಂಬ ಒಂದೇ ಘೋಷಣೆಯ ಹಿಂದೆ ಅಡಗಿಕೊಳ್ಳುವುದು ರಾಜಕೀಯ ಪಲಾಯನ. ಪ್ರಜಾಪ್ರಭುತ್ವದಲ್ಲಿ ಸೋಲು ಅಪಮಾನವಲ್ಲ. ಆದರೆ ಸೋಲನ್ನು ಒಪ್ಪದ ಅಹಂಕಾರವೇ ಅಪಮಾನ. ಜನರು ತೀರ್ಪು ನೀಡಿದ್ದಾರೆ. ಆ ತೀರ್ಪು ಕೆಲವರಿಗೆ ಕಹಿಯಾಗಿರಬಹುದು, ಆದರೆ ಕಹಿ ಔಷಧಿಯೇ ರೋಗಕ್ಕೆ ಚಿಕಿತ್ಸೆ. ವಿಪಕ್ಷಗಳು ಈ ತೀರ್ಪನ್ನು ಮೊಂಡಾಟದಿಂದ ತಳ್ಳಿಹಾಕಿದರೆ, ಅವು ಜನತೆಯಿಂದ ಇನ್ನೂ ದೂರ ಸರಿಯುತ್ತವೆ. ಆದರೆ ಅದನ್ನು ಆತ್ಮಪರಿಶೀಲನೆಯ ಅವಕಾಶವನ್ನಾಗಿ ಮಾಡಿಕೊಂಡರೆ ಮಾತ್ರ ಮತ್ತೆ ಜನರ ವಿಶ್ವಾಸ ಗಳಿಸಬಹುದು. ಇದೀಗ ವಿಪಕ್ಷಗಳಿಗೆ ಆಯ್ಕೆ ಒಂದೇ. ಜನರ ತೀರ್ಪಿನ ಮುಂದೆ ತಲೆಬಾಗುವುದೇ ಅಥವಾ ಮೊಂಡಾಟದ ಗೋಡೆಯ ಹಿಂದೆ ಇನ್ನಷ್ಟು ಕುಸಿಯುವುದೇ. ಪ್ರಜಾಪ್ರಭುತ್ವದಲ್ಲಿ ಜನರೇ ಅಂತಿಮ ನ್ಯಾಯಾಧೀಶರು. ಆ ನ್ಯಾಯಾಧೀಶರ ತೀರ್ಪನ್ನು ಅವಮಾನಿಸುವ ರಾಜಕೀಯ, ಎಷ್ಟೇ ದೊಡ್ಡ ಘೋಷಣೆಗಳ ಹಿಂದೆ ಅಡಗಿದರೂ, ಕೊನೆಯಲ್ಲಿ ಜನರ ನ್ಯಾಯಾಲಯದಲ್ಲೇ ಸೋಲುತ್ತದೆ.

'ಆಪರೇಷನ್ ಸಿಂದೂರ್' ವಿಜಯಕ್ಕೆ 1 ವರ್ಷ

▸ ಮೇಜರ್ ಜನರಲ್ ರವಿ ಮುರುಗನ್ (ನಿವೃತ್ತ)



ಒಂದು ವರ್ಷದ ಹಿಂದೆ, 2025ರ ಮೇ 07ರಂದು, ಭಾರತವು 'ಆಪರೇಷನ್ ಸಿಂದೂರ್' ಪ್ರಾರಂಭಿಸಿತು. ಆ ಮೂಲಕ ತನ್ನ ಘೋಷಿತ ನೀತಿಯನ್ನು ದೃಢವಾದ ಮಿಲಿಟರಿ ಕ್ರಮವನ್ನಾಗಿ ಪರಿವರ್ತಿಸಿತು. ದಶಕಗಳಿಂದ ಭಾರತದ ಮಣ್ಣಿನಲ್ಲಿ ಪಾಕಿಸ್ತಾನ ನಡೆಸುತ್ತಿರುವ ಭಯೋತ್ಪಾದನಾ ಕೃತ್ಯಗಳಿಗೆ ಕೇವಲ ಮೌಖಿಕ ಎಚ್ಚರಿಕೆ ನೀಡುವ ಬದಲು, ಪ್ರತ್ಯಕ್ಷವಾಗಿ ತಿರುಗೇಟು ನೀಡುವ ಭಾರತದ ಸಂಕಲ್ಪವನ್ನು ಈ ಕಾರ್ಯಾಚರಣೆ ಸಾಬೀತುಪಡಿಸಿತು. ಪಾಕಿಸ್ತಾನವು ಭಯೋತ್ಪಾದಕ ಸಂಘಟನೆಗಳನ್ನು ತನ್ನ ಪರೋಕ್ಷ ಯುದ್ಧದ ದಾಳಗಳಾಗಿ ಬಳಸಿಕೊಳ್ಳುತ್ತಿರುವುದನ್ನು ಎದುರಿಸುವಲ್ಲಿ, 'ಆಪರೇಷನ್ ಸಿಂದೂರ್' ಭಾರತದ ಇತಿಹಾಸದಲ್ಲಿ ಒಂದು ಮಹತ್ವದ ಮೈಲಿಗಲ್ಲಾಗಿದೆ.

ಈ ಕಾರ್ಯಾಚರಣೆಯ ಹಿಂದಿದ್ದ ರಾಜಕೀಯ ಉದ್ದೇಶವು ಅತ್ಯಂತ ಸ್ಪಷ್ಟ ಮತ್ತು ಅಚಲವಾಗಿತ್ತು. 2025ರ ಏ. 22ರಂದು ಪಹಲ್ಗಾಮ್‌ನಲ್ಲಿ ಪಾಕಿಸ್ತಾನ ಪ್ರೇರಿತ ಭಯೋತ್ಪಾದಕರು ನಡೆಸಿದ ಭೀಕರ ದಾಳಿಯಲ್ಲಿ 26 ಅಮಾಯಕರು ಬಲಿಯಾದ ನಂತರ, ಭಾರತದ ಪ್ರತಿಕ್ರಿಯೆಯು ಕೇವಲ ಸಾಂಕೇತಿಕವಾಗಿರಲಿಲ್ಲ. ಅದು ಅತ್ಯಂತ ಯೋಜಿತ, ಸಮಯೋಚಿತ ಮತ್ತು ಗುರಿಕೇಂದ್ರಿತವಾಗಿತ್ತು. ಒಟ್ಟು 88 ಗಂಟೆಗಳ ಕಾಲ ನಡೆದ ಈ ಮಿಲಿಟರಿ ಅಭಿಯಾನವು, ಸ್ಪಷ್ಟ ಗುರಿಗಳನ್ನು ಹೊಂದಿದ್ದ ಸುಸಂಘಟಿತ 'ಶಿಕ್ಷಾರ್ಹ ಕಾರ್ಯತಂತ್ರ'ವಾಗಿತ್ತು. ಭಾರತವು ತಾನು ಅಂದುಕೊಂಡ ಗುರಿಗಳನ್ನು ಸಾಧಿಸಿದ ನಂತರ, ತನ್ನದೇ ಆದ ಷರತ್ತುಗಳ ಮೇಲೆ ಈ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ಮುಕ್ತಾಯಗೊಳಿಸಿತು.


ರಾಜಕೀಯ ಮತ್ತು ಕಾರ್ಯತಂತ್ರದ ದೃಷ್ಟಿಕೋನದಿಂದ, ಇಲ್ಲಿ ಎರಡು ಪ್ರಮುಖ ಅಂಶಗಳು ವಿಶೇಷವಾಗಿ ಗಮನ ಸೆಳೆಯುತ್ತವೆ: ಮೊದಲನೆಯದಾಗಿ, ಈ ದಾಳಿಯ ಭೌಗೋಳಿಕ ವ್ಯಾಪ್ತಿಯು ಈವರೆಗಿನ ಎಲ್ಲಾ ಪೂರ್ವನಿದರ್ಶನಗಳನ್ನು ಬದಿಗೊತ್ತಿ ಹೊಸ ದಾಖಲೆ ಬರೆಯಿತು. ಭಾರತದ ಗುರಿಗಳು ಕೇವಲ ನಿಯಂತ್ರಣ ರೇಖೆಯಾಚೆಗಿನ ಪಾಕಿಸ್ತಾನ ಆಕ್ರಮಿತ ಜಮ್ಮು ಮತ್ತು ಕಾಶ್ಮೀರಕ್ಕೆ ಸೀಮಿತವಾಗಿರಲಿಲ್ಲ; ಬದಲಾಗಿ ಅವು ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಹೃದಯಭಾಗದವರೆಗೂ ವಿಸ್ತರಿಸಿದ್ದವು. ಇದು ಕೇವಲ ಮಿಲಿಟರಿ ದಾಳಿಯಲ್ಲ, ಬದಲಾಗಿ ಪಾಕಿಸ್ತಾನದ ಪರಮಾಣು ಮಿತಿಯನ್ನು ಪರೀಕ್ಷಿಸುವ ಮತ್ತು ಅದರ ಪ್ರತಿರೋಧದ ಸಾಮರ್ಥ್ಯದ ಮಿತಿಗಳನ್ನು ಬಹಿರಂಗಪಡಿಸುವ ಒಂದು ಲೆಕ್ಕಾಚಾರದ ಹೆಜ್ಜೆಯಾಗಿತ್ತು.

ಎರಡನೆಯದಾಗಿ, ಈ ಕಾರ್ಯಾಚರಣೆಯು ಮಾಹಿತಿ ಯುಗದ ಇಂದಿನ ಯುದ್ಧಗಳಲ್ಲಿ ತಂತ್ರಜ್ಞಾನದ ನಿರ್ಣಾಯಕ ಪಾತ್ರವನ್ನು ತಿಳಿಸಿತು. ಕ್ರೂಸ್ ಕ್ಷಿಪಣಿಗಳು, 'ಲೋಯಿಟರಿಂಗ್ ಮ್ಯೂನಿಷನ್ಸ್' (ಸ್ವಯಂ- ಚಾಲಿತ ವಿಧ್ವಂಸಕ ಡ್ರೋನ್‌ಗಳು), ನೆಟ್ವರ್ಕ್-ಕೇಂದ್ರಿತ ವ್ಯವಸ್ಥೆಗಳು ಮತ್ತು ಹಂತ-ಹಂತದ ಕ್ಷಿಪಣಿ ರಕ್ಷಣಾ ವ್ಯವಸ್ಥೆಗಳ ಬಳಕೆ ಮಾಡಿದ್ದು, ಯುದ್ಧತಂತ್ರವು ಈಗ 'ನಿಖರತೆ, ವೇಗ ಮತ್ತು ಸಮನ್ವಯದ ಯುದ್ಧಭೂಮಿ ಜಾಗೃತಿ' ಯತ್ತ ನಿರ್ಣಾಯಕವಾಗಿ ಬದಲಾಗಿರುವುದನ್ನು ತೋರಿಸಿಕೊಟ್ಟಿತು. ಆಪರೇಷನ್ ಸಿಂದೂರ್ ಕೇವಲ ಒಂದು ಶಿಕ್ಷಾರ್ಹ ಕ್ರಮವಾಗಿರಲಿಲ್ಲ; ಬದಲಾಗಿ ದೂರಗಾಮಿ ದಾಳಿ ಸಾಮರ್ಥ್ಯ, ಕ್ಷಿಪ್ರ ನಿರ್ಧಾರಗಳು ಮತ್ತು ಭೂ-ಜಲ-ಆಕಾಶ ಮಾರ್ಗಗಳ ಸಮನ್ವಯದ ಈ ಆಧುನಿಕ ಯುಗದಲ್ಲಿ ಭಾರತವು ಯುದ್ಧವನ್ನು ಹೇಗೆ ನಡೆಸಲಿದೆ ಎಂಬುದಕ್ಕೆ ಒಂದು ಶಕ್ತಿಶಾಲಿ ನಿದರ್ಶನವಾಗಿತ್ತು.

2025ರ ಮೇ 7ರಂದು ಆರಂಭವಾದ ಈ ಕಾರ್ಯಾಚರಣೆಯು, ಪಾಕಿಸ್ತಾನದಲ್ಲಿರುವ ಭಯೋತ್ಪಾದಕ ನೆಲೆಗಳ ವಿರುದ್ಧ ನಡೆದ ತೀವ್ರಗತಿಯ ಮತ್ತು ನಿಖರ ಅಭಿಯಾನವಾಗಿತ್ತು. ಇದು ಸಂಘರ್ಷವು ಮಿತಿಮೀರದಂತೆ ಎಚ್ಚರವಹಿಸಿ ಶತ್ರುವಿಗೆ ಗರಿಷ್ಠ ಹಾನಿ ಉಂಟುಮಾಡುವಂತೆ ವಿನ್ಯಾಸಗೊಳಿಸಲಾದ ಭಾರತದ ಸುಸಂಘಟಿತ ಮಿಲಿಟರಿ ಸಾಮರ್ಥ್ಯದ ಪ್ರದರ್ಶನವಾಗಿತ್ತು. ಒಂದು ವರ್ಷದ ನಂತರ, ಇದು ಭಾರತದ ಬೆಳೆಯುತ್ತಿರುವ 'ಕಾರ್ಯತಂತ್ರದ ಪ್ರಬುದ್ಧತೆ'ಗೆ ಸಾಕ್ಷಿಯಾಗಿ ನಿಂತಿದೆ. ಪರಮಾಣು ಶಸ್ತ್ರಾಸ್ತ್ರ ಹೊಂದಿರುವ ಎದುರಾಳಿಯನ್ನು ಹೊಣೆಗಾರರನ್ನಾಗಿ ಮಾಡುವುದು ಮತ್ತು ಪರಿಸ್ಥಿತಿಯನ್ನು ಹತೋಟಿಯಲ್ಲಿಟ್ಟುಕೊಂಡೇ ಅಚಲ ಸಂಕಲ್ಪ ಹಾಗೂ ದೃಢ ಉದ್ದೇಶದೊಂದಿಗೆ ತಿರುಗೇಟು ನೀಡುವ ಸಾಮರ್ಥ್ಯವನ್ನು ಇದು ಸಾಬೀತುಪಡಿಸಿದೆ.

ಅನಿರ್ದಿಷ್ಟವಾಗಿ ಎಳೆಯಲ್ಪಡುವ ಮತ್ತು ಅನಿಶ್ಚಿತ ಫಲಿತಾಂಶದ ಸಮಕಾಲೀನ ಯುದ್ಧಗಳಿಗೆ ವ್ಯತಿರಿಕ್ತವಾಗಿ, 'ಆಪರೇಷನ್ ಸಿಂದೂರ್' ಸ್ಪಷ್ಟತೆ ಮತ್ತು ದೃಢವಾದ ಕ್ರಮಗಳಿಂದ ಕೂಡಿತ್ತು. ಭಯೋತ್ಪಾದನಾ ಜಾಲ ಹಾಗೂ ಅದರ ಪೋಷಕರಿಗೆ ಭೌತಿಕವಾಗಿ ನಷ್ಟವನ್ನು ಉಂಟುಮಾಡುವ ರಾಜಕೀಯ ಉದ್ದೇಶವು ಅತ್ಯಂತ ಸ್ಪಷ್ಟವಾಗಿತ್ತು ಮತ್ತು ಆ ಗುರಿ ತಲುಪಿದ ತಕ್ಷಣ ಸೈನ್ಯದ ಹಿಂತೆಗೆಯುವಿಕೆ ನಡೆಯಿತು. ಗುರಿಗಳ ಆಯ್ಕೆಯು ಸಂಯಮ ಮತ್ತು ಸಂಕಲ್ಪದ ನಡುವಿನ ಸಮತೋಲನವನ್ನು ಪ್ರತಿಬಿಂಬಿಸಿತ್ತು. ಲಷ್ಕರ್-ಎ-ತೈಬಾ, ಜೈಶ್-ಎ-ಮೊಹಮ್ಮದ್ ಮತ್ತು ಹಿಜ್ಬುಲ್ ಮುಜಾಹಿದೀನ್‌ನಂತಹ ಗುಂಪುಗಳ ಪ್ರಮುಖ ಕೇಂದ್ರಗಳ ಮೇಲಿನ ದಾಳಿಗೆ ಆದ್ಯತೆ ನೀಡಲಾಯಿತು. ನಾಗರಿಕರಿಗೆ ಹಾನಿಯಾಗದಂತೆ ಕೇವಲ ಭಯೋತ್ಪಾದಕರ ಕಾರ್ಯಾಚರಣಾ ಸಾಮರ್ಥ್ಯವನ್ನು ಕುಂದಿಸುವುದರ ಮೇಲೆ ಸಂಪೂರ್ಣ ಗಮನ ಹರಿಸಲಾಗಿತ್ತು.

ಕಾರ್ಯಾಚರಣೆಯ ದೃಷ್ಟಿಯಿಂದ, ಈ ಅಭಿಯಾನವು ಭಾರತದ ಪ್ರೌಢಿಮೆ ಹೊಂದುತ್ತಿರುವ 'ದೂರಗಾಮಿ ನಿಖರ ಯುದ್ಧತಂತ್ರ'ದ ಸಿದ್ಧಾಂತವನ್ನು ಪ್ರದರ್ಶಿಸಿತು. ದೀರ್ಘ ವ್ಯಾಪ್ತಿಯ ಕ್ರೂಸ್ ಕ್ಷಿಪಣಿಗಳು ಮತ್ತು ನಿಖರ ಮಾರ್ಗದರ್ಶಿತ ಅಸ್ತ್ರಗಳನ್ನು ಹೊತ್ತ ರಫೇಲ್ ಯುದ್ಧ ವಿಮಾನಗಳು ಹಾಗೂ ಬ್ರಹ್ಮೋಸ್ ಕ್ಷಿಪಣಿ ವ್ಯವಸ್ಥೆಯೊಂದಿಗೆ ಸಂಯೋಜಿತಗೊಂಡ ಸುಖೋಯ್ ವಿಮಾನಗಳು ವಿಸ್ತೃತ ಯುದ್ಧಭೂಮಿಯಾದ್ಯಂತ ಆಳವಾದ ಮತ್ತು ಸುಸಂಘಟಿತ ದಾಳಿಗಳನ್ನು ನಡೆಸಲು ಸಾಧ್ಯವಾಗಿಸಿದವು. ಈ ಕಾರ್ಯಾಚರಣೆಯು ಪಾಕ್ ಆಕ್ರಮಿತ ಜಮ್ಮು ಕಾಶ್ಮೀರವನ್ನು ಮೀರಿ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಹೃದಯಭಾಗದವರೆಗೂ ವಿಸ್ತರಿಸಿದ್ದು ಒಂದು ಉದ್ದೇಶಪೂರ್ವಕ ಬದಲಾವಣೆ ಸೂಚಿಸಿತು: ಭಾರತವು ಹಳೆಯ ಭೌಗೋಳಿಕ ಮಿತಿಗಳನ್ನು ಕಿತ್ತೆಸೆಯಿತು



ಮತ್ತು ಶತ್ರುಗಳಿಗೆ ಯಾವುದೇ ಸುರಕ್ಷಿತ ತಾಣವಿಲ್ಲ ಎಂಬ ಸಂದೇಶವನ್ನು ರವಾನಿಸಿತು.

ಈ ಅಭಿಯಾನದ ಬೆನ್ನೆಲುಬಾಗಿದ್ದ ರಕ್ಷಣಾತ್ಮಕ ರಚನೆಯೂ ಅಷ್ಟೇ ಮಹತ್ವದ್ದಾಗಿತ್ತು. ಸಮಗ್ರ ವಾಯು ಮತ್ತು ಕ್ಷಿಪಣಿ ರಕ್ಷಣಾ ವ್ಯವಸ್ಥೆಗಳು ಶತ್ರುಗಳ ಡ್ರೋನ್ ಅಥವಾ ಕ್ಷಿಪಣಿ ದಾಳಿಯ ಪ್ರತಿರೋಧಗಳನ್ನು ಪರಿಣಾಮಕಾರಿಯಾಗಿ ಹತ್ತಿಕ್ಕಿದವು. ಆಕ್ರಮಣಕಾರಿ ದಾಳಿಯ ಸಾಮರ್ಥ್ಯ ಮತ್ತು ವಿಶ್ವಾಸಾರ್ಹ ರಕ್ಷಣಾತ್ಮಕ ಸ್ಥಿತಿಸ್ಥಾಪಕತ್ವದ ಈ ಸಮ್ಮಿಲನವು, ಆಧುನಿಕ ಸಂಘರ್ಷಗಳಲ್ಲಿ 'ನೆಟ್ವರ್ಕ್-ಕೇಂದ್ರಿತ ಯುದ್ಧತಂತ್ರ' ಮತ್ತು ಹಂತ-ಹಂತದ ರಕ್ಷಣಾ ಕವಚದ ಪ್ರಾಮುಖ್ಯತೆಯನ್ನು ತಿಳಿಸಿತು.

ಸೈದ್ಧಾಂತಿಕ ಮಟ್ಟದಲ್ಲಿ, 'ಆಪರೇಷನ್ ಸಿಂದೂರ್' ಏಕಕಾಲದಲ್ಲಿ ಮೂರು ನಿರ್ಣಾಯಕ ಮಿತಿಗಳನ್ನು ದಾಟಿತು: ಜವಾಬ್ದಾರಿಯುತ ಗುರಿ ಆಯ್ಕೆ, ಅಳತೆಗೋಲಿನಂತಿರುವ ಬಲ ಪ್ರಯೋಗ ಮತ್ತು ಶತ್ರುವಿಗೆ ಕಠಿಣ ಎಚ್ಚರಿಕೆ. ರಾಜಕೀಯ ಉದ್ದೇಶ, ನಿಖರ ಮಿಲಿಟರಿ ಗುರಿಗಳು ಮತ್ತು ಅತ್ಯಾಧುನಿಕ ರಕ್ಷಣಾ ಸಾಮರ್ಥ್ಯದ ಮಾರ್ಗದರ್ಶನವಿದ್ದರೆ, ಇಂತಹ ಶಿಕ್ಷಾರ್ಹ ಕ್ರಮಗಳು ಅನಿಯಂತ್ರಿತವಾಗಿ ಯುದ್ಧಕ್ಕೆ ತಿರುಗಬೇಕಿಲ್ಲ ಎಂಬುದನ್ನು ಇದು ಸಾಬೀತುಪಡಿಸಿತು. ಭಾರತವು ಸಮರ ವ್ಯಾಪ್ತಿಯನ್ನು 'ಲಂಬವಾಗಿ' (ಪೂರ್ಣ ಪ್ರಮಾಣದ ಯುದ್ಧ) ಹೆಚ್ಚಿಸುವ ಬದಲು 'ಸಮತಲವಾಗಿ' (ಹೊಸ ಪ್ರದೇಶಗಳಿಗೆ) ವಿಸ್ತರಿಸಿತು; ಆ ಮೂಲಕ ಪೂರ್ಣ ಪ್ರಮಾಣದ ಯುದ್ಧವನ್ನು ತಪ್ಪಿಸಿಯೂ ಶತ್ರುವಿಗೆ ಭಾರಿ ನಷ್ಟವನ್ನು ಉಂಟುಮಾಡಿತು.

ಮತ್ತೊಂದು ವಿಶಿಷ್ಟ ಲಕ್ಷಣವೆಂದರೆ ಭೂಸೇನೆ, ವಾಯುಸೇನೆ ಮತ್ತು ನೌಕಾಸೇನೆಗಳ ನಡುವಿನ ಅದ್ಭುತ ಸಮನ್ವಯ. ಅದರಲ್ಲೂ ವಿಶೇಷವಾಗಿ 'ಚೀಫ್ ಆಫ್ ಡಿಫೆನ್ಸ್ ಸ್ಟಾಫ್' (ಸಿಡಿಎಸ್) ಹುದ್ದೆಯ ಸೃಷ್ಟಿಯ ನಂತರ ಉನ್ನತ ರಕ್ಷಣಾ ನಿರ್ವಹಣೆಯಲ್ಲಿ ಆದ ಪ್ರಗತಿಯು, ಈ ತ್ರಿ-ಸೇವಾ ಸಂಘಟಿತ ಕಾರ್ಯಾಚರಣೆಯಲ್ಲಿ ಪ್ರತಿಫಲಿಸಿತು. ನೌಕಾಪಡೆಯ ರಣತಂತ್ರ, ವಾಯುಪಡೆಯ ಪ್ರಾಬಲ್ಯ ಮತ್ತು ಭೂಸೇನೆಯ ಗುರಿ ಕೇಂದ್ರಿತ ದಾಳಿಗಳು ಪ್ರತ್ಯೇಕ ಕ್ರಮಗಳಾಗಿರದೆ, ಒಂದು 'ಏಕೀಕೃತ ಕಾರ್ಯಾಚರಣಾ ವಿನ್ಯಾಸ'ದ ಅಂಗಗಳಾಗಿದ್ದವು.

ರಕ್ಷಣಾ ಕ್ಷೇತ್ರದಲ್ಲಿನ ದೇಶೀಯ ಸಾಮರ್ಥ್ಯದ ಬೆಳವಣಿಗೆ ಅಥವಾ 'ಆತ್ಮನಿರ್ಭರತೆ' ಈ ಯಶಸ್ಸನ್ನು ಮತ್ತಷ್ಟು ಬಲಪಡಿಸಿತು. ಸ್ವದೇಶಿ ನಿರ್ಮಿತ ಯುದ್ಧೋಪಕರಣಗಳು, ನಿಖರ ಅಸ್ತ್ರ ವ್ಯವಸ್ಥೆಗಳು, ಡ್ರೋನ್ ವಿರೋಧಿ ತಂತ್ರಜ್ಞಾನಗಳು ಮತ್ತು ಸುಧಾರಿತ ಗುಪ್ತಚರ ಹಾಗೂ ಕಣ್ಗಾವಲು ಬೆಂಬಲವು, ಭಾರತವು ಸ್ವಾವಲಂಬನೆಯತ್ತ ಸಾಧಿಸಿರುವ ಪ್ರಗತಿಯನ್ನು ಬಿಂಬಿಸಿದವು. ಹೀಗಾಗಿ, 'ಆಪರೇಷನ್ ಸಿಂದೂರ್' ಕೇವಲ ಮಿಲಿಟರಿ ಸಂಕಲ್ಪದ ಪ್ರದರ್ಶನವಾಗಿರದೆ, ಭಾರತದ ಕೈಗಾರಿಕಾ ಮತ್ತು ತಾಂತ್ರಿಕ ಶಕ್ತಿಯನ್ನು ಜಗತ್ತಿಗೆ ಪರಿಚಯಿಸಿತು. ಇಂದು ರಾಷ್ಟ್ರದ ರಕ್ಷಣಾ ಸನ್ನದ್ಧತೆಯು ಕೈಗಾರಿಕಾ ಸಾಮರ್ಥ್ಯದಿಂದ ಬೇರ್ಪಡಿಸಲಾಗದಂತಿದೆ.

ರಾಜತಾಂತ್ರಿಕವಾಗಿ, ಈ ಕಾರ್ಯಾಚರಣೆಯನ್ನು ಅತ್ಯಂತ ವ್ಯವಸ್ಥಿತವಾದ 'ನಿರೂಪಣಾ ನಿರ್ವಹಣೆ'ಯೊಂದಿಗೆ ಸಮನ್ವಯಗೊಳಿಸಲಾಗಿತ್ತು. ತನ್ನ ಕ್ರಮಗಳನ್ನು ಭಯೋತ್ಪಾದನಾ ವಿರೋಧಿ ಮತ್ತು ಆತ್ಮರಕ್ಷಣೆಯ ಕಾರ್ಯವಾಗಿ ಬಿಂಬಿಸುವ ಮೂಲಕ, ಆಪರೇಷನ್ ಸಿಂದೂರ್‌ಗೆ ಅಂತಾರಾಷ್ಟ್ರೀಯ ಕಾನೂನುಬದ್ಧ ಸಮರ್ಥನೆಯನ್ನು (Jus ad bellum)ನೀಡಲಾಯಿತು. ಮಿಲಿಟರಿ ಕ್ರಮ ಮತ್ತು ರಾಜತಾಂತ್ರಿಕ ಸಂದೇಶಗಳ ನಡುವಿನ ಈ ಅದ್ಭುತ ಹೊಂದಾಣಿಕೆಯು, ಜಾಗತಿಕ ಒತ್ತಡಗಳ ನಡುವೆಯೂ ಭಾರತದ ಕಾರ್ಯತಂತ್ರದ ಹಿತಾಸಕ್ತಿಗಳನ್ನು ಕಾಪಾಡುವಲ್ಲಿ ನಿರ್ಣಾಯಕ ಪಾತ್ರ ವಹಿಸಿತು.

ಅಂತಿಮವಾಗಿ, 'ಆಪರೇಷನ್ ಸಿಂದೂರ್'ನ ಅತ್ಯಂತ ವಿಶಿಷ್ಟ ಲಕ್ಷಣವೆಂದರೆ ಅದರ ಮುಕ್ತಾಯ. ತನ್ನ ಗುರಿಗಳನ್ನು ಸಾಧಿಸಿದ ನಂತರ, ಭಾರತವು ಒಂದು ನಿಗದಿತ ಕಾಲಮಿತಿಯೊಳಗೆ ಕಾರ್ಯಾಚರಣೆಯನ್ನು ಕೊನೆಗೊಳಿಸಿತು. ಆ ಮೂಲಕ ಅನೇಕ ಇಂದಿನ ಸಂಘರ್ಷಗಳಲ್ಲಿ ಕಂಡುಬರುವ 'ಕಾರ್ಯತಂತ್ರದ ದಿಕ್ಕುತಪ್ಪುವಿಕೆ'ಯನ್ನು ಯಶಸ್ವಿಯಾಗಿ ತಪ್ಪಿಸಿತು. ಕಾರ್ಯಾಚರಣೆಯ ಪ್ರಾರಂಭ, ಅನುಷ್ಠಾನ ಮತ್ತು ಅಂತ್ಯದ ನಿರ್ವಹಣೆಯಲ್ಲಿದ್ದ ಸ್ಪಷ್ಟತೆ ಹಾಗೂ ನಿಖರತೆಯೇ ಈ ಕಾರ್ಯಾಚರಣೆಯ ಶ್ರೇಷ್ಠ ಗುಣಮಟ್ಟಕ್ಕೆ ಸಾಕ್ಷಿಯಾಗಿದೆ.


ಒಂದು ವರ್ಷದ ನಂತರ, ಆಪರೇಷನ್ ಸಿಂದೂರ್‌ನ ಪರಂಪರೆಯು ಕೇವಲ ಶತ್ರುಗಳಿಗೆ ಮಾಡಿದ ಹಾನಿಯ ಪ್ರಮಾಣದಲ್ಲಿಲ್ಲ; ಬದಲಾಗಿ ಅದು ಸ್ಥಾಪಿಸಿದ ಹೊಸ ಮಾದರಿಯಲ್ಲಿದೆ. ನಿಖರವಾದ, ತಂತ್ರಜ್ಞಾನ ಆಧಾರಿತ ಮತ್ತು ರಾಜಕೀಯವಾಗಿ ನಿರ್ದೇಶಿಸಲ್ಪಟ್ಟ ಮಿಲಿಟರಿ ಕ್ರಮವು ಶತ್ರುಗಳಿಗೆ ಭಾರಿ ನಷ್ಟ ಉಂಟುಮಾಡಬಲ್ಲದು, ಅವರ ಪ್ರತಿರೋಧದ ತಂತ್ರ ವನ್ನು ಬದಲಿಸಬಲ್ಲದು ಮತ್ತು ಅದೇ ಸಮಯದಲ್ಲಿ ಸಂಘರ್ಷವು ಮಿತಿಮೀರದಂತೆ ನೋಡಿಕೊಳ್ಳಬಲ್ಲದು ಎಂಬುದನ್ನು ಇದು ತೋರಿಸಿಕೊಟ್ಟಿದೆ. ಇದು ಅಣ್ವಸ್ತ್ರದ ಅಡಿಯಲ್ಲೂ 'ಸೀಮಿತ ಯುದ್ಧ'ಕ್ಕಾಗಿ ಭಾರತವು ರೂಪಿಸಿಕೊಂಡಿರುವ ಉದ್ದೇಶದಲ್ಲಿ ದೃಢತೆ, ಅನುಷ್ಠಾನದಲ್ಲಿ ನಿಖರತೆ ಮತ್ತು ಸಂಯಮದಲ್ಲಿ ಶಿಸ್ತು ಇವುಗಳ ಹೊಸ ವಿನ್ಯಾಸವನ್ನು ಪ್ರತಿಬಿಂಬಿಸುತ್ತದೆ.

(ಲೇಖಕರು ಪರಮ ವಿಶಿಷ್ಟ ಸೇವಾ ಪದಕ ಮತ್ತು ಅತಿ ವಿಶಿಷ್ಟ ಸೇವಾ ಪದಕ ಪುರಸ್ಕೃತರು. ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನಾ ನಿಗ್ರಹ ಪಡೆಯ ಕಮಾಂಡರ್ ಆಗಿದ್ದರು. ಇವರು ಭಾರತೀಯ ಸೇನೆಯ ಸಾಮರ್ಥ್ಯ ವರ್ಧನೆಯ ಜವಾಬ್ದಾರಿ ಹೊಂದಿದ್ದ ಮಿಲಿಟರಿ ಕಾರ್ಯಾಚರಣೆಗಳ ಹೆಚ್ಚುವರಿ ಮಹಾನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದಾರೆ.)

ಟಾಗೋರ್ ಜಯಂತಿಯಂದೇ ಬಂಗಾಳದಲ್ಲಿ ನೂತನ ಯುಗಾರಂಭ

▸ ಗುರುಪ್ರಸಾದ ಭಟ್ ಉಡುಪಿ

ಇಂದು ಗುರುದೇವ ರವೀಂದ್ರನಾಥ ಟಾಗೋರರ 165 ನೆಯ ಜಯಂತಿಯನ್ನು ಆಚರಿಸಲಾಗುತ್ತಿದ್ದು ಅದಕ್ಕೊಂದು ಮಹತ್ತರ ಐತಿಹಾಸಿಕ ಮೆರಗು ಲಭಿಸಿದೆ! ಏಕೆಂದರೆ ಬಂಗಾಳದಲ್ಲಿ ಹೊಸ ಸೂರ್ಯೋದಯವಾಗಿದೆ. ದೇಶದ ಸಂಸ್ಕೃತಿ ಮತ್ತು ಧಾರ್ಮಿಕ ಸ್ವಾತಂತ್ರ್ಯವನ್ನು ಮರಳಿ ಪಡೆದುಕೊಂಡ ಬಂಗಾಳಿಗಳಿಗಂತೂ ಇದು ನವೀನ ಯುಗಾರಂಭವೆಂದೇ ಹೇಳಬೇಕು. ಕಳೆದ ಐದು ದಶಕಗಳ ಕಾಲ ಅಲ್ಲಿಯ ರಾಜಕೀಯ ಪರಿಸ್ಥಿತಿ ಅಷ್ಟರ ಮಟ್ಟಿಗೆ ಹಳಸಿಹೋಗಿತ್ತು. ಸುಮಾರು ಮೂರುವರೆ ದಶಕಗಳ ಕಾಲ ಬಂಗಾಳವನ್ನಾಳಿದ ಕೆಂಪು ಕಮ್ಯುನಿಸ್ಟರನ್ನು ಉಚ್ಚಾಟಿಸಿ ಗದ್ದುಗೇರಿದ್ದ ಮಮತಾ ಬ್ಯಾನರ್ಜಿ ವೋಟ್‌ಬ್ಯಾಂಕ್ ಲಾಲಸೆಯಿಂದ ಕ್ರಮೇಣ ಹಿಂದೂದ್ವೇಷಿ ಧೋರಣೆಯನ್ನು ತೋರ್ಪಡಿಸಿ, ಬಹಿರಂಗವಾಗಿ ಬಾಂಗ್ಲಾ ನುಸುಳುಕೋರ ಮುಸ್ಲಿಮರ ಪರವಾಗಿಯೇ ಆಳಲು ಪ್ರಾರಂಭಿಸಿದ್ದಳು.



ಸ್ಥಳೀಯ ಹಿಂದುಗಳ ಧಾರ್ಮಿಕ ಅಸ್ತಿತ್ವವನ್ನು ಕೊನೆಗಾಣಿಸಿ, ಅವರೆಲ್ಲರ ಮೇಲೆ ದೌರ್ಜನ್ಯಗಳನ್ನು ಕಂಡರೂ ಕಡೆಗಣಿಸಿ, ಸ್ಥಳೀಯರನ್ನು ಹೀನಾಯವಾಗಿ ಹಿಂಸಿಸಲು ಶುರುಮಾಡಿದ್ದಳು. ಕೊನೆಗೂ ಆಕೆಯ ಸರ್ಕಾರ ಜನರ ಆಕ್ರೋಶಕ್ಕೆ ಬಲಿಯಾಗಿ ನುಚ್ಚುನೂರಾಯಿತು. ಬಂಗಾಳಿಗಳು ತಮ್ಮ ಅಸ್ಮಿತೆ ಮತ್ತು ಸಂಸ್ಕೃತಿಯನ್ನು ರಕ್ಷಿಸಲು ಈ ಬಾರಿ ಕಟ್ಟಕಡೆಯ ರೈಲನ್ನು ಸುಮ್ಮನೆ ಹೋಗಲು ಬಿಡಲಿಲ್ಲ. ಅವಕಾಶವನ್ನು ಸದುಪಯೋಗ ಪಡೆಸಿಕೊಂಡರು. ಸಕಾಲದಲ್ಲಿ ಅದನ್ನೇರಿ, ಹಳಿತಪ್ಪಿದ್ದ ತಮ್ಮ ರಾಜ್ಯವನ್ನು ಸರಿದಾರಿಯಲ್ಲಿ ತಂದು ರಕ್ಷಿಸಿದ್ದಾರೆ. ಆದ್ದರಿಂದ ಇದು ಬಂಗಾಳಿ ಅಸ್ಮಿತೆಯನ್ನು ಪುನರ್ ಸ್ಥಾಪಿಸಲು ಹಿಂದುಗಳಿಗೆ ಸಿಕ್ಕಿದ ಪುನರ್ಜನ್ಮವೇ ಸರಿ. ಬಂಗಾಳದಲ್ಲಿ ಇದೊಂದು ಹೊಸ ಯುಗಾರಂಭ. ಅಂದೇ ಗುರುದೇವ ರವೀಂದ್ರನಾಥ ಟಾಗೋರ್ ಅವರ 165 ನೆಯ ಜಯಂತಿಯೂ ಆಗಿರುವುದು 'ಸೋನೆ ಪೆ ಸುಹಾಗ್' ಎನ್ನುವಷ್ಟರ ಮಟ್ಟಿಗೆ ವಿಶೇಷ.

ಅಪ್ರತಿಮ ರಾಷ್ಟ್ರವಾದಿಗಳಾಗಿದ್ದ ಬಂಗಾಳಿಗಳಲ್ಲಿ 1920ರ ನಂತರ ಅದೇಕೆ ಕ್ರಮೇಣ ದೇಶಪ್ರೇಮ ಮತ್ತು ರಾಷ್ಟ್ರಭಕ್ತಿ ಸಡಿಲಗೊಂಡಿತು? ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಂಚೂಣಿಯಲ್ಲಿದ್ದ ಬಂಗಾಳದ ಭೂಮಿಯಿಂದ ನೂರಾರು, ಸಾವಿರಾರು ಪ್ರಖಂಡ ದೇಶಭಕ್ತರು, ಕ್ರಾಂತಿಕಾರಿಗಳು, ಯೋಧರು ಜನ್ಮತಾಳಿದ್ದರು. ನಿಸ್ವಾರ್ಥತೆಯಿಂದ ದೇಶಕ್ಕಾಗಿ ಬಲಿದಾನಗೈದಿದ್ದರು. 1920ರವರೆಗೆ ಸಾಹಿತ್ಯಕೃಷಿಯಲ್ಲಿ ತೊಡಗಿದ್ದ ಬಹುತೇಕ ಎಲ್ಲ ಕವಿಗಳು ಪ್ರಖರ ರಾಷ್ಟ್ರವಾದಿಗಳಾದ್ದರು. ತದನಂತರ ಕೆಲವೊಂದು ಇತಿಹಾಸಕಾರರು ನಿಜೇತಿಹಾಸವನ್ನು ತಿರುಚಿ, ಕಲ್ಪಿತಕತೆಗಳನ್ನು ಸೃಷ್ಟಿಸಿ ಬಂಗಾಳದಲ್ಲಿ ಗೊಂದಲ ಹುಟ್ಟುಹಾಕಿದರು. ಮುಸ್ಲಿಂ ನವಾಬರಿಂದ ತಮ್ಮನ್ನು ರಕ್ಷಿಸಿದ್ದವರನ್ನೇ 'ಮರಾಠಾ ಬೋರ್ಗಿ' ಲೂಟಿಗಾರರೆಂದು ತಪ್ಪಾಗಿ ಬರೆದು ಬಂಗಾಳದ ಇತಿಹಾಸದ ಮೇಲೆ ಅನಾಚಾರವನ್ನೆಸಗಿದರು.

ಉದಾಹರಣೆಗೆ, ದೇಶದಲ್ಲಿ ಪ್ರಥಮ ಬಾರಿಗೆ ಶಿವಾಜಿ ಉತ್ಸವವನ್ನು ಆಚರಿಸಿದ್ದು (ಏಪ್ರಿಲ್ 1896) ಬಂಗಾಳದಲ್ಲಿಯೇ. ಅದರ ಮುಂಚೂಣಿಯಲ್ಲಿದ್ದವರು ಬಾಲಗಂಗಾಧರ ತಿಲಕರು ಮತ್ತು ಗುರುದೇವ ರವೀಂದ್ರನಾಥ ಟಾಗೋರ್. ಶಿವಾಜಿ ಮಹಾರಾಜರ ಹಿಂದವೀ ಸ್ವರಾಜ್ಯದಿಂದಲೂ, ಸ್ವಾಮಿ ದಯಾನಂದ ಸರಸ್ವತಿ ಅವರಿಂದಲೂ ಪ್ರೇರಿತರಾಗಿ ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು, ಅದನ್ನು ನಾನು ಪಡೆದೇ ಪಡೆಯುತ್ತೇನೆ ಎಂದು ಹೂಂಕರಿಸಿದ್ದರು. ಸ್ವರಾಜ್ಯ ಸ್ಥಾಪನೆಗಾಗಿ ಇಡೀ ದೇಶವನ್ನೇ ಜಾಗೃತಗೊಳಿಸಿದ್ದರು. ಆಗ ಅವರಿಗೆ ಸಾಥ್ ನೀಡಿದ್ದು ಗುರುದೇವ ರವೀಂದ್ರರು. ಅವರಂತೂ 'ಶಿಬಾಜಿ ಉತ್ಸಬ್' ಎಂಬ ಬಂಗಾಳಿ ಕವಿತಾ ಪುಸ್ತಕವನ್ನು ಪ್ರಕಟಿಸಿ ಸುಮಾರು 20,000 ಪ್ರತಿಗಳನ್ನು ಹಂಚಿದ್ದರು. ಇದರಲ್ಲಿ ಅವರು ಶಿವಾಜಿ ಮಹಾರಾಜರ ಮತ್ತು ಮರಾಠರ ಮೇಲಿದ್ದ ಗೌರವಾದರಗಳನ್ನು ವ್ಯಕ್ತಪಡಿಸಿದ್ದರು.

ಶಿಬಾಜಿ ಉತ್ಸಬ್ ಪುಸ್ತಕದಲ್ಲಿ ನೀಡಿದ ಕರೆಯ ಭಾವಾರ್ಥ ಹೀಗಿದೆ:

."ಓ ಬೆಂಗಾಳಿಗಳೇ, ನಿಮ್ಮ ಧ್ವನಿಯನ್ನು ಮರಾಠರ ಧ್ವನಿಯೊಡನೆ ಒಂದಾಗಿಸಿ, ಎಲ್ಲರೂ ಒಂದೇ ಕಂಠದಿಂದ 'ಶಿವಾಜಿ ಮಹಾರಾಜರಿಗೆ ಜೈ' ಎಂದು ಘೋಷಣೆ ಕೂಗಿ. ಶಿವಾಜಿ ಮಹೋತ್ಸವದ ಈ ಮಹಾನ್ ಆಚರಣೆಗೆ ಮರಾಠರೂ ಮತ್ತು ಬೆಂಗಾಳಿಗಳೂ ಕೈಜೋಡಿಸಿ ಜೊತೆಜೊತೆಗೆ ಮುಂದೆ ಸಾಗೋಣ. ಭಾರತದ ಪೂರ್ವವೂ ಪಶ್ಚಿಮವೂ, ಬಲವೂ ಎಡವೂ, ಎಲ್ಲರೂ ಒಂದಾಗಿ ಶಿವಾಜಿ ಎಂಬ ಪವಿತ್ರ ನಾಮದ ಮಹಿಮೆಯ ಗುಣಗಾನದಲ್ಲಿ ಓಮ್ಮನಸ್ಸಿನಿಂದ ಹಾಡೋಣ"

ಈ ಕವನದಿಂದ ಗುರುದೇವ ಟಾಗೋರರಿಗೆ ಶಿವಾಜಿ ಮಹಾರಾಜರು ಮತ್ತು ಮರಾಠರೆಂದರೆ ಎಷ್ಟರ ಮಟ್ಟಿನ ಉತ್ಕಟ ಆರಾಧನಾ ಭಾವವಿತ್ತು ಎಂಬುದು ಸ್ಪಷ್ಟವಾಗುತ್ತದೆ. ಏಕೆಂದರೆ ಶಿವಾಜಿ ಉತ್ಸವದಿಂದ ಪ್ರೇರಿತರಾದ ಟಾಗೋರ್ ಅವರ ತಂಗಿಯ ಪುತ್ರಿ ಸರಳಾ ದೇವಿ ಅವರು ಬಂಗಾಳದಲ್ಲಿ 'ಪ್ರತಾಪಾದೀತ್ಯ ಉತ್ಸವ'ವನ್ನು ಆಚರಿಸಲು ತೊಡಗಿದರು. ಮಹಾರಾಜ ಪ್ರತಾಪಾದಿತ್ಯನು (1561–1611) 16ನೇ ಶತಮಾನದ ಪ್ರಬಲ ಬಂಗಾಳಿ ಹಿಂದು ರಾಜ. ಸ್ವತಂತ್ರ ಸಾಮ್ರಾಜ್ಯವನ್ನು ಕಟ್ಟಿ, ಮೊಘಲರನ್ನು ಕಟುವಾಗಿ ವಿರೋಧಿಸಿದವನಾಗಿದ್ದ. ಆತ ದಕ್ಷಿಣ ಬಂಗಾಳವನ್ನು (ಜೆಸ್ಸೋರ್, ಖುಲ್ನಾ, ಬಕರ್‌ಗಂಜ್) ಆಳಿದ ಬಾರೋ ಭುಯನ್ ಮುಖ್ಯಸ್ಥರಲ್ಲಿ ಅತ್ಯಂತ ಪ್ರಮುಖರಾಗಿದ್ದರೂ ಗುರುದೇವರು ಅವನ ಹೆಸರಿನಲ್ಲಿ ಶಿವಾಜಿ ಉತ್ಸವದಂತೆ ಉತ್ಸವವನ್ನು ಆಚರಿಸುವುದನ್ನು ವಿರೋಧಿಸಿದರು. ಏಕೆಂದರೆ, ಅವರಿಗೆ ಶಿವಾಜಿ ಮಹಾರಾಜರ ಆದರ್ಶವು ಎಷ್ಟು ಉದಾತ್ತವಾಗಿತ್ತೆಂದರೆ, ಶಿವಾಜಿ ಮತ್ತು ಪ್ರತಾಪಾದಿತ್ಯರನ್ನು ಒಂದೇ ನೆಲೆಯಲ್ಲಿ ಇಡುವುದನ್ನು ಅವರು ಸುತರಾಂ ಒಪ್ಪಿಕೊಳ್ಳಲಿಲ್ಲ. ಶಿವಾಜಿಯ ಸಾಧನೆಗಳನ್ನು ಇಡೀ ಭಾರತವನ್ನು ಒಂದುಗೂಡಿಸುವ ದೃಷ್ಟಿಕೋನಯೆಂದು ಅವರು ವಾದಿಸುತ್ತಿದ್ದರು. ಶಿವಾಜಿಗೆ ಬೇರೆ ಯಾವುದೇ ರಾಜರು ಸರಿಸಾಟಿಯಲ್ಲ ಎಂದೇ ಅವರ ಅಭಿಮತವಾಗಿತ್ತು. ಕೊನೆಗೆ ಬಂಗಾಳದಲ್ಲಿ 'ಪ್ರತಾಪಾದಿತ್ಯ ಉತ್ಸವ' ಆಚರಣೆಯಾಗಲಿಲ್ಲ. ಕೊನೆಯವರೆಗೂ ಗುರುದೇವ ಟಾಗೋರರು ತಮ್ಮ ಶಿವಾಜಿ ಮಹಾರಾಜರ ಮೇಲಣ ಗೌರವಾದರ ಭಕ್ತಿಗೆ ಕಿಂಚಿತ್ತೂ ಚ್ಯುತಿ ಬಾರದಂತೆ ಜತನದಿಂದ ನೋಡಿಕೊಂಡಿದ್ದರು. ಒಂದುವೇಳೆ ಅವರಿಂದು ಇದ್ದಿದ್ದರೆ, ಶಿವಾಜಿ ಮಹಾರಾಜರನ್ನು ಮತ್ತು ಮರಾಠರನ್ನು ತುಚ್ಛವಾಗಿ ಹೀಯಾಳಿಸುವ ಬಂಗಾಳಿಗಳನ್ನು ತರಾಟೆಗೆ ತೆಗೆದುಕೊಂಡು, ಛೀಮಾರಿ ಹಾಕುತ್ತಿದ್ದರೇನೋ.

ಇನ್ನೊಂದು ಉದಾಹರಣೆ: ಬಂಗಾಳ ಕಂಡ ಇನ್ನೊಬ್ಬ ಅಪ್ರತಿಮ ರಾಷ್ಟ್ರವಾದಿ ಕವಿ ಮತ್ತು ಪ್ರಸಿದ್ಧ ಲೇಖಕ ನವೀನಚಂದ್ರ ಸೇನ್ (1847–1909) ತಮ್ಮ 'ಸಂಗಮತಿ' ಎಂಬ ಬಂಗಾಳಿ ಕವನ ಸಂಕಲನದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಬಗ್ಗೆ ಗಾಢವಾದ ಭಾವಭಕ್ತಿ ಸೂಸುವ ಕವನಗಳ ಮೂಲಕ ಪ್ರಶಂಸೆಯನ್ನು ವ್ಯಕ್ತಪಡಿಸಿದ್ದಾರೆ. ಅವರು ಶಿವಾಜಿ ಮಹಾರಾಜರನ್ನು ಸ್ವಾತಂತ್ರ್ಯ, ಧೈರ್ಯ ಮತ್ತು ಪ್ರತಿರೋಧದ ಪ್ರಬಲ ಮೂರ್ತಿರೂಪವೆಂದು ಚಿತ್ರಿಸಿದ್ದಾರೆ. ಶಿವಾಜಿ ಮಹಾರಾಜರ ಹಿಂದವೀ ಸ್ವರಾಜ್ಯದ ಉದಯದೊಂದಿಗೆ ಲಕ್ಷ್ಮಿಯಂತೆ ಹೊಳೆಯುತ್ತಿದ್ದ ಮೊಘಲ್ ಸಾಮ್ರಾಜ್ಯದ ವೈಭವ ಮತ್ತು ಭಾಗ್ಯ ನಿಧಾನವಾಗಿ ಮಂಕಾಗಿ ಅಂಧಕಾರದಲ್ಲಿ ಲೀನವಾಯಿತು (ವಿನಾಶವಾಯಿತು) ಎಂದು ಅವರು ಬರೆದಿದ್ದಾರೆ.

ಇಂತಹ ಅನೇಕ ಬಂಗಾಳಿ ಕವಿಗಳು ಛತ್ರಪತಿ ಶಿವಾಜಿ ಮಹಾರಾಜರ ಮತ್ತು ಮರಾಠರ ಮೇಲಿನ ತಮ್ಮ ಅದಮ್ಯ ಗೌರವಾದರವನ್ನು ಮುಕ್ತವಾಗಿ ವ್ಯಕ್ತಪಡಿಸಿದ್ದಾರೆ. ಎಲ್ಲದಕ್ಕಿಂತ ಮುಖ್ಯವಾಗಿ ಅವರೆಲ್ಲರೂ ಮೊದಲು ಪ್ರಖರ ರಾಷ್ಟ್ರವಾದಿಗಳಾಗಿದ್ದರು. ಅವರನ್ನು ಹಾಗೆ ಬರೆಯಲು ಪ್ರೇರೇಪಿಸಿದ್ದು ದೇಶಪ್ರೇಮ ಎಂಬ ಏಕಮೇವ ಸೂತ್ರ. ಇದೆಲ್ಲವೂ ಕ್ರಮೇಣ ಬದಲಾಗಲು ಶುರು ಹಚ್ಚಿದ್ದೇ 1920ರ ಅನಂತರ ಸೃಷ್ಟಿಸಿದ 'ಬೋರ್ಗಿ ಮತ್ತು 'ಮಹಾರಾಷ್ಟ್ರ ಪುರಾಣ'ದಂತಹ ಅಸಂಬದ್ಧ ಕಲ್ಪಿತಕತೆಗಳು! ಆದರೆ ಇವೆಲ್ಲದರ ಹೊರತಾಗಿಯೂ ಇಂದಿಗೂ ಬಂಗಾಳಿಗಳ ರಾಷ್ಟ್ರಪ್ರೇಮ ಮತ್ತು ಧರ್ಮ ರಕ್ಷಣೆಗಾಗಿ ಸದಾ ತತ್ಪರರಾಗಿರುವ ಅವರ ಕೆಚ್ಚೆದೆ ಮೆಚ್ಚುವಂತಹದು.

ಈ ಎಲ್ಲ ಕವಿವರೇಣ್ಯರ ಲೇಖನಗಳನ್ನು, ಬರಹಗಳನ್ನು ಮತ್ತು ಕವಿತೆ-ಕಾವ್ಯಗಳನ್ನು ಪುನಃ ಬಂಗಾಳಿ ಸಮಾಜದಲ್ಲಿ ಬಿತ್ತರಿಸಬೇಕು. ಅವರಲ್ಲಿ ಹುದುಗಿದ್ದ ರಾಷ್ಟ್ರ ಚೈತನ್ಯವನ್ನು ಉದ್ದೀಪನಗೊಳಿಸಬೇಕು. ತಮ್ಮ ಸಂಸ್ಕೃತಿ ಮತ್ತು ಅಸ್ಮಿತೆಯನ್ನು ಉಳಿಸಿಕೊಂಡ ಬಂಗಾಳಿಗಳಿಗೆ ಕೋಟಿಕೋಟಿ ಪ್ರಣಾಮಗಳು.

ಅಭಿಮಾನೋತ್ಸವಕ್ಕೆ ಸಕಲ ಸಿದ್ಧತೆ

ಪುಟ ೩➡ ಈ ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧೆಡೆಗಳಿಂದ ಯಡಿಯೂರಪ್ಪನವರ ಸುಮಾರು 10 ಲಕ್ಷ ಸಂಖ್ಯೆಯ ಅಭಿಮಾನಿಗಳು ಆಗಮಿಸಲಿದ್ದಾರೆ. ರಾಜ್ಯದ ವಿವಿಧ 1000 ಮಠಾಧೀಶರು ಭಾಗವಹಿಸಲಿದ್ದಾರೆ ಎಂದರು.

ಈ ಕಾರ್ಯಕ್ರಮಕ್ಕೆ ಕೇಂದ್ರ ಗೃಹಸಚಿವರಾದ ಅಮಿತ್ ಶಾ ಆಗಮಿಸಲಿದ್ದಾರೆ. ಮೇ 9ರಂದು ಬೆಳಗ್ಗೆ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ನೂತನ ಮುಖ್ಯಮಂತ್ರಿಗಳ ಪ್ರಮಾಣವಚನ ಸಮಾರಂಭ ನಡೆಯಲಿದೆ. ಹಾಗಾಗಿ ಅಮಿತ್ ಶಾ ಅವರು ಮಧ್ಯಾಹ್ನದ ನಂತರ ಇಲ್ಲಿಗೆ ಆಗಮಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಮೊದಲು ನಿಗದಿಪಡಿಸಿದ್ದ ಸಮಯ ಬದಲಾಯಿಸಿ ಮಧ್ಯಾಹ್ನ 2 ರಿಂದ 5 ಗಂಟೆಯವರೆಗೆ ಕಾರ್ಯಕ್ರಮ ನಡೆಸಲಾಗುವುದು. ಮಧ್ಯಾಹ್ನ 3.45ರ ವೇಳೆಗೆ ಕೇಂದ್ರ ಗೃಹಸಚಿವ ಅಮಿತ್ ಶಾ ಆಗಮಿಸಲಿದ್ದಾರೆ ಎಂದು ತಿಳಿಸಿದರು.

ರಾಜ್ಯದ ಎಲ್ಲಾ ಮಠಾಧೀಶರನ್ನು ಭೇಟಿ ಮಾಡಿ ಕಾರ್ಯಕ್ರಮಕ್ಕೆ ಆಹ್ವಾನಿಸಬೇಕೆಂಬ ಅಭಿಲಾಷೆ ಇತ್ತು. ಆದರೆ ಸಮಯದ ಕೊರತೆ, ಕೆಲಸದ ಒತ್ತಡದಿಂದ ಆಗುತ್ತಿಲ್ಲ. ಹಾಗಾಗಿ ಎಲ್ಲಾ ಮಠಾಧೀಶರು ಕಾರ್ಯಕ್ರಮಕ್ಕೆ ಆಗಮಿಸಿ ಯಡಿಯೂರಪ್ಪ ಅವರಿಗೆ ಆಶೀರ್ವಾದ ಮಾಡಬೇಕೆಂದು ಮನವಿ ಮಾಡಿದ ಅವರು, ರಾಜ್ಯದ ವಿವಿಧೆಡೆಗಳಿಂದ ಸುಮಾರು 10 ಸಾವಿರ ಬಸ್‌ಗಳು ಹಾಗೂ 40 ರಿಂದ 60 ಸಾವಿರ ಕಾರು ಮತ್ತಿತರ ಲಘುವಾಹನಗಳು ಆಗಮಿಸಲಿವೆ. ನಮ್ಮ ನಿರೀಕ್ಷೆಗೂ ಮೀರಿ ಜನರಿಂದ ಸ್ಪಂದನೆ ಸಿಗುತ್ತಿದ್ದು, ಕಾರ್ಯಕ್ರಮ ಯಶಸ್ವಿಯಾಗಲಿದೆ ಎಂದು ಹೇಳಿದರು.

ಶಾಸಕರಾದ ಹರೀಶ್ ಪೂಂಜ, ರಘು ಕೌಟಿಲ್ಯ, ಭಾಸ್ಕರ್‌ರಾವ್, ಮಾಜಿ ಶಾಸಕರಾದ ಜಿ.ಎಚ್. ತಿಪ್ಪಾರೆಡ್ಡಿ , ಎಸ್.ಕೆ. ಬಸವರಾಜನ್, ರಾಜ್ಯ ಕಾರ್ಯದರ್ಶಿ ತಮ್ಮೇಶ್ ಗೌಡ, ಲಿಂಗಮೂರ್ತಿ, ಮಲ್ಲಿಕಾರ್ಜುನ್, ಸಂಪತ್ ಕುಮಾರ್, ಸೌಭಾಗ್ಯ ಬಸವರಾಜನ್, ನಗರಾಧ್ಯಕ್ಷ ಲೋಕೇಶ್, ಗ್ರಾಮಾಂತರ ಅಧ್ಯಕ್ಷ ನಾಗರಾಜ್, ಸೋಮೇಂದ್ರ, ನಾಗರಾಜ್ ಬೇದ್ರೆ, ದಗ್ಗೆ ಶಿವಪ್ರಕಾಶ್, ಯಶವಂತ ಸೇರಿದಂತೆ ಮತ್ತಿತರರಿದ್ದರು.

ಸಾಂಸ್ಕೃತಿಕ ಹಬ್ಬದಂತೆ ಆಚರಣೆ: ಸಂಸದ ಗೋವಿಂದ ಕಾರಜೋಳ

ಮಾಜಿ ಉಪಮುಖ್ಯಮಂತ್ರಿ ಮತ್ತು ಸಂಸದ ಗೋವಿಂದ ಕಾರಜೋಳ ಮಾತನಾಡಿ, ಬಿ.ಎಸ್. ಯಡಿಯೂರಪ್ಪನವರ 50 ವರ್ಷಗಳ ಸಮಾಜ ಸೇವೆ, ಜೀವನ ಚರಿತ್ರೆಯ ಕಾರ್ಯಕ್ರಮವನ್ನು ಒಂದು ಸಾಂಸ್ಕೃತಿಕ ಹಬ್ಬದ ರೀತಿ ಆಚರಿಸಲು ನಿರ್ಧರಿಸಿದ್ದೇವೆ. ಮೇ 8ರಂದು ಸಂಜೆ ಯಡಿಯೂರಪ್ಪನವರ ಪುರ ಪ್ರವೇಶ ನಡೆಯಲಿದೆ. 24 ಜಾನಪದ ಕಲಾತಂಡಗಳು ಮೆರವಣಿಗೆಯಲ್ಲಿ ಭಾಗವಹಿಸಲಿವೆ ಎಂದು ಹೇಳಿದರು.

ಬಿಎಸ್‌ವೈ ಕುರಿತ 2 ಪುಸ್ತಕ ಲೋಕಾರ್ಪಣೆ

ಪುಟ ೩➡ ಯಡಿಯೂರಪ್ಪ ಅವರ ಜೀವನ ಚರಿತ್ರೆಯ ಕೆಂದಾವರೆ–ಕಮಲ ಅರಳಿದ ಕಥೆ ಹಾಗೂ ಯಡಿಯೂರಪ್ಪ ಅವರ ಸುದೀರ್ಘ ಶಾಸಕತ್ವದ ಅವಧಿಯಲ್ಲಿ ವಿಧಾನ ಮಂಡಲದ ಉಭಯ ಸದನದಲ್ಲಿ ಮಾಡಿದ ಭಾಷಣಗಳ ಸಂಗ್ರಹಗಳುಳ್ಳ ಸದನ ಶಿಕಾರಿ–ಯಡಿಯೂರಪ್ಪ ಅವರ ಗುಡುಗಿನ ನುಡಿಗಳು ಎಂಬ ಎರಡೂ ಪುಸ್ತಕಗಳನ್ನು ಕೇಂದ್ರ ಗೃಹ ಸಚಿವ ಅಮಿತ್ ಅವರು ಲೋಕಾರ್ಪಣೆಗೊಳಿಸಲಿದ್ದಾರೆ. ಕೆಂದಾವರೆ–ಕಮಲ ಅರಳಿದ ಕಥೆ ಪುಸ್ತಕದಲ್ಲಿ ಯಡಿಯೂರಪ್ಪ ಅವರು ಹೇಳಿಕೊಂಡಿರುವ ವಿವರವನ್ನು ಬರಹಗಾರ ಆರ್.ರಘು (ಕೌಟಿಲ್ಯ) ನಿರೂಪಿಸಿದ್ದಾರೆ. ಅವರ ಬಾಲ್ಯದಿಂದ ಈವರೆಗಿನ ಪ್ರಮುಖ ಘಟ್ಟಗಳನ್ನು ಈ ಪುಸ್ತಕದಲ್ಲಿ ದಾಖಲಿಸಲಾಗಿದೆ. ಸದನ ಶಿಕಾರಿ–ಯಡಿಯೂರಪ್ಪ ಅವರ ಗುಡುಗಿನ ನುಡಿಗಳು ಪುಸ್ತಕ ಹೋರಾಟದ ಹಿನ್ನೆಲೆಯಿಂದ ಬಂದ ಯಡಿಯೂರಪ್ಪ ಅವರು ತಮ್ಮ ಶಾಸಕತ್ವದ ಅವಧಿಯಲ್ಲಿ ವಿರೋಧ ಪಕ್ಷದಲ್ಲಿರಲಿ ಆಡಳಿದ ಪಕ್ಷದಲ್ಲಿರಲಿ ಜನಪರ ವಿಚಾರಗಳು, ರೈತರ ಸಂಕಷ್ಟಗಳು, ನಾಡಿನ ಹಿತಾಸಕ್ತಿಯ ವಿಚಾರ ಬಂದಾಗ ಸದನದಲ್ಲೂ ಹೋರಾಟಕ್ಕಿಳಿದು ಗುಡುಗಿ ಮಾತನಾಡಿದ್ದಾರೆ. ಅಂಕಿ–ಸಂಖ್ಯೆಗಳ ಸಹಿತ ಆಧಾರಗಳನ್ನು ಇಟ್ಟುಕೊಂಡು ಮಾತನಾಡಿರುವುದೇ ಹೆಚ್ಚು. ಯಡಿಯೂರಪ್ಪ ಗುಡುಗಿದರೆ ವಿಧಾನಸೌಧ ನಡುಗುತ್ತದೆ ಎಂಬ ಮಾತು ಜನಮಾನಸದಲ್ಲಿ ಹಾಸುಹೊಕ್ಕಾಗಿದೆ. ಈ ಹಿನ್ನೆಲೆಯಲ್ಲಿ ಅವರ ಐದು ದಶಕಗಳ ಸುದೀರ್ಘ ಅವಧಿಯಲ್ಲಿ ವಿಧಾನ ಮಂಡಲದಲ್ಲಿ ಮಾತನಾಡಿರುವ ದಾಖಲೆಗಳು 15,000 ಪುಟಗಳನ್ನು ಮೀರುತ್ತವೆ ಇದನ್ನು ಪರಿಷ್ಕರಿಸಿ ಹತ್ತು ಸಂಪುಟಗಳಲ್ಲಿ ತರುವ ಯೋಚನೆಯಿದ್ದು, ಮೊದಲ ಸಂಪುಟವನ್ನು ಶನಿವಾರ ಬಿಡುಗಡೆಗೊಳಿಸಲಾಗುತ್ತಿದೆ. ಬರಹಗಾರ ಆರ್. ರಘು (ಕೌಟಿಲ್ಯ) ಅವರ ಪರಿಕಲ್ಪನೆಯಲ್ಲಿ ಮೂಡಿಬಂದಿರುವ ಈ ಪುಸ್ತಕವನ್ನು ಡಾ. ರೇವಯ್ಯ ಒಡೆಯರ್ ಸಂಪಾದಿಸಿದ್ದಾರೆ.

ರಾಮಚಂದ್ರ ರಾವ್ ಅಮಾನತು ರದ್ದು

• **ಬೆಂಗಳೂರು:** ಶಿಸ್ತು ಕ್ರಮದ ಹಿನ್ನೆಲೆಯಲ್ಲಿ ಅಮಾನತುಗೊಂಡಿದ್ದ ಹಿರಿಯ ಐಪಿಎಸ್ ಅಧಿಕಾರಿ ಡಾ. ಕೆ.ರಾಮಚಂದ್ರ ರಾವ್ ಅಮಾನತನ್ನು ರಾಜ್ಯ ಸರ್ಕಾರವು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿ ಸರ್ಕಾರ ಆದೇಶಿಸಿದೆ. ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಮಹಾನಿರ್ದೇಶಕರಾಗಿದ್ದ ರಾಮಚಂದ್ರರಾವ್ ಅವರ ವಿರುದ್ಧ ಶಿಸ್ತು ಕ್ರಮದ ವಿಚಾರಣೆ ಬಾಕಿ ಇದ್ದ ಕಾರಣ, ಅಖಿಲ ಭಾರತ ಸೇವೆಗಳ (ಶಿಸ್ತು ಮತ್ತು ಅಪೀಲು) ನಿಯಮಗಳ ಅಡಿಯಲ್ಲಿ 2026ರ ಜ.19 ರಂದು ಅಮಾನತುಗೊಳಿಸಲಾಗಿತ್ತು. ತದನಂತರ ಮಾ.18 ರಂದು ಅವರ ವಿರುದ್ಧ ಅಧಿಕೃತವಾಗಿ ಶಿಸ್ತು ಕ್ರಮದ ಪ್ರಕ್ರಿಯೆಗಳನ್ನು ಪ್ರಾರಂಭಿಸಲಾಗಿತ್ತು.

ಇದೀಗ ಅವರ ಅಮಾನತನ್ನು ರದ್ದುಗೊಳಿಸಿ ಆಡಳಿತ ಸುಧಾರಣಾ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಸಂಜಯ್ ಬಿ.ಎಸ್. ಅವರು ಆದೇಶ ಹೊರಡಿಸಿದ್ದಾರೆ.

ಮರು ನೇಮಕ ಮತ್ತು ಹೊಸ ಜವಾಬ್ದಾರಿ: ಪ್ರಸ್ತುತ ಸರ್ಕಾರವು ಅಧಿಕಾರಿಯ ಅಮಾನತನ್ನು ರದ್ದುಗೊಳಿಸಿದ್ದು, ಅವರನ್ನು ಮತ್ತೆ ಸೇವೆಗೆ ಸೇರಿಸಿಕೊಂಡಿದೆ. ಮರು ನೇಮಕಗೊಂಡ ಡಾ. ಕೆ. ರಾಮಚಂದ್ರರಾವ್ ಅವರನ್ನು ಮುಂದಿನ ಆದೇಶದವರೆಗೆ ಪೊಲೀಸ್ ಮ್ಯಾನ್ಯುವಲ್ ವಿಭಾಗದ ಮಹಾನಿರ್ದೇಶಕರನ್ನಾಗಿ (ಡಿಜಿಪಿ) ನೇಮಕ ಮಾಡಲಾಗಿದೆ.

ಈ ಪೊಲೀಸ್ ಮ್ಯಾನ್ಯುವಲ್ ಡಿಜಿಪಿ ಹುದ್ದೆಯು ಸಿಐಡಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳ ವಿಭಾಗದ ಡಿಜಿಪಿ ಹುದ್ದೆಗೆ ಸಮಾನವಾದ ಸ್ಥಾನಮಾನ ಮತ್ತು ಜವಾಬ್ದಾರಿಗಳನ್ನು ಹೊಂದಿರುತ್ತದೆ ಎಂದು ಸರ್ಕಾರದ ಆದೇಶದಲ್ಲಿ ತಿಳಿಸಲಾಗಿದೆ.

ಪ್ರಕರಣದ ಹಿನ್ನೆಲೆ: ಕಳೆದ ಕೆಲವು ದಿನಗಳಿಂದ ಡಿಜಿಪಿ ರಾಮಚಂದ್ರ ರಾವ್ ಅವರು ತಮ್ಮ ಅಧಿಕೃತ ಕಚೇರಿಯಲ್ಲಿಯೇ ಮಹಿಳೆಯೊಬ್ಬರ ಜತೆ ಇರುವ ದೃಶ್ಯಗಳು ಹರಿದಾಡುತ್ತಿದ್ದವು. ಇದು ಸಾರ್ವಜನಿಕ ವಲಯದಲ್ಲಿ ಭಾರೀ ಆಕ್ರೋಶಕ್ಕೆ ಕಾರಣವಾಗಿತ್ತು. ಒಬ್ಬ ಜವಾಬ್ದಾರಿಯುತ ಉನ್ನತ ಹುದ್ದೆಯಲ್ಲಿದ್ದುಕೊಂಡು ಇಂತಹ ಕೃತ್ಯ ಎಸಗಿರುವುದು ಸೇವಾ ನಿಯಮಗಳ ಉಲ್ಲಂಘನೆ ಎಂದು ಪರಿಗಣಿಸಿದ ಸರ್ಕಾರ, ಶಿಸ್ತು ಕ್ರಮವಾಗಿ ಅಮಾನತು ಆದೇಶ ನೀಡಿತ್ತು. ಈ ಘಟನೆಗೆ ಸಂಬಂಧಿಸಿದಂತೆ ಆಡಿಯೋ ಮತ್ತು ವಿಡಿಯೋಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಮತ್ತು ಕಾನೂನು ಕ್ರಮಕ್ಕಾಗಿ ಇಲಾಖಾ ತನಿಖೆಗೆ ಸೂಚಿಸಲಾಗಿತ್ತು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಅಮೇರಿಕಾದ ಅಧ್ಯಕ್ಷ ಟ್ರಂಪ್ ಅವರನ್ನು ಕಂಡರೆ ಭಾರತದಲ್ಲಿ ಕೆಲವರಿಗೆ ಭಯ
– ಪ್ರಧಾನಿ ಮೋದಿಗೆ ಸಂತೋಷ್ ಲಾಡ್ ವ್ಯಂಗ್ಯ

–ಹಾಗೆಯೇ ಭಾರತದ ಸಕಲ ಸವಲತ್ತುಗಳನ್ನು ಅನುಭವಿಸಿ ಮೆರೆಯುತ್ತಿರುವ ಇನ್ನು ಕೆಲವು ಮಹಾನ್ ನಾಯಕರಿಗೆ ಪಾಕಿಸ್ತಾನದ ಅಧ್ಯಕ್ಷರನ್ನು ಕಂಡರೆ ಪ್ರೀತಿ ಸಹಿತ ಭೀತಿ!

ದಿನ ಭವಿಷ್ಯ

ಮೇಷ ನಿಮ್ಮ ಬದುಕಲ್ಲಿ ಹೊಸ ಬೆಳವಣಿಗೆ ಉಂಟಾದೀತು. ನಿರ್ಧಾರ ಫಲ ನೀಡಲಿದೆ. ಮುಖ್ಯ ಗುರಿ ಸಾಧಿಸಲ್ಪಡಲಿದೆ. ಕೌಟುಂಬಿಕ ಸಾಮರಸ್ಯ.

ವೃಷಭ ಸರಿಯಾದ ದಿಕ್ಕಿನಲ್ಲಿ ನಿಮ್ಮ ಶ್ರಮ ವ್ಯಯಿಸಿ. ಉತ್ತಮ ಫಲ ಪಡೆಯುವಿರಿ. ವ್ಯರ್ಥ ಕಾರ್ಯ ಎಸಗಬೇಡಿ. ವಾಗ್ವಾದ ನಡೆಸಬೇಡಿ.

ಮಿಥುನ ನಿಮ್ಮ ಉದ್ದೇಶ ಈಡೇರಿಸಲು ಸೂಕ್ತ ದಿನ. ಅಡ್ಡಿ ಎದುರಾಗದು. ಹೆಚ್ಚು ಹೊಣೆಗಾರಿಕೆ ನಿಮ್ಮನ್ನು ಬಸವಳಿಸಬಹುದು. ಅನಿರೀಕ್ಷಿತ ಧನಪ್ರಾಪ್ತಿ.

ಕಟಕ ನೀರಸವಾಗಿ ದಿನ ಆರಂಭವಾದರೂ ಬಳಿಕ ಆಪ್ತರ ಭೇಟಿಯಿಂದ ಉತ್ಸಾಹ ತುಂಬಿಕೊಳ್ಳುವಿರಿ. ಕಾರ್ಯದಲ್ಲಿ ಯಶಸ್ಸು. ಧನಾಗಮ.

ಸಿಂಹ ಚಿಂತೆಯಿಲ್ಲದ ಸ್ಥಿರ ದಿನ. ಕೆಲವು ವಿಚಾರ ನಿಮಗೆ ಪೂರಕವಾಗಿ ಸಾಗುವುದು ನೆಮ್ಮದಿ ತರಲಿದೆ. ವಿರೋಧಿಗಳ ತಂತ್ರ ಫಲಿಸದು.

ಕನ್ಯಾ ವೃತ್ತಿಯಲ್ಲಿ ಕಷ್ಟ ಎದುರಿಸುವಿರಿ. ಆದರಿದು ನಿಮ್ಮ ಕೌಟುಂಬಿಕ ಬದುಕಿನ ಮೇಲೆ ಪರಿಣಾಮ ಬೀರದು. ಆತ್ಮೀಯರ ಒಡನಾಟ ಮುದ ತರಲಿದೆ.

ತುಲಾ ನೆಗೆಟಿವ್ ಚಿಂತನೆ ಮನಸ್ಸನ್ನು ಆವರಿಸಲಿದೆ. ಈ ಸ್ಥಿತಿಯಲ್ಲಿ ಯಶಸ್ಸು ಸಿಗಲಾರದು. ಮೊದಲಿಗೆ ನಿಶ್ಚಿಂತ ಮನೋಭಾವ ರೂಪಿಸಿಕೊಳ್ಳಿ.

ವೃಶ್ಚಿಕ ಕಠಿಣ ದಿನ. ದಿನವಿಡೀ ಅಶಾಂತ ಮನಸ್ಸು. ಸಂಗಾತಿ ಜತೆ ವಾಗ್ವಾದಕ್ಕೆ ಹೋಗದಿರಿ. ದೇವರ ಪ್ರಾರ್ಥನೆ ನೆಮ್ಮದಿ ತರಬಹುದು.

ಧನು ಕೆಲವಾರು ಒಳ್ಳೆಯ ಬೆಳವಣಿಗೆ ಸಂಭವಿಸಲಿದೆ. ಕೌಟುಂಬಿಕ ವಿಚಾರ ಮಾತ್ರ ಭಾವನಾತ್ಮಕ ಏರುಪೇರಿಗೆ ಕಾರಣವಾಗುವುದು. ಆರ್ಥಿಕ ಸ್ಥಿರತೆ.

ಮಕರ ಸಣ್ಣ ವಿಷಯವೊಂದು ಮನಸ್ಸಿನ ನೆಮ್ಮದಿ ಕಲಕಬಹುದು. ಅದನ್ನು ಸರಿಯಾಗಿ ನಿಭಾಯಿಸಿ. ಆತ್ಮೀಯರ ಜತೆ ಸಹನೆಯಿಂದ ವರ್ತಿಸಿ.

ಕುಂಭ ಈ ದಿನ ಅಡ್ಡಿಗಳನ್ನು ಎದುರಿಸುವಿರಿ. ಪ್ರಮುಖ ಕಾರ್ಯ ಮುಂದೂಡಿ. ಆಪ್ತರ ಜತೆ ನಿಮ್ಮ ಚಿಂತೆ ಹಂಚಿಕೊಳ್ಳಿ. ಹೆಚ್ಚುತ್ತಿರುವ ವೆಚ್ಚ ಚಿಂತೆ ತರಲಿದೆ.

ಮೀನ ವೃತ್ತಿಯಲ್ಲೂ ಖಾಸಗಿ ಬದುಕಲ್ಲೂ ಏಳಿಗೆ. ದೀರ್ಘ ಕಾಲದ ಸಮಸ್ಯೆ ಪರಿಹಾರ. ಖಾಸಗಿ ಬದುಕಲ್ಲಿ ಹೊಸ ವ್ಯಕ್ತಿ ಪ್ರವೇಶಿಸಬಹುದು.

ರಾಹುಕಾಲ: 1.30–3.00
ಗುಳಿಕಕಾಲ: 9.00–10.30

ಅದೃಷ್ಟ ಸಂಖ್ಯೆ : 5,3,8,2

ವಿದ್ಯಾರ್ಥಿಗಳಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಕರೆ

ನಿರಂತರ ಕಲಿಕೆ ಅಗತ್ಯ

• **ಶಿವಮೊಗ್ಗ :** ಸ್ಪರ್ಧಾತ್ಮಕ ಯುಗದಲ್ಲಿ ನಿರಂತರ ಕಲಿಕೆ ಮತ್ತು ಸಾಮಾಜಿಕ ಜವಾಬ್ದಾರಿ ಬಹಳ ಮುಖ್ಯವಾಗಿದ್ದು, ಜ್ಞಾನ ಮತ್ತು ಕೌಶಲ್ಯಗಳನ್ನು ಕಾಲಕ್ಕೆ ತಕ್ಕಂತೆ ನವೀಕರಿಸಿಕೊಂಡು ಪ್ರಗತಿ ಸಾಧಿಸಬೇಕು ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ವಿದ್ಯಾರ್ಥಿಗಳಿಗೆ ಕರೆ ನೀಡಿದರು.



ಶಂಕರಘಟ್ಟದ ಕುವೆಂಪು ವಿಶ್ವವಿದ್ಯಾಲಯದಲ್ಲಿ ಬುಧವಾರ ಏರ್ಪಡಿಸಿದ್ದ 35ನೇ ವಾರ್ಷಿಕ ಘಟಿಕೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸೋಲುಗಳು ಜೀವನದ ಭಾಗ, ಆದರೆ ಅವುಗಳಿಂದ ಕಲಿತು ಮುಂದೆ ಸಾಗುವುದೇ ನಿಜವಾದ ಯಶಸ್ಸು ಎಂದರು.

ಇಲ್ಲಿ ಪಡೆದ ಶಿಕ್ಷಣವು ನಿಮ್ಮ ವೃತ್ತಿಜೀವನವನ್ನು ಯಶಸ್ವಿಗೊಳಿಸುವುದಲ್ಲದೆ, ಜೀವನವನ್ನು ಸಾರ್ಥಕಗೊಳಿಸಲು ಸಹಕಾರಿಯಾಗಲಿದೆ. ಜಗತ್ತು ಇಂದು ಕ್ಷಿಪ್ರ ಬದಲಾವಣೆಯ ಹಂತದಲ್ಲಿದೆ. ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆ (ಫ್ಲಟ ಡಬಿರಿಜಿಟ್ಲ) ಜೀವನದ ಪ್ರತಿಯೊಂದು ಕ್ಷೇತ್ರವನ್ನು ಪ್ರಭಾವಿಸಿದೆ. ಕೃತಕ ಬುದ್ಧಿಮತ್ತೆ (ಎಐ), ಡೇಟಾ ಸೈನ್ಸ್ ಮತ್ತು ಡಿಜಿಟಲ್ ಕ್ರಾಂತಿಯು ಹೊಸ ಅವಕಾಶಗಳ ಜೊತೆಗೆ ಹೊಸ ಸವಾಲುಗಳನ್ನೂ ತಂದೊಡ್ಡಿದೆ ಎಂದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ದೇಶವು ಇಂದು ವಿಕಸಿತ ಭಾರತ 2047ರ ಸಂಕಲ್ಪದೊಂದಿಗೆ ಹೊಸ ಯುಗದತ್ತ ಸಾಗುತ್ತಿದೆ. ಈ ಸಂಕಲ್ಪವನ್ನು ಸಾಕಾರಗೊಳಿಸುವಲ್ಲಿ ಯುವಕರ ಪಾತ್ರ ಮುಖ್ಯವಾಗಿದೆ. ಹೊಸ ಶಿಕ್ಷಣ ನೀತಿ (NEP 2020) ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಹೆಚ್ಚು ಕೌಶಲ್ಯ ಆಧಾರಿತ ಮತ್ತು ಸಮಗ್ರವಾಗಿಸಿದೆ. ಶಿಕ್ಷಣವು ಕೇವಲ ಪದವಿ ಪಡೆಯುವ ಸಾಧನವಲ್ಲ, ಅದು ನೈತಿಕತೆ ಮತ್ತು ಸಾಮಾಜಿಕ ಜವಾಬ್ದಾರಿಯ ಅಡಿಪಾಯವಾಗಿದೆ.

ಜಾಗತಿಕ ತಾಪಮಾನ ಏರಿಕೆ ಮತ್ತು ಪರಿಸರ ಮಾಲಿನ್ಯದಂತಹ ಸವಾಲುಗಳ ಬಗ್ಗೆಯೂ ನೀವು ಗಮನಹರಿಸಬೇಕು. ಈ ನಿಟ್ಟಿನಲ್ಲಿ ಸಕಾರಾತ್ಮಕವಾಗಿ ಸ್ಪಂದಿಸಬೇಕು. ಪದವೀಧರರು ಕೇವಲ ಉದ್ಯೋಗ ಹುಡುಕುವವರಾಗದೆ, ಉದ್ಯೋಗ ಸೃಷ್ಟಿಕರ್ತರಾಗಬೇಕು. ಸ್ಟಾರ್ಟಪ್ ಸಂಸ್ಕೃತಿ ಮತ್ತು ಉದ್ಯಮಶೀಲತೆಯ ಮೂಲಕ ಸಮಾಜಕ್ಕೆ ಹೊಸ ಸಾಧ್ಯತೆಗಳನ್ನು ಸೃಷ್ಟಿಸುವಂತೆ ಕರೆ ನೀಡಿದರು.ಸಿವಿಲ್, ಮೆಕ್ಯಾನಿಕಲ್ ಮೊದಲಾದ ಸಂಪ್ರದಾಯಿಕ ಇಂಜಿನಿಯರಿಂಗ್ ಕೋರ್ಸ್‌ಗಳ ನಿರ್ಲಕ್ಷ್ಯ ಮಾಡಲಾಗಿದೆ. ಹೀಗಾಗಿ ಈ ಕೋರ್ಸ್‌ಗಳನ್ನು ಮಾಡಿದವರಿಗೆ ಉತ್ತೇಜನ ನೀಡಲು ಸರ್ಕಾರ ಚಿಂತನೆ ನಡೆಸಿದ್ದು, ಪಠ್ಯ ಬದಲಾವಣೆಯಂತಹ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು. ಬಿಎ ಪದವಿ ದಾಖಲಾಗುವ ಸಂಖ್ಯೆ ಕಡಿಮೆಯಾಗುತ್ತಿದೆ. 70 ಸಾವಿರ ಸೀಟು ಮುಚ್ಚುವ ಸ್ಥಿತಿ ಬಂದಿದೆ. 19 ಸಾವಿರ ಸೀಟುಗಳು ಹೊಸದಾಗಿ ಆರಂಭಿಸಲಾಗುತ್ತಿದ್ದು ರಿಟೈಲ್, ಇ ಕಾಮರ್ಸ್ ಸೇರಿದಂತೆ ನಾಲ್ಕು ವಿಭಾಗಗಳಲ್ಲಿ 3840 ಹೊಸ ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗುತ್ತಿದೆ. ಹಲವಾರು ಹೊಸ ಪ್ರಯೋಗ ಮಾಡುತ್ತಿದ್ದು, ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ಸಹಯೋಗದಲ್ಲಿ ಕೌಶಲ್ಯಕ್ಕೆ ಒತ್ತು ನೀಡಲಾಗುತ್ತಿದೆ. 40 ಪದವಿ ಕಾಲೇಜುಗಳನ್ನು ಮಾದರಿ ಕಾಲೇಜಾಗಿಸಲು ಲ್ಯಾಬ್ ಸ್ಥಾಪನೆ ಮತ್ತು ತರಬೇತಿ ನೀಡಲಾಗುತ್ತದೆ ಎಂದರು.ವಿವಿ ಕುಲಪತಿ ಪ್ರೊ ಶರತ್ ಅನಂತಮೂರ್ತಿ, ಕುಲಸಚಿವರಾದ ಹೇಮಂತ್ ಎನ್, ಪ್ರೊ. ತಿಮ್ಮರಾಯಪ್ಪ ಹಾಗೂ ಸಿಂಡಿಕೇಟ್ ಸದಸ್ಯರು ಇದ್ದರು.

ಸಂಶೋಧನೆಗೆ ಒತ್ತು ನೀಡಿ

ಕುವೆಂಪು ವಿವಿ ಶೈಕ್ಷಣಿಕವಾಗಿ ಸಾಕಷ್ಟು ಸಾಧನೆ ಮಾಡಿದ್ದರೂ ಹಲವು ಸಮಸ್ಯೆಗಳಿಂದ ಬಳಲುತ್ತಿದೆ. ಗುಣಮಟ್ಟದ ಶಿಕ್ಷಣದೊಂದಿಗೆ ಸಂಶೋಧನೆಗೆ ಒತ್ತು ನೀಡಬೇಕು. ಅಭಿವೃದ್ಧಿ ಹೊಂದುವಲ್ಲಿನ ಸವಾಲುಗಳನ್ನು ದಿಟ್ಟವಾಗಿ ಎದುರಿಸಬೇಕಿದೆ ಎಂದರು. ಎಂಜಿನಿಯರಿಂಗ್ ಪದವಿ ಪಡೆಯುತ್ತಿರುವವರಲ್ಲಿ ಕೇವಲ ಶೇ.17ರಷ್ಟು ಮಾತ್ರ ಉದ್ಯೋಗ ಲಭಿಸುತ್ತಿದೆ. ದೂರದೃಷ್ಟಿ ಕೊರತೆ ಮತ್ತು ಕೇವಲ ಕಂಪ್ಯೂಟರ್ ಸಂಬಂಧಿ ಕೋರ್ಸ್ ಬೇಕೆಂಬ ಆಸೆಯಿಂದಾಗಿ ಸೀಟ್‌ಗಳನ್ನು ಹೆಚ್ಚಿಸಿಕೊಳ್ಳಲಾಗಿದೆ. ಹೀಗಾಗಿ ಕಂಪ್ಯೂಟರ್ ಸೀಟ್‌ಗಳ ನಿಯಂತ್ರಣಕ್ಕೆ ಕ್ರಮಕೈಗೊಳ್ಳಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ತಿಳಿಸಿದರು.

ಮಗನನ್ನು ಪತ್ತೆ ಹಚ್ಚಿದ ನ್ಯಾಟ್‌ಗ್ರೀಡ್ ತಂತ್ರಾಂಶ

ಪುಟ ೩➡ ನನಗೆ ಸಾಲ ಬಹಳ ಆಗಿದ್ದರಿಂದ ನಾನು ಮನೆ ಬಿಟ್ಟು ಬೇರೆ ಕಡೆಗೆ ದುಡಿಯಲು ಹೋಗುತ್ತಿದ್ದೇನೆ. 2 ವರ್ಷ ಬಿಟ್ಟು ಬರುತ್ತೇನೆ. ನನ್ನನ್ನು ಹುಡುಕಾಡಬೇಡಿ ಎಂದು ಪತ್ರ ಬರೆದು ಮುಸ್ತಫಾ ಅಪ್ಪಾಸಾಬ ಮನೆ ಬಿಟ್ಟು ಹೋಗಿದ್ದ.

ಈ ಕುರಿತು ಸಂಕೇಶ್ವರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ: 109/2023 ಕಲಂ: ಅಡಿ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿತ್ತು. ಕಾಣೆಯಾದ ಮುಸ್ತಫಾ ಅಪ್ಪಾಸಾಹೇಬ ಅಲಿಯಾಸ್ ಅಪ್ಪಾಸಾಬ ಜಮಾದಾರ ಪತ್ತೆ ಮಾಡಲು ನಾನಾ ರೀತಿಯ ಪ್ರಯತ್ನ ಮಾಡಿದಾಗ ಕೊನೆಗೆ ಕಾಣೆಯಾದ ವ್ಯಕ್ತಿಯ ಭಾವಚಿತ್ರವನ್ನು ನ್ಯಾಟ್ ಗ್ರೀಡ್ ತಂತ್ರಾಂಶದಲ್ಲಿ ಅಪ್ಲೋಡ್ ಮಾಡಿ ಕಾಣೆಯಾದ ವ್ಯಕ್ತಿಯ ಮೊಬೈಲ್ ನಂಬರ್ ಪತ್ತೆ ಮಾಡಿ ಟವರ್ ಲೊಕೇಶನ್ ಸಹಾಯದಿಂದ ವ್ಯಕ್ತಿಯು ಗೋವಾದ ಮಾಂದ್ರಮನಲ್ಲಿ ಪತ್ತೆಯಾಗಿದ್ದಾನೆ.ಪತ್ತೆಯಾದ ವ್ಯಕ್ತಿ ವಿವರಗಳನ್ನು ವಿಚಾರಿಸಿದ ಪೊಲೀಸರು ತಾಯಿಯ ಜತೆ ಯುವಕನನ್ನು ಕಳುಹಿಸಿದ್ದಾರೆ.

ನ್ಯಾಟ್ ಗ್ರೀಡ್ ತಂತ್ರಾಂಶ ಏಂದರೇನು? : ನ್ಯಾಟ್ ಗ್ರೀಡ್ ಎಂಬುದು ಭಾರತದ ಭದ್ರತಾ ವ್ಯವಸ್ಥೆಯನ್ನು ಬಲಪಡಿಸಲು ನಿರ್ಮಿಸಲಾದ ಅತ್ಯಾಧುನಿಕ ಗುಪ್ತಚರ ಮಾಹಿತಿ ಜಾಲವಾಗಿದೆ. ಇದು ತಂತ್ರಾಂಶಕ್ಕಿಂತ ಹೆಚ್ಚಾಗಿ, ವಿವಿಧ ಸರ್ಕಾರಿ ಏಜೆನ್ಸಿಗಳ ದತ್ತಾಂಶಗಳನ್ನು ಒಂದೆಡೆ ಸೇರಿಸುವ ಒಂದು ಬೃಹತ್ ಮಾಹಿತಿ ತಂತ್ರಜ್ಞಾನ ವ್ಯವಸ್ಥೆ ಆಗಿದೆ ಇದರ ಅಡಿಯಲ್ಲಿ ಆಲವು ತಂತ್ರಶಾಂಶಗಳು ಕೆಲಸ ಮಾಡುತ್ತವೆ.

ನ್ಯಾಟ್ ಗ್ರೀಡ್ ಎಂದರೆ ಭಯೋತ್ಪಾದನೆ ವಿರೋಧಿ ಚಟುವಟಿಕೆಗಳನ್ನು ತಡೆಯಲು ಮತ್ತು ದೇಶದ ಭದ್ರತೆಯನ್ನು ಹೆಚ್ಚಿಸಲು ವಿವಿಧ ದತ್ತಾಂಶ ಮೂಲಗಳನ್ನು ಸಂಪರ್ಕಿಸಲಾಗುತ್ತದೆ.

ಇದು ಬ್ಯಾಂಕಿಂಗ್, ರೈಲ್ವೆ, ವಿಮಾನಯಾನ, ಟೆಲಿಕಾಂ, ವಲಸೆ, ಮತ್ತು ಕ್ರೆಡಿಟ್ ಕಾರ್ಡ್ ವಹಿವಾಟುಗಳಂತಹ ಸುಮಾರು 10ಕ್ಕೂ ಹೆಚ್ಚು ವಿವಿಧ ವಲಯಗಳ ಮಾಹಿತಿಯನ್ನು ಏಕೀಕರಿಸು ಒಂದು ವ್ಯವಸ್ಥೆಯಾಗಿದೆ. ನ್ಯಾಟ್ ಗ್ರೀಡ್ ಒಂದು ಸಂಕೀರ್ಣ ಜಾಲವಾಗಿದ್ದು, ಇದು ವಿವಿಧ ಏಜೆನ್ಸಿಗಳ ದತ್ತಾಂಶಗಳನ್ನು (ಉದಾಹರಣೆಗೆ: ಪಾಸ್ಪೋರ್ಟ್ ಕಚೇರಿ, ಬ್ಯಾಂಕ್‌ಗಳು, ತೆರಿಗೆ ಇಲಾಖೆ) ಒಂದೇ ಸುರಕ್ಷಿತ ವೇದಿಕೆಗೆ ತರುತ್ತದೆ.

ಕಾನೂನಿನ ಚೌಕಟ್ಟಿನಲ್ಲೇ ಕರ್ತವ್ಯ: ಸ್ಪೀಕರ್

• **ಮಂಗಳೂರು:** ಶೃಂಗೇರಿ ವಿಧಾನಸಭಾ ಕ್ಷೇತ್ರದ ಶಾಸಕನಾಗಿ ಜೀವರಾಜ್ ಅವರ ಪ್ರಮಾಣವಚನ ಸ್ವೀಕಾರಕ್ಕೆ ತನ್ನಿಂದ ಯಾವುದೇ ವಿಳಂಬವಾಗಿಲ್ಲ. ಸಂವಿಧಾನ ಮತ್ತು ಕಾನೂನಿನ ಚೌಕಟ್ಟಿನಲ್ಲೇ ಕಾರ್ಯನಿರ್ವಹಿಸಬೇಕಾದ ಜವಾಬ್ದಾರಿ ನನ್ನ ಮೇಲಿದ್ದು, ಅದರಂತೆ ನಡೆದುಕೊಂಡಿದ್ದೇನೆ ಎಂದು ವಿಧಾನ ಸ್ಪೀಕರ್ ಯು.ಟಿ.ಖಾದರ್ ಸ್ಪಷ್ಟಪಡಿಸಿದ್ದಾರೆ. ಮಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಜಾಪ್ರಭುತ್ವ ಮತ್ತು ಸಂಸದೀಯ ವ್ಯವಸ್ಥೆಯು ವಿಶ್ವಾಸದ ಮೇಲೆ ನಡೆಯಬೇಕು. ವಿಶ್ವಾಸವಿಲ್ಲದಿದ್ದರೆ ವ್ಯವಸ್ಥೆ ಬಲಿಷ್ಠವಾಗಲು ಸಾಧ್ಯವಿಲ್ಲ ಎಂದರು.ಜೀವರಾಜ್ ಅವರು ಮಂಗಳವಾರ ಪೂರ್ವಾಹ್ನ 11 ಗಂಟೆಗೆ ಅರ್ಜಿ ನೀಡಿದ್ದಾರೆ. ನಿಯಮಾವಳಿ ಪ್ರಕಾರ ಅಭಿಪ್ರಾಯ ಪಡೆದು ಸಮಯ ನೀಡಲಾಗುತ್ತದೆ. ಅಷ್ಟರಲ್ಲೇ ವಿಳಂಬವಾಗಿದೆ ಎನ್ನುವುದು ಸರಿಯಲ್ಲ. ಸಂವಿಧಾನ ಮತ್ತು ಕಾನೂನಿನಡಿ ಅವಕಾಶ ಕೊಡಲೇಬೇಕು. ಇದೊಂದು ವಿಶಿಷ್ಟ ಸನ್ನಿವೇಶ. ವಿಳಂಬ ಮಾಡುವ ಉದ್ದೇಶವೇ ಇಲ್ಲ. ಆದರೆ ಸಂವಿಧಾನ ಪೀಠದ ಬಗ್ಗೆ ಸಂಶಯ, ತಪ್ಪು ಅಭಿಪ್ರಾಯ ಬರುವ ರೀತಿಯಲ್ಲಿ ಚರ್ಚಿಸುವುದು, ಹೇಳಿಕೆ ನೀಡುವುದು ಸರಿಯಲ್ಲ ಎಂದರು.

ಬೆಂಗ್ಳೂರಲ್ಲಿ ಹದಿನೈದು ಸಾವಿರ ಮಂದಿ ನಾಪತ್ತೆ!

ಪುಟ ೩➡ ಇವರ ಪತ್ತೆ ಕಾರ್ಯ ಸವಾಲಾಗಿ ಪರಿಣಮಿಸಿದೆ.

ಪತ್ತೆ ಹಚ್ಚುವಿಕೆಯಲ್ಲಿ ಪೊಲೀಸರ ಕಾರ್ಯವೈಖರಿ: ನಾಪತ್ತೆ ಪ್ರಕರಣಗಳನ್ನು ತಂತ್ರಜ್ಞಾನ ಸಹಾಯದಿಂದ ಪತ್ತೆ ಹಚ್ಚುವಲ್ಲಿ ಪೊಲೀಸ್ ಇಲಾಖೆ ಚುರುಕಾಗಿ ಕಾರ್ಯನಿರ್ವಹಿಸುತ್ತಿದೆ. 2024ರಲ್ಲಿ ನಾಪತ್ತೆಯಾದ 6,672 ಪ್ರಕರಣಗಳ ಪೈಕಿ 6,275 ಜನರನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ, ಪ್ರತಿ ವರ್ಷವೂ ಪತ್ತೆಯಾಗದವರ ಸಂಖ್ಯೆ ಕೂಡ ಏರುತ್ತಿರುವುದು ಆತಂಕ ಮೂಡಿಸಿದೆ. 2024ರಲ್ಲಿ 397 ಜನ ಪತ್ತೆಯಾಗದೆ ಉಳಿದಿದ್ದರೆ, 2025ರಲ್ಲಿ ಈ ಸಂಖ್ಯೆ 432ಕ್ಕೆ ಏರಿದೆ. ಈ ವರ್ಷದ ಮೊದಲ ನಾಲ್ಕು ತಿಂಗಳಲ್ಲೇ ಇನ್ನೂ 590 ಜನರ ಸುಳಿವು ಸಿಗಬೇಕಿದೆ.

ಮಾನವ ಕಳ್ಳಸಾಗಣೆ ಜಾಲಕ್ಕೆ ಮಕ್ಕಳ ಮಾರಾಟ?

ಚಿಕ್ಕ ಮಕ್ಕಳ ನಾಪತ್ತೆಯ ಹಿಂದೆ ವ್ಯವಸ್ಥಿತ ಭಿಕ್ಷಾಟನೆ ಮಾಫಿಯಾ ಮತ್ತು ಬಾಲಕಾರ್ಮಿಕ ಪದ್ಧತಿಯ ಕರಾಳ ಹಸ್ತವಿರುವ ಸಂಶಯವಿದ್ದು, ಹೆಣ್ಣುಮಕ್ಕಳನ್ನು ಗುರಿಯಾಗಿಸಿಕೊಂಡು ಅವರನ್ನು ವೇಶ್ಯಾವಾಟಿಕೆ ಜಾಲಕ್ಕೆ ತಳ್ಳುವ ದಂಧೆಕೋರರು ಸಕ್ರಿಯರಾಗಿದ್ದಾರೆ. ಪ್ರೀತಿ–ಪ್ರೇಮದ ಹೆಸರಿನಲ್ಲಿ ದಾರಿ ತಪ್ಪಿಸಿ ಅನ್ಯ ರಾಜ್ಯಗಳಿಗೆ ಸಾಗಿಸುವ ಕಳ್ಳಸಾಗಾಣಿಕೆ ಜಾಲ ಭೇದಿಸಲು ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂಬ ಮಾತುಗಳು ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿವೆ.

2024	ಪ್ರಕರಣಗಳು	ಪತ್ತೆಯಾದವು	ಪತ್ತೆಯಾಗಿಲ್ಲ
ಬಾಲಕ	216	211	05
ಬಾಲಕಿ	245	238	07
ಪುರುಷ	2681	2382	299
ಮಹಿಳೆ	3530	3444	86
ಒಟ್ಟು	6672	6275	397
2025	**ಪ್ರಕರಣಗಳು**	**ಪತ್ತೆಯಾದವು**	**ಪತ್ತೆಯಾಗಿಲ್ಲ**
ಬಾಲಕ	205	195	10
ಬಾಲಕಿ	248	237	11
ಪುರುಷ	2344	2069	275
ಮಹಿಳೆ	3661	3525	136
ಒಟ್ಟು	6458	6026	432
2026 (ಏ. ಅಂತ್ಯಕ್ಕೆ)	**ಪ್ರಕರಣಗಳು**	**ಪತ್ತೆಯಾದವು**	**ಪತ್ತೆಯಾಗಿಲ್ಲ**
ಬಾಲಕ	74	48	26
ಬಾಲಕಿ	72	46	26
ಪುರುಷ	776	537	239
ಮಹಿಳೆ	1239	940	299
ಒಟ್ಟು	2161	1571	590



“ ಪ್ರೀತಿ-ಪ್ರೇಮದ ಹೆಸರಿನಲ್ಲಿ ಮನೆ ಬಿಟ್ಟು ಹೋದವರು ನಂತರದ ದಿನಗಳಲ್ಲಿ ಮರಳಿ ಬಂದಾಗ ಪೊಲೀಸರಿಗೆ ಅಥವಾ ಪೊಲೀಸ್ ಠಾಣೆಗೆ ಮಾಹಿತಿ ನೀಡುವುದಿಲ್ಲ. ಇಂತಹ ಪ್ರಕರಣಗಳು ಇತ್ತೀಚೆಗೆ ಹೆಚ್ಚಾಗುತ್ತಿವೆ. ನಾಪತ್ತೆ ಪ್ರಕರಣಗಳನ್ನು ಪತ್ತೆಹಚ್ಚಲು ವಿಶೇಷ ತಂಡ ರಚಿಸಲಾಗಿದೆ. ಈ ತಂಡದ ಜತೆಗೆ ಪ್ರತಿ ವಾರ ಪ್ರಗತಿ ಪರಿಶೀಲನಾ ಸಭೆ ನಡೆಸಲಾಗುತ್ತಿದೆ.

■ **ಸೀಮಂತ್ ಕುಮಾರ್ ಸಿಂಗ್,** ನಗರ ಪೊಲೀಸ್ ಆಯುಕ್ತ

ಶೃಂಗೇರಿ ಶಾರದೆ ಹೆಸರಲ್ಲಿ ಪ್ರಮಾಣ

ಪುಟ ೩➡ **ಕೋರ್ಟ್ ತಡೆ ನೀಡಿದರೆ ಸ್ಥಾನ ರದ್ದು-ಖಾದರ್:** ಸುದ್ದಿಗಾರರೊಂದಿಗೆ ಮಾತನಾಡಿದ ಯು.ಟಿ. ಖಾದರ್, ಚುನಾವಣಾ ಆಯೋಗ ಪ್ರಮಾಣಪತ್ರ ಕೊಟ್ಟ ಬಳಿಕ ಅವರಿಗೆ ಪ್ರಮಾಣವಚನ ಬೋಧಿಸಬೇಕು. ಹಾಗಾಗಿ, ಪ್ರಮಾಣವಚನ ಬೋಧಿಸಿದ್ದೇನೆ. ಒಂದು ವೇಳೆ ನ್ಯಾಯಾಲಯ ಫಲಿತಾಂಶಕ್ಕೆ ತಡೆಯಾಜ್ಞೆ ನೀಡಿದರೆ, ಜೀವರಾಜ್ ಅವರ ಶಾಸಕ ಸ್ಥಾನ ರದ್ದಾಗಲಿದೆ. ಆಗ ರಾಜೇಗೌಡ ಅವರಿಗೆ ಪ್ರಮಾಣವಚನ ಬೋಧಿಸಬಹುದು. ಕಾನೂನು ಇರುವುದೇ ಹೀಗೆ; ಕಾನೂನು ತಜ್ಞರೊಂದಿಗೆ ನಾನು ಮಾತಾಡಿದ್ದೇನೆ ಎಂದು ವಿವರಿಸಿದರು. ಪ್ರಮಾಣವಚನ ವಿಳಂಬದ ಕುರಿತಾಗಿ ಪ್ರತಿಕ್ರಿಯೆ ನೀಡಿ, ಎಲ್ಲಿಯೂ ತಡವಾಗಿಲ್ಲ, ಸೋಮವಾರ ಬೆಳಗ್ಗೆ ಚುನಾವಣಾ ಆಯೋಗ ಆದೇಶಿಸಿದೆ. ಮಂಗಳವಾರ ಬೆಳಗ್ಗೆ ನಮ್ಮ ಕಚೇರಿಗೆ ಅರ್ಜಿ ಕೊಟ್ಟಿದ್ದಾರೆ. ಆದರೆ, ನಾನು ಊರಲ್ಲಿದ್ದೆ, ಬೇರೆ ಬೇರೆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದೆ. ನಮ್ಮ ಕಚೇರಿಗೆ ಅರ್ಜಿ ಕೊಟ್ಟು ರಾಜ್ಯಪಾಲರನ್ನು ಭೇಟಿಯಾಗಿದ್ದಾರೆ. ನಾನು ಬೇರೆ ಬೇರೆ ಕೆಲಸದಲ್ಲಿದ್ದೆ, ಸಂವಿಧಾನಬದ್ಧವಾಗಿ ನಾನು ನನ್ನ ಕೆಲಸ ಮಾಡಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಕೋರ್ಟ್‌ಗೆ ಮೊರೆ: ಸಿಎಂ

ಪುಟ ೩➡ ಅಂದು ಫಲಿತಾಂಶ ಬರುವಾಗ ಬಿಜೆಪಿ ಸರ್ಕಾರ ಇತ್ತು. ಅಂಚೆ ಮತ ಪತ್ರಗಳನ್ನು ಎಲ್ಲಾ 12 ಮಂದಿ ಏಜೆಂಟರಿಗೆ ತೋರಿಸಿ, ಅವುಗಳನ್ನು ಸಿಂಧುಗೊಳಿಸಲಾಗಿತ್ತು. ಆದರೆ ಈಗ ಆ ಮತಪತ್ರಗಳು ಹೇಗೆ ಅಸಿಂಧು ಆಗುತ್ತವೆ ಎಂದು ಕಿಡಿಕಾರಿದರು. ಚುನಾವಣಾ ಸಿಬ್ಬಂದಿ ಅಭ್ಯರ್ಥಿ ಜೀವರಾಜ್ ಜತೆ ಸೇರಿ ಅಂಚೆ ಮತ ತಿದ್ದಿದ್ದಾರೆ.



ಫಲಿತಾಂಶದ ದಿನ ಮತಪತ್ರದಲ್ಲಿ ಇಲ್ಲದ ಗೆರೆ ಈಗ ಹೇಗೆ ಬಂತು ಎಂದು ಪ್ರಶ್ನಿಸಿದರು. ಈ ವಿಚಾರದಲ್ಲಿ ನಾವು ಕೋರ್ಟ್ ಮೊರೆ ಹೋಗುತ್ತೇವೆ ಎಂದು ಹೇಳಿದರು. ಎರಡು ಕ್ಷೇತ್ರಗಳ ಚುನಾವಣೆ ಮುಗಿದಿರುವ ಕಾರಣ ಸ್ಥಳೀಯ ಸಂಸ್ಥೆಗಳಿಗೆ ತಕ್ಷಣವೇ ಚುನಾವಣೆ ನಡೆಸುತ್ತೇವೆ ಎಂದು ತಿಳಿಸಿದರು.

“ ಪ್ರಮಾಣವಚನಕ್ಕೆ ಅವಕಾಶ ನೀಡುತ್ತೇವೆ. ಎರಡು ದಿನ ಬಿಟ್ಟು ಭೇಟಿ ಮಾಡಲಾಗುವುದು ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು ನಮಗೆ ತಿಳಿಸಿದ್ದಿದ್ದರೆ ನಾವು ರಾಜ್ಯಪಾಲರ ಬಳಿಗೆ ಹೋಗುತ್ತಿರಲಿಲ್ಲ. ವಿಧಾನಸಭಾಧ್ಯಕ್ಷರು ಬೆಂಗಳೂರಿನಲ್ಲಿ ಲಭ್ಯವಿಲ್ಲದ ಕಾರಣ ಭೇಟಿ ಮಾಡಲು ಆಗಲಿಲ್ಲ.

■ **ಡಿ.ಎನ್. ಜೀವರಾಜ್,** ಶೃಂಗೇರಿ ಶಾಸಕ

“ ಒಂದು ಬಾರಿ ರಾಜ್ಯಪತ್ರದಲ್ಲಿ ಹೆಸರು ಪ್ರಕಟವಾದ ನಂತರ ಹಾಗೂ ಚುನಾವಣಾ ಆಯೋಗ ಪ್ರಮಾಣಪತ್ರ ನೀಡಿದ ಬಳಿಕ ಪ್ರಮಾಣವಚನ ಬೋಧಿಸಲೇಬೇಕು. ರಾಜ್ಯಪಾಲರು ಅಥವಾ ಅವರು ಸೂಚಿಸಿದ ವ್ಯಕ್ತಿ ಪ್ರಮಾಣವಚನ ಬೋಧಿಸಬಹುದು. ಕೊನೆ ಹಂತದಲ್ಲಿ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರೇ ಫಲಿತಾಂಶವನ್ನು ಒಪ್ಪಿಕೊಂಡು ಪ್ರಮಾಣವಚನ ಬೋಧಿಸಿದ್ದು ಸಂತಸ ತಂದಿದೆ.

■ **ಆರ್. ಅಶೋಕ,** ವಿಧಾನಸಭಾ ಪ್ರತಿಪಕ್ಷ ನಾಯಕ

ಸರ್ಕಾರ ರಚನೆಗೆ ಹಕ್ಕು ಮಂಡಿಸಿದ ವಿಜಯ್

ಪುಟ ೩➡ **ಬೆಂಬಲ ನಿರಾಕರಿಸಿದ ವಿಸಿಕೆ:** ಡಿಎಂಕೆ ಮೈತ್ರಿ ಭಾಗವಾದ ವಿಸಿಕೆ ಪಕ್ಷವು ಟಿವಿಕೆಗೆ ಬೆಂಬಲ ನೀಡಬೇಕೇ ಎಂಬುದರ ಕುರಿತು ಬುಧವಾರವಿಡೀ ಚರ್ಚಿಸಿ ಸಂಜೆ ವೇಳೆಗೆ ಟಿವಿಕೆಗೆ ಬೆಂಬಲ ನೀಡುವುದಿಲ್ಲ ಎಂದು ಘೋಷಿ ಸಿದೆ. ಇದಕ್ಕು ಮುನ್ನ ವಿಸಿಕೆ ಮುಖ್ಯಸ್ಥ ತೋಲ್ ತಿರುಮಾವಳವನ್ ಅಧ್ಯಕ್ಷತೆಯಲ್ಲಿ ಗುರುವಾರ ಸಭೆ ನಡೆಸಿ ತೀರ್ಮಾನಿಸಲಾಗುವುದು ಎನ್ನಲಾಗಿತ್ತು. ವಿಜಯ್ ನಮ್ಮ ಬೆಂಬಲ ಕೇಳಿದ್ದಾರೆ. ಪಕ್ಷದ ಹಿರಿಯ ನಾಯಕರ ಅಭಿಪ್ರಾಯ ಪಡೆದು ನಿರ್ಧಾ ರ ಕೈಗೊಳ್ಳುತ್ತೇವೆ ಎಂದು ಅವರು ಹೇಳಿದ್ದರು.

234 ಸದಸ್ಯರ ತಮಿಳುನಾಡು ವಿಧಾನಸಭೆಯಲ್ಲಿ ಟಿವಿಕೆ 108 ಸ್ಥಾನಗಳನ್ನು ಗೆದ್ದಿದೆ. ಸರ್ಕಾರ ರಚನೆಗೆ 118 ಸ್ಥಾನಗಳ ಬಹುಮತ ಅಗತ್ಯವಿದೆ. ಪಕ್ಷ ಮೂಲಗಳ ಪ್ರಕಾರ, ವಿಜಯ್ ಅವರು ಮೇ 7ರಂದು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆ ಇದೆ. ಇತ್ತೀಚಿನ ಚುನಾವಣೆಯಲ್ಲಿ ಡಿಎಂಕೆ 59, ಎಐಎಡಿಎಂಕೆ 47, ಕಾಂಗ್ರೆಸ್ 5, ಪಿಎಂಕೆ 4, ಐಯುಎಂಎಲ್ 2, ಸಿಪಿಐ 2, ವಿಎಸಿಕೆ 2, ಸಿಪಿಐ(ಎಂ) 2 ಸ್ಥಾನಗಳನ್ನು ಪಡೆದಿವೆ. ಬಿಜೆಪಿ, ಡಿಎಂಡಿಕೆ ಮತ್ತು ಎಎಂಎಂಕೆ ತಲಾ ಒಂದು ಸ್ಥಾನ ಗೆದ್ದಿವೆ.

ಸರ್ಕಾರ ರಚನೆಗೆ ಡಿಎಂಕೆ, ಎಐಎಡಿಎಂಕೆ ಮಾತುಕತೆ!

ಪುಟ ೩➡ ದಶಕಗಳಿಂದಲೂ ಪ್ರತಿಸ್ಪರ್ಧಿಗಳಾಗಿರುವ ಉಭಯ ಪಕ್ಷಗಳ ನಡುವೆ ಇಂತಹ ಚರ್ಚೆಗಳು ನಡೆಯು ತ್ತಿರುವುದು ಅಪರೂಪದ ಬೆಳವಣಿಗೆಯಾಗಿದೆ.ಎಐಎಡಿಎಂಕೆ ಮೂಲಗಳು ಮಾತುಕತೆ ನಡೆದಿರುವುದನ್ನು ದೃಢಪ ಡಿಸಿದ್ದರೂ, ಯಾವುದೇ ಅಧಿಕೃತ ಒಪ್ಪಂದದ ಬಗ್ಗೆ ಇನ್ನೂ ಸ್ಪಷ್ಟನೆ ನೀಡಲಾಗಿಲ್ಲ. ಆದರೆ, ತಮಿಳುನಾಡಿನ ರಾಜಕೀಯದಲ್ಲಿ ಅಚ್ಚರಿಯ ತಿರುವಾಗಬಹುದಾದ ಈ ಒಕ್ಕೂಟದಲ್ಲಿ ಡಿಎಂಕೆ ಸೇರಲು ಸಿದ್ಧವಿದೆಯೇ ಎಂಬುದು ಅಸ್ಪಷ್ಟವಾಗಿದೆ.

ಬೆನ್ನಿಗೆ ಇರಿದ ಕಾಂಗ್ರೆಸ್: ಡಿಎಂಕೆ ಟೀಕಾಪ್ರಹಾರ

ಕಾಂಗ್ರೆಸ್ ಪಕ್ಷದ ಈ ನಿರ್ಧಾರವನ್ನು ಡಿಎಂಕೆ 'ಬೆನ್ನಿಗೆ ಇರಿದ ಕೆಲಸ' ಎಂದು ಬಣ್ಣಿಸಿದೆ. ಕಾಂಗ್ರೆಸ್ ಮತ್ತು ಡಿಎಂಕೆ ಪಾಲುದಾರಿಕೆ, 1971ರಿಂದ ಆರಂಭವಾಗಿತ್ತು. 2004 ರಿಂದ 2013 ರವರೆಗೆ ಯುಪಿಎ ಸರ್ಕಾರದ ಅವಧಿಯಲ್ಲೂ ಮುಂದುವರಿದಿತ್ತು. ಇತ್ತೀಚೆಗೆ 2016ರಲ್ಲಿ ಕಾಂಗ್ರೆಸ್ ಮತ್ತೆ ಡಿಎಂಕೆ ಜತೆ ಮೈತ್ರಿ ಮಾಡಿಕೊಂಡಿತ್ತು.

ಮೇ 9ಕ್ಕೆ ಸಿಎಂ ದಿಲ್ಲಿಗೆ

ಪುಟ ೩➡ ರಾಜ್ಯದ ವಿದ್ಯಮಾನಗಳನ್ನು ಗಮನಿಸುತ್ತಿರುವ ಕಾಂಗ್ರೆಸ್ ಹೈಕಮಾಂಡ್ ಕೂಡ ಸೂಕ್ತ ನಿರ್ಧಾರ ಬಂದಿದೆ ಎಂದು ಹೇಳಲಾಗುತ್ತಿದೆ.

ಯಾವಾಗ ಭೇಟಿ?: ಪಂಚ ರಾಜ್ಯಗಳ ಚುನಾವಣೆ ಪೈಕಿ ಕಾಂಗ್ರೆಸ್‌ಗೆ ಕೇರಳದಲ್ಲಿ ಗೆಲುವು ಬಿಟ್ಟರೆ, ಉಳಿದ ರಾಜ್ಯಗಳಲ್ಲಿ ಪಕ್ಷದ ಯಶಸ್ಸು ನಿರೀಕ್ಷಿತ ಮಟ್ಟದಲ್ಲಿ ಬಂದಿಲ್ಲ. ತಮಿಳುನಾಡಿನಲ್ಲಿ ಅಚ್ಚರಿಯ ಫಲಿತಾಂಶ ಬಂದಿರುವುದು ಮತ್ತು ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿರುವ ಬಗ್ಗೆ ದಿಲ್ಲಿ ಮಟ್ಟದಲ್ಲಿ ಚರ್ಚೆ ನಡೆಯುತ್ತಿದೆ. ಕೇರಳದಲ್ಲಿ ಸಿಎಂ ಆಯ್ಕೆ ಬಗ್ಗೆ ಹಲವು ಸುತ್ತಿನ ಮಾತುಕತೆ ನಡೆಯುತ್ತಿರುವುದರಿಂದ ರಾಹುಲ್ ಗಾಂಧಿ ಸಮಯ ನೀಡಿದ ನಂತರವೇ ದಿಲ್ಲಿ ಭೇಟಿ ದಿನಾಂಕ ಅಂತಿಮಗೊಳ್ಳಲಿದೆ.

ಹೈಕಮಾಂಡ್ ಹೇಳಿದಂತೆ ಕೇಳುವೆ: ಸಿದ್ದರಾಮಯ್ಯ

ಪುಟ ೩➡ ಕೊಟ್ಟರೆ ಹೋಗಿ ಸಚಿವ ಸಂಪುಟ ಪುನರ್ ರಚನೆ ಬಗ್ಗೆ ಚರ್ಚೆ ಮಾಡುತ್ತೇನೆ ಎಂದು ತಿಳಿಸಿದರು. ರಾಹುಲ್ ಗಾಂಧಿಯರ ಅಪಾಯಿಂಟ್ ಮೆಂಟ್ ಫಿಕ್ಸ್ ಆದ ಮೇಲೆ ಸಂಪುಟ ಪುನಾರಚನೆಯಾ? ಸಂಪುಟ ವಿಸ್ತರಣೆಯಾ ಯಾವ ವಿಷಯದ ಚರ್ಚೆ ಎಂಬುದು ಆಗ ಗೊತ್ತಾಗಲಿದೆ. ಅವರು ನನ್ನನ್ನು ಕರೆದೇ ಇಲ್ಲ ಎಂದಮೇಲೆ ಸಭೆಯ ಅಜೆಂಡಾ ಹೇಗೆ ಫಿಕ್ಸ್ ಆಗುತ್ತದೆ ಎಂದರು. ಸಚಿವ ಸತೀಶ್ ಜಾರಕಿಹೊಳಿ ಅವರು ಮುಖ್ಯಮಂತ್ರಿ ಬದಲಾವಣೆ ವಿಚಾರದಲ್ಲಿ ಎದ್ದಿರುವ ಗೊಂದಲಗಳನ್ನೆಲ್ಲ ಹೈಕಮಾಂಡ್ ಬೇಗ ಬಗೆಹರಿಸಬೇಕು ಎಂದು ಹೇಳಿರುವುದು ಅದು ಅವರ ಅಭಿಪ್ರಾಯ ಎಂದರು. ಬೇರೆ ಯಾರೋ ಏನೇನೊ ಮಾತನಾಡಿದರೆ ಅದು ಅವರ ವೈಯಕ್ತಿಕ, ನಮಗೆ ಹೈಕಮಾಂಡ್ ಮಾತೇ ಅಂತಿಮ ಎಂದು ಹೇಳಿದರು.

ಮೇ 10ಕ್ಕೆ ಬೆಂಗಳೂರಿಗೆ ಮೋದಿ

ಪುಟ ೩➡ ಇದೇ ಸಂದರ್ಭದಲ್ಲಿ ಅವರು ನೂತನವಾಗಿ ನಿರ್ಮಿಸಲಾದ ಧ್ಯಾನ ಮಂದಿರವನ್ನು ಉದ್ಘಾಟಿಸಲಿದ್ದಾರೆ. ಅಲ್ಲದೆ, ವರ್ಷಪೂರ್ತಿ ನಡೆಯುವ ಪ್ರಮುಖ ದೇಶವ್ಯಾಪಿ ಸೇವಾ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ. ಒಂದು ತಿಂಗಳ ಕಾಲ ನಡೆಯಲಿರುವ ಈ ಸಂಭ್ರಮಾಚರಣೆಯ ಅಂಗವಾಗಿ ಜಾಗತಿಕ ನಾಯಕತ್ವ ಸಂವಾದ ಮತ್ತು ಶೃಂಗಸಭೆಗಳಂತಹ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ತಿಳಿಸಿದೆ.

“ ಪ್ರತಿಯೊಬ್ಬರ ಮುಖದಲ್ಲೂ ಮುಗುಳ್ನಗೆಯನ್ನು ಕಾಣುವುದೇ ಆರೋಗ್ಯವಂತ ಸಮಾಜದ ಲಕ್ಷಣವಾಗಿದೆ. ಕಳೆದ 45 ವರ್ಷಗಳಿಂದ ನಾವು ಇದೇ ಗುರಿ ತಲಪುವತ್ತ ಕಾರ್ಯಪ್ರವೃತ್ತರಾಗಿದ್ದೇವೆ.

■ **ಶ್ರೀ ಶ್ರೀ ರವಿಶಂಕರ್ ಗುರೂಜಿ,** ದಿ ಆರ್ಟ್ ಆಫ್ ಲಿವಿಂಗ್

ತೋಟ ಉತ್ಪನ್ನಗಳ ಮಾರಾಟ ಸಹಕಾರ ಸಂಘ ನಿ., ಚನ್ನಗಿರಿ
ಎಪಿಎಂಸಿ ಆವರಣ ಚನ್ನಗಿರಿ, ದಾವಣಗೆರೆ ಜಿಲ್ಲೆ,-577213,
Email:tumcoscng@gmail.com, info@tumcos.com Mo:7349033006

R.NO.:2026-27/128 DATE: 06-05-2026

ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಪ್ರಕಟಣೆ

ಸಂಘದ ಸಾಗರಪೇಟೆ ಶಾಖೆಯ ಕಟ್ಟಡಕ್ಕೆ ಹವಾ ನಿಯಂತ್ರಣ ವ್ಯವಸ್ಥೆ (ಏರ್ ಕಂಡೀಶನ್ ಸಿಸ್ಟಮ್) ಅಳವಡಿಸಲು ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದೆ. ಇ.ಎಂ.ಡಿ.ಮೊತ್ತ:50,000/-ರೂ.ಗಳು ಟೆಂಡರ್ ನಂಬರ್ :TUMCOSL/2026-27/OW/WORK_INDENT3, ಟೆಂಡರ್ ಟೈಟಲ್ :SUPPLY AND INSTALLATION OF AIR CONDITION SYSTEM FOR TUMCOS LTD AT SAGARA-PETE. ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ರಲ್ಲಿ **22/05/2026** ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. **ಹೆಚ್ಚಿನ ಮಾಹಿತಿಗೆ** ಮೇಲ್ಕಂಡ ಅಂತರ್ಜಾಲ ಅಥವಾ **https://www.tumcos.com** ಸಂಪರ್ಕಿಸಿ

ಸಹಿ/- ವ್ಯವಸ್ಥಾಪಕ ನಿರ್ದೇಶಕರು, ತುಮ್‌ಕೋಸ್ ಲಿ.,ಚನ್ನಗಿರಿ

ಕರ್ನಾಟಕ ಸರ್ಕಾರ

ಆಯನೂರು ಉಪ ಅರಣ್ಯ ವಿಭಾಗ, ಶಿವಮೊಗ್ಗ.

ಸಂಖ್ಯೆ: ಸಅಸಂ/ಟೆಂಡರ್-ಕಾಂಪಾ/ಸಿಆರ್-3/25-26 ದಿನಾಂಕ: 05.05.2026

ಅಲ್ಪಾವದಿ ಇ-ಟೆಂಡರ್ ಪ್ರಕಟಣೆ.
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2026-27 ನೇ ಸಾಲಿನಲ್ಲಿ ಕಾಂಪಾ ಲೆಕ್ಕ ಶೀರ್ಷಿಕೆಯಡಿ ಶಿವಮೊಗ್ಗ ಪ್ರಾದೇಶಿಕ ಅರಣ್ಯ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶಗಳಲ್ಲಿ ಅನುಬಂಧದಲ್ಲಿ ನಮೂದಿಸಲಾದ, ನೆಡುತೋಪು ರಚನೆ ಮತ್ತು ನಿರ್ವಹಣೆ" ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000 ರ ಅನ್ವಯ 2026-27 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು, ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರದಲ್ಲಿ ಸಸಿಗಳನ್ನು ಬೆಳೆಸಲು ಅಗತ್ಯ ಸೌಕರ್ಯ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಕಾಲ್-3 ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ. **1.** ಇ-ಟೆಂಡರು ಸಲ್ಲಿಸಲು ಕೊನೆಯ ದಿ:13.05.2026 ಅಪರಾಹ್ನ 4.00 ಗಂಟೆಯವರೆಗೆ **2.** ಟೆಂಡರು ತೆರೆಯುವ ದಿ:14.05.2026 ಅಪರಾಹ್ನ 4.30ಗಂಟೆ

ಸಹಿ/-ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಆಯನೂರು ಉಪ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್ಎಂಸಿಎ/ಶಿ/26-27/16/05/187

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ

ನಂ. ಗ್ರಾಕುನೀ&ನೈವಿ/ಹಾವೇರಿ/ಪಿಬಿ-4/ಟೆಂಡರ್:02/2026-27/137

ದಿನಾಂಕ : 04-05-2026

ಅಲ್ಪಾವಧಿ ಟೆಂಡರ ಪ್ರಕಟಣೆ
(E-GOK ಇ-ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ)

MVS (O&M) ಯೋಜನೆಯಡಿ ಹಾವೇರಿ ತಾಲೂಕಿನ ಈ ಕೆಳಕಂಡ ಗ್ರಾಮದಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಯ ಕಾರ್ಯಾಚರಣೆ & ನಿರ್ವಹಣೆ (O&M) ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ.

(1) Tender queries/ Clarifications ಗೆ ಕೊನೆಯ ದಿನ ಮತ್ತು ಸಮಯ : ದಿನಾಂಕ : **11-05-2026** ರ 11:00 ಗಂಟೆವರೆಗೆ (2) E-Procurement ನಲ್ಲಿ ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನ ಮತ್ತು ಸಮಯ ದಿನಾಂಕ : **14-05-2026** ರ 17:00 ಗಂಟೆವರೆಗೆ (3) ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಬಿಡ್ ತೆರೆಯುವ (ಸಾಧ್ಯವಾದಲ್ಲಿ) : ದಿನಾಂಕ : **15-05-2026**ರ 17:30 ಗಂಟೆ ನಂತರ

ಇಂಡೆಂಟ್ ನಂ :- (1) Providing Operation and Maintenance of Multi Village Water Supply scheme to Kanavalli and Other 8 villages in Haveri Taluk of Haveri District (RWSSD/2024-25/WS/WORK_INDENT8544/CALL-4)

(2) Providing Operation and Maintenance of Multi Village Water Supply scheme to Agadi and Other 7 villages in Haveri Taluk of Haveri District. (RWSSD/2024-25/WS/WORK_INDENT8413/CALL-3)

ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E.GOK ಇ-ಪ್ರಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ https://kppp.karnataka.gov.in ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.

ಸಹಿ/- ಕಾರ್ಯನಿರ್ವಾಹಕ ಇಂಜನೀಯರ್,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ.

ವಾಸಾಸಂಇ/ಹಾವೇರಿ/ಕೆಎಸ್ಎಂಸಿಎ/79/2026-27

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಧನಲಕ್ಷ್ಮೀ (ನಂ.DL-51) ಡ್ರಾ ಮೇ 6ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
DG 932428 (MANANTHAVADY)

Consolation Prize Rs.5,000/-
DA 932428 DB 932428 DC 932428 DD 932428
DE 932428 DF 932428 DH 932428 DJ 932428
DK 932428 DL 932428 DM 932428

2nd Prize Rs.30,00,000/- [30 Lakhs]
DE 235118 (THIRUVANANTHAPURAM)

3rd Prize Rs.5,00,000/- [5 Lakhs]
DB 720029 (PUNALUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0166 0255 0631 1748 3295 3498 3714 5403 6613 7244 7319 7479 7511 7557 7611 8063 9034 9246 9595

5th Prize Rs.2,000/-
1352 2388 4211 7379 7471 7538

6th Prize Rs.1,000/-
0707 1056 2466 2570 3025 3231 3757 4265 4517 4664 4955 5012 5516 5540 6012 6216 7072 7299 7545 8354 8428 9073 9681 9825 9890

7th Prize Rs.500/-
0300 0373 0421 0558 0795 0855 0873 1006 1096 1134 1332 1623 1825 1981 2149 2487 2539 2717 2726 2900 3185 3194 3385 3477 3654 3751 4276 4370 4544 4580 4586 4684 4802 4825 4938 5031 5044 5067 5476 5798 5940 6065 6102 6120 6181 6234 6523 6573 6640 6876 6949 7044 7095 7351 7416 7503 7529 7548 7661 7694 7711 7970 8108 8130 8169 8387 8503 9067 9286 9435 9481 9633 9687 9885 9952 9959

8th Prize Rs.200/-
0046 0051 0137 0260 0327 0449 0645 0719 1002 1181 1333 1342 1402 1530 1611 1758 1802 1932 1982 2247 2377 2449 2543 2575 2780 2967 3091 3255 3356 3479 3497 3598 3620 3625 3663 3688 3696 3882 3908 4186 4283 4557 4617 4633 4708 4984 5039 5081 5401 5417 5419 5454 5491 5714 5794 5944 5972 6245 6281 6469 6537 6623 6643 6725 6727 6786 6848 6890 7030 7084 7233 7474 7657 7827 7876 7882 7958 8173 8257 8327 8345 8422 8558 8569 8575 8590 8801 8833 9029 9142 9156 9325 9478 9559 9903 9967

9th Prize Rs.100/-
0022 0027 0033 0120 0125 0176 0178 0201 0288 0400 0446 0448 0582 0588 0810 0858 0859 0880 0883 0974 1005 1069 1084 1093 1113 1242 1273 1292 1299 1445 1452 1484 1601 1631 1681 1771 1789 1849 1904 1908 1920 2057 2146 2191 2547 2603 2746 2899 2950 2976 3066 3104 3220 3234 3240 3275 3376 3457 3518 3596 3601 3613 3631 3690 3871 3934 3957 4061 4120 4152 4173 4386 4479 4494 4518 4629 4672 4725 4822 4903 4962 5013 5162 5190 5230 5233 5461 5520 5579 5614 5657 5670 5671 5943 6048 6182 6238 6322 6365 6441 6619 6744 6792 7098 7232 7242 7252 7627 7781 7830 7851 7946 7987 8037 8049 8127 8270 8465 8515 8616 8651 8730 8777 8972 8999 9040 9083 9324 9326 9383 9436 9543 9629 9636 9710 9867 9905 9988

ಮಾನ್ಯ ಹೆಚ್ಚುವರಿ ದಿವಾನಿ ಮತ್ತು ಪ್ರಥಮ ದರ್ಜೆ ಅಪರಾಧಿಕ ನ್ಯಾಯಾಧೀಶರ ನ್ಯಾಯಾಲಯ, ಬೆಳ್ತಂಗಡಿ

ಕ್ರಿಮಿನಲ್ ಮಿಸ್ ಕೇಸ್ ನಂಬ್ರ:85/2025

ಇವರೊಳಗೆ,
ಜೆಸಿಂತಾ ಆಶಾ ರಾವ್
...ಅರ್ಜಿದಾರರು
-ಮತ್ತು-
ಜನನ/ಮರಣಗಳ ನೋಂದಣಾಧಿಕಾರಿಗಳು ಬೆಳ್ತಂಗಡಿ ಮತ್ತು ಇತರರು
...ಎದುರುದಾರರು

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರಾದ ದ.ಕ ಜಿಲ್ಲೆ, ಕಡಬ ತಾಲೂಕು, ಸವಣೂರು ಗ್ರಾಮದ ಅತ್ತಿಕೆರೆ, ಮಾಂತೂರು ಸರಕಾರಿ ಶಾಲೆ ಹತ್ತಿರ ಮನೆ ಎಂಬಲ್ಲಿ ವಾಸ್ತವ್ಯವಿರುವ ದಿ|| ಜೋನ್ ಮಿನೇಜಸ್ ರವರ ಮಗಳು ಜೆಸಿಂತಾ ಆಶಾ ರಾವ್‌ರವರು ನ್ಯಾಯಾಲಯದಲ್ಲಿ ಈ ಮೇಲಿನ ಪ್ರಕರಣವನ್ನು ದಾಖಲು ಮಾಡಿ ಅರ್ಜಿದಾರರ ತಂದೆ **ಜೋನ್ ಮಿನೇಜಸ್** ಇವರು **ದಿನಾಂಕ: 03-02-1968 ರಂದು** ಬೆಳ್ತಂಗಡಿ ತಾಲೂಕಿನ ಕೊಕ್ಕಡ ಗ್ರಾಮದಲ್ಲಿ ಮರಣ ಹೊಂದಿದ್ದ ಬಗ್ಗೆ ಎದುರುದಾರರ ವಹಿಯಲ್ಲಿ ದಾಖಲು ಮಾಡಲು ನಿರ್ದೇಶಿಸಬೇಕಾಗಿ ಕೋರಲಾಗಿದ್ದು ಹಾಗೂ ಇದರ ಬಗ್ಗೆ ಸಾರ್ವಜನಿಕ ಆಕ್ಷೇಪ ಇದ್ದಲ್ಲಿ ಹಾಗೂ ಇತರ ಯಾವುದೇ ವ್ಯಕ್ತಿಗಳ ಆಕ್ಷೇಪ ಇದ್ದಲ್ಲಿ **ಈ ಪ್ರಕಟಣೆ ನೀಡಿದ 15 ದಿನಗಳೊಳಗಾಗಿ** ಅಥವಾ **ದಿನಾಂಕ: 17.06.2026**ರ ಒಳಗಾಗಿ ಖುದ್ದಾಗಿ ಯಾ ವಕೀಲರ ಮೂಲಕ ಆಕ್ಷೇಪ ಸಲ್ಲಿಸಲು ನ್ಯಾಯಾಲಯದ ಆದೇಶವಾಗಿರುತ್ತದೆ.

ಸದ್ರಿ ದಿನಾಂಕದಂದು ತಾವು ಹಾಜರಾಗದಿದ್ದಲ್ಲಿ ತಮ್ಮ ಗೈರು ಹಾಜರಿಯಲ್ಲಿ ಪ್ರಕರಣವನ್ನು ಇತ್ಯರ್ಥಗೊಳಿಸಲಾಗುವುದು.

ನ್ಯಾಯಾಲಯದ ಆದೇಶದ ಮೇರೆಗೆ 2026ನೇ ಇಸವಿ ಮೇ ತಿಂಗಳ 4ನೇ ದಿನಾಂಕದಂದು ನ್ಯಾಯಾಲಯದ ಮೊಹರು/ಸಹಿ ನನ್ನ ದಸ್ಕತ್ತಿನೊಡನೆ ಕೊಡಲಾಗಿದೆ.

ಸಹಿ/- ಶಿರಸ್ತೇದಾರರು
ಮಾನ್ಯ ಹೆಚ್ಚುವರಿ ದಿವಾನಿ ನ್ಯಾಯಾಧೀಶರ ನ್ಯಾಯಾಲಯ ಬೆಳ್ತಂಗಡಿ
ಸಹಿ/- ಧನಂಜಯ ಕುಮಾರ್ ಡಿ.
ವಕೀಲರು, ಬೆಳ್ತಂಗಡಿ

ಮಾನ್ಯ ಹೆಚ್ಚುವರಿ ದಿವಾನಿ ಮತ್ತು ಪ್ರಥಮ ದರ್ಜೆ ಅಪರಾಧಿಕ ನ್ಯಾಯಾಧೀಶರ ನ್ಯಾಯಾಲಯ, ಬೆಳ್ತಂಗಡಿ

ಕ್ರಿಮಿನಲ್ ಮಿಸ್ ಕೇಸ್ ನಂಬ್ರ:63/2025

ಇವರೊಳಗೆ,
ರಾಜೇಶ್ ಆರ್.ಎಸ್.ಕಾರಂತ್
...ಅರ್ಜಿದಾರರು
-ಮತ್ತು-
ಜನನ/ಮರಣಗಳ ನೋಂದಣಾಧಿಕಾರಿಗಳು ಬೆಳ್ತಂಗಡಿ ಮತ್ತು ಇತರರು
...ಎದುರುದಾರರು

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರಾದ ದ.ಕ ಜಿಲ್ಲೆ, ಬೆಳ್ತಂಗಡಿ ತಾಲೂಕು, ಧರ್ಮಸ್ಥಳ ಗ್ರಾಮ, ಮತ್ತು ಅಂಚೆ, ಮಂಜಿಹಿತ್ತಿಲು ಮನೆ ಎಂಬಲ್ಲಿ ವಾಸ್ತವ್ಯವಿರುವ ದಿ|| ರಾಮಕೃಷ್ಣ ಶೆನರ್ ರವರ ಮಗ ರಾಜೇಶ್ ಆರ್.ಎಸ್. ಕಾರಂತ್ ರವರು ನ್ಯಾಯಾಲಯದಲ್ಲಿ ಈ ಮೇಲಿನ ಪ್ರಕರಣವನ್ನು ದಾಖಲು ಮಾಡಿ ಅರ್ಜಿದಾರರ ತಂದೆ **ರಾಮಕೃಷ್ಣ ಶೆನೆರ್** ಬಿನ್: ದಿ|| ವೆಂಕಪ್ಪಯ್ಯ ರವರ ಮಗ ಇವರು **ದಿನಾಂಕ: 20-12-1990 ರಂದು** ಬೆಳ್ತಂಗಡಿ ತಾಲೂಕಿನ ಸೋಣಂದೂರು ಗ್ರಾಮದಲ್ಲಿ ಮರಣ ಹೊಂದಿದ್ದ ಬಗ್ಗೆ ಎದುರುದಾರರ ವಹಿಯಲ್ಲಿ ದಾಖಲು ಮಾಡಲು ನಿರ್ದೇಶಿಸಬೇಕಾಗಿ ಕೋರಲಾಗಿದ್ದು ಹಾಗೂ ಇದರ ಬಗ್ಗೆ ಸಾರ್ವಜನಿಕ ಆಕ್ಷೇಪ ಇದ್ದಲ್ಲಿ ಹಾಗೂ ಇತರ ಯಾವುದೇ ವ್ಯಕ್ತಿಗಳ ಆಕ್ಷೇಪ ಇದ್ದಲ್ಲಿ **ಈ ಪ್ರಕಟಣೆ ನೀಡಿದ 15 ದಿನಗಳೊಳಗಾಗಿ** ಅಥವಾ **ದಿನಾಂಕ: 16.06.2026**ರ ಒಳಗಾಗಿ ಖುದ್ದಾಗಿ ಯಾ ವಕೀಲರ ಮೂಲಕ ಆಕ್ಷೇಪ ಸಲ್ಲಿಸಲು ನ್ಯಾಯಾಲಯದ ಆದೇಶವಾಗಿರುತ್ತದೆ.

ಸದ್ರಿ ದಿನಾಂಕದಂದು ತಾವು ಹಾಜರಾಗದಿದ್ದಲ್ಲಿ ತಮ್ಮ ಗೈರು ಹಾಜರಿಯಲ್ಲಿ ಪ್ರಕರಣವನ್ನು ಇತ್ಯರ್ಥಗೊಳಿಸಲಾಗುವುದು.

ನ್ಯಾಯಾಲಯದ ಆದೇಶದ ಮೇರೆಗೆ 2026ನೇ ಇಸವಿ ಮೇ ತಿಂಗಳ 4ನೇ ದಿನಾಂಕದಂದು ನ್ಯಾಯಾಲಯದ ಮೊಹರು/ಸಹಿ ನನ್ನ ದಸ್ಕತ್ತಿನೊಡನೆ ಕೊಡಲಾಗಿದೆ.

ಸಹಿ/- ಶಿರಸ್ತೇದಾರರು
ಮಾನ್ಯ ಹೆಚ್ಚುವರಿ ದಿವಾನಿ ನ್ಯಾಯಾಧೀಶರ ನ್ಯಾಯಾಲಯ ಬೆಳ್ತಂಗಡಿ
ಸಹಿ/- ಧನಂಜಯ ಕುಮಾರ್ ಡಿ.
ವಕೀಲರು, ಬೆಳ್ತಂಗಡಿ

ಕರ್ನಾಟಕ ಸರ್ಕಾರ

ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ,
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ದಾವಣಗೆರೆ.

ಸಂಖ್ಯೆ:ಕಾಪಾಇಂ/ಪಂರಾಇಂ/ವಿದಾ/ಇ-ಪ್ರೊಕ್ಯೂರ್ ಮೆಂಟ್//2026-27/210
ದಿನಾಂಕ:-06/5/2026

ಕೆ.ಪಿ.ಪಿ ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಈ ವಿಭಾಗದಿಂದ 2026-27ನೇ ಸಾಲಿಗೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ದಾವಣಗೆರೆ ಹಾಗೂ 5 ಉಪವಿಭಾಗಗಳಿಗೆ ಅಗತ್ಯವಿರುವ ಡಾಟಾ ಎಂಟ್ರಿ ಆಪರೇಟರ್‌ಗಳು, ವಾಹನ ಚಾಲಕರು ಮತ್ತು ಗ್ರೂಪ್-ಡಿ ಸೇವೆಯನ್ನು ಹೊರ ಸಂಪನ್ಮೂಲಗಳಿಂದ ಪಡೆಯಲು ಕರೆದಿರುವ ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಇಲಾಖಾ ನಿಯಾಮಾವಳಿಯ ಮೇರೆಗೆ ಕೆಪಿಪಿ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು Standard bid documents ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:16-5-2026 ರ ಸಾಯಂಕಾಲ 5.00 ಗಂಟೆಯವರೆಗೆ ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ವೆಬ್ ಸೈಟ್‌ನಲ್ಲಿ ನೋಡಬಹುದು.

ವಾಸಾಇ/ಡಿಪಿಜಿ/64/ ಕೆಎಸ್ಎಂಸಿಎ/2026-27

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಪಂ.ರಾ.ಇಂ.ವಿಭಾಗ, ದಾವಣಗೆರೆ.

ಕರ್ನಾಟಕ ಸರಕಾರ (ಜಿಲ್ಲಾ ಪಂಚಾಯತ್, ಗದಗ)

ಕಾರ್ಯನಿರ್ವಾಹಕ ಇಂಜಿನೀಯರ,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಗದಗ.

ನಂ:ಪಂ.ರಾಜ್.ಇಂ.ವಿ/ಗದಗ/ಪಿಬಿ.3/ಟೆಂಡರ/2026-27/257

ದಿನಾಂಕ : 06-05-2026

ಕೆಪಿಪಿ ಪೋರ್ಟಲ್ ಟೆಂಡರ ಪ್ರಕಟಣೆ
Standard Bid Document KW-1, KW-2,

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್-2000 ನಿಯಮದಂತೆ Standard Bid Document KW-1,KW-2, ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ 9 ಕಾಮಗಾರಿಗಳ ಟೆಂಡರನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ : 2025-26 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ, ಟೆಂಡರನ್ನು ಆಹ್ವಾನಿಸಲಾಗಿದೆ. ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, (https://kppp.karnataka.gov.in) ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ ಈ ಕೆಳಗಿನಂತೆ ಇರುತ್ತವೆ.

WORK_INDENT : 25786, 26379, 26380, 26382, 26385, 26389, 26407, 26417, 26422

ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ. **16.77** ಲಕ್ಷ ಮತ್ತು ಗರಿಷ್ಠ ಮೊತ್ತ ರೂ. **25.15** ಲಕ್ಷಗಳು ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ :- ಅರ್ಜಿ ಬೆಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಇ.ಎಂ.ಡಿ. ಸಂಬಂಧಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.

ಇ-ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್-ಬಿ ಯನ್ನು ವೆಬ್‌ಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ : **07-05-2026** ರಿಂದ **22-05-2026** ರಂದು 16.00 ಗಂಟೆಯವರೆಗೆ. ಟೆಂಡರ ತೆರೆಯುವ ದಿನಾಂಕ : **25-05-2026** ರಂದು 16.30 ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗೆದಾರರಲ್ಲಿ ಆರ್ಥಿಕ ಬಿಡ್‌ದಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ 20 ದಿನಗಳ ಒಳಗಾಗಿ (ಷರತ್ತು ಕ್ರ.ಸಂ :13 ರಂತೆ) ಭರಣಾ ಮಾಡಬೇಕು. ಇ-ಪದ್ಧತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಪಂ.ರಾಜ್. ಇಂಜಿನೀಯರಿಂಗ್ ವಿಭಾಗ,
ಗದಗ

ವಾಸಾಸಂಇ/ಗದಗ/ಕೆಎಸ್ಎಂಸಿಎ/49/2026-27

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರು, ಎಚ್.ಬಿ.ಸಿ ವಿಭಾಗ ಅಥಣಿ-591304, ಕಾರ್ಯಾಲಯ,ತಾ:ಅಥಣಿ ಜಿ:ಬೆಳಗಾವಿ(ಕರ್ನಾಟಕ)

ಸಂ.ಕನೀನಿನಿ/ಎಚ್.ಬಿ.ಸಿ/ಪಿಬಿ/ಟೆಂಡರ್/2026-27/410 ದಿನಾಂಕ: 05.05.2026

ಅಲ್ಪಾವಧಿ ಟೆಂಡರ ಅಧಿಸೂಚನೆ
(ಕೆ.ಪಿ.ಪಿ.-ಸಂಗ್ರಹಣಾ ಕೋಶದ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಎಚ್.ಬಿ.ಸಿ ವಿಭಾಗ ಅಥಣಿ ತಾ:ಅಥಣಿ ಜಿ:ಬೆಳಗಾವಿ ಇವರು ಕಾಮಗಾರಿಯನ್ನು ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-4 ನಿಯಮದನ್ವಯ ಮೊದಲನೇ ಹಾಗೂ ಎರಡನೇ ಲಕೋಟೆಯನ್ನು ಈ ಸಂಗ್ರಹಣಾ ಕೋಶದ ಮುಖಾಂತರ ಶೇಕಡಾವಾರು ಟೆಂಡರನ್ನು, ಪಿ.ಡಬ್ಲೂಡಿ ಕ್ಲಾಸ್-1 ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಟೆಂಡರನ್ನು ಅಹ್ವಾನಿಸಿರುತ್ತಾರೆ.

ಸದರಿ ಕಾಮಗಾರಿಗಳಿಗೆ ಮೊದಲನೇ ಹಾಗೂ ಎರಡನೇ ಕವರಿನ ವಿಧಾನದಲ್ಲಿ (as per KTPP act 2000) ಅನುಸರಿಸಬೇಕು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ www.kpp-portal.karnataka.gov.in ಮೂಲಕ ಪಡೆದುಕೊಳ್ಳಬಹುದು ಮತ್ತು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸಲ್ಲಿಸಬಹುದು.

ಟೆಂಡರಗಿಟ್ಟ ಅಂದಾಜು ಮೊತ್ತ ರೂ. 422.00 ಲಕ್ಷ

1. ಇ ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ:07.05.2026 ರ 10.30 ಬೆಳಿಗ್ಗೆ ರಿಂದ 15.05.2026 ರ 4.00 ಸಾಯಂಕಾಲ, 2.ಪ್ರಿ ಬಿಡ್ ಮಿಟಿಂಗ್ ದಿನಾಂಕ: (ಕಾ.ನಿ.ಇಂ. ಕನೀನಿನಿ ಎಚ್.ಬಿ.ಸಿ. ವಿಭಾಗ ಅಥಣಿ):ದಿನಾಂಕ 12.05.2026 ರ 11.00 ಬೆಳಿಗ್ಗೆ , 3. ಟೆಂಡರ್ ಪ್ರಶ್ನೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ: 13.05.2026 ರ 4.00 ಸಾಯಂಕಾಲ, 4.ಪೂರ್ಣವಾಗಿ ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ:07.05.2026 ರ 10.30 ಬೆಳಿಗ್ಗೆ ರಿಂದ 15.05.2026 ರ 4.00 ಸಾಯಂಕಾಲ, 5. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (ಎಚ್.ಬಿ.ಸಿ ವಿಭಾಗ ಕಛೇರಿ ಅಥಣಿಯಲ್ಲಿ): 18.05.2026 ರ 11.00 ಬೆಳಿಗ್ಗೆ, 6. ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ (ಎಚ್.ಬಿ.ಸಿ ವಿಭಾಗ ಕಛೇರಿ ಅಥಣಿಯಲ್ಲಿ):20.05.2026 ರ ಬೆಳ್ಳಿಗ್ಗೆ 11.00 ಗಂಟೆಗೆ (ತಾಂತ್ರಿಕ ಬಿಡ್ ಅನುಮೊದನೆ ನಂತರ)

ಇನ್ನೂಳಿದಂತೆ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇ ಸಂಗ್ರಹಣಾ ಕೋಶ ವೆಬ್ ಸೈಟ್ http//:www.kppp. karnataka.gov.in/kpp-protal/index. seam link ಮುಖಾಂತರ ಹಾಗೂ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಕನೀನಿನಿ ಎಚ್.ಬಿ.ಸಿ ವಿಭಾಗ, ಅಥಣಿ

DIPR/BGM/RO-NO-199/KSMCA/2026-27

ಕರ್ನಾಟಕ ಸರ್ಕಾರ

ನಗರಸಭೆ ಕಾರ್ಯಾಲಯ, ಶಹಾಪುರ

ಜಿ: ಯಾದಗಿರಿ. ಕರ್ನಾಟಕ ರಾಜ್ಯ.
Website:www.shahapurcity.gov.in e-mail: itstaff_ulb_shahapur@yahoo.com,

ಕ್ರ.ಸಂ/ನಸಶ/ಟೆಂಡರ್/ಜಾ.ಪ್ರ./2026-27 ದಿನಾಂಕ:05.05.2026

ಇ-ಪ್ರೆಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999-2000ರ ಪ್ರಕಾರ ಪಾರದರ್ಶಕತೆ ಕಾಯ್ದೆ-2000 ನಿಯಮದಂತೆ 2025-26ನೇ ಸಾಲಿನ ಅಮೃತ್ 2.0 ಅನುದಾನದಲ್ಲಿ ತೆಗೆದುಕೊಂಡ ಕಾಮಗಾರಿಯ ಅರ್ಹ ಗುತ್ತಿಗೆದಾರರಿಗೆ/ ಏಜೇನ್ಸಿರವರು ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗೊಳಪಟ್ಟಂತೆ ಇ-ಪ್ರೆಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ www.kppp.karnatak.gov.in ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ.

1) Name of works: IMPROVEMENT OF NAGARKERE (LAKE) IN SHAHAPUR CMC LIMITS UNDER AMRUT 2.0. **Indent Number:** DMA/2026-27/OW/WORK_INDENT57633. **Estimate cast (in lakhs):** 234.24. **E M D (in Rs):** As per E-Portal. **Class of contractor:** Class 1 and Above.

1) ಟೆಂಡರ್ ಪ್ರಾರಂಭ ದಿನಾಂಕ: 05/05/2026 **2)** ಭರ್ತಿ ಮಾಡಿದ ಟೆಂಡರಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 19/05/2026 ಸಾಯಂಕಾಲ 5:30 ಘಂಟೆಗೆ **3)** ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 21/05/2026 ಬೆಳಿಗ್ಗೆ 11.00 ಘಂಟೆಗೆ **4)** ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: 25/05/2026 ಬೆಳಿಗ್ಗೆ 11.00 ಘಂಟೆಗೆ **5)** ವಿಳಾಸ: www.kppp.karnatak.gov.in

ಸಹಿ/- ಪೌರಾಯುಕ್ತರು
ನಗರಸಭೆ ಶಹಾಪುರ

ವಾ.ಸಾ.ಸಂ.ಇ/ಯಾದಗಿರಿ/53/ಕೆ.ಎಸ್.ಎಂ.ಸಿ.ಎ/2026-27

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ
ಮಂಗಳೂರು ವಿಭಾಗ, ಮಂಗಳೂರು

ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ:(07ಇ/56ಇ/66ಇ):2026-27:ಜೆಇ-1 **ದಿನಾಂಕ: 05.05.2026**

ಅಲ್ಪಾವಧಿ ಟೆಂಡರ್ ಪ್ರಕಟಣೆ-2ನೇ ಕರೆ/3ನೇ ಕರೆ/4ನೇ ಕರೆ /ತಿದ್ದುಪಡಿ
(ಕರ್ನಾಟಕ ಸಾರ್ವಜನಿಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಲೆಕ್ಕಶೀರ್ಷಿಕೆ :-3054-04-337-1-10-200 ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ" ಯಡಿ ಇಂಡೆಂಟ್ ನಂ: 28966 ಈ ಕಾಮಗಾರಿಗೆ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 21.05.2026 (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಲೆಕ್ಕಶೀರ್ಷಿಕೆ:- 5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ - ಬಂಡವಾಳ ವೆಚ್ಚ" ಹೊಸ ಕಾಲುಸೇತುವೆ ಇಂಡೆಂಟ್ ನಂ: 32945, ಈ ಕಾಮಗಾರಿಗೆ **2ನೇ ಕರೆಯಾಗಿ,** ಮತ್ತು ಇಂಡೆಂಟ್ ನಂ: 32951, 32950, 32949 ಈ ಕಾಮಗಾರಿಗೆ **3ನೇ ಕರೆಯಾಗಿ,** ಮತ್ತು ಇಂಡೆಂಟ್ ನಂ: 33619, 32621, 32954, 32956, ಈ ಕಾಮಗಾರಿಗಳಿಗೆ **4ನೇ ಕರೆಯಾಗಿ,** ಟೆಂಡರ್ ಕರೆಯಲಾಗಿದ್ದು, ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 13.05.2026 (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಈ ಕಛೇರಿ ಟೆಂಡರ್ ನೋಟಿಫಿಕೇಶನ್ ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ(05ಇ):206-27:ಜೆಇ-1 :ದಿನಾಂಕ : 30.04.2026 ರಲ್ಲಿ ಪ್ರಕಟಿಸಲಾದ **ಲೆಕ್ಕಶೀರ್ಷಿಕೆ:-8443 - ಠೇವಣಿ ಕೊಡುಗೆಯಡಿ** ಇಂಡೆಂಟ್ ನಂ, 35874 **ಈ ಕಾಮಗಾರಿಗೆ ಟೆಂಡರ್ ಸಲ್ಲಿಸುವ ದಿನಾಂಕ: 07.05.2026** ರಂದು ಎಂದು ಓದಿಕೊಳ್ಳವುದು. ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.

ಮಂಗಳೂರು ತಾಲೂಕಿನ ದೇರೆಬೈಲಿನಲ್ಲಿರುವ ವಸತಿಗೃಹ ಸಂಖ್ಯೆ 15 & 86 ರಲ್ಲಿ ಬಾಗಿಲುಗಳ ದುರಸ್ತಿ, ನೀರಿನ ಟ್ಯಾಂಕ್ ಹಾಗೂ ಇತರೆ ದುರಸ್ತಿ (ಅಂದಾಜು ಮೊತ್ತ ರೂ.4.00 ಲಕ್ಷ) (ಇ.ಎಂ.ಡಿ" 10000/-) **ಈ ಖಾಲಿ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 08.05.2026 ದಿನಾಂಕ: 12.05.2026 ರಿಂದ ಖಾಲಿ ಟೆಂಡರ್ ಫಾರಂ ಪಡೆಯಬಹುದು. ಭರ್ತಿ ಮಾಡಿದ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 13.05.2026 ರ ಸಂಜೆ 4.00 ರ ವರೆಗೆ ಎಂದು ನಿಗದಿಪಡಿಸಲಾಗಿದೆ.** ಟೆಂಡರ್ ಫಾರಂ ಬೆಲೆ: ರೂ. 500.00+ತೆರಿಗೆ ಆಗಿರುತ್ತದೆ.

ಈ ಕಾಮಗಾರಿಗಳ ಕನಿಷ್ಠ ಅಂದಾಜು ಮೊತ್ತ ರೂ.5.90 ಲಕ್ಷ ಮತ್ತು ಗರಿಷ್ಠ ಮೊತ್ತ ರೂ.75.00 ಲಕ್ಷ ಆಗಿರುತ್ತದೆ. ಮೇಲಿನ ಕಾಮಗಾರಿಗಳಿಗೆ KW-1 & KW-3 ಪ್ರಮಾಣಿತ ಟೆಂಡರ್ ಪ್ರಮಾಣಿತ ಟೆಂಡರ್ ದಾಖಲೆಯ ಪ್ರಕಾರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಮೇಲಿನ ಕಾಮಗಾರಿಗಳ ಕೆಲಸದ ಮೌಲ್ಯ, ಟೆಂಡರ್‌ಗೆ ಹಾಕಲಾದ ಮೊತ್ತ, ಇ.ಎಮ್.ಡಿ. ಮೊತ್ತ ಇತ್ಯಾದಿ ಕುರಿತು ಹೆಚ್ಚಿನ ವಿವರಗಳನ್ನು ಕೆ.ಪಿ.ಪಿ ಪೋರ್ಟಲ್ **(www.kppp.karnataka.gov.in)** ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ವಿಷಯ ನಿರ್ವಾಹಕರು, ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 0824-2423169.

DIPR/DK/KSMCA/178/26-27 dt.06.05.2026

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್

ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಆಡಳಿತ ವೈದ್ಯಾಧಿಕಾರಿಗಳು, ತಾಲೂಕಾ ಸಾರ್ವಜನಿಕ ಆಸ್ಪತ್ರೆ,
ಬಸವನ ಬಾಗೇವಾಡಿ ರವರ ಕಾರ್ಯಾಲಯ

ಪೋನ್:08358-244081 ಇ-ಮೇಲ್:www.tlhbbagewadi@gmail.com

ಸಂ:ತಾ.ಸಾ.ಆ.ಬ.ಬಾ/ಟೆಂಡರ್/ಪಥ್ಯಾಹಾರ/2025-26/29/380 **ದಿನಾಂಕ:04.05.2026**

ಇ-ಪ್ರಕ್ಯುರಮೆಂಟ ಟೆಂಡರ್ ಪ್ರಕಟಣೆ

ತಾಲೂಕಾ ಸಾರ್ವಜನಿಕ ಆಸ್ಪತ್ರೆ ಬಸವನ ಬಾಗೇವಾಡಿ 2026-27 ನೇ ಸಾಲಿಗಾಗಿ ಉಪಹಾರ ಮತ್ತು ಸಿದ್ಧಪಡಿಸಿದ ಉತ್ತಮ ದರ್ಜೆಯ ಪಥ್ಯಾಹಾರ (ಚಪಾತಿ/ರೊಟ್ಟಿ, ಅನ್ನ, ಸಾಂಬಾರು) ಹಾಗೂ ಬಾಳೆ ಹಣ್ಣು, ಬೇಯಿಸಿದ ಕೋಳಿ ಮೊಟ್ಟೆ ಹಾಗೂ ಉತ್ತಮ ದರ್ಜೆಯ ಬ್ರೆಡ್, ಕಾಫೀ/ಟೀ ಸರಬರಾಜು ಮಾಡಲು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದ್ವಿ ಲಕೋಟೆ ಪದ್ಧತಿಯಲ್ಲಿ 8 ದಿನಗಳ ಕಾಲಾವಕಾಶ ನೀಡಿ ಮರು ಅಲ್ಪಾವಧಿ ಟೆಂಡರ ಆಹ್ವಾನಿಸಲಾಗಿದೆ. ಟೆಂಡರ ಅವಧಿಯು ಆದೇಶ ನೀಡುವ ದಿನಾಂಕದಿಂದ 31.03.2027 ರ ವರೆಗೆ ಮಾತ್ರ ಇರುತ್ತದೆ. ಟೆಂಡರಿನ ಅಂದಾಜು ಮೌಲ್ಯ ರೂ.30,00,000/- ಗಳು ಇದ್ದು, ಟೆಂಡರ್ ವಿವರ ಈ ಕೆಳಗಿನಂತಿದೆ.

ಟೆಂಡರಿನಲ್ಲಿ ಭಾಗವಹಿಸಲು ಇಚ್ಚಿಸುವವರು ಇ-ಪ್ರೊಕ್ಯೂರ್‌ಮೆಂಟ್ ವಿಳಾಸ http://kppp.karnataka.gov.in ವೆಬ್‌ಸೈಟಿನಲ್ಲಿ ಮಾಹಿತಿ ಪಡೆದು ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಆಡಳಿತ ವೈದ್ಯಾಧಿಕಾರಿಗಳು, ತಾಲೂಕಾ ಸಾರ್ವಜನಿಕ ಆಸ್ಪತ್ರೆ ಬಸವನ ಬಾಗೇವಾಡಿ, ಇವರಿಂದ ಪಡೆಯಬಹುದು. ಮೊ:9448920612, 9740494801

ಇ-ಮೇಲ್: tlhbbagewadi@gmail.com

ಟೆಂಡರ ವಿವರ

ಟೆಂಡರ್ ಪ್ರಕಟಣೆ ಸಂಖ್ಯೆ: DHFWS/2025-26/SE1973/Call-2

01) ಇ-ಪೋರ್ಟಲ್ ಟೆಂಡರ ಅಪ್ಲೋಡ್ ಮಾಡುವ ದಿನಾಂಕ: As per portal, 04.05.2026

02) ಇ-ಪೋರ್ಟಲ್ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: As per portal, 12.05.2026, ಸಂಜೆ 4.30 ಘಂಟೆಗೆ.

03) ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: As per portal, 14.05.2026 ಬೆಳಿಗ್ಗೆ 11.00 ಘಂಟೆಗೆ.

04) ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ: As per portal, 18.05.2026 ಬೆಳಿಗ್ಗೆ 11.00 ಘಂಟೆಗೆ.

ಸೂಚನೆ: 1) ಒಂದು ವೇಳೆ ತಾಂತ್ರಿಕ ಹಾಗೂ ಹಣಕಾಸು ಬಿಡ್ ತೆರೆಯುವ ದಿನಾಂಕದಂದು ಸರಕಾರಿ ರಜೆ ಘೋಷಣೆಯಾದಲ್ಲಿ ಆಡಳಿತಾತ್ಮಕ ಹಾಗೂ ತಾಂತ್ರಿಕ ತೊಂದರೆಯಾದಲ್ಲಿ ಮುಂದಿನ ಕರ್ತವ್ಯ ದಿನದಂದು ತೆರೆಯಲಾಗುವುದು.

ಸಹಿ/- ಆಡಳಿತ ವೈದ್ಯಾಧಿಕಾರಿಗಳು,
ತಾಲೂಕಾ ಸಾರ್ವಜನಿಕ ಆಸ್ಪತ್ರೆ,
ಬಸವನ ಬಾಗೇವಾಡಿ

ವಾಸಾಸಂಇ/ವಿಜಯಪುರ/80/ಕೆಎಸ್ಎಂಸಿಎ/2026-27

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಧಾರವಾಡ
ಫೋ: (0836) 2213838 Email: eedharwad@gmail.com

ನಂ.ಎಚ್.ಡಿಎಂಸಿ/66/07/02/2026-27 **ದಿನಾಂಕ: 06-05-2026**

ಅಲ್ಪಾವಧಿ/ಪೂರ್ಣಾವಧಿ ಇ-ಟೆಂಡರ್ ಅಧಿಸೂಚನೆ

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಿವಿಧ ಯೋಜನೆ ಅನುದಾನದಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999-2000ರ ನಿಯಮದನ್ವಯ ಕರ್ನಾಟಕ ಪಬ್ಲಿಕ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಪಿಡಬ್ಲ್ಯುಡಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಈ ಕೆಳಕಂಡ ಕಾಮಗಾರಿಗಳ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಪಾಲಿಕೆ ವಾರ್ಡ ಸದಸ್ಯರ /ಮಹಾಪೌರರ/ಉಪಮಹಾಪೌರರ/ಅಮೃತ 2.0 ಅನುದಾನ

1) ಇಂಡೆಂಟ್ ನಂ. **53896/9.93** ಲಕ್ಷ/ಸಾಮಾನ್ಯ **2)** ಇಂಡೆಂಟ್ ನಂ. **54610/10.00**ಲಕ್ಷ/ಸಾಮಾನ್ಯ **3)** ಇಂಡೆಂಟ್ ನಂ. **54149/13.00** ಲಕ್ಷ/ಸಾಮಾನ್ಯ **4)** ಇಂಡೆಂಟ್ ನಂ. **54147/2.25** ಲಕ್ಷ/ಸಾಮಾನ್ಯ **5)** ಇಂಡೆಂಟ್ ನಂ. **54612/10.00** ಲಕ್ಷ/ಸಾಮಾನ್ಯ **6)** ಇಂಡೆಂಟ್ ನಂ. **49139/2.00**ಲಕ್ಷ/ಸಾಮಾನ್ಯ **7)** ಇಂಡೆಂಟ್ ನಂ. **56116/8.50** ಲಕ್ಷ/ಪರಿಶಿಷ್ಟ ಜಾತಿ **8)** ಇಂಡೆಂಟ್ ನಂ. **55124/30.00** ಲಕ್ಷ/ಸಾಮಾನ್ಯ **9)** ಇಂಡೆಂಟ್ ನಂ. **55128/10.00** ಲಕ್ಷ/ಸಾಮಾನ್ಯ **10)** ಇಂಡೆಂಟ್ ನಂ. **54105/ 14.00** ಲಕ್ಷ/ಸಾಮಾನ್ಯ **11)** ಇಂಡೆಂಟ್ ನಂ. **48796/10.00** ಲಕ್ಷ/ ಸಾಮಾನ್ಯ **12)** ಇಂಡೆಂಟ್ ನಂ. **54159/4.05** ಲಕ್ಷ/ಸಾಮಾನ್ಯ **13)** ಇಂಡೆಂಟ್ ನಂ. **53141/7.10** ಲಕ್ಷ/ಸಾಮಾನ್ಯ **14)** ಇಂಡೆಂಟ್ ನಂ. **53145/18.45** ಲಕ್ಷ/ಸಾಮಾನ್ಯ **15)** ಇಂಡೆಂಟ್ ನಂ. **54629/7.00** ಲಕ್ಷ/ಸಾಮಾನ್ಯ **16)** ಇಂಡೆಂಟ್ ನಂ. **54075/15.00** ಲಕ್ಷ/ಸಾಮಾನ್ಯ **17)** ಇಂಡೆಂಟ್ ನಂ. **54145/15.00** ಲಕ್ಷ/ಸಾಮಾನ್ಯ **18)** ಇಂಡೆಂಟ್ ನಂ. **53571/25.00** ಲಕ್ಷ/ಸಾಮಾನ್ಯ **19)** ಇಂಡೆಂಟ್ ನಂ. **54626/4.10** ಲಕ್ಷ/ಸಾಮಾನ್ಯ **20)** ಇಂಡೆಂಟ್ ನಂ. **54158/5.11** ಲಕ್ಷ/ಸಾಮಾನ್ಯ **21)** ಇಂಡೆಂಟ್ ನಂ. **54141/10.00** ಲಕ್ಷ/ಸಾಮಾನ್ಯ **22)** ಇಂಡೆಂಟ್ ನಂ. **51287/14.10** ಲಕ್ಷ/ಸಾಮಾನ್ಯ **23)** ಇಂಡೆಂಟ್ ನಂ. **54630/35.00** ಲಕ್ಷ/ಸಾಮಾನ್ಯ **24)** ಇಂಡೆಂಟ್ ನಂ. **56117/10.00** ಲಕ್ಷ/ಸಾಮಾನ್ಯ **25)** ಇಂಡೆಂಟ್ ನಂ. **53994/32.00** ಲಕ್ಷ/ಸಾಮಾನ್ಯ **26)** ಇಂಡೆಂಟ್ ನಂ. **53101/38.00** ಲಕ್ಷ/ಸಾಮಾನ್ಯ **27)** ಇಂಡೆಂಟ್ ನಂ. **53103/6.50** ಲಕ್ಷ/ಸಾಮಾನ್ಯ **28)** ಇಂಡೆಂಟ್ ನಂ. **53075/13.00** ಲಕ್ಷ/ಸಾಮಾನ್ಯ **29)** ಇಂಡೆಂಟ್ ನಂ. **54088/26.60** ಲಕ್ಷ/ಸಾಮಾನ್ಯ **30)** ಇಂಡೆಂಟ್ ನಂ. **53901/25.00** ಲಕ್ಷ/ಸಾಮಾನ್ಯ **31)** ಇಂಡೆಂಟ್ ನಂ. **49066/7.27** ಲಕ್ಷ/ಸಾಮಾನ್ಯ **32)** ಇಂಡೆಂಟ್ ನಂ. **49822/5.00** ಲಕ್ಷ/ಸಾಮಾನ್ಯ **33)** ಇಂಡೆಂಟ್ ನಂ. **54391/2.20** ಲಕ್ಷ/ಸಾಮಾನ್ಯ **34)** ಇಂಡೆಂಟ್ ನಂ. **51957/10.00** ಲಕ್ಷ/ಸಾಮಾನ್ಯ **35)** ಇಂಡೆಂಟ್ ನಂ. **52551/3.00** ಲಕ್ಷ/ಸಾಮಾನ್ಯ **36)** ಇಂಡೆಂಟ್ ನಂ. **52217/23.60** ಲಕ್ಷ/ಸಾಮಾನ್ಯ **37)** ಇಂಡೆಂಟ್ ನಂ. **54745/6.00** ಲಕ್ಷ/ಸಾಮಾನ್ಯ **38)** ಇಂಡೆಂಟ್ ನಂ. **56235/30.27** ಲಕ್ಷ/ಪರಿಶಿಷ್ಟ ಜಾತಿ **39)** ಇಂಡೆಂಟ್ ನಂ. **56205/8.05** ಲಕ್ಷ/ಪರಿಶಿಷ್ಟ ಜಾತಿ **40)** ಇಂಡೆಂಟ್ ನಂ. **56191/8.05** ಲಕ್ಷ/ಸಾಮಾನ್ಯ **41)** ಇಂಡೆಂಟ್ ನಂ. **56152/12.00** ಲಕ್ಷ/ಪ್ರವರ್ಗ-2ಎ **42)** ಇಂಡೆಂಟ್ ನಂ. **55242/25.00** ಲಕ್ಷ/ಪರಿಶಿಷ್ಟ ಜಾತಿ **43)** ಇಂಡೆಂಟ್ ನಂ. **56145/25.00** ಲಕ್ಷ/ಸಾಮಾನ್ಯ **44)** ಇಂಡೆಂಟ್ ನಂ. **57647/11.50**ಲಕ್ಷ/ಸಾಮಾನ್ಯ **45)** ಇಂಡೆಂಟ್ ನಂ. **57649/30.00** ಲಕ್ಷ/ಪರಿಶಿಷ್ಟ ಜಾತಿ **46)** ಇಂಡೆಂಟ್ ನಂ. **56949/10.30** ಲಕ್ಷ/ಸಾಮಾನ್ಯ **47)** ಇಂಡೆಂಟ್ ನಂ. **55951/2.50** ಲಕ್ಷ/ಸಾಮಾನ್ಯ **48)** ಇಂಡೆಂಟ್ ನಂ. **56976/25.00** ಲಕ್ಷ/ಸಾಮಾನ್ಯ **49)** ಇಂಡೆಂಟ್ ನಂ. **55327/21.80** ಲಕ್ಷ/ಸಾಮಾನ್ಯ **50)** ಇಂಡೆಂಟ್ ನಂ. **58004/34.00** ಲಕ್ಷ/ಸಾಮಾನ್ಯ **51)** ಇಂಡೆಂಟ್ ನಂ. **57958/5.00** ಲಕ್ಷ/ಸಾಮಾನ್ಯ **52)** ಇಂಡೆಂಟ್ ನಂ. **57360/5.00** ಲಕ್ಷ/ಸಾಮಾನ್ಯ **53)** ಇಂಡೆಂಟ್ ನಂ. **54100/20.00** ಲಕ್ಷ/ಸಾಮಾನ್ಯ **54)** ಇಂಡೆಂಟ್ ನಂ. **52924/4.00**ಲಕ್ಷ/ಸಾಮಾನ್ಯ **55)** ಇಂಡೆಂಟ್ ನಂ. **52884/5.00** ಲಕ್ಷ/ಸಾಮಾನ್ಯ **56)** ಇಂಡೆಂಟ್ ನಂ. **49114/34.00** ಲಕ್ಷ/ಸಾಮಾನ್ಯ. **57)** ಇಂಡೆಂಟ್ ನಂ. **54567/45.00** ಲಕ್ಷ/ಪ್ರವರ್ಗ-1 **58)** ಇಂಡೆಂಟ್ ನಂ. **57619/8.00** ಲಕ್ಷ/ಪ್ರವರ್ಗ-2ಎ **59)** ಇಂಡೆಂಟ್ ನಂ. **57622/7.00** ಲಕ್ಷ/ಪರಿಶಿಷ್ಟ ಜಾತಿ **60)** ಇಂಡೆಂಟ್ ನಂ. **57621/19.00** ಲಕ್ಷ/ಪರಿಶಿಷ್ಟ ಜಾತಿ **61)** ಇಂಡೆಂಟ್ ನಂ. **56778/12.63** ಲಕ್ಷ/ಪ್ರವರ್ಗ-2ಎ **62)** ಇಂಡೆಂಟ್ ನಂ. **56779/12.00** ಲಕ್ಷ/ಪ್ರವರ್ಗ-1 **63)** ಇಂಡೆಂಟ್ ನಂ. **56777/25.75** ಲಕ್ಷ/ಸಾಮಾನ್ಯ. **64)** ಇಂಡೆಂಟ್ ನಂ. **57692/8.00** ಲಕ್ಷ/ಪರಿಶಿಷ್ಟ ಜಾತಿ **65)** ಇಂಡೆಂಟ್ ನಂ. **57956/5.00** ಲಕ್ಷ/ಸಾಮಾನ್ಯ. **66)** ಇಂಡೆಂಟ್ ನಂ. **57995/4.88** ಲಕ್ಷ/ಸಾಮಾನ್ಯ. **67)** ಇಂಡೆಂಟ್ ನಂ. **57993/5.00** ಲಕ್ಷ/ಪ್ರವರ್ಗ-2ಎ **68)** ಇಂಡೆಂಟ್ ನಂ. **57991/6.30** ಲಕ್ಷ/ಸಾಮಾನ್ಯ **69)** ಇಂಡೆಂಟ್ ನಂ. **57576/410.00** ಲಕ್ಷ/ಸಾಮಾನ್ಯ.

ಒಟ್ಟು 69 ಕಾಮಗಾರಿಗಳು ಮೊತ್ತ ರೂ.1417.29 ಲಕ್ಷಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು **ಕಾರ್ಯನಿರ್ವಾಹಕ ಅಭಿಯಂತರರು ಧಾರವಾಡ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂಖ್ಯೆ: 0836-2213838** ರಿಂದ ಮಾಹಿತಿ ಪಡೆಯಬಹುದು ಮತ್ತು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ **http://www.kppp.karnataka.gov.in** ರಲ್ಲಿ ಪಡೆಯಬಹುದು. ಒಂದು ವೇಳೆ ಸದರಿ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರಕಾರ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಅ.ನಂ. 1 ರಿಂದ 69 ರವರೆಗೆ **ದಿನಾಂಕ: 08-05-2026** ರಿಂದ ಪಡೆಯಬಹುದಾಗಿದೆ.

ಈ ಮೇಲಿನ ಕಾಮಗಾರಿಗಳಿಗೆ (1 ರಿಂದ 55 ಕ್ಕೆ) — 1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 27-05-2026 ಸಂಜೆ 04:00 ಗಂಟೆ; 2) ಟೆಂಡರ್ ತೆರೆಯುವ ದಿನಾಂಕ: 29-05-2026 ಬೆಳಿಗ್ಗೆ 10:00 ಗಂಟೆ

ಈ ಮೇಲಿನ ಕಾಮಗಾರಿಗಳಿಗೆ (56 ರಿಂದ 68 ಕ್ಕೆ) — 1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 16-05-2026 ಸಂಜೆ 04.00 ಗಂಟೆ; 2) ಟೆಂಡರ್ ತೆರೆಯುವ ದಿನಾಂಕ : 18-05-2026 ಬೆಳಿಗ್ಗೆ 10:00 ಗಂಟೆ

ಈ ಮೇಲಿನ ಕಾಮಗಾರಿಗಳಿಗೆ (69 ಕ್ಕೆ) — 1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 16-06-2026 ಸಂಜೆ 04.00 ಗಂಟೆ
2) ಟೆಂಡರ್ ತೆರೆಯುವ ದಿನಾಂಕ: 17-06-2026 ಸಂಜೆ 04:30 ಗಂಟೆ 3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 22-06-2026 ಸಂಜೆ 04:30 ಗಂಟೆ

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಧಾರವಾಡ.

ಡಿಐಪಿಆರ್/ಧಾರವಾಡ/134/ಮಣಿಪಾಲ್/2026-27



ಭಾರತದ ಶೌರ್ಯಗಾಥೆ

ಭಾರತ ಮತ್ತು ಪಾಕಿಸ್ತಾನದ ನಡುವಿನ ಮಿಲಿಟರಿ ಸಮೀಕರಣವನ್ನೇ ಬದಲಿಸಿದ ಆಪರೇಷನ್ ಸಿಂದೂರ ನಡೆದು ಈಗ ಒಂದು ವರ್ಷ ಕಳೆದಿದೆ. ಈ ಸಂಘರ್ಷದ ಕುರಿತು ಹೊರಬಿದ್ದಿರುವ ಸಮಗ್ರ ಅಂತಾರಾಷ್ಟ್ರೀಯ ವರದಿಯೊಂದು ಭಾರತದ ಅಪ್ರತಿಮ ಯಶಸ್ಸನ್ನು ಎತ್ತಿ ಹಿಡಿದಿದೆ. ಭಾರತದ ನಿಖರ ದಾಳಿಗಳಿಂದ ಪಾಕಿಸ್ತಾನದ ಪ್ರಮುಖ ಸೇನಾ ಮೂಲಸೌಕರ್ಯಗಳು ಧ್ವಂಸಗೊಂಡಿದ್ದವು ಹಾಗೂ ಅಂತಿಮವಾಗಿ ಪಾಕಿಸ್ತಾನವೇ ಕದನ ವಿರಾಮಕ್ಕೆ ಮೊರೆ ಹೋಗುವಂತಾಗಿತ್ತು ಎಂದು ಈ ವರದಿ ಸಾಕ್ಷ್ಯಾಧಾರಿತವಾಗಿ ವಿವರಿಸಿದೆ.

ಬರೀ ಯುದ್ಧವಲ್ಲ

ಒಂದು ವರ್ಷದ ನಂತರ ಹಿಂತಿರುಗಿ ನೋಡಿದಾಗ, ಆಪರೇಷನ್ ಸಿಂದೂರ ಕೇವಲ ಯುದ್ಧ ವಿಮಾನಗಳ ಕಾಳಗವಾಗಿರಲಿಲ್ಲ. ಅದು ಭಾರತದ ತಾಂತ್ರಿಕ ಶಕ್ತಿ, ಸಂಘಟಿತ ಯುದ್ಧತಂತ್ರ ಮತ್ತು ದಕ್ಷ ನಾಯಕತ್ವದ ವಿಜಯವಾಗಿತ್ತು. ಪಾಕಿಸ್ತಾನದ ಸುಳ್ಳು ಸುದ್ದಿಗಳ ಅಬ್ಬರ ಅಂತಿಮವಾಗಿ ಭಾರತದ ನಿಖರ ಕ್ಷಿಪಣಿಗಳ ಅಬ್ಬರದ ಮುಂದೆ ಮಂಕಾಯಿತು. ಇಂದು ಈ ಕಾರ್ಯಾಚರಣೆ, ಆಧುನಿಕ ನೆಟ್‌ವರ್ಕ್ ಕೇಂದ್ರಿತ ಯುದ್ಧತಂತ್ರಕ್ಕೆ ಜಗತ್ತಿನಲ್ಲಿ ಒಂದು ಅತ್ಯುತ್ತಮ ಉದಾಹರಣೆಯಾಗಿ ಉಳಿದಿದೆ. ಇಷ್ಟಾದರೂ ಪಾಕಿಸ್ತಾನ ಭಯೋತ್ಪಾದಕರನ್ನು ಪೋಷಿಸುತ್ತಿರುವುದು ದುರಂತವೇ ಸರಿ.

ಪಾಕಿಸ್ತಾನ ವಿರುದ್ಧದ ಆಪರೇಷನ್ ಸಿಂದೂರಕ್ಕೆ ಒಂದು ವರ್ಷ

ಕಳೆದ ವರ್ಷ ಪಹಲ್ಗಾಮ್ ಉಗ್ರ ದಾಳಿಯ ಬಳಿಕ ಆರಂಭವಾದ ಆಪರೇಷನ್ ಸಿಂದೂರ ಭಾರತದ ರಾಷ್ಟ್ರೀಯ ಭದ್ರತಾ ತಂತ್ರದಲ್ಲಿ ಮಹತ್ವದ ಬದಲಾವಣೆಯ ತಂದಿತು. ಡ್ರೋನ್‌ಗಳು, ನೆಟ್‌ವರ್ಕಿಂಗ್ ಮತ್ತು ಕೃತಕ ಬುದ್ಧಿಮತ್ತೆ(ಎಐ) ಬಳಸಿ ದಾಳಿ ನಡೆಸುವಲ್ಲಿ ಇದು ಹೊಸ ಮಾದರಿಯಾಯಿತು. ಪಾಕಿಸ್ತಾನದ ಗಡಿಯಾಚೆಗಿನ ಭಯೋತ್ಪಾದನೆ ತಡೆಗಟ್ಟಲು ಭಾರತ ತೋರಿದ ರಾಜಕೀಯ ಇಚ್ಛಾಶಕ್ತಿಯ ಸಂಕೇತವಾಗಿ ಈ ಕಾರ್ಯಾಚರಣೆ ಕಂಡುಬಂತು. ಪ್ರಧಾನಿ ನರೇಂದ್ರ ಮೋದಿ ಭಾರತವು ಅಣು ಬೆದರಿಕೆಯನ್ನು ಸಹಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದರು. ಪಹಲ್ಗಾಮ್ ದಾಳಿಯಲ್ಲಿ 26 ಮಂದಿ ಮೃತಪಟ್ಟ ನಂತರ, ಮೇ 7ರಂದು ಭಾರತ ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದ ಒಂಬತ್ತು ಉಗ್ರ ಶಿಬಿರಗಳ ಮೇಲೆ ವಾಯು ದಾಳಿ ನಡೆಸಿ, ಸುಮಾರು 100 ಉಗ್ರರ ಹೆಡೆಮುರಿ ಕಟ್ಟಿತು. ಈ ದಾಳಿಗಳು ಬಹಾವಲ್ಪುರ, ಮುರಿದ್ಕೆ, ಸಿಯಾಲ್ಕೋಟ್, ಮುಜಾಫರಾಬಾದ್ ಸೇರಿದಂತೆ ಹಲವು ಪ್ರದೇಶಗಳನ್ನು ಒಳಗೊಂಡಿದ್ದವು. ಇದರಿಂದ ಉಂಟಾದ ಉದ್ವಿಗ್ನತೆಗೆ ಪಾಕಿಸ್ತಾನ ಪ್ರತಿದಾಳಿ ನಡೆಸಿದರೂ, ಭಾರತವು ಹೆಚ್ಚಿನ ದಾಳಿಗಳನ್ನು ವಿಫಲಗೊಳಿಸಿತು. ಮೇ 10ರಂದು ಹಾಟ್‌ಲೈನ್ ಮಾತುಕತೆ ಬಳಿಕ ಪರಿಸ್ಥಿತಿ ಶಾಂತವಾಯಿತು.

ಈ ಕಾರ್ಯಾಚರಣೆಯ ಬಳಿಕ ಭಾರತ ತನ್ನ ಸೇನಾ ಶಕ್ತಿಯನ್ನು ಹೆಚ್ಚಿಸಲು ಮಹತ್ವದ ಕ್ರಮಗಳನ್ನು ಕೈಗೊಂಡಿದೆ. ಹೊಸ ಕ್ಷಿಪಣಿಗಳು, ಡ್ರೋನ್‌ಗಳು, ಎಸ್-400 ವ್ಯವಸ್ಥೆಗಳು, ರಾಫೆಲ್ ಯುದ್ಧ ವಿಮಾನಗಳು ಮತ್ತು ಐಎನ್‌ಎಸ್ ಅರಿಧಮನ್ ಸೇರಿದಂತೆ ಹಲವು ಅಸ್ತ್ರಗಳನ್ನು ಸೇನೆಗೆ ಸೇರ್ಪಡೆಗೊಳಿಸಿದೆ.

ಏನಿದು ವರದಿ?: ಸ್ವಿಜರ್ಲೆಂಡ್ ಮೂಲದ ಸೆಂಟರ್ ಡಿ ಹಿಸ್ಟೊಯಿರ್ ಎಟ್ ಡಿ ಪ್ರೊಸ್ಪೆಕ್ಟಿವ್ ಮಿಲಿಟೈರ್ಸ್ (ಸಿಎಚ್‌ಪಿಎಂ) ಜನವರಿ 15, 2026ರಂದು ಬಿಡುಗಡೆ ಮಾಡಿದ ಈ ವರದಿ, ಯುದ್ಧದ ಆರಂಭಿಕ ಹಂತದ ಬಗ್ಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿದ್ದ ಭ್ರಮೆಯನ್ನು ಹೊಡೆದೋಡಿಸಿದೆ. ಮಿಲಿಟರಿ ಇತಿಹಾಸಕಾರ ಆಡ್ರಿಯನ್ ಫಾಂಟನೆಲ್ಲಾಜ್ ಸಿದ್ಧಪಡಿಸಿದ ಈ ವರದಿ, 2025ರ ಮೇ 7 ರಿಂದ 10ರವರೆಗೆ ನಡೆದ 88 ಗಂಟೆಗಳ ವಾಯು ಸಮರದಲ್ಲಿ ಭಾರತ ಹೇಗೆ ಪಾಕಿಸ್ತಾನದ ವಾಯುಪ್ರದೇಶದ ಮೇಲೆ ಸಂಪೂರ್ಣ ಹಿಡಿತ ಸಾಧಿಸಿತು ಎಂಬುದನ್ನು ಉಪಗ್ರಹ ಚಿತ್ರಗಳ ಸಮೇತ ವಿವರಿಸಿದೆ.



ಕಾರ್ಯಾಚರಣೆಯ ಕೇಂದ್ರಬಿಂದುವಾದ ಮಹಿಳಾ ಅಧಿಕಾರಿಗಳು

ಈ ಕಾರ್ಯಾಚರಣೆಯಲ್ಲಿ ಭಾರತೀಯ ಸಶಸ್ತ್ರ ಪಡೆಗಳ ಮಹಿಳಾ ಅಧಿಕಾರಿಗಳ ಪಾತ್ರ ದೇಶಕ್ಕೆ ಹೆಮ್ಮೆ ತಂದಿತು. ದಾಳಿಯ ನಂತರದ ಅಧಿಕೃತ ಸುದ್ದಿಗೋಷ್ಠಿಗಳಲ್ಲಿ ಭೂಸೇನೆ ಮತ್ತು ವಾಯುಸೇನೆಯ ಮಹಿಳಾ ಅಧಿಕಾರಿಗಳೇ ಮುಂಚೂಣಿಯಲ್ಲಿದ್ದು, ಸಂಕೀರ್ಣ ಮಿಲಿಟರಿ ವಿವರಗಳನ್ನು ಸಮಾಧಾನಚಿತ್ತದಿಂದ ಜಗತ್ತಿಗೆ ವಿವರಿಸಿದರು. ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ವಾಯುಸೇನೆಯ ಪರವಾಗಿ ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿದರೆ, ಕರ್ನಲ್ ಸೋಫಿಯಾ ಖುರೇಷಿ ಭೂಸೇನೆಯ ಪರವಾಗಿ ಕಾರ್ಯಾಚರಣೆಯ ಬಗ್ಗೆ ಮಾಹಿತಿ ನೀಡಿದರು. ಇದು ಭಾರತೀಯ ಸೇನೆಯ ಆಧುನೀಕರಣ ಮತ್ತು ಸ್ತ್ರೀ ಶಕ್ತಿಯ ಸಬಲೀಕರಣದ ಸಂಕೇತವಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮೆಚ್ಚುಗೆಗೆ ಪಾತ್ರವಾಯಿತು. ಯುದ್ಧದಂತಹ ತುರ್ತು ಪರಿಸ್ಥಿತಿಯಲ್ಲೂ ಭಾರತದ ಸಾಂಸ್ಥಿಕ ಬದಲಾವಣೆ ಮತ್ತು ವೃತ್ತಿಪರತೆಯನ್ನು ಈ ಅಧಿಕಾರಿಗಳು ಜಗತ್ತಿಗೆ ತೋರಿಸಿಕೊಟ್ಟರು.

ಪಹಲ್ಗಾಮ್ ದಾಳಿಗೆ ತಕ್ಕ ಪ್ರತ್ಯುತ್ತರ

2025ರ ಏಪ್ರಿಲ್ 22ರಂದು ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪಾಕ್ ಪ್ರೇರಿತ ಉಗ್ರರು ನಡೆಸಿದ ಭೀಕರ ದಾಳಿಗೆ ಪ್ರತೀಕಾರವಾಗಿ ಭಾರತ ಈ ಆಪರೇಷನ್ ಸಿಂದೂರ ಆರಂಭಿಸಿತ್ತು. ಮೇ 7ರಂದು ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿರುವ ಒಂಬತ್ತು ಪ್ರಮುಖ ಉಗ್ರಗಾಮಿ ನೆಲೆಗಳ ಮೇಲೆ ಭಾರತೀಯ ಪಡೆಗಳು ಏಕಕಾಲಕ್ಕೆ ದಾಳಿ ನಡೆಸಿದವು. ಇದಕ್ಕೆ ಪ್ರತಿಯಾಗಿ ಪಾಕಿಸ್ತಾನವೂ ವಾಯುದಾಳಿ ನಡೆಸಿದಾಗ ನಡೆದ ಸಂಘರ್ಷದಲ್ಲಿ ಭಾರತ ಮೊದಲು ಒಂದು ರಾಫೆಲ್, ಒಂದು ಮಿರಾಜ್-2000 ಮತ್ತು ಮಿಗ್-29 ಅಥವಾ ಸುಖೋಯ್-30 ವಿಮಾನಗಳನ್ನು ಕಳೆದುಕೊಂಡಿತು. ಇದನ್ನೇ ಪಾಕಿಸ್ತಾನ ದೊಡ್ಡದಾಗಿ ಬಿಂಬಿಸಿತ್ತು. ಆದರೆ, ಭಾರತದ ಅಸಲಿ ತಂತ್ರಗಾರಿಕೆ ಆರಂಭವಾಗಿದ್ದೇ ಅಲ್ಲಿಂದ.

ಉಪಗ್ರಹ ಸಾಕ್ಷ್ಯಗಳು ಮತ್ತು ಹಾನಿಯ ಅಂದಾಜು

ಪಾಕಿಸ್ತಾನದ ನೂರ್ ಖಾನ್, ಭೊಲಾರಿ, ಜಾಕೋಬಾಬಾದ್ ಮತ್ತು ಸರ್ಗೋದ ವಾಯುನೆಲೆಗಳಲ್ಲಿ ಭಾರಿ ಹಾನಿಯಾಗಿರುವುದನ್ನು ಉಪಗ್ರಹ ಚಿತ್ರಗಳು ಖಚಿತಪಡಿಸಿವೆ. ಸ್ವತಂತ್ರ ಭೌಗೋಳಿಕ ವಿಶ್ಲೇಷಕರು ಕೂಡ ಈ ದಾಳಿಗಳು ನಡೆದಿರುವುದನ್ನು ಸಮರ್ಥಿಸಿದ್ದಾರೆ. ಅಲ್ಲದೆ, ಭೊಲಾರಿ ವಾಯುನೆಲೆಯಲ್ಲಿ ಪಾಕಿಸ್ತಾನ ವಾಯುಸೇನೆಯ ಸಿಬ್ಬಂದಿ ಮೃತಪಟ್ಟಿರುವುದನ್ನು ಸಿಂಧ್ ಪ್ರಾಂತ್ಯದ ಮುಖ್ಯಮಂತ್ರಿ ಮುರಾದ್ ಅಲಿ ಶಾ ಒಪ್ಪಿಕೊಂಡಿದ್ದಾರೆ. ದಾಳಿ ನಡೆದ ಹಲವು ತಿಂಗಳುಗಳ ನಂತರವೂ ಅಲ್ಲಿ ದುರಸ್ತಿ ಕಾರ್ಯಗಳು ನಡೆಯುತ್ತಿರುವುದು ಈ ಹಾನಿಯ ಅಂದಾಜಿಗೆ ಮತ್ತಷ್ಟು ಸಾಕ್ಷ್ಯ ಒದಗಿಸಿದೆ.

ಭಾರತದ ಅಭೇದ್ಯ ರಕ್ಷಾ ಕವಚ

ಪಾಕಿಸ್ತಾನ ನೂರಾರು ಡ್ರೋನ್‌ಗಳು ಮತ್ತು ಹತ್ಫ್ ಕ್ಷಿಪಣಿಗಳ ಮೂಲಕ ಭಾರತದ ಮೇಲೆ ದಾಳಿಗೆ ಯತ್ನಿಸಿತು. ಆದರೆ ಭಾರತದ ಆಕಾಶ್‌ತೀರ್ ಮತ್ತು ಐಎಸಿಸಿಎಸ್ ಎಂಬ ಆಧುನಿಕ ರಕ್ಷಣಾ ಜಾಲ ಶತ್ರುವಿನ ದಾಳಿಯನ್ನು ಗಾಳಿಯಲ್ಲೇ ಹೊಡೆದುರುಳಿಸಿತು. ಅರ್ಧಕ್ಕಿಂತ ಹೆಚ್ಚು ಡ್ರೋನ್‌ಗಳನ್ನು ಭಾರತದ ಗನ್ ವ್ಯವಸ್ಥೆಗಳು ಪತ್ತೆಹಚ್ಚಿ ನಾಶಪಡಿಸಿದರೆ, ಉಳಿದವುಗಳನ್ನು ಎಲೆಕ್ಟ್ರಾನಿಕ್ ವಾರ್‌ಫೇರ್ ಮೂಲಕ ಹಾದಿ ತಪ್ಪಿಸಲಾಯಿತು.

ಪಾಕಿಸ್ತಾನದ ಗರ್ಭದೊಳಗೆ ಬ್ರಹ್ಮೋಸ್ ಗುಡುಗು

ಮೇ 10ರಂದು ಬೆಳಗಿನ ಜಾವ 2 ರಿಂದ 5 ಗಂಟೆಯ ನಡುವೆ ಭಾರತ ಅತ್ಯಂತ ನಿರ್ಣಾಯಕ ದಾಳಿ ನಡೆಸಿತು. ಭಾರತದ ನೆಲದಿಂದಲೇ ಉಡಾವಣೆಯಾದ ಬ್ರಹ್ಮೋಸ್, ಸ್ಕಾಲ್ಪ್-ಇಜಿ ಮತ್ತು ರಾಂಪೇಜ್ ಕ್ಷಿಪಣಿಗಳು ಪಾಕಿಸ್ತಾನದ ಒಳಗಿರುವ ಪ್ರಮುಖ ವಾಯುನೆಲೆಗಳನ್ನು ಧ್ವಂಸಗೊಳಿಸಿದವು.

- **ನೂರ್ ಖಾನ್ ವಾಯುನೆಲೆ: ಇಸ್ಲಾಮಾಬಾದ್ ಸಮೀಪದ ಈ ಪ್ರಮುಖ ನೆಲೆಯಲ್ಲಿದ್ದ ಕಮಾಂಡ್ ಸೆಂಟರ್ ಅನ್ನು ಬ್ರಹ್ಮೋಸ್ ಕ್ಷಿಪಣಿಗಳು ಪುಡಿಗಟ್ಟಿದವು.**
- **ಮುರೀದ್ ಮತ್ತು ರಹೀಮ್ ಯಾರ್ ಖಾನ್: ಇಲ್ಲಿನ ಡ್ರೋನ್ ನಿಯಂತ್ರಣ ಕೇಂದ್ರಗಳು ಮತ್ತು ರನ್-ವೇಗಳು ಹಾನಿಗೊಳಗಾದವು.**
- **ಸರ್ಗೋದ ಮತ್ತು ಭೊಲಾರಿ: ಈ ನೆಲೆಗಳಲ್ಲಿದ್ದ ಪಾಕಿಸ್ತಾನದ ಯುದ್ಧ ವಿಮಾನಗಳು ಹಾರುವ ಮೊದಲೇ ನೆಲದ ಮೇಲೆಯೇ ನಾಶವಾದವು.**

ಒಟ್ಟು 50ಕ್ಕೂ ಹೆಚ್ಚು ನಿಖರ ಕ್ಷಿಪಣಿಗಳನ್ನು ಭಾರತ ಬಳಸಿದ್ದು, ಇದರಿಂದ ಕಂಗೆಟ್ಟ ಪಾಕಿಸ್ತಾನ ಮೇ 10ರ ಮಧ್ಯಾಹ್ನದ ವೇಳೆಗೆ ಕದನ ವಿರಾಮಕ್ಕೆ ಮೊರೆ ಹೋಯಿತು.

ಶತ್ರುವಿನ ಕಣ್ಣು ಸೀಳಿದ ಭಾರತ: ಸೀಡ್ ಕಾರ್ಯಾಚರಣೆ

ಮೇ 8 ಮತ್ತು 9ರಂದು ಭಾರತ ಪಾಕಿಸ್ತಾನದ ವಾಯು ರಕ್ಷಣಾ ವ್ಯವಸ್ಥೆಯನ್ನು ಪೂರ್ಣವಾಗಿ ನಿಷ್ಕ್ರಿಯಗೊಳಿಸುವ ಸೀಡ್ ಕಾರ್ಯಾಚರಣೆ ಕೈಗೆತ್ತಿಕೊಂಡಿತು. ಚುನಿಯಾನ್ ಮತ್ತು ಪಸ್ರೂರ್‌ನಲ್ಲಿರುವ ಪಾಕಿಸ್ತಾನದ ರಡಾರ್‌ಗಳು ಮತ್ತು ಎಚ್‌ಕ್ಯೂ-9 ಕ್ಷಿಪಣಿ ಬ್ಯಾಟರಿಗಳನ್ನು ಇಸ್ರೇಲಿ ತಂತ್ರಜ್ಞಾನದ ಹ್ಯಾರೋಪ್ ಮತ್ತು ಹಾರ್ಪಿ ಲೊಯಿಟರಿಂಗ್ ಮುನಿಷನ್(ಆತ್ಮಹತ್ಯಾ ಡ್ರೋನ್) ಮೂಲಕ ಧ್ವಂಸಗೊಳಿಸಲಾಯಿತು. ಭಾರತದ ಎಸ್-400 ಕ್ಷಿಪಣಿ ವ್ಯವಸ್ಥೆ, ಸುಮಾರು 300 ಕಿ.ಮೀ ದೂರದಲ್ಲೇ ಶತ್ರು ವಿಮಾನಗಳನ್ನು ಪತ್ತೆಹಚ್ಚಿ ಹಿಮ್ಮೆಟ್ಟಿಸಿತು. ಇದರಿಂದ ಪಾಕಿಸ್ತಾನದ ಎಫ್-16 ಮತ್ತು ಜೆಎಫ್-17 ಯುದ್ಧ ವಿಮಾನಗಳಿಗೆ ತನ್ನದೇ ವಾಯುಪ್ರದೇಶದಲ್ಲಿ ಹಾರಾಡಲು ಭಯವಾಗುವಂತಹ ಸ್ಥಿತಿ ನಿರ್ಮಾಣವಾಯಿತು.



ಕಿರುಸುದ್ದಿ

ಕೇರಳ ಬಿಜೆಪಿಗೆ 3 ಸ್ಥಾನ, ಗಂಭೀರ ಎಚ್ಚರಿಕೆ: ಸಿಪಿಐ

ತಿರುವನಂತಪುರ: ಕೇರಳದ ವಿಧಾನಸಭಾ ಚುನಾವಣೆಯಲ್ಲಿ ಈ ಬಾರಿ ಯುಡಿಎಫ್ ಭರ್ಜರಿ ಗೆಲುವು ಸಾಧಿಸಿದೆ. ಈ ಮಧ್ಯೆ ಎಲ್ಲರ ಚಿತ್ತ ಕೇರಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆದ್ದ ಮೂರು ಸ್ಥಾನಗಳ ಮೇಲೆ ಹರಿದಿದೆ. ಈ ಮೂರು ಅಭ್ಯರ್ಥಿಗಳ ಗೆಲುವಿನ ಬಗ್ಗೆ ಎಲ್ಲಾ ಪಕ್ಷಗಳು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಇದು ರಾಜ್ಯದ ರಾಜಕೀಯಕ್ಕೆ ಅಪಾಯವನ್ನುಂಟುಮಾಡುತ್ತದೆ ಎಂದು ಸಿಪಿಐ ರಾಜ್ಯ ಕಾರ್ಯದರ್ಶಿ ಬಿನೋಯ್ ವಿಶ್ವಂ ಬುಧವಾರ ಹೇಳುವ ಮೂಲಕ ಸಣ್ಣ ಗೆಲುವು ಮುಂದೆ ದೊಡ್ಡ ಬದಲಾವಣೆ ತರಲಿದೆ ಎಂಬುದರ ಬಗ್ಗೆ ಸೂಚನೆ ನೀಡಿದ್ದಾರೆ.

ಹಿಂಸಾಚಾರಗಳಲ್ಲಿ ಭಾಗಿ ಆದವರನ್ನು ಬಂಧಿಸಿ: ಇಸಿ

ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಮತದಾನದ ನಂತರದ ಹಿಂಸಾಚಾರ ಮತ್ತು ವಿಧ್ವಂಸಕ ಕೃತ್ಯಗಳಲ್ಲಿ ಭಾಗಿಯಾಗಿರುವವರನ್ನು ತಕ್ಷಣ ಬಂಧಿಸುವಂತೆ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ರಾಜ್ಯದಲ್ಲಿ ನಡೆದ ಮತದಾನದ ನಂತರದ ಹಿಂಸಾಚಾರದ ಘಟನೆಗಳಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ವಿಯೆಟ್ನಾಂ ಜತೆಗೆ ಭಾರತ ವ್ಯಾಪಾರ ಗುರಿ ದುಪ್ಪಟ್ಟು

ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ಮತ್ತು ವಿಯೆಟ್ನಾಂ ಅಧ್ಯಕ್ಷ ಟೋ ಲಾಮ್ ಬುಧವಾರ ಹೊಸದಿಲ್ಲಿಯಲ್ಲಿ ನಡೆದ ಮಾತುಕತೆಯ ವೇಳೆ ಉಭಯ ದೇಶಗಳ ಬಾಂಧವ್ಯವನ್ನು ವರ್ಧಿತ ಸಮಗ್ರ ವ್ಯೂಹಾತ್ಮಕ ಪಾಲುದಾರಿಕೆ ಹಂತಕ್ಕೆ ಏರಿಸಿದ್ದಾರೆ.

ಉಭಯ ರಾಷ್ಟ್ರಗಳು 2030ರ ವೇಳೆಗೆ ವಾರ್ಷಿಕ 25 ಬಿಲಿಯನ್ ಅಮೆರಿಕನ್ ಡಾಲರ್ ವ್ಯಾಪಾರ ಗುರಿ ನಿಗದಿಪಡಿಸಿವೆ. ಕಳೆದ ದಶಕದಲ್ಲಿ ದ್ವಿಪಕ್ಷೀಯ ವ್ಯಾಪಾರ ದುಪ್ಪಟ್ಟಾಗಿದ್ದು, ಪ್ರಸ್ತುತ 16 ಬಿಲಿಯನ್ ಡಾಲರ್ ತಲುಪಿದೆ. ಡಿಜಿಟಲ್ ಪಾವತಿ, ಅಪರೂಪದ ಭೂಖನಿಜಗಳು, ಔಷಧೀಯ ವಸ್ತುಗಳು, ಶಿಕ್ಷಣ, ಬ್ಯಾಂಕಿಂಗ್ ಮತ್ತು ಸಂಸ್ಕೃತಿ ಸೇರಿದಂತೆ ಒಟ್ಟು 13 ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ಔಷಧ ಪ್ರಾಧಿಕಾರಗಳ ನಡುವಿನ ಒಪ್ಪಂದ ವಿಯೆಟ್ನಾಂನಲ್ಲಿ ಭಾರತೀಯ ಔಷಧಿಗಳ ಲಭ್ಯತೆಯನ್ನು ಹೆಚ್ಚಿಸಲಿದೆ ಮತ್ತು ಕೃಷಿ ರಫ್ತು ಪ್ರಕ್ರಿಯೆಗಳನ್ನು ಸುಗಮಗೊಳಿಸಲಿದೆ.

ಎರಡೂ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಪರಸ್ಪರ ಸಹಕಾರವನ್ನು ಹೆಚ್ಚಿಸಲಿವೆ. ಭಾರತದ ಯುಪಿಐ ಮತ್ತು ವಿಯೆಟ್ನಾಂನ ವೇಗದ ಪಾವತಿ ವ್ಯವಸ್ಥೆಗಳನ್ನು ಶೀಘ್ರದಲ್ಲೇ ಪರಸ್ಪರ ಜೋಡಿಸಲಾಗುವುದು. ಇಂಡೋ-ಪೆಸಿಫಿಕ್ ಮತ್ತು ದಕ್ಷಿಣ ಚೀನಾ ಸಮುದ್ರದ ಪರಿಸ್ಥಿತಿಯ ಕುರಿತು ಚರ್ಚಿಸಿದ ನಾಯಕರು, ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಗೆ ಬದ್ಧತೆ ವ್ಯಕ್ತಪಡಿಸಿದರು.

ಈ ವರ್ಷದ ಅಂತ್ಯದೊಳಗೆ ಭಾರತ-ಆಸಿಯಾನ್ ವ್ಯಾಪಾರ ಒಪ್ಪಂದವನ್ನು ನವೀಕರಿಸಲು ನಾಯಕರು ಒಪ್ಪಿಕೊಂಡರು. ಅಧ್ಯಕ್ಷ ಲಾಮ್, ಮಂಗಳವಾರ ಮೂರು ದಿನಗಳ ಅಧಿಕೃತ ಭೇಟಿಗಾಗಿ ಭಾರತಕ್ಕೆ ಆಗಮಿಸಿದ್ದರು.

ಪಂಜಾಬ್‌ನಲ್ಲಿ ಎರಡು ಕಡೆ ಬಾಂಬ್ ಸ್ಫೋಟ!

ಚಂಡೀಗಢ: ಪಂಜಾಬ್‌ನಲ್ಲಿ ಕೆಲವೇ ಗಂಟೆಗಳ ಅಂತರದಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ಸ್ಫೋಟ ಘಟನೆಗಳು ಭಾರೀ ಭೀತಿ ಸೃಷ್ಟಿಸಿದೆ. ಜಲಂಧರ್‌ನ ಗಡಿ ಭದ್ರತಾ ಪಡೆಯ ಪಂಜಾಬ್ ಗಡಿನಾಡಿನ ಪ್ರಧಾನ ಕಚೇರಿಯ ಹೊರಗೆ ಮಂಗಳವಾರ ರಾತ್ರಿ 8 ಗಂಟೆ ಸುಮಾರಿಗೆ ಮೊದಲ ಸ್ಫೋಟ ಸಂಭವಿಸಿದ್ದು, ಎರಡನೇ ಘಟನೆಯು ಅಮೃತಸರದ ಖಾಸಾ ಕಂಟೋನ್ಮೆಂಟ್ ಪ್ರದೇಶದ ಬಳಿ ಮಂಗಳವಾರ ರಾತ್ರಿ 11 ಗಂಟೆ ಸುಮಾರಿಗೆ ಸಂಭವಿಸಿದೆ.



ಘಟನೆಗಳಲ್ಲಿ ಯಾವುದೇ ಸಾವು-ನೋವು ವರದಿಯಾಗಿಲ್ಲ. ಸುಮಾರು 1 ಕಿಮೀ ದೂರದವರೆಗೆ ಸ್ಫೋಟದಂತಹ ಶಬ್ದ ಕೇಳಿಬಂದಿದೆ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದು, ಜಲಂಧರ್ ನಿಲ್ಲಿಸಿದ್ದ ಆಕ್ಟಿವಾಗೆ(ಸ್ಕೂಟರ್) ಬೆಂಕಿ ಹೊತ್ತಿಕೊಂಡಿದೆ. ತನಿಖೆ ನಡೆಸುತ್ತಿದ್ದೇವೆ ಎಂದು ಜಲಂಧರ್ ಪೊಲೀಸ್ ಆಯುಕ್ತ ಧನ್ಪ್ರೀತ್ ಕೌರ್ ಹೇಳಿದರು. ಈ ನಡುವೆ ಖಲಿಸ್ತಾನಿ ಲಿಬರೇಷನ್ ಆರ್ಮಿ ದಾಳಿಯ ಹೊಣೆ ಹೊತ್ತುಕೊಂಡಿರುವ ಪೋಸ್ಟ್ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಇತ್ತೀಚೆಗೆ ಶಂಭು ರೈಲ್ವೆ ಹಳಿಯಲ್ಲೂ ಸ್ಫೋಟ ನಡೆದಿದ್ದು, ಈಗಿನ ಎರಡೂ ಘಟನೆಗಳೊಂದಿಗೆ ಯಾವುದೇ ಸಂಬಂಧವಿದೆಯೇ ಎಂದು ಭದ್ರತಾ ಸಂಸ್ಥೆಗಳು ಪರಿಶೀಲಿಸುತ್ತಿವೆ. ಯಾವುದೇ ಸಂಘಟನೆ ಈ ಸ್ಫೋಟಗಳ ಹೊಣೆ ಹೊತ್ತಿಲ್ಲ.

ರಾಜೀನಾಮೆ ನೀಡಲ್ಲ, ವಜಾಗೊಳಿಸಲಿ: ದೀದಿ

ಕೋಲ್ಕತ್ತಾ: ನಾನು ನನ್ನ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡುವುದಿಲ್ಲ. ಕೇಂದ್ರವು ನನ್ನನ್ನು ವಜಾಗೊಳಿಸಬಹುದು ಎಂದು ಪಶ್ಚಿಮಬಂಗಾಳದ ನಿರ್ಗಮಿತ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಪಶ್ಚಿಮ ಬಂಗಾಳದ ನಿರ್ಗಮಿತ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ತಮ್ಮ ಪಕ್ಷದ ಹೊಸದಾಗಿ ಆಯ್ಕೆಯಾದ ಶಾಸಕರ ಸಭೆಯನ್ನುದ್ದೇಶಿಸಿ ಭಾಷಣದಲ್ಲಿ, ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಬಲವಂತವಾಗಿ ಸೋಲಿಸಲಾಗಿದೆ ಎಂದು ಹೇಳಿದ್ದಾರೆ . 1500 ಕ್ಕೂ ಹೆಚ್ಚು ತೃಣಮೂಲ ಕಾಂಗ್ರೆಸ್ ಕಚೇರಿಗಳನ್ನು ಹೈಜಾಕ್ ಮಾಡಲಾಗಿದೆ ಎಂದು ಅವರು ಆರೋಪಿಸಿದ್ದಾರೆ. ಬಂಗಾಳ ಚುನಾವಣಾ ಫಲಿತಾಂಶದ ನಂತರ ಇಂಡಿ ಕೂಟದಲ್ಲಿ ಹೆಚ್ಚಿನ ಒಗ್ಗಟ್ಟು ಇದೆ ಎಂದು ಅವರು ಹೇಳಿದರು. ರಾಜ್ಯವು ಚುನಾವಣೆಗೆ ಸಾಕ್ಷಿಯಾಗಿಲ್ಲ, ಆದರೆ ದೌರ್ಜನ್ಯಕ್ಕೆ ಸಾಕ್ಷಿಯಾಗಿದೆ ಎಂದು ಆರೋಪಿಸಿದ ಅವರು, ಚುನಾವಣೆಯಲ್ಲಿ ತೃಣಮೂಲ ಕಾಂಗ್ರೆಸ್ ಬಿಜೆಪಿಯನ್ನು ನೈತಿಕವಾಗಿ ಸೋಲಿಸಿದೆ ಎಂದು ಹೇಳಿದ್ದಾರೆ.

ಹತ್ತು ಶಾಸಕರು ಗೈರು: ಚುನಾವಣೆಯ ಸೋಲಿನ ನಂತರ ಪಕ್ಷದ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಮಂಗಳವಾರ ಕರೆದಿದ್ದ ಪ್ರಮುಖ ಕಾರ್ಯತಂತ್ರದ ಸಭೆಗೆ ನೂತನವಾಗಿ ಆಯ್ಕೆಯಾದ 80 ಶಾಸಕರ ಪೈಕಿ ಸುಮಾರು 10 ಶಾಸಕರು ಗೈರುಹಾಜರಾಗಿದ್ದಾರೆ. ಮಮತಾ ಬ್ಯಾನರ್ಜಿ ನಿವಾಸದಲ್ಲಿ ನಡೆದ ಈ ಸಭೆಯಲ್ಲಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಮತ್ತು ಹಿರಿಯ ಪದಾಧಿಕಾರಿಗಳು ಭಾಗವಹಿಸಿದ್ದರು. ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡಲು ಮತ್ತು ಚುನಾವಣೋತ್ತರ ಕಾರ್ಯತಂತ್ರಗಳ ಬಗ್ಗೆ ಚರ್ಚಿಸಲು ಈ ಸಭೆ ಆಯೋಜಿಸಲಾಗಿತ್ತು.

ಬಂಗಾಳಕ್ಕೆ ಬಿಜೆಪಿ ಸಿಎಂ ಪ್ರಮಾಣ ಸ್ವೀಕಾರ ಮೇ 9ಕ್ಕೆ

ಕೋಲ್ಕತ್ತಾ: ಪಶ್ಚಿಮ ಬಂಗಾಳದ ಮೊದಲ ಬಿಜೆಪಿ ಸರ್ಕಾರದ ಪ್ರಮಾಣ ವಚನ ಸಮಾರಂಭವು ಇಲ್ಲಿನ ಬ್ರಿಗೇಡ್ ಪರೇಡ್ ಮೈದಾನದಲ್ಲಿ ಮೇ 9ಕ್ಕೆ ನಡೆಯಲಿದೆ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಸಮಿಕ್ ಭಟ್ಟಾಚಾರ್ಯ ಬುಧವಾರ ಘೋಷಿಸಿದ್ದಾರೆ.




ರಾಜ್ಯದಲ್ಲಿ ಟಿಎಂಸಿಯ 15 ವರ್ಷಗಳ ಆಡಳಿತವನ್ನು ಅಂತ್ಯಗೊಳಿಸಿದ ಬಿಜೆಪಿ ರಾಜ್ಯದಲ್ಲಿ ಔಪಚಾರಿಕವಾಗಿ ಅಧಿಕಾರ ವಹಿಸಿಕೊಳ್ಳಲು ಸಿದ್ಧವಾಗಿದೆ. ಬೆಳಗ್ಗೆ 10 ಗಂಟೆಗೆ ಆರಂಭವಾಗಲಿರುವ ಈ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ಅಧ್ಯಕ್ಷ ನಿತಿನ್ ನವೀನ್ ಮತ್ತು ಹಲವಾರು ಕೇಂದ್ರ ಸಚಿವರು ಭಾಗವಹಿಸುವ ನಿರೀಕ್ಷೆಯಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಹೊಸ ಬಿಜೆಪಿ ಸರ್ಕಾರವು ಬ್ರಿಗೇಡ್ ಪರೇಡ್ ಮೈದಾನದಲ್ಲಿ ಬೆಳಗ್ಗೆ 10 ಗಂಟೆಗೆ ಪ್ರಮಾಣ ವಚನ ಸ್ವೀಕರಿಸುತ್ತದೆ ಎಂದು ಭಟ್ಟಾಚಾರ್ಯ ಸುದ್ದಿಗಾರರಿಗೆ ತಿಳಿಸಿದರು.

ಡಿಎಂಕೆ, ಎಐಎಡಿಎಂಕೆಯನ್ನು ಪ್ರಮುಖ ಕ್ಷೇತ್ರಗಳಲ್ಲೇ ಸೋಲಿಸಿದ ಟಿವಿಕೆ

ಚೊಚ್ಚಲ ಪ್ರವೇಶದಲ್ಲೇ ಅಪೂರ್ವ ಸಾಧನೆ

ಚೆನ್ನೈ: ತೃತೀಯ ಶಕ್ತಿಯಾಗಿಯೂ ಸ್ಥಾನ ಸಿಗುವುದೋ ಇಲ್ಲವೋ ಎಂದು ಮತ ಎಣಿಕೆ ದಿನದಂದೂ ಬಹುಶಃ ಲೆಕ್ಕಾಚಾರ ಹಾಕಿರಬಹುದಾದ, ಚುನಾವಣಾ ಕಣದ ಪ್ರಪ್ರಥಮ ಸ್ಪರ್ಧಿ ಟಿವಿಕೆ, 2026ರ ವಿಧಾನಸಭಾ ಚುನಾವಣೆಯಲ್ಲಿ ಅತ್ಯಂತ ಪ್ರಮುಖ ರಾಜಕೀಯ ಶಕ್ತಿಯಾಗಿ ಒಡಮೂಡಿರುವುದು ನಿಜಕ್ಕೂ ಅಚ್ಚರಿಯ ಸಂಗತಿ. ಪಕ್ಷದ ಸಾಧನೆ ಅದೆಷ್ಟು ಪರಿಣಾಮಕಾರಿಯಾಗಿದೆಯೆಂದರೆ ಡಿಎಂಕೆ ಮತ್ತು ಎಐಎಡಿಎಂಕೆಯನ್ನು ಹಲವು ಪ್ರಮುಖ ಕ್ಷೇತ್ರಗಳಲ್ಲೇ ಟಿವಿಕೆ ಪರಾಭವಗೊಳಿಸಿದೆ. ಎರಡು ದ್ರಾವಿಡ ದೈತರ ಸಂಯುಕ್ತ ಬಲವನ್ನು ಮುಚ್ಚೇಬಿಡುವ ಟಿವಿಕೆ ಸಾಮರ್ಥ್ಯವನ್ನು 2026ರ ಚುನಾವಣಾ ಡೇಟಾ ಬಯಲುಗೊಳಿಸಿದೆ.



ನಾಲ್ಕು ಪ್ರಮುಖ ಕ್ಷೇತ್ರಗಳಲ್ಲಿ ಟಿವಿಕೆ ಗಳಿಸಿರುವ ಮತಗಳ ಪ್ರಮಾಣ ಡಿಎಂಕೆ, ಎಡಿಎಂಕೆಗಳ ಒಟ್ಟು ಮತಗಳ ಪ್ರಮಾಣಕ್ಕಿಂತ ಅತ್ಯಧಿಕವಿದೆ ಮತ್ತು ತಮಿಳುನಾಡಿನ ಆಧುನಿಕ ಚರಿತ್ರೆಯಲ್ಲಿ ರಾಜಕೀಯ ರಂಗಕ್ಕೆ ಚೊಚ್ಚಲ ಪ್ರವೇಶ ಮಾಡಿದ ಪಕ್ಷವೊಂದು ಈ ಪರಿ ಅತ್ಯಧಿಕ ಮತಗಳಿಸಿದ್ದಿಲ್ಲ. ಡಾ.ರಾಧಾಕೃಷ್ಣನ್ ನಗರದಲ್ಲಿ ಟಿವಿಕೆ ಅಭ್ಯರ್ಥಿ ಎನ್.ಮೇರಿ ವಿಲ್ಸನ್ ಶೇ.53.97 ಮತಗಳಿಸಿದ್ದಾರೆ. ಇಲ್ಲಿ ಡಿಎಂಕೆ ಅಭ್ಯರ್ಥಿ ಶೇ.26.56, ಎಐಎಡಿಎಂಕೆ ಅಭ್ಯರ್ಥಿ ಶೇ.14.8 ಮತಗಳಿಸಿದ್ದಾರೆ. ಎರಡೂ ಪಕ್ಷಗಳ ಅಭ್ಯರ್ಥಿಗಳು ಗಳಿಸಿದ ಮತಗಳ ಒಟ್ಟು ಪ್ರಮಾಣ ಕೂಡ ಶೇ.41.4. ವಿಲ್ಸನ್ ಅವರ ಗೆಲುವಿನ ಅಂತರ (ಶೇ.27.41)ಕೂಡ ಡಿಎಂಕೆ, ಎಡಿಎಂಕೆ ಅಭ್ಯರ್ಥಿಗಳು ಪಡೆದ ಒಟ್ಟು ಮತಗಳಿಗಿಂತ ಅತ್ಯಧಿಕವಾಗಿದೆ.

ಮಾಡವರಂನಲ್ಲಿ ಟಿವಿಕೆ ಅಭ್ಯರ್ಥಿ ಎಂ.ಎಲ್. ವಿಜಯಪ್ರಭು ಗಳಿಸಿರುವ ಮತಗಳ ಪ್ರಮಾಣ ಎದುರಾಳಿಗಳ ಒಟ್ಟು ಮತಗಳಿಂದ ದುಪ್ಪಟ್ಟು. ಇಂತಹ ವಿದ್ಯಮಾನಗಳು ಶೋಳಿಂಗನಲ್ಲೂರು, ಮದುರಾವೋಯಲ್ ಕ್ಷೇತ್ರಗಳಲ್ಲೂ ಘಟಿಸಿವೆ. ಇವೆರಡು ಕ್ಷೇತ್ರಗಳಲ್ಲಿ ಟಿವಿಕೆ ಅಭ್ಯರ್ಥಿಗಳಾದ ಇಸಿಆರ್ ಪಿ. ಶರವಣನ್ ಮತ್ತು ರೇವಂತ್ ಚರಣ್ ಅತ್ಯಧಿಕ ಮತಗಳಿಕೆಯೊಂದಿಗೆ ಸಾಂಪ್ರದಾಯಿಕ ದ್ರಾವಿಡ ಪಕ್ಷಗಳ ಅಭ್ಯರ್ಥಿಗಳನ್ನು ದ್ವಿತೀಯ ಮತ್ತು ತೃತೀಯ ಸ್ಥಾನಗಳಿಗೆ ತಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಡಿಎಂಕೆಯ ಉದಯನಿಧಿ ಸ್ಟಾಲಿನ್ ಮತ್ತು ಪಿ.ಕೆ. ಸೇಕರ್‌ಬಾಬು ಛೇಪಾಕ್-ತಿರುವಲ್ಲಿಕೇಣಿ ಮತ್ತು ಬಂದರು ಕ್ಷೇತ್ರಗಳಲ್ಲಿ ಜಯ ಗಳಿಸಿದ್ದಾರೆ. ಇದರ ಹೊರತು ಡಿಎಂಕೆಯ ಭದ್ರಕೋಟೆ ಖ್ಯಾತಿಯ ಚೆನ್ನೈ ಮತ್ತು ಇದರ ಆರೆನಗರಗಳಲ್ಲಿ ಟಿವಿಕೆ ಹಿಡಿತ ಸಾಧಿಸಿದೆ. ಚೆನ್ನೈಯ ಎಲ್ಲಾ ಕ್ಷೇತ್ರಗಳಲ್ಲೂ ಪಕ್ಷವು ಶೇ. 45ಮೀರಿ ಮತ ಗಳಿಸಿದೆ. ಪೆರಂಬೂರು, ತಿರುವೊಟ್ಟಿಯೂರ್, ಪೂನಮಲ್ಲಿ, ಆವಡಿ, ಅಂಬತ್ತೂರು ಕ್ಷೇತ್ರಗಳಲ್ಲಿ ಶೇ.50 ಮೀರಿ ಹಿಡಿತ ಸಾಧಿಸಿದೆ.

ಬ್ರೆಜಿಲ್ ಹೈನುಗಾರಿಕೆ ಕ್ರಾಂತಿಗೆ ಭಾರತದ ಕೊಡುಗೆ

ಗುಜರಾತ್‌ನ ಕೃಷ್ಣ ಹೆಸರಿನ ಹೋರಿ ಸಹಕಾರ

ಭಾವನಗರ: 1960ರಲ್ಲಿ ಭಾವನಗರದ ಮಹಾರಾಜರು ಬ್ರೆಜಿಲ್‌ನ ಜಾನುವಾರು ಮಾಲೀಕರೊಬ್ಬರಿಗೆ ಉಡುಗೊರೆಯಾಗಿ ನೀಡಿದ್ದ ಕೃಷ್ಣ ಹೆಸರಿನ ಗಿರ್ ತಳಿಯ ಹೋರಿ, ಇಂದು ಬ್ರೆಜಿಲ್‌ನ ಒಟ್ಟು ಹಾಲು ಉತ್ಪಾದನೆಯ ಶೇ.80ರಷ್ಟು ಪಾಲಿಗೆ ತನ್ನ ವಂಶಾವಳಿಯ ಮೂಲಕ ಕಾರಣವಾಗಿದೆ ಎಂದು ಗುರುತಿಸಲಾಗಿದೆ. ದಕ್ಷಿಣ ಅಮೆರಿಕದ ಜಾನುವಾರುಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ 1958ರಲ್ಲಿ ಬ್ರೆಜಿಲ್‌ನ ಜಾನುವಾರು ಉದ್ಯಮಿ ಸೆಲ್ಸೊ ಗಾರ್ಸಿಯಾ ಸಿಡ್ ಪರವಾಗಿ ಕೌಬಾಯ್ ಇಲ್ಡೆಫೊನ್ಸೊ ದೊಸ್ ಸಾಂಟೋಸ್ ಅವರು ಕೃಷ್ಣನನ್ನು ಆಯ್ಕೆ ಮಾಡಿದ್ದರು. 1960ರಲ್ಲಿ ಬ್ರೆಜಿಲ್ ತಲುಪಿದ ಈ ಹೋರಿಯ ವಂಶವಾಹಿನಿ ಅಲ್ಲಿನ ಹೈನುಗಾರಿಕೆಯ ರಕ್ತಗತ ಗುಣಲಕ್ಷಣಗಳನ್ನು ನವೀಕರಿಸಿತು. ಅತಿಯಾದ ಅಂತರ್ ತಳಿ ಸಂವರ್ಧನೆಯಿಂದ ಉಂಟಾಗಿದ್ದ ಉತ್ಪಾದಕತೆಯ ಸಮಸ್ಯೆಗಳನ್ನು ಇದು ಯಶಸ್ವಿಯಾಗಿ ನಿವಾರಿಸಿತು. ಇಂದು ಬ್ರೆಜಿಲ್‌ನ ಒಂದು ಗಿರ್ ಹಸು ದಿನಕ್ಕೆ 20 ಲೀಟರ್ ಹಾಲು ನೀಡುತ್ತಿದ್ದು, ಇದು ಅಲ್ಲಿನ ಸ್ಥಳೀಯ ತಳಿಗಳ ಮೂಲ ಉತ್ಪಾದನೆಗಿಂತ ಹತ್ತು ಪಟ್ಟು ಹೆಚ್ಚಾಗಿದೆ. ಈ ತಳಿಶಾಸ್ತ್ರೀಯ ಬದಲಾವಣೆ, ಬ್ರೆಜಿಲ್ ಜಾಗತಿಕ ಹೈನುಗಾರಿಕಾ ಕ್ಷೇತ್ರದಲ್ಲಿ ಮುಂಚೂಣಿಗೆ ಬರಲು ಮತ್ತು ಬೃಹತ್ ವಾಣಿಜ್ಯ ಕೃಷಿ ಬೇಡಿಕೆಗಳನ್ನು ಪೂರೈಸಲು ಸಹಾಯ ಮಾಡಿದೆ.

ಐತಿಹಾಸಿಕ ಹಸ್ತಾಂತರ: ಮದ್ರಾಸ್‌ನ ಮೊದಲ ಭಾರತೀಯ ಗವರ್ನರ್ ಮತ್ತು ಭಾವನಗರದ ಮಹಾರಾಜರಾಗಿದ್ದ ಕೃಷ್ಣ ಕುಮಾರಸಿಂಹಜಿ ಭಾವಸಿಂಹಜಿ , ಕೃಷ್ಣನನ್ನು ದೊಸ್ ಸಾಂಟೋಸ್ ಅವರಿಗೆ ಉಡುಗೊರೆಯಾಗಿ ನೀಡಿದ್ದರು. ಈ ಕೊಡುಗೆ, ಎರಡೂ ದೇಶಗಳ ನಡುವೆ ಇಂದಿಗೂ ಮುಂದುವರಿಯುತ್ತಿರುವ ಸುದೀರ್ಘ ಹೈನುಗಾರಿಕಾ ಪಾಲುದಾರಿಕೆ ಸ್ಥಾಪಿಸಿತು. ಭಾರತದಲ್ಲಿ ಇತರೆ ತಳಿಗಳೊಂದಿಗೆ ಅತಿಯಾಗಿ ಮಿಶ್ರತಳಿ ಸಂವರ್ಧನೆ ನಡೆಸಿದ ಕಾರಣ ಗಿರ್ ತಳಿ ಕ್ಷೀಣಿಸಿದೆ. ಇದನ್ನು ಸರಿಪಡಿಸಲು ಮತ್ತು ಭಾರತೀಯ ಮೂಲ ತಳಿಯನ್ನು ಪುನಃಸ್ಥಾಪಿಸಲು ಬ್ರೆಜಿಲ್‌ನಿಂದ ಇದೇ ಗಿರ್ ತಳಿಯನ್ನು ಮರಳಿ ಆಮದು ಮಾಡಿಕೊಳ್ಳಲು ಭಾರತ ಸರ್ಕಾರ ಇತ್ತೀಚೆಗೆ ನಿರ್ಧರಿಸಿದೆ.



ಅಂತಿಮ ಗೌರವ: ಕೃಷ್ಣನ ಮರಣದ ನಂತರ, ಅದರ ದೇಹವನ್ನು ಸಂರಕ್ಷಿಸಿ ಸಿಡ್ ಅವರ ತೋಟದ ಮನೆಯಲ್ಲಿ ಗಾಜಿನ ಪೆಟ್ಟಿಗೆಯಲ್ಲಿ ಇರಿಸಲಾಗಿದೆ. ಹೈನುಗಾರಿಕಾ ಕ್ಷೇತ್ರಕ್ಕೆ ಈ ಹೋರಿ ನೀಡಿದ ಕೊಡುಗೆಯನ್ನು ಗೌರವಿಸಲು ಬ್ರೆಜಿಲ್ ಸರ್ಕಾರಅದರ ನೆನಪಿನಲ್ಲಿ ವಿಶೇಷ ಅಂಚೆ ಚೀಟಿಗಳು ಮತ್ತು ನಾಣ್ಯಗಳನ್ನು ಹೊರತಂದಿದೆ.

ಕಿರುಸುದ್ದಿ

ಬಿಎಸ್‌ವೈ ಅಭಿಮಾನೋತ್ಸವಕ್ಕೆ ಉಡುಪಿ ಜಿಲ್ಲೆಯಿಂದ 3,೦೦೦ ಮಂದಿ ಭಾಗಿ: ಕುತ್ಯಾರು

ಉಡುಪಿ: ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ರಾಜಕೀಯ ಜೀವನದ 50 ವರ್ಷಗಳ ಸಾರ್ಥಕ ಸೇವೆಯ ಸವಿ ನೆನಪಿಗಾಗಿ ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ 'ಬಿಎಸ್‌ವೈ ಅಭಿಮಾನೋತ್ಸವ' ಕಾರ್ಯಕ್ರಮದಲ್ಲಿ ಉಡುಪಿ ಜಿಲ್ಲೆಯಿಂದ 3,000ಕ್ಕೂ ಮಿಕ್ಕಿ ಪಕ್ಷದ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ ಎಂದು ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ತಿಳಿಸಿದ್ದಾರೆ.

ರೈತ ನಾಯಕರಾಗಿ, ರಾಜ್ಯಾದ್ಯಂತ ಸದೃಢ ಪಕ್ಷ ಸಂಘಟನೆಯ ಮೂಲಕ ದಕ್ಷಿಣ ಭಾರತದಲ್ಲಿ ಮೊತ್ತ ಮೊದಲ ಬಾರಿಗೆ ಬಿಜೆಪಿಯನ್ನು ಅಧಿಕಾರಕ್ಕೆ ತರಲು ಅಹರ್ನಿಶಿ ಶ್ರಮಿಸಿ ಯಶಸ್ಸನ್ನು ಕಂಡಿರುವ ಜೊತೆಗೆ ಅನೇಕ ಜನಪರ ಯೋಜನೆಗಳನ್ನು ನೀಡಿ ಜನ ಮನ್ನಣೆಗೆ ಪಾತ್ರರಾಗಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಸಾರ್ವಜನಿಕ ಬದುಕಿನ 50 ಸಂವತ್ಸರಗಳನ್ನು ಪೂರೈಸುತ್ತಿರುವ ಸುಸಂದರ್ಭದಲ್ಲಿ 'ಜನರ ಮಡಿಲಲ್ಲಿ ಸಾರ್ಥಕ 50 ವರುಷ' ಎಂಬ ಶೀರ್ಷಿಕೆಯೊಂದಿಗೆ ನಡೆಯಲಿರುವ ಈ ಅದ್ದೂರಿ ಕಾರ್ಯಕ್ರಮ ಬಿಜೆಪಿ ಕಾರ್ಯಕರ್ತರಲ್ಲಿ ಹೊಸ ಚೈತನ್ಯವನ್ನು ತುಂಬಿ ಹಬ್ಬದ ವಾತಾವರಣ ಮೂಡಿಸಿದೆ ಎಂದು ಕುತ್ಯಾರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೇಣಿಗೆ ಶರಣಾದ ಕಾರ್ಮಿಕ

ಮಂಜೇಶ್ವರ: ಯುವಕನೋರ್ವನ ಮೃತದೇಹ ಮನೆಯೊಳಗೆ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಮೀಯಪದವು ಬಳಿಯ ಚಿಗುರುಪಾದೆ ನಿವಾಸಿ ಮೋಹನ್ ದಾಸ್‌ರ ಪುತ್ರ ರಂಜಿತ್ (40) ಮೃತಪಟ್ಟವರು. ಸೆಂಟ್ರಿಂಗ್ ಕಾರ್ಮಿಕನಾಗಿದ್ದ ಅವರು ಮಂಗಳವಾರ ಬೆಳಗ್ಗೆ ಮನೆಯಲ್ಲಿ ಯಾರೂ ಇಲ್ಲದ ಸಂದರ್ಭದಲ್ಲಿ ನೇಣಿಗೆ ಶರಣಾಗಿದ್ದಾರೆ.

ರಂಜಿತ್‌ರ ಪತ್ನಿ ಹಾಗೂ ಮಕ್ಕಳು ಸಂಬಂಧಿಕರ ಮನೆಗೆ ತೆರಳಿದ್ದರು. ಇದೇ ವೇಳೆ ತಂದೆ ಮತ್ತು ತಾಯಿ ಮಂಗಳೂರಿನಲ್ಲಿ ಸಂಬಂಧಿಕರೋರ್ವರು ನಿಧನರಾದ ಹಿನ್ನೆಲೆಯಲ್ಲಿ ತೆರಳಿದ್ದರು. ಇದರಿಂದ ರಂಜಿತ್ ಮಾತ್ರ ಮನೆಯಲ್ಲಿದ್ದರು. ಮನೆಮಂದಿ ಬಂದು ನೋಡಿದಾಗ ಏನೂ ಪ್ರತಿಕ್ರಿಯೆ ಉಂಟಾಗದಿರುವುದರಿಂದ ಕಿಟಿಕಿ ಮೂಲಕ ನೋಡಿದಾಗ ಅಡುಗೆ ಕೋಣೆಯೊಳಗೆ ರಂಜಿತ್ ನೇಣು ಬಿಗಿದ ಸ್ಥಿತಿಯಲ್ಲಿ ಕಂಡುಬಂದರು. ಮೃತರು ತಂದೆ, ತಾಯಿ ಯಶೋಧಾ, ಪತ್ನಿ ಜಯಂತಿ, ಮಕ್ಕಳಾದ ವಂಶಿಕ್, ದಿಶಾ ಅವರನ್ನು ಅಗಲಿದ್ದಾರೆ.

ನಿಧನ ಸುದ್ದಿ

ರಾಜೀವಿ ದೇವಾಡಿಗ



ಮಂಗಳೂರು: ಬಿಜೈ ನಿವಾಸಿ ರಾಜೀವಿ ದೇವಾಡಿಗ ಅವರು ಅಲ್ಪಕಾಲದ ಅಸೌಖ್ಯದಿಂದ ಮೇ 3ರಂದು ನಿಧನರಾಗಿದ್ದಾರೆ. ಅವರಿಗೆ 70 ವರ್ಷ ವಯಸ್ಸಾಗಿತ್ತು. ಮೃತರು ಪತಿ, ಪುತ್ರ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಕೃಷ್ಣ ಶೆಟ್ಟಿ, 'ವಿಜಯ ನಿವಾಸ', ಮಹಾವೀರ ಕಾಲೇಜು ರಸ್ತೆ, ಮೂಡುಬಿದ್ರಿ – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
2. ಯಶೋಧರ ಕಾವ್ಯ, ಪಾದೆಮನೆ, ಅದ್ಯಪಾಡಿ, ಬಜಪೆ.
3. ಗೋವಿಂದ ಗೋಪಾಲ ಶೆಟ್ಟಿ, 'ವಸಂತಿ ನಿಲಯ', ಬೈರಂಪಳ್ಳಿ, ಹರಿಖಂಡಿಗೆ, ಉಡುಪಿ (ತಾ).
4. ವಾರಿಜ ಶೆಟ್ಟಿ, ಅತ್ತೂರು ಭಂಡಾರ ಮನೆ, ಕೆಮ್ರಾಲ್, ಅತ್ತೂರು.
5. ಅಂಗರ ಪೂಜಾರಿ, ಹಾರೊದ್ದು ಮನೆ, ಮದ್ವ, ಕಾವಳ ಪಡೂರು, ಬಂಟ್ವಾಳ (ತಾ).
6. ವೀಣಾ, ಜನಾರ್ಧನ ಎನ್. ಖಾರ್ವಿ, ಎಳತ್ತೂರು ನೆಲಗುಡ್ಡೆ, ಕಿನ್ನಿಗೋಳಿ.
7. ಯೋಗೀಶ್ ಕೋಟ್ಯಾನ್, 'ಕಲ್ಪವೃಕ್ಷ', ಕಟ್ಲ, ಇಡ್ಯಾ, ಶ್ರೀ ವಿಠೋಭ ರುಕ್ಮಾಯಿ ಕ್ಷೇತ್ರ, ಸುರತ್ಕಲ್.

ಶ್ರೀ ಧರ್ಮಸ್ಥಳ ಮೇಳ
ಕೋಟೂರಿನಲ್ಲಿ
ಹತ್ತು ಸಮಸ್ತರು, ಕೋಟೂರು

ಶ್ರೀ ಸಾಲಿಗ್ರಾಮ ಮೇಳ
ಪಾರಂಪಳ್ಳಿ ಪಡುಕೆರೆಯಲ್ಲಿ- **ರಂಗನಾಯಕಿ**

ಶ್ರೀ ಪೆರ್ಡೂರು ಮೇಳ
ಶ್ರೀ ದುರ್ಗಾದೇವಿ ದೇವಸ್ಥಾನ ತಾಳಮಕ್ಕಿ -ಮಂಕಿಯಲ್ಲಿ
ಪಾಪಣ್ಣ ವಿಜಯ, ಗುಣಸುಂದರಿ, ಶ್ರೀ ರೇಣುಕಾದೇವಿ ಮಹಾತ್ಮೆ

ಶ್ರೀ ಹನುಮಗಿರಿ ಮೇಳ
ಪಡುಬಿದ್ರಿಯಲ್ಲಿ

ಶ್ರೀ ಪಾವಂಜೆ ಮೇಳ
ಕನ್ಯಾನ, ಕೂಳೂರು-ಮಂಜೇಶ್ವರದಲ್ಲಿ
ಶ್ರೀ ದೇವಿ ಮಹಾತ್ಮೆ



ಉಪ್ಪುಂದ ಅಂಬಾಗಿಲು ಶ್ರೀ ಅಶ್ವತ್ಥನಾರಾಯಣ ಮೂಡುಗಣಪತಿ ದೇವಸ್ಥಾನದಲ್ಲಿ ಮಂಗಳವಾರ ಅಂಗಾರಕ ಸಂಕಷ್ಟಹರ ಚತುರ್ಥಿ ಪ್ರಯುಕ್ತ ಅರ್ಚಕ ಅವಧಾನಿ ಗಣೇಶ ಬಾಬು ಭಟ್ ನೇತೃತ್ವದಲ್ಲಿ ವಿವಿಧ ಧಾರ್ಮಿಕ ಕಾರ್ಯಗಳು ನಡೆದವು. ಬೆಳಿಗ್ಗೆಯಿಂದ ಭಕ್ತರು ದೇವಸ್ಥಾನಕ್ಕೆ ಆಗಮಿಸಿ ದೇವರ ದರುಶನ ಪಡೆದರು.

ಚುನಾವಣಾ ಫಲಿತಾಂಶ ಬಗ್ಗೆ ಹರಿಕೃಷ್ಣ ಬಂಟ್ವಾಳ ಹೇಳಿಕೆ

ಮೋದಿ-ಶಾ ಶ್ರಮಕ್ಕೆ ಸಂದ ಗೌರವ

ಬಂಟ್ವಾಳ: ಪ.ಬಂಗಾಲ, ಅಸ್ಸಾಂ ಮತ್ತು ಪುದುಚೇರಿ ರಾಜ್ಯಗಳಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಪಕ್ಷ ದಾಖಲೆಯ ವಿಜಯಗಳಿಸಿ ಅಧಿಕಾರದ ಚುಕ್ಕಾಣಿ ಹಿಡಿದಿರುವುದು ಪ್ರಧಾನಿ ನರೇಂದ್ರ ಮೋದಿ, ಗೃಹಸಚಿವ ಅಮಿತ್ ಶಾ ಜೋಡಿಯ ರಾಜಕಾರಣದ ನೈತಿಕ ಶ್ರಮಕ್ಕೆ ಸಂದ ಗೌರವವಾಗಿದೆ ಎಂದು ರಾಜ್ಯ ಕಿಯೋನಿಕ್ಸ್ ನಿಗಮದ ಮಾಜಿ ಅಧ್ಯಕ್ಷ, ಬಿಜೆಪಿ ಮುಖಂಡ ಹರಿಕೃಷ್ಣ ಬಂಟ್ವಾಳ್ ಹೇಳಿದ್ದಾರೆ.



ಪ.ಬಂಗಾಲದ ಮುಖ್ಯಮಂತ್ರಿಯಾಗಿದ್ದ ಮಮತಾ ಬ್ಯಾನರ್ಜಿಯ ಹಿಂಸೆಯ ರಾಜಕಾರಣ, ದರ್ಪ, ಅಹಂಕಾರ, ದಬ್ಬಾಳಿಕೆ, ಬಾಂಗ್ಲಾ ಮತ್ತು ಮ್ಯಾನ್ಮಾರ್‌ನಿಂದ ಬರುವ ನುಸುಳುಕೋರರಿಗೆ ಆಶ್ರಯಧಾತೆಯಾಗಿ, ದೇಶವಿರೋಧಿ ಕೃತ್ಯಗಳಿಗೆ ಬೆಂಬಲ ನೀಡಿದ್ದಲ್ಲದೆ ಹಿಂದೂ ವಿರೋಧಿಯಾಗಿ ಜಿನ್ನಾ ಸಂಸ್ಕೃತಿಯನ್ನುಅಳವಡಿಸಿಕೊಂಡಿದ್ದ ದೀದಿಯನ್ನು ಚುನಾವಣೆಯಲ್ಲಿ ಅಲ್ಲಿನ ಮತದಾರರು ಮಣ್ಣು ಮುಕ್ಕಿಸಿದ್ದಾರೆ. ಪ.ಬಂಗಾಲದ ಪ್ರತಿಯೋರ್ವ ದೇವದುರ್ಲಭ ಬಿಜೆಪಿ ಕಾರ್ಯಕರ್ತರನ್ನು ದೇಶದ ಪ್ರತಿಯೋರ್ವ ಭಾರತೀಯನು ಅಭಿನಂದಿಸಬೇಕಾಗಿದೆ ಎಂದು ಅವರು ಮಾಧ್ಯಮಗಳಿಗೆ ಬಿಡುಗಡೆಗೊಳಿಸಿರುವ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅಧಿಕಾರದ ಮದದಿಂದ ಉಗ್ರರಂತೆ ಭಾರತದ ಸನಾತನ ಧರ್ಮವನ್ನು ಕೊರೋನಾ, ಮಲೇರಿಯಾ, ಕ್ಯಾನ್ಸರ್‌ಗೆ ಹೋಲಿಸಿದ್ದು ಮಾತ್ರವಲ್ಲ ದೇವಸ್ಥಾನದ ಪಾರಂಪರಿಕ ಕಾರ್ಯಕ್ರಮಗಳಿಗೆ ಅಡ್ಡಿಪಡಿಸುವ ನಡೆ, ದೇಶವಿರೋಧಿ ಹೇಳಿಕೆನೀಡುತ್ತಿದ್ದ ಮುಖ್ಯಮಂತ್ರಿ ಸ್ಟಾಲಿನ್, ಅವರ ಪುತ್ರ ಉದಯ ಸ್ಟಾಲಿನ್ ಸೋಲು ಮಾತ್ರವಲ್ಲ ಡಿಎಂಕೆ ಪಕ್ಷವನ್ನೇ ತಮಿಳುನಾಡಿನ ಮತದಾರರು ಸೋಲಿಸಿ ಅವರನ್ನು ಮನೆಗೆ ಕಳಿಸಿರುವುದು ದೇಶದ ಎಲ್ಲಾ ವಿರೋಧಪಕ್ಷಗಳಿಗೆ ನೀಡಿರುವ ಎಚ್ಚರಿಕೆಯ ಗಂಟೆಯಾಗಿದೆ. ಪಂಚರಾಜ್ಯಗಳ ಚುನಾವಣಾ ಫಲಿತಾಂಶ ವಿಕಸಿತ ಭಾರತದ ಮತದಾರರ ತೀರ್ಪು ಏನೆಂಬುದಕ್ಕೆ ಸಾಕ್ಷಿಯಾಗಿದೆ ಎಂದು ಹರಿಕೃಷ್ಣ ಬಂಟ್ವಾಳ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕರಾವಳಿ ಭಾಗದ ಜಿಲ್ಲೆಗಳಿಗೆ ವಿದ್ಯುತ್ ಸೌಲಭ್ಯಕ್ಕೆ ಸಹಕಾರಿ: ಕೆಪಿಟಿಸಿಎಲ್‌ನ ಡಾ. ರಾಮ್ ಭರವಸೆ

ಉಪಕೇಂದ್ರ ಕಾಮಗಾರಿ ಶೀಘ್ರ ಪೂರ್ಣ

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ ಸೇರಿದಂತೆ ಕರಾವಳಿ ಭಾಗದ ಜಿಲ್ಲೆಗಳಿಗೆ ಉತ್ತಮ ಗುಣಮಟ್ಟದ ವಿದ್ಯುತ್ ಸೌಲಭ್ಯ ಒದಗಿಸುವ 'ಕಡಂದಲೆ 400 ಕೆವಿ ವಿದ್ಯುತ್ ಉಪಕೇಂದ್ರ' ಕಾಮಗಾರಿಯನ್ನು ಜುಲೈ 15 ರಒಳಗಾಗಿ ಪೂರ್ಣಗೊಳಿಸಲಾಗುವುದು ಎಂದು ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಡಾ.ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಅವರು ಇಂಧನ ಸಚಿವ ಕೆ.ಜೆ. ಜಾರ್ಜ್ ಅವರ ನಿರ್ದೇಶನದ ಮೇರೆಗೆ ಬುಧವಾರ ಕಡಂದಲೆಯ ಉಪಕೇಂದ್ರದ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪ್ರಗತಿ ಪರಿಶೀಲನೆ ನಡೆಸಿ ಮಾತನಾಡಿದರು.

ಭೂ ವ್ಯಾಜ್ಯದ ಕಾರಣದಿಂದಾಗಿ ಕಳೆದ ಮೂರು ವರ್ಷಗಳಿಂದ ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆ ತಾಲೂಕಿನ ಕಡಂದಲೆ ಗ್ರಾಮದಲ್ಲಿ 400 ಕೆವಿ ಲೈನ್ ಕಾಮಗಾರಿ ಸ್ಥಗಿತಗೊಂಡಿತ್ತು. ಇಂಧನ ಸಚಿವ ಕೆ.ಜೆ. ಜಾರ್ಜ್ ಹಾಗೂ ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಅವರ ಸತತ ಪ್ರಯತ್ನದಿಂದಾಗಿ ಈ ಎಲ್ಲಾ ಅಡೆತಡೆಗಳನ್ನು ಯಶಸ್ವಿಯಾಗಿ ನಿವಾರಿಸಲಾಗಿದೆ ಎಂದರು.

ಮಂಗಳೂರು ರಾಜ್ಯದ ಪ್ರಮುಖ ಕೈಗಾರಿಕಾ ಕೇಂದ್ರವಾಗಿದ್ದು, ತಡೆರಹಿತ ವಿದ್ಯುತ್ ಪೂರೈಕೆ ಅತ್ಯಗತ್ಯವಾಗಿದೆ. ಇಂಧನ ಸಚಿವರ ನಿರ್ದೇಶನದಂತೆ ಮುಂಬರುವ ಮುಂಗಾರಿನೊಳಗೆ ಈ ಯೋಜನೆಯನ್ನು ಮುಕ್ತಾಯಗೊಳಿಸಿ ವಿದ್ಯುತ್ ಪ್ರಸರಣ ಕಾರ್ಯ ಆರಂಭಿಸಲಾಗುವುದು ಎಂದು ಅವರು ತಿಳಿಸಿದರು.



ಕಡಂದಲೆಯ ಉಪಕೇಂದ್ರದ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪ್ರಗತಿ ಪರಿಶೀಲನೆ ನಡೆಸಿದ ಡಾ.ರಾಮ್ ಪ್ರಸಾತ್ ಮನೋಹರ್

ವಿದ್ಯುತ್ ಸಮಸ್ಯೆಗೆ ಸಂಜೀವಿನಿ

ಪ್ರಮುಖ ಕೈಗಾರಿಕಾ ಹಬ್‌ಗಳಾಗಿರುವ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಿಗೆ ನಿರಂತರ ವಿದ್ಯುತ್ ಒದಗಿಸುವ ಪ್ರಮುಖ ಯೋಜನೆ ಇದಾಗಿದೆ. ಮಳೆಗಾಲದಲ್ಲಿ ಎದುರಾಗುತ್ತಿದ್ದ ವೋಲ್ಟೇಜ್ ವ್ಯತ್ಯಯ ಮತ್ತು ಕಡಿಮೆ ವೋಲ್ಟೇಜ್ ಸಮಸ್ಯೆಗೆ ಈ 400 ಕೆವಿ ಉಪಕೇಂದ್ರ ಶಾಶ್ವತ ಮುಕ್ತಿ ನೀಡಲಿದೆ. ಅಲ್ಲದೆ, ಯಾವುದೇ ಒಂದು ಸ್ಟೇಷನ್ ವ್ಯಾಪ್ತಿಯಲ್ಲಿ ತಾಂತ್ರಿಕ ದೋಷ ಉಂಟಾದಾಗ, ಈ ಉಪಕೇಂದ್ರದ ಮೂಲಕ ಪರ್ಯಾಯವಾಗಿ ಲೋಡ್ ತೆಗೆದುಕೊಂಡು ತಕ್ಷಣವೇ ವಿದ್ಯುತ್ ಮರುಸಂಪರ್ಕ ಕಲ್ಪಿಸುವುದು ಸುಲಭವಾಗಲಿದೆ. ಇದರಿಂದ ಕರಾವಳಿಯ ಪ್ರಮುಖ ಜಿಲ್ಲೆಗಳಿಗೆ ಗುಣಮಟ್ಟದ ವಿದ್ಯುತ್ ಲಭ್ಯವಾಗಲಿದೆ ಎಂದರು.

ಸಾರ್ವಜನಿಕರ ಸಹಕಾರಕ್ಕೆ ಮನವಿ

ಈ ಕಾಮಗಾರಿಯನ್ನು ತ್ವರಿತವಾಗಿ ಮುಕ್ತಾಯಗೊಳಿಸುವ ನಿಟ್ಟಿನಲ್ಲಿ, ಹಾಲಿ ಇರುವ 400 ಕೆವಿ ಯುಪಿಸಿಎಲ್-ಹೆಬ್ಬನಹಳ್ಳಿ ಪ್ರಸರಣ ಮಾರ್ಗದ ಮೇಲೆ ಮೇ 6 ರಿಂದ ಮೇ 24 ರವರೆಗೆ ಮಾರ್ಗ ಮುಕ್ತತೆಯನ್ನು ಪಡೆಯಲು ನಿಗಮವು ನಿರ್ಧರಿಸಿದೆ. ಈ ಮಾರ್ಗ ಮುಕ್ತತೆಯ ಅವಧಿಯಲ್ಲಿ, ವಿದ್ಯುತ್ ಬೇಡಿಕೆಗೆ ಅನುಗುಣವಾಗಿ ಪ್ರಸರಣ ಮಾರ್ಗದ ಮೇಲಿನ ಒತ್ತಡ ನಿಭಾಯಿಸಿ ಪರ್ಯಾಯ ವಿದ್ಯುತ್ ಪೂರೈಸಲು ಕ್ರಮ ಕೈಗೊಳ್ಳಲಾಗಿದೆ. ಆದಾಗ್ಯೂ, ತಾಂತ್ರಿಕವಾಗಿ ಅನಿವಾರ್ಯವಾದರೆ ಮಾತ್ರ ಸೀಮಿತ ಅವಧಿಗೆ ವಿದ್ಯುತ್ ಕಡಿತ ಮಾಡಬೇಕಾದ ಸನ್ನಿವೇಶ ಉಂಟಾಗಬಹುದು. ಮಂಗಳೂರಿನ ದೀರ್ಘಕಾಲೀನ ವಿದ್ಯುತ್ ಭದ್ರತೆಯ ಹಿತದೃಷ್ಟಿಯಿಂದ ನಡೆಯುತ್ತಿರುವ ಈ ಅಭಿವೃದ್ಧಿ ಕಾರ್ಯಕ್ಕೆ ಸಾರ್ವಜನಿಕರು ಹಾಗೂ ಗ್ರಾಹಕರು ಎಂದಿನಂತೆ ಸಹಕಾರ ನೀಡಬೇಕು ಎಂದು ಡಾ.ರಾಮ್ ಮನವಿ ಮಾಡಿದ್ದಾರೆ.

ಅಡೆತಡೆ ನಿವಾರಣೆ: ಸಚಿವ ಜಾರ್ಜ್

ಕರಾವಳಿ ಭಾಗದ ಕೈಗಾರಿಕಾ ಬೆಳವಣಿಗೆ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ನಿರಂತರ ವಿದ್ಯುತ್ ಪೂರೈಕೆ ನಮ್ಮ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ. ಕೆಲವು ಕಾನೂನು ತೊಡಕುಗಳಿಂದ 400 ಕೆ.ವಿ ಲೈನ್ ಎಳೆಯುವ ಕಾರ್ಯದಲ್ಲಿ ವಿಳಂಬವಾಗಿತ್ತು. ಈ ಯೋಜನೆಯ ಅಡೆತಡೆಗಳನ್ನು ನಿವಾರಿಸಲು ಇಲಾಖೆ ವಿಶೇಷ ಮುತುವರ್ಜಿ ವಹಿಸಿದೆ. ಕಡಂದಲೆ ಉಪಕೇಂದ್ರವು ಮಂಗಳೂರು ಮತ್ತು ಉಡುಪಿ ಭಾಗಕ್ಕೆ ಅತ್ಯುತ್ತಮ ಗುಣಮಟ್ಟದ ವಿದ್ಯುತ್ ಸೌಲಭ್ಯವನ್ನು ಖಚಿತಪಡಿಸಲಿದೆ ಇಂಧನ ಸಚಿವ ಕೆ.ಜೆ. ಜಾರ್ಜ್ ತಿಳಿಸಿದ್ದಾರೆ.

ಯೋಜನೆಗೆ ಎದುರಾಗಿದ್ದ ಭೂವ್ಯಾಜ್ಯಗಳನ್ನು ಪರಿಹರಿಸಲು ಇಲಾಖಾ ಮಟ್ಟದಲ್ಲಿ ನಿರಂತರ ಪರಿಶೀಲನೆ ನಡೆಸಿ, ಶೀಘ್ರ ಹಾಗೂ ಸೂಕ್ತ ಪರಿಹಾರ ಕಂಡುಕೊಳ್ಳಲಾಗಿದೆ. ನಿಗದಿತ ಸಮಯದೊಳಗೆ ಕಾಮಗಾರಿ ಪೂರ್ಣಗೊಳಿಸಿ ಸಾರ್ವಜನಿಕ ಸೇವೆಗೆ ಸಮರ್ಪಿಸಲು ಕೆಪಿಟಿಸಿಎಲ್‌ಗೆ ಸೂಚನೆ ನೀಡಲಾಗಿದೆ ಎಂದು ಇಂಧನ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಹೇಳಿದರು.

ಮಡಿಕೇರಿಯಲ್ಲಿ ಸಚಿವರಿಗೆ ಘೇರಾವ್ ಹಾಕಲು ಬಿಜೆಪಿ ಯತ್ನ

ಪ್ರತಿಭಟನಾಕಾರರು ಪೊಲೀಸ್ ವಶಕ್ಕೆ

ಮಡಿಕೇರಿ: ಆನೆ ಮಾನವ ಸಂಘರ್ಷ ತಡೆಗಟ್ಟುವಲ್ಲಿ ಅರಣ್ಯ ಇಲಾಖೆ ವಿಫಲವಾಗಿರುವುದನ್ನು ಹಾಗೂ ಸಿ ಅಂಡ್ ಡಿ ಲ್ಯಾಂಡ್ ಸಮಸ್ಯೆ ಬಗೆಹರಿಸದಿರುವುದನ್ನು ವಿರೋಧಿಸಿ ಬಿಜೆಪಿ ಕಾರ್ಯಕರ್ತರು ಅರಣ್ಯ ಸಚಿವರ ವಾಹನ ತಡೆದು ಪ್ರತಿಭಟಿಸಲು ಯತ್ನಿಸಿದ ಘಟನೆ ಬುಧವಾರ ನಡೆದಿದೆ.

ಕೊಡಗಿನ ಪ್ರವಾಸಿ ತಾಣಗಳಲ್ಲೊಂದಾದ ದುಬಾರೆ ಆನೆ ಶಿಬಿರಕ್ಕೆ ಸಂಪರ್ಕ ಕಲ್ಪಿಸುವ ನಿಟ್ಟಿನಲ್ಲಿ ತೂಗುಸೇತುವೆ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಲು ಬುಧವಾರ ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಅವರು ಜಿಲ್ಲೆಗೆ ಆಗಮಿಸುವವರಿದ್ದರು. ಈ ನಡುವೆ ಕುಶಾಲನಗರದಿಂದ ದುಬಾರೆಗೆ ತೆರಳುವ ಮಾರ್ಗದ ಗುಡ್ಡೆಹೊಸೂರಿನಲ್ಲಿ ಸಚಿವರ ವಾಹನ ತಡೆದು ಘೇರಾವ್ ಹಾಕಲು ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಹಾಗೂ ಹಾಲಿ ಮಂಗಳೂರು ವಿಭಾಗದ ಪ್ರಭಾರಿ ಬಿ.ಬಿ.ಭಾರತೀಶ್ ನೇತೃತ್ವದಲ್ಲಿ ಸೋಮವಾರಪೇಟೆ ಮಂಡಲ ಬಿಜೆಪಿ ಮುಂದಾಗಿತ್ತು. ಅದರಂತೆ ಬುಧವಾರ ಪೂರ್ವಾಹ್ನ ಆ ಮಾರ್ಗವಾಗಿ ರಾಜ್ಯದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯಪಡೆ ಮುಖ್ಯಸ್ಥರಾದ ಮೀನಾಕ್ಷಿ ನೇಗಿ ಅವರ ವಾಹನ ಮೊದಲಿಗೆ ಆಗಮಿಸಿದ್ದು, ಈ ಸಂದರ್ಭ ಸಚಿವರ ವಾಹನವೆಂದು ಭಾವಿಸಿದ ಪ್ರತಿಭಟನಾಕಾರರು ಘೇರಾವ್ ಹಾಕಲು ಮುಂದಾದರು. ಆದರೆ ಪ್ರತಿಭಟನೆಯ ಸುಳಿವರಿತು ಸನ್ನದ್ಧರಾಗಿದ್ದ ಪೊಲೀಸರು, ಸಚಿವರಿಗೆ ಘೇರಾವ್ ಹಾಕಲು ಸಿದ್ಧತೆ ನಡೆಸಿದ್ದ ಪ್ರತಿಭಟನಾಕಾರರನ್ನು ವಶಕ್ಕೆ ಪಡೆದರು.



ಕೊಡಗು ಕಾಂಗ್ರೆಸ್ ಖಂಡನೆ: ಶಾಶ್ವತ ಅಭಿವೃದ್ಧಿ ಕಾರ್ಯಕ್ಕೆ ಚಾಲನೆ ನೀಡಲು ಬಂದ ಅರಣ್ಯ ಸಚಿವ ಈಶ್ವರ ಖಂಡ್ರೆಯವರ ಕಾರನ್ನು ತಡೆಯಲು ಬಿಜೆಪಿ ಮುಖಂಡರು ಮುಂದಾಗಿರುವುದನ್ನು ಕೊಡಗು ಜಿಲ್ಲಾ ಕಾಂಗ್ರೆಸ್ ತೀವ್ರವಾಗಿ ಖಂಡಿಸಿದೆ. ಕೊಡಗಿನಲ್ಲಿ ಆನೆ ಮಾನವ ಸಂಘರ್ಷ ಇಂದು ನಿನ್ನೆಯದಲ್ಲ. ಅನೇಕ ದಶಕಗಳಿಂದ ಇದೆ. ಜಿಲ್ಲೆಯಲ್ಲಿ ಕಳೆದ 25 ವರ್ಷಗಳಲ್ಲಿ ಬಿಜೆಪಿ ಶಾಸಕರಿದ್ದಾಗ ಅರಣ್ಯ ಇಲಾಖೆ ಏನು ಕೆಲಸ ಮಾಡಿದೆ ಎಂದು ನೋಡದೇ ಇದ್ದು, ಈಗಿನ ಶಾಸಕರು ಕಾಳಜಿಯಿಂದ ವನ್ಯಜೀವಿ ಸಂಘರ್ಷ ತಡೆದ ವೈಜ್ಞಾನಿಕವಾಗಿ ಕ್ರಮ ಕೈಗೊಳ್ಳಲು ಮುಂದಾಗಿರುವಾಗ ಅವರಿಗೆ ಪ್ರೋತ್ಸಾಹ ನೀಡುವ ಬದಲಿಗೆ ರಾಜಕಾರಣಕ್ಕಾಗಿ ಬಿಜೆಪಿಯವರು ತಡೆ ಮಾಡುತ್ತಿದ್ದಾರೆ. ಇಂತಹ ಗೊಡ್ಡು ಬೆದರಿಕೆಗಳಿಗೆ ಕೊಡಗು ಕಾಂಗ್ರೆಸ್ ಜಗ್ಗುವುದಿಲ್ಲ ಎಂದು ಪಕ್ಷದ ವಕ್ತಾರ ತೆನ್ನಿರ ಮೈನಾ ಹೇಳಿದ್ದಾರೆ.

ಬ್ರಹ್ಮಸ್ಥಾನಂ ಮಹೋತ್ಸವ, ಅಮೃತಸಂಗಮಕ್ಕೆ ಚಪ್ಪರ ಮುಹೂರ್ತ

ನಡೆದಾಡುವ 'ಅಮ್ಮ': ನಳಿನ್

ಮಂಗಳೂರು: ಮಂಗಳೂರಿನ ಮಾತಾ ಅಮೃತಾನಂದಮಯಿ ಮಠಕ್ಕೆ ಮೇ 28ರಂದು ಆಗಮಿಸುವ ಸದ್ಗುರು ಶ್ರೀ ಮಾತಾ ಅಮೃತಾನಂದಮಯಿ ದೇವಿಯವರ ಕಾರ್ಯಕ್ರಮ 'ಬ್ರಹ್ಮಸ್ಥಾನಂ ಮಹೋತ್ಸವ ಮತ್ತು ಅಮೃತಸಂಗಮ 2026'ರ ಪ್ರಯುಕ್ತ ಚಪ್ಪರ ಮುಹೂರ್ತ ಜರುಗಿತು.

ಸ್ವಾಮಿನಿ ಮಂಗಳಾಮೃತ ಪ್ರಾಣ ಅವರ ಉಪಸ್ಥಿತಿಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ನಿಕಟಪೂರ್ವ ಸಂಸದ ನಳಿನ್ ಕುಮಾರ್ ಕಟೀಲು ಚಪ್ಪರ ಮುಹೂರ್ತ ನೆರವೇರಿಸಿ ಮಾತನಾಡಿ, ನಡೆದಾಡುವ, ಮಾತನಾಡುವ ದೇವರಾದ ಮಾತಾ ಅಮೃತಾನಂದಮಯಿ ದೇವಿಯವರು ಜಗತ್ತಿಗೆ ಪ್ರೇಮದ ಸಂದೇಶಗಳನ್ನು ಸಾರುತ್ತಿದ್ದಾರೆ. ಪ್ರೀತಿ ಮತ್ತು ವಾತ್ಸಲ್ಯ ತಾಯಿಯ ಸಹಜ ಗುಣ. ಅಮ್ಮನವರು ಶ್ರೇಷ್ಠವಾದ ಶಿಕ್ಷಣ ಯಜ್ಞ, ಆರೋಗ್ಯ ಯಜ್ಞ ಮೊದಲಾದ ಹತ್ತಾರು ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಿದ್ದಾರೆ. ಇಲ್ಲಿನ ಸೇವಾ ಸಮಿತಿಯು ಅತ್ಯುತ್ತಮ ಕಾರ್ಯಕ್ರಮಗಳನ್ನು ಕಳೆದ ಹಲವು ವರ್ಷಗಳಿಂದ ಮಾಡುತ್ತಾ ಬಂದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಗೌರವಾಧ್ಯಕ್ಷ ಡಾ. ಜೀವರಾಜ್ ಸೊರಕೆ ಮಾತನಾಡಿ, ಅಮ್ಮನವರು ಈ ಬಾರಿ ರಾಜ್ಯದಲ್ಲಿ ಏಕೈಕ ಸ್ಥಳಕ್ಕೆ ಭೇಟಿ ನೀಡುತ್ತಿದ್ದು, ಮಂಗಳೂರಿನಲ್ಲಿ ಈ ಕಾರ್ಯಕ್ರಮ ನಡೆಸುವ ಸೌಭಾಗ್ಯ ಇಲ್ಲಿನ ಭಕ್ತರ ಪಾಲಿಗೆ ಲಭಿಸಿದೆ. ಮಂಗಳೂರನ್ನು ಆಯ್ಕೆ ಮಾಡುತ್ತಿರುವ ಕಾರಣ ನಮ್ಮ ಜವಾಬ್ದಾರಿ ಬಹಳ ಮಹತ್ವದ್ದಾಗಿದೆ. ಆದಷ್ಟು ಹೆಚ್ಚಿನ ಭಕ್ತರು ಪೂಜೆ ಸಲ್ಲಿಸುವ ಮೂಲಕ ಅಮ್ಮನ ಕಾರ್ಯಕ್ರಮದ ಯಶಸ್ವಿಯಾಗಿ ನೆರವೇರಲು ಸರ್ವರ ಸಹಕಾರ ಕೋರಿದರು. ಸ್ವಾಮಿನಿ ಮಂಗಳಾಮೃತ ಪ್ರಾಣ ಅವರು ಆಶೀರ್ವಚನವಿತ್ತು, ಅಮ್ಮನವರ ಭೇಟಿಯ ಬಗ್ಗೆ ಕಳೆದ ಏಳು ವರ್ಷಗಳಿಂದ ಕಾತರದಿಂದ ಕಾದು ಕುಳಿತ ಭಕ್ತರಿಗೆ ಇದೊಂದು ಉತ್ತಮ ಅವಕಾಶವಾಗಿದ್ದು ಹೆಚ್ಚಿನ ಜನರು ಪಾಲ್ಗೊಳ್ಳುವಂತೆ ಕರೆಯಿತ್ತರು. ಗುತ್ತಿಗೆದಾರ ಭಾಸ್ಕರ್ ಭಟ್ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಮಾಜಿಮೇಯರ್ ಗಣೇಶ್ ಹೊಸಬೆಟ್ಟು, ಗೌರವಾಧ್ಯಕ್ಷ ಸಿ ಎ. ವಾಮನ್ ಕಾಮತ್, ಮುರಳೀಧರ್ ಶೆಟ್ಟಿ, ವಾಮನ್ ಮೈಂದನ್, ಚಂದ್ರಹಾಸ್ ಸುವರ್ಣ, ಗಣೇಶ್ ಕೆ., ಕೃಷ್ಣ ಶೆಟ್ಟಿ, ವಕೀಲೆ ಪುಷ್ಪಲತಾ, ಅಮೃತ ವಿದ್ಯಾಲಯಂ ಪ್ರಾಂಶುಪಾಲೆ ಮಧುಲಿಖಾ ರಾವ್ ಭಾಗವಹಿಸಿದ್ದರು. ಗೌರವಾಧ್ಯಕ್ಷ ಡಾ. ವಸಂತ ಕುಮಾರ್ ಪೆರ್ಲ ಕಾರ್ಯಕ್ರಮ ನಿರೂಪಿಸಿದರು.

ದಕ್ಷಿಣ ಕನ್ನಡದಲ್ಲಿ ಉರಿಬಿಸಿಲಿನ ವಾತಾವರಣ | ಆರೋಗ್ಯ ಸಮಸ್ಯೆಗಳಿಗೆ ಇಲ್ಲಿ ಸಿಗಲಿದೆ ವಿಶೇಷ ಆರೈಕೆ

ವೆನ್ಲಾಕ್‌ನಲ್ಲಿ 10 ಹಾಸಿಗೆಗಳ ವಿಶೇಷ ಘಟಕ ಸಿದ್ಧ

ಮಂಗಳೂರು: ಮಂಗಳೂರು ನಗರ ಸೇರಿದಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಿನೇ ದಿನೇ ಹೆಚ್ಚುತ್ತಿರುವ ತಾಪಮಾನದ ಹಿನ್ನೆಲೆಯಲ್ಲಿ, ಮಂಗಳೂರಿನ ವೆನ್‌ಲಾಕ್ ಜಿಲ್ಲಾಸ್ಪತ್ರೆಯಲ್ಲಿ ಶಾಖಾಘಾತಕ್ಕಾಗಿ 10 ಹಾಸಿಗೆಗಳ ವಿಶೇಷ ಘಟಕಗಳ ವ್ಯವಸ್ಥೆ ಮಾಡಲಾಗಿದೆ ಎಂದು ವೆನ್ಲಾಕ್ ಅಧೀಕ್ಷಕರು ತಿಳಿಸಿದ್ದಾರೆ.

ದೇಹದ ಉಷ್ಣತೆ ಹೆಚ್ಚಳವಾಗಿ ಆರೋಗ್ಯ ಸಮಸ್ಯೆ ಕಾಣಿಸಿಕೊಳ್ಳಬಹುದು ಈ ಬಗ್ಗೆ ಎಚ್ಚರ ಅಗತ್ಯ. ಉರಿ ಬಿಸಿಲಿನಿಂದಾಗಿ ಪ್ರಜ್ಞೆ ತಪ್ಪುವುದು, ವಾಕರಿಕೆ ಇತ್ಯಾದಿ ಸಮಸ್ಯೆಗಳು ಕಂಡು ಬಂದರೆ ವೈದ್ಯರನ್ನು ಭೇಟಿಯಾಗುವುದು ಒಳಿತು.

ಅಲ್ಲದೆ ಹೆಚ್ಚಿನ ಸಮಸ್ಯೆ ಕಂಡುಬಂದರೆ ತಕ್ಷಣ ತುರ್ತು ಸೇವೆ ಸಂಖ್ಯೆ 108ಕ್ಕೆ ಕರೆ ಮಾಡಬಹುದು. ವೆನ್ಲಾಕ್ ಆಸ್ಪತ್ರೆಯ ಸಹಾಯವಾಣಿ ಸಂಖ್ಯೆ 7483035127, 8217662885, 9945927253, 9167607879 ಸಂಪರ್ಕಿಸಬಹುದು ಎಂದು ವೆನ್ಲಾಕ್ ಅಧೀಕ್ಷಕರು ತಿಳಿಸಿದ್ದಾರೆ.



ಶಾಖಾಘಾತಕ್ಕೆ ತಕ್ಷಣದ ಚಿಕಿತ್ಸೆ

ಶಾಖಾಘಾತ ಜೀವಕ್ಕೆ ಅಪಾಯಕಾರಿ. ಆದ್ದರಿಂದ ಎಚ್ಚರಿಕೆ ವಹಿಸಬೇಕು. ಶಾಖಾಘಾತಕ್ಕೆ ಒಳಗಾದ ವ್ಯಕ್ತಿಯನ್ನು ತಕ್ಷಣ ಎಸಿ ರೂಮ್‌ಗೆ ಅಥವಾ ತಂಪಾದ ಸ್ಥಳಕ್ಕೆ ಕರೆದೊಯ್ಯಬೇಕು. ವೇಗವಾಗಿ ತಂಪು ಮಾಡುವುದು ಅತಿ ಮುಖ್ಯ. ಮಂಜುಗಡ್ಡೆ, ನೀರಿನಲ್ಲಿ ಮುಳುಗಿಸುವುದು: ಸಾಧ್ಯವಾದರೆ ತಣ್ಣೀರಿನ ಟಬ್‌ನಲ್ಲಿ ಮುಳುಗಿಸಬೇಕು ಎಂದು ವೈದ್ಯರು ಸಲಹೆ ನೀಡಿದ್ದಾರೆ.

ತಂಪು ಮಾಡುವ ವಿಧಾನಗಳು

ದೇಹದ ಮೇಲೆ ನೀರು ಸಿಂಪಡಿಸಿ, ತೋಟದ ಪೈಪ್ ಬಳಸಿ, ಅಥವಾ ತಣ್ಣೀರಿನಲ್ಲಿ ನೆನೆಸಿದ ಟವೆಲ್ ಹೊದಿಸಬೇಕು. ಕಂಕುಳು, ಕುತ್ತಿಗೆ, ಬೆನ್ನು ಮತ್ತು ತೊಡೆಸಂದು ಭಾಗಕ್ಕೆ ಐಸ್ ಪ್ಯಾಕ್ ಅಥವಾ ತಣ್ಣನೆಯ ಒದ್ದೆ ಬಟ್ಟೆ ಇಡಬೇಕು. ವ್ಯಕ್ತಿ ಎಚ್ಚರವಾಗಿದ್ದರೆ ತಣ್ಣೀರು ಅಥವಾ ಎಲೆಕ್ಟ್ರೋಲೈಟ್ ಇರುವ ಪಾನೀಯ ನೀಡಬೇಕು.

ಶಾಖಾಘಾತ ತಡೆಗಟ್ಟುವ ಸಲಹೆಗಳು

ಬಾಯಾರಿಕೆ ಇಲ್ಲದಿದ್ದರೂ ದಿನವಿಡೀ ಸಾಕಷ್ಟು ದ್ರವಾಹಾರ (ನೀರು, ಎಳನೀರು,ಒ.ಆರ್.ಎಸ್) ಸೇವಿಸಬೇಕು. ಬೆಳಿಗ್ಗೆ 11 ರಿಂದ ಸಂಜೆ 4 ರವರೆಗೆ ಹೊರಾಂಗಣ ಚಟುವಟಿಕೆ ಮಿತಿಗೊಳಿಸಿ ಅಥವಾ ತಪ್ಪಿಸಬೇಕು. ಹಗುರವಾದ, ಸಡಿಲವಾದ, ತಿಳಿ ಬಣ್ಣದ ಹತ್ತಿ ಬಟ್ಟೆ ಧರಿಸಬೇಕು. ದೇಹ ಹೊಂದಿಕೊಳ್ಳಲು ಬಿಸಿಲಿನಲ್ಲಿ ಕಳೆಯುವ ಸಮಯವನ್ನು ಕ್ರಮೇಣ ಹೆಚ್ಚಿಸಬೇಕು. ಮಕ್ಕಳು, ವೃದ್ಧರು ಅಥವಾ ಸಾಕುಪ್ರಾಣಿಗಳನ್ನು ನಿಲ್ಲಿಸಿದ ಕಾರಿನಲ್ಲಿ ಎಂದಿಗೂ ಬಿಡಬೇಡಿ. ಕೆಲವೇ ನಿಮಿಷಗಳಲ್ಲಿ ಉಷ್ಣತೆ ಮಾರಕವಾಗಬಹುದು. ಹೊರಗೆ ಕೆಲಸ ಅಥವಾ ವ್ಯಾಯಾಮ ಮಾಡುವಾಗ ಆಗಾಗ್ಗೆ ನೆರಳಿನಲ್ಲಿ ವಿಶ್ರಮಿಸಬೇಕು. ವೃದ್ಧರು ಮತ್ತು ದೀರ್ಘಕಾಲದ ಕಾಯಿಲೆ ಇರುವ ಅಪಾಯದಲ್ಲಿರುವವರನ್ನು ನೋಡಿಕೊಳ್ಳಬೇಕು ಎಂದು ವೈದ್ಯರು ಸಲಹೆ ನೀಡಿದ್ದಾರೆ.

ತ್ರಿಶಂಕು ಸ್ಥಿತಿಯಲ್ಲಿ ಸಿಲುಕಿದೆ ಶಬರಿಮಲೆ ಮಾಸ್ಟರ್ ಪ್ಲಾನ್

ಕಾಸರಗೋಡು: ಶಬರಿಮಲೆಯ ಸರ್ವಾಂಗೀಣ ಅಭಿವೃದ್ಧಿಗಾಗಿ ರೂಪು ನೀಡಲಾಗಿರುವ ಶಬರಿಮಲೆ ಮಾಸ್ಟರ್ ಪ್ಲಾನ್ ತ್ರಿಶಂಕು ಸ್ಥಿತಿಯತ್ತ ಸಾಗತೊಡಗಿದೆ. ಈ ಯೋಜನೆಗೆ ಕೇಂದ್ರ ಅರಣ್ಯ ಮತ್ತು ನೈಸರ್ಗಿಕ ಸಚಿವಾಲಯದ ಅನುಮತಿಯ ಅಗತ್ಯವಿದ್ದು, ಅದು ಈ ತನಕ ಲಭಿಸಿಲ್ಲ. ಈ ಯೋಜನೆಗೆ ಅಗತ್ಯದಷ್ಟು ಅರಣ್ಯ ಭೂಮಿಯನ್ನು ಬಿಟ್ಟುಕೊಟ್ಟಲ್ಲಿ ಅದಕ್ಕೆ ಪರ್ಯಾಯವಾಗಿ ಅಷ್ಟೇ ಪ್ರಮಾಣದ ಕಂದಾಯ ಭೂಮಿಯನ್ನು ಬಿಟ್ಟುಕೊಡಲು ಅರಣ್ಯ ಇಲಾಖೆ ಮುಂದಾಗಿತ್ತು. ಆದರೆ ಅಗತ್ಯದ ಅರಣ್ಯ ಭೂಮಿ ಲಭಿಸುವ ವಿಷಯದಲ್ಲಿ ಈ ತನಕ ಯಾವುದೇ ತೀರ್ಮಾನ ಉಂಟಾಗಿಲ್ಲ.

ಇದು ಮಾತ್ರವಲ್ಲದೆ ಪಂಪಾ ಗಣಪತಿ ದೇವಸ್ಥಾನದಿಂದ ಆರಂಭಗೊಂಡು ಹಿಲ್‌ಟೋಪ್ ತನಕದ ಭದ್ರತಾ ಸೇತುವೆ ಮತ್ತು ರೋಪ್ ವೇ ನಿರ್ಮಾಣ ಯೋಜನೆಯೂ ಈಗ ನೆನೆಗುದಿಗೆ ಬಿದ್ದಿದೆ.

ಪಂಪಾ ಹಿಲ್‌ಟೋಪ್‌ನಿಂದ ಸನ್ನಿಧಾನದ ಪೊಲೀಸ್ ಕೇಂದ್ರದ ತನಕ 4.53 ಎಕರೆ ಅರಣ್ಯ ಭೂಮಿಯ ಅಗತ್ಯವಿದೆ. ಅದನ್ನು ನೀಡಿದಲ್ಲಿ ಅದಕ್ಕೆ ಪರ್ಯಾಯವಾಗಿ ಕೊಲ್ಲಂ ಜಿಲ್ಲೆಯ ಪುನಲೂರು ತಾಲೂಕಿನಲ್ಲಿ 4.53.36 ಹೆಕ್ಟೇರ್ ಕಂದಾಯ ಭೂಮಿಯನ್ನು ನೀಡಲು ಸಿದ್ಧವೆಂದು ರಾಜ್ಯ ಸರಕಾರ ಕೇಂದ್ರ ಅರಣ್ಯ ನೈಸರ್ಗಿಕ ಸಚಿವಾಲಯಕ್ಕೆ ತಿಳಿಸಿತ್ತು. ಆದರೆ ಈ ವಿಷಯದಲ್ಲಿ ಈ ತನಕ ಯಾವುದೇ ರೀತಿಯ ಅಂತಿಮ ತೀರ್ಮಾನ ಉಂಟಾಗಲಿಲ್ಲ. ಇದರಿಂದಾಗಿ ಶಬರಿಮಲೆಯ ಮಾಸ್ಟರ್ ಪ್ಲಾನ್ ಎತ್ತಲೂ ಸಾಗದೆ ತ್ರಿಶಂಕು ಸ್ಥಿತಿಯಲ್ಲಿ ಸಿಲುಕಿಕೊಂಡಂತಾಗಿದೆ.





ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	9	6	2	1	13	+0.855
ಆರ್‌ಸಿಬಿ	9	6	3	0	12	+1.420
ಹೈದರಾಬಾದ್	10	6	4	0	12	+0.644
ರಾಜಸ್ಥಾನ	10	6	4	0	12	+0.510
ಗುಜರಾತ್	10	6	4	0	12	-0.147
ಚೆನ್ನೈ	10	5	5	0	10	+0.151
ದಿಲ್ಲಿ	10	4	6	0	8	-0.949
ಕೆಕೆಆರ್	9	3	5	1	7	-0.539
ಮುಂಬೈ	10	3	7	0	6	-0.649
ಲಖನೌ	9	2	7	0	4	-1.076

ಕಿರುಸುದ್ದಿ

ಭಾರತ-ಪಾಕ್ ದ್ವಿಪಕ್ಷೀಯ ಸರಣಿಗಳಿಗೆ ನಿರ್ಬಂಧ



ಹೊಸದಿಲ್ಲಿ: ಭಾರತ ಆಯೋಜಿಸುವ ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಪಾಕಿಸ್ತಾನ ಕ್ರೀಡಾಪಟುಗಳಿಗೆ ಅವಕಾಶ ನೀಡಿರುವ ಭಾರತ ಸರ್ಕಾರ, ಯಾವುದೇ ಕಾರಣಕ್ಕೂ ಭಾರತೀಯ ಕ್ರೀಡಾಪಟುಗಳು ಪಾಕಿಸ್ತಾನಕ್ಕೆ ಬರುವುದಿಲ್ಲ ಎಂದಿದೆ. ಆಪರೇಷನ್ ಸಿಂದೂರ ನಂತರ ತನ್ನ ಎಲ್ಲಾ ಕ್ರೀಡಾ ಸಂಸ್ಥೆಗಳಿಗೆ ಪಾಕಿಸ್ತಾನದೊಂದಿಗೆ ಸಂಬಂಧಗಳನ್ನು ಮುರಿದುಕೊಳ್ಳಲು ಹೇಳಿತ್ತು. ಇಷ್ಟು ದಿನ ಭಾರತದಲ್ಲಿ ಮತ್ತು ಪಾಕಿಸ್ತಾನದಲ್ಲಿ ನಡೆದಿದ್ದ ಕ್ರೀಡಾಕೂಟಗಳಲ್ಲಿ ಭಾರತ ಮತ್ತು ಪಾಕಿಸ್ತಾನ ಮುಖಾಮುಖಿಯಾಗಿರಲಿಲ್ಲ. ಬುಧವಾರ ಕ್ರೀಡಾ ಪ್ರಾಧಿಕಾರದಿಂದ ಪ್ರಕಟವಾಗಿರುವ ಪ್ರಕಟಣೆ ಪ್ರಕಾರ, ಭಾರತದಲ್ಲಿ ನಡೆಯುವ ಅಂತಾರಾಷ್ಟ್ರೀಯ ಕೂಟಗಳಲ್ಲಿ ಪಾಕಿಸ್ತಾನ ಕೀಡಾಪಟುಗಳು ಭಾಗವಹಿಸಬಹುದು. ಆದರೆ ಯಾವುದೇ ಕಾರಣಕ್ಕೂ ಭಾರತದ ಕ್ರೀಡಾಪಟುಗಳು ಪಾಕಿಸ್ತಾನಕ್ಕೆ ಹೋಗಬಾರದು. ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ಉಭಯ ದೇಶಗಳ ನಡುವಿನ ಯಾವುದೇ ಕ್ರೀಡೆಯ ದ್ವಿಪಕ್ಷೀಯ ಸರಣಿಗಳು ಭಾರತದಲ್ಲಾಗಲಿ, ಪಾಕಿಸ್ತಾನದಲ್ಲಾಗಲಿ ನಡೆಯುವುದಿಲ್ಲ. ಆದರೆ ಅಂತಾಷ್ಟ್ರೀಯ ಕ್ರೀಡಾಕೂಟಗಳ ಬದ್ಧತೆ ಗಮನದಲ್ಲಿಟ್ಟುಕೊಂಡು ನಾವು ಪಾಕಿಸ್ತಾನಿ ಕ್ರೀಡಾಪಟುಗಳಿಗೆ ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಮಾತ್ರ ಭಾಗವಹಿಸಲು ಅವಕಾಶ ಕೊಡುತ್ತೇವೆ ಎಂದಿದೆ.ಕ್ರಿಕೆಟ್ ವಿಚಾರದಲ್ಲೂ ದ್ವಿಪಕ್ಷೀಯ ಸರಣಿಗೆ ಅವಕಾಶ ನೀಡಿಲ್ಲ. ಆದರೆ ಐಸಿಸಿ, ಎಸಿಸಿ ಕೂಟಗಳನ್ನು ಭಾರತ ಆಯೋಜಿಸಿದರೆ, ಪಾಕಿಸ್ತಾನಿ ಆಟಗಾರರಿಗೆ ಭಾರತಕ್ಕೆ ಪ್ರಯಾಣಿಸಲು ಅವಕಾಶ ನೀಡಲಾಗುವುದು. ಆದರೆ, ಭಾರತ ಪಾಕಿಸ್ತಾನಕ್ಕೆ ತಿರಸ್ಕರಿಸಿದ ನಂತರ ಪಾಕಿಸ್ತಾನ ತನ್ನ ಎಲ್ಲಾ ಪಂದ್ಯಗಳನ್ನು ತಟಸ್ಥ ಸ್ಥಳದಲ್ಲಿ ನಡೆಸುವಂತೆ ಒಪ್ಪಂದ ಮಾಡಿಕೊಂಡಿದೆ.

- ಅಂತಾರಾಷ್ಟ್ರೀಯ ಕೂಟಗಳಲ್ಲಿ ಪಾಕಿಸ್ತಾನಿ ಪಟುಗಳಿಗೆ ಅನುಮತಿ
- ನಮ್ಮ ಕ್ರೀಡಾಪಟುಗಳು ಪಾಕ್‌ಗೆ ಕಾಲೂ ಇಡಲ್ಲ: ಕ್ರೀಡಾ ಪ್ರಾಧಿಕಾರ

ಟಿಟಿ: ಭಾರತಕ್ಕೆ ಸೋಲು

ಲಂಡನ್: ವಿಶ್ವ ತಂಡ ಟೇಬಲ್ ಟೆನಿಸ್ ಚಾಂಪಿಯನ್‌ಶಿಪ್ ಫೈನಲ್ ‌ನಲ್ಲಿ 32ನೇ ಸುತ್ತಿನ ಪಂದ್ಯದಲ್ಲಿ ಆಸ್ಟ್ರಿಯಾ ವಿರುದ್ಧ 0–3 ಅಂತರದಲ್ಲಿ ಸೋತ ನಂತರ ಭಾರತೀಯ ಪುರುಷರ ತಂಡವು ಹೊರಬಿತ್ತು. ಮಾನವ್ ಥಕ್ಕರ್ ಮತ್ತು ಸತ್ಯನ್ ಜ್ಞಾನಶೇಖರನ್ ತಮ್ಮ ಎದುರಾಳಿಗಳ ವಿರುದ್ಧ ಸೌಮ್ಯವಾಗಿ ಶರಣಾದರೆ, ಮನುಷ್ ಶಾ ಒಂದು ಗಂಟೆ 34 ನಿಮಿಷಗಳ ಕಾಲ ನಡೆದ ಟೈನಲ್ಲಿ ಸೋತರು. ರಾಬರ್ಟ್ ಗಾರ್ಡೋಸ್ ವಿರುದ್ಧದ ಟೈನಲ್ಲಿ ಮೊದಲು ಮೈದಾನಕ್ಕಿಳಿದವರು ಮನುಷ್ ಶಾ. ಮೊದಲ ಗೇಮ್ ಅನ್ನು 11–6 ಅಂತರದಿಂದ ಗೆದ್ದರು ಆದರೆ ಮುಂದಿನ ಎರಡು ಗೇಮ್‌ಗಳನ್ನು 7–11 ಮತ್ತು 3–11 ಅಂತರದಿಂದ ಸೋತು ನಾಲ್ಕನೇ ಗೇಮ್ ಅನ್ನು 11–8 ಅಂತರದಿಂದ ಗೆದ್ದರು. ಆದರೆ ನಿರ್ಣಾಯಕ ಪಂದ್ಯದಲ್ಲಿ, ಭಾರತೀಯ ಆಟಗಾರ 11–13 ಅಂತರದಿಂದ ಸೋತರು. 32 ರ ಸುತ್ತಿನಲ್ಲಿ ಯುಎಸ್‌ಎ ವಿರುದ್ಧ 3–1 ಅಂತರದಲ್ಲಿ ಸೋತ ನಂತರ ಭಾರತೀಯ ಮಹಿಳಾ ತಂಡವೂ ಹೊರಬಿತ್ತು. ಯಶಸ್ವಿನಿ ಘೋರ್ಪಡೆ ಸ್ಯಾಲಿ ಮೊಯ್ಲ್ಯಾಂಡ್ ವಿರುದ್ಧ 8–11, 8–11, 7–11 ಅಂತರದಲ್ಲಿ ಸೋತರು, ಆದರೆ ಮಣಿಕಾ ಬಾತ್ರಾ ಜೆಸ್ಸಿಕಾ ರೆಯೆಸ್ ಲೈ ಅವರನ್ನು 11–2, 11–7, 8–11, 11–4 ಅಂತರದಲ್ಲಿ ಸೋಲಿಸುವ ಮೂಲಕ ಒಂದು ಹಿನ್ನಡೆ ಅನುಭವಿಸಿದರು. ಆದಾಗ್ಯೂ, ದಿಯಾ ಚಟಾಲೆ ಮತ್ತು ಮಣಿಕಾ ಕ್ರಮವಾಗಿ ಲಿಲಿ ಜಾಂಗ್ ಮತ್ತು ಮೊಯ್ಲ್ಯಾಂಡ್ ಅವರ ಕೈಯಲ್ಲಿ ಸತತ ಸೋಲುಗಳನ್ನು ಅನುಭವಿಸಿದರು.

ಅಹಮದಾಬಾದ್‌ನಲ್ಲಿ ಫೈನಲ್ | ಚಂಡೀಗಢದಲ್ಲಿ 2 ಕ್ವಾಲಿಫೈಯರ್ | ಚಿನ್ನಸ್ವಾಮಿಗಿಲ್ಲ ಪ್ಲೇಆಫ್ ಭಾಗ್ಯ

ಬೆಂಗಳೂರಿನಿಂದ ಫೈನಲ್ ಸ್ಥಳಾಂತರ!

ಬೆಂಗಳೂರು: ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿ ಕ್ವಾಲಿಫೈಯರ್ ಹಾಗೂ ಫೈನಲ್ ಪಂದ್ಯಗಳನ್ನು ಸ್ಥಳಾಂತರಿಸಲಾಗಿದೆ. ಬದಲಾಗಿ ಕಳೆದ ಬಾರಿ ಫೈನಲ್‌ಗೆ ಆತಿಥ್ಯ ನೀಡಿದ್ದ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣ ಫೈನಲ್ ಪಂದ್ಯವನ್ನು ಸತತ ಎರಡನೇ ಬಾರಿ ಆಯೋಜಿಸಲು ಸಿದ್ಧವಾಗಿದೆ.

ಹಿಂದಿನ ಟೂರ್ನಿ ಗೆದ್ದ ತಂಡದ ತವರಲ್ಲಿ ಫೈನಲ್ ಮತ್ತು ಒಂದು ಕ್ವಾಲಿಫೈಯರ್ ಪಂದ್ಯ ನಡೆಸುವುದು ಐಪಿಎಲ್‌ನ ವಾಡಿಕೆ. ಆದರೆ ವಿವಿಧ ಕಾರಣಗಳಿಂದ ಪಂದ್ಯಗಳನ್ನು ಸ್ಥಳಾಂತರಿಸಲಾಗಿದ್ದು, ಬೆಂಗಳೂರಿನಿಂದ ಪಂದ್ಯಗಳು ಕೈತಪ್ಪಿವೆ. ಧರ್ಮಶಾಲಾದಲ್ಲಿ ಮೊದಲ ಪ್ಲೇಆಫ್ ಪಂದ್ಯ ನಡೆಯಲಿದ್ದರೆ, ಚಂಡೀಗಢದ ಹೊಸ ಕ್ರೀಡಾಂಗಣ ಎಲಿಮಿನೇಟರ್ ಮತ್ತು ಒಂದು ಕ್ವಾಲಿಫೈಯರ್ ಪಂದ್ಯಕ್ಕೆ ಆತಿಥ್ಯ ನೀಡಲಿದೆ. ಫೈನಲ್ ಪಂದ್ಯ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿದೆ ಎಂದು ಬಿಸಿಸಿಐ ಬುಧವಾರ ಪ್ರಕಟಣೆಯಲ್ಲಿ ತಿಳಿಸಿದೆ.

ಮೂರು ಕ್ರೀಡಾಂಗಣದಲ್ಲಿ ಪ್ಲೇಆಫ್: ಬಿಸಿಸಿಐ ತನ್ನ ಹೇಳಿಕೆಯಲ್ಲಿ ಅಂಕಪಟ್ಟಿಯಲ್ಲಿ ಅಗ್ರ ಎರಡು ತಂಡಗಳನ್ನು ಒಳಗೊಂಡ ಕ್ವಾಲಿಫೈಯರ್ 1, ಮೇ 26 ರಂದು ಧರ್ಮಶಾಲಾದಲ್ಲಿ ನಡೆಯಲಿದ್ದು, ಎರಡು ತಂಡಗಳಿಗೆ ಫೈನಲ್‌ಗೆ ನೇರ ಸ್ಥಾನ ಪಡೆಯುವ ಅವಕಾಶವಿದೆ. ನಂತರ ನ್ಯೂ ಚಂಡೀಗಢದ ನ್ಯೂ ಇಂಟರ್‌ನ್ಯಾಷನಲ್ ಕ್ರಿಕೆಟ್ ಕ್ರೀಡಾಂಗಣಕ್ಕೆ ವಿಸ್ತಾರಗೊಳ್ಳಲಿದೆ. ಮೇ 27 ರಂದು ಮೂರನೇ ಮತ್ತು ನಾಲ್ಕನೇ ಸ್ಥಾನದಲ್ಲಿರುವ ತಂಡಗಳ ನಡುವೆ ಎಲಿಮಿನೇಟರ್ ಅನ್ನು ಆಯೋಜಿಸುತ್ತದೆ. ಅದೇ ಸ್ಥಳವು ಮೇ 29 ರಂದು ಕ್ವಾಲಿಫೈಯರ್ 2 ಅನ್ನು ಸಹ ಆಯೋಜಿಸುತ್ತದೆ, ಅಲ್ಲಿ ಕ್ವಾಲಿಫೈಯರ್ 1 ರಲ್ಲಿ ಸೋತವರು ಎರಡನೇ ಫೈನಲಿಸ್ಟ್ ಅನ್ನು ನಿರ್ಧರಿಸಲು ಎಲಿಮಿನೇಟರ್‌ನ ವಿಜೇತರನ್ನು ಎದುರಿಸುತ್ತಾರೆ. ಸೀಸನ್ ಮೇ 31 ರಂದು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯುವ ಗ್ರ್ಯಾಂಡ್ ಫೈನಲ್‌ನೊಂದಿಗೆ ಕೊನೆಗೊಳ್ಳುತ್ತದೆ. ವಿಶ್ವದ ಅತಿದೊಡ್ಡ ಕ್ರಿಕೆಟ್ ಕ್ರೀಡಾಂಗಣ – ಅದ್ಭುತವಾದ ಅಂತಿಮ ಪಂದ್ಯಕ್ಕೆ ವೇದಿಕೆ ಸಜ್ಜಾಗಿದೆ.



ಸ್ಥಳಾಂತರಕ್ಕೆ ಕಾರಣವೇನು?

ಕೆಲವು ಕಾರ್ಯಾಚರಣೆ ಮತ್ತು ವ್ಯವಸ್ಥಾಪನಾ ಪರಿಗಣನೆಗಳಿಂದಾಗಿ, ಈ ಋತುವಿನಲ್ಲಿ ಟಾಟಾ ಐಪಿಎಲ್ 2026 ಪ್ಲೇಆಫ್‌ಗಳನ್ನು ವಿಶೇಷ ಪ್ರಕರಣವಾಗಿ ಮೂರು ಸ್ಥಳಗಳಲ್ಲಿ ನಡೆಸಲಾಗುವುದು ಎಂದು ಬಿಸಿಸಿಐ ಉಲ್ಲೇಖಿಸಿದೆ. ಫೈನಲ್ ಪಂದ್ಯವನ್ನು ಬೆಂಗಳೂರು ಆಯೋಜಿಸಬೇಕಿತ್ತು. ಆದಾಗ್ಯೂ, ಬಿಸಿಸಿಐನ ಸ್ಥಾಪಿತ ಮಾರ್ಗಸೂಚಿಗಳು ಮತ್ತು ಪ್ರೋಟೋಕಾಲ್‌ಗಳ ವ್ಯಾಪ್ತಿಯನ್ನು ಮೀರಿದ ಸ್ಥಳೀಯ ಸಂಘ ಮತ್ತು ಅಧಿಕಾರಿಗಳ ಕೆಲವು ಅವಶ್ಯಕತೆಗಳಿಂದಾಗಿ, ಸ್ಥಳವನ್ನು ಸ್ಥಳಾಂತರಿಸಲಾಗಿದೆ ಎನ್ನಲಾಗಿದೆ.

ಅಹಮದಾಬಾದ್‌ನಲ್ಲಿ ಫೈನಲ್

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣವು ಸತತ ಎರಡನೇ ಬಾರಿ ಫೈನಲ್‌ಗೆ ಆತಿಥ್ಯ ನೀಡಲಿದೆ. ವಾಡಿಯ ಪ್ರಕಾರ 2025ರ ಐಪಿಎಲ್ ಫೈನಲ್ ಕೂಡ ಕೋಲ್ಕತ್ತಾದ ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ನಡೆಯಬೇಕಿತ್ತು. ಆದರೆ ಪ್ರತಿಕೂಲ ಹವಾಮಾನದಿಂದಾಗಿ ಪಂದ್ಯವನ್ನು ಅಹದಾಬಾದ್‌ಗೆ ಸ್ಥಳಾಂತರಿಸಲಾಗಿತ್ತು.

ಪ್ಲೇಆಫ್ ವೇಳಾಪಟ್ಟಿ

- ಕ್ವಾಲಿಫೈಯರ್ 1 - ಮೇ 26 - ಎಚ್‌ಸಿಎ ಕ್ರೀಡಾಂಗಣ, ಧರ್ಮಶಾಲಾ
- ಎಲಿಮಿನೇಟರ್ - ಮೇ 27 - ಹೊಸ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ, ಚಂಡೀಗಢ
- ಕ್ವಾಲಿಫೈಯರ್ 2 - ಮೇ 29 - ಹೊಸ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ, ಚಂಡೀಗಢ
- ಫೈನಲ್ - ಮೇ 31 - ನರೇಂದ್ರ ಮೋದಿ ಕ್ರೀಡಾಂಗಣ, ಅಹಮದಾಬಾದ್



ಅಹಮದಾಬಾದ್‌ನಲ್ಲಿ ದೊಡ್ಡ ಕ್ರಿಕೆಟ್ ಕ್ರೀಡಾಂಗಣವಿದೆ. ಅಲ್ಲಿ ಪಂದ್ಯ ನಡೆದರೆ ಲಕ್ಷ ಜನರು ವೀಕ್ಷಿಸಬಹುದು ಆದಕ್ಕಾಗೇ ಬೆಂಗಳೂರಿನಿಂದ ಸ್ಥಳಾಂತರಗೊಂಡಿರಬಹುದು. ಶಾಸಕರು, ಟಿಕೆಟ್ ಕೇಳಿರುವುದಕ್ಕೂ ಇದಕ್ಕೂ ಯಾವುದೇ ಸಂಬಂಧವಿಲ್ಲ.

■ ಡಿ. ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

ಐಪಿಎಲ್ ಪ್ಲೇಆಫ್ ಆತಿಥ್ಯ: ಕೆಎಸ್‌ಸಿಎ ಸ್ಪಷ್ಟೀಕರಣ

ಪ್ಲೇಆಫ್ ಪಂದ್ಯಗಳ ಸ್ಥಳಾಂತರ ಕುರಿತಂತೆ ಕೆಎಸ್‌ಸಿಎ ನಿರಾಸೆ ವ್ಯಕ್ತಪಡಿಸಿದ್ದು, ಅಧ್ಯಕ್ಷ ಹಾಗೂ ಮಾಜಿ ಭಾರತೀಯ ಕ್ರಿಕೆಟಿಗ ವೆಂಕಟೇಶ್ ಪ್ರಸಾದ್ ಬಿಸಿಸಿಐ ಜೊತೆ ನೇರ ಸಂಪರ್ಕದಲ್ಲಿದ್ದರು. ಬೆಂಗಳೂರಿನಲ್ಲಿ ಪಂದ್ಯಗಳನ್ನು ಆಯೋಜಿಸಲು ಸಿದ್ಧತೆ ಹಾಗೂ ಆಸಕ್ತಿಯನ್ನು ತಿಳಿಸಿದ್ದರು, ಬಿಸಿಸಿಐ ನಿರ್ಧಾರ ನಾವು ಗೌರವಿಸುತ್ತೇವೆ. ನಮಗೆ ಇನ್ನೂ ಅಧಿಕೃತ ಕಾರಣ ತಿಳಿದುಬಂದಿಲ್ಲ ಎಂದಿದೆ. ಈ ಸೀಸನ್‌ನಲ್ಲಿ ಬೆಂಗಳೂರಿನಲ್ಲಿ ನಡೆದ ಐಪಿಎಲ್ ಪಂದ್ಯಗಳು ಸುಗಮ ನಿರ್ವಹಣೆ, ಜನಸ್ತೋಮ ನಿಯಂತ್ರಣ ಮತ್ತು ಉತ್ತಮ ಪ್ರೇಕ್ಷಕ ಅನುಭವಕ್ಕಾಗಿ ಮೆಚ್ಚುಗೆ ಪಡೆದಿವೆ ಎಂದು ಸಂಘ ಹೇಳಿದೆ. ಇದರಿಂದ ದೊಡ್ಡ ಮಟ್ಟದ ಪಂದ್ಯಗಳನ್ನು ಯಶಸ್ವಿಯಾಗಿ ನಡೆಸುವ ಸಾಮರ್ಥ್ಯ ನಮ್ಮಲ್ಲಿದೆ ಎಂಬುದನ್ನು ಮತ್ತೊಮ್ಮೆ ಸಾಬೀತಾಗಿದೆ ಎಂದು ಕೆಎಸ್‌ಸಿಎ ತಿಳಿಸಿದೆ. ಆದರೆ, ಎಲ್ಲಾ ಸಿದ್ಧತೆಗಳಿದ್ದರೂ ಪ್ಲೇಆಫ್ ಪಂದ್ಯಗಳನ್ನು ಇತರ ಕೇಂದ್ರಗಳಿಗೆ ನೀಡಿರುವ ಬಿಸಿಸಿಐ ತೀರ್ಮಾನವನ್ನು ನಾವು ಗೌರವಿಸುತ್ತೇವೆ. ಇದರ ಹಿಂದಿನ ಕಾರಣಗಳನ್ನು ಅಧಿಕೃತವಾಗಿ ತಿಳಿಸಲಾಗಿಲ್ಲವಾದರೂ, ಬಿಸಿಸಿಐಗೆ ಇರುವ ಅಧಿಕಾರವನ್ನು ನಾವು ಸಂಪೂರ್ಣವಾಗಿ ಒಪ್ಪುತ್ತೇವೆ ಎಂದು ಸಂಘ ಸ್ಪಷ್ಟಪಡಿಸಿದೆ. ಮುಂದೆಯೂ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಪಂದ್ಯಗಳನ್ನು ಆಯೋಜಿಸಲು ನಾವು ಸಿದ್ಧರಾಗಿದ್ದು, ಬಿಸಿಸಿಐ, ಫ್ರಾಂಚೈಸಿಗಳು ಹಾಗೂ ಇತರೆ ಎಲ್ಲ ಹಿತಾಸಕ್ತಿಪಕ್ಷಗಳಿಗೆ ಪೂರ್ಣ ಸಹಕಾರ ನೀಡುತ್ತೇವೆ ಎಂದು ಕೆಎಸ್‌ಸಿಎ ಭರವಸೆ ನೀಡಿದೆ.


ಲಯಕ್ಕೆ ಮರಳುವ ಭರವಸೆಯಲ್ಲಿ ಪಾಟಿದಾರ್ ಪಡೆ

ಇಂದು ಲಖನೌ V/S ಬೆಂಗಳೂರು

ಲಖನೌ: ಎರಡನೇ ಸ್ಥಾನದಲ್ಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತನ್ನ ಪ್ಲೇಆಫ್ ಮತ್ತು ಟಾಪ್ ಎರಡರ ಸ್ಥಾನ ಭದ್ರಗೊಳಿಸಲು ಲಖನೌ ಜತೆಗಿನ ಪಂದ್ಯದಲ್ಲಿ ಪ್ರಾಬಲ್ಯ ಸಾಧಿಸಲು ಸಿದ್ಧವಾಗಿದೆ.

ಪಂದ್ಯಾವಳಿಯ ಗುರುವಾರದ ಪಂದ್ಯದಲ್ಲಿ ಬೆಂಗಳೂರು ಮತ್ತು ಲಖನೌ ತಂಡಗಳು ಮುಖಾಮುಖಿಯಾಗಲಿವೆ. ಹಿಂದಿನ ಪಂದ್ಯದಲ್ಲಿ ಸೋತಿರುವ ಆರ್‌ಸಿಬಿ ಒಂದು ವಾರದ ನಂತರ ಮೈದಾನಕ್ಕೆ ಕಾಲಿಡುತ್ತಿದೆ. ಇತ್ತ ಲಖನೌ ಆಡಿರುವ ಬಹುತೇಕ ಪಂದ್ಯಗಳಲ್ಲಿ ಸೋತು ಕಂಗೆಟ್ಟಿದೆ. ಅಳಿವು–ಉಳಿವು ಹೋರಾಟದಲ್ಲಿರುವ ಲಖನೌ ಸೋತರೆ ಮನೆ ಹಾದಿ ಹಿಡಿಯಬೇಕಿದೆ. ಬೆಂಗಳೂರು 12 ಅಂಕ ಗಳಿಸಿ ಎರಡನೇ ಸ್ಥಾನದಲ್ಲಿದ್ದರೂ, 3 ಮತ್ತು 4ನೇ ಸ್ಥಾನದಲ್ಲಿರುವ ರಾಜಸ್ಥಾನ ಮತ್ತು ಹೈದರಾಬಾದ್ ತಂಡಗಳು ಸುಭದ್ರ ಫೈಟ್ ಕೊಡುತ್ತಿವೆ. ಕೆಳಗಿರುವ ಗುಜರಾತ್ ಮತ್ತು ಚೆನ್ನೈ ತಂಡಗಳು ಕೂಡ ಗೆಲುವುಗಳೊಂದಿಗೆ ಮಿಂಚುತ್ತಿವೆ. ಹೀಗಿರುವಾಗ ಬೆಂಗಳೂರು ಕೂಡ ಗೆಲುವು ಸಾಧಿಸಬೇಕಾದ ಒತ್ತಡದೊಂದಿಗೆ ಮೈದಾನಕ್ಕಿಳಿಯಬೇಕಿದೆ. ಲಖನೌ ಬೆಂಗಳೂರಿನಲ್ಲಿ ಆಡುವಾಗ ಆರ್‌ಸಿಬಿಯೊಂದಿಗೆ ಹೀನಾಯ ಸೋಲು ಕಂಡಿತ್ತು. ವಾಡಿಕೆಯಂತೆ ಎರಡನೇ ಮುಖಾಮುಖಿಯು ಲಖನೌನ ಏಕಾನಾ ಕ್ರೀಡಾಂಗಣದಲ್ಲಿ ನಡೆಯಲಿದೆ.

ಪಿಚ್: ಏಕಾನಾ ಕ್ರೀಡಾಂಗಣದ ಪಂದ್ಯ ಬ್ಯಾಟರ್‌ಗಳಿಗೆ ಕಾಟ ಕೊಡಲಿದೆ. ದೊಡ್ಡ ಸ್ಕೋರ್ ನಿರ್ಮಿಸಲಾಗಲ್ಲ. ಬೌನ್ಸ್, ಇಬ್ಬನಿ ಮತ್ತು ಸ್ವಿಂಗ್ ಬೌಲರ್‌ಗಳಿಗೆ ಲಾಭವಿತ್ತಿದೆ. ಸ್ಪಿನ್ನರ್‌ಗಳಿಗೆ ಹೇಳಿ ಮಾಡಿಸಿದ ಪಿಚ್. 180ಕ್ಕೆ ಮುಟ್ಟಿದರೆ ಅದು ದೊಡ್ಡ ಸ್ಕೋರ್, ಹೀಗಿರುವಾಗ ಚೇಸಿಂಗ್ ಮಾಡಿದವರು ಹೆಚ್ಚಿನ ಲಾಭ ಗಳಿಸಲಿದ್ದಾರೆ.



ಲಖನೌಗೆ ಗೆಲ್ಲಬೇಕಾದ ಒತ್ತಡ

ಬ್ಯಾಟರ್‌ಗಳೊಮ್ಮೆ ಬೌಲರ್‌ಗಳೊಮ್ಮೆ ಕೈಕೊಡುತ್ತಿದ್ದಾರೆ. ಚಿಂತೆಗೀಡಾಗಿದ್ದ ನಿಕೋಲಸ್ ಪೂರಣ್ ಬ್ಯಾಟಿಂಗ್ ಸುಧಾರಣೆ ಕಂಡಿದೆ. ಕಳೆದ ಪಂದ್ಯದಲ್ಲಿ ಅವರು ಸ್ಫೋಟಕ ಬ್ಯಾಟಿಂಗ್ ಮಾಡಿರುವುದು ವಿಶ್ವಾಸ ಹಿಗ್ಗಿಸಿದೆ. ತಂಡಕ್ಕೆ ಜೋಸ್ ಇಂಗ್ಲಿಸ್ ಕೂಡ ಬಲ ತಂದಿದ್ದಾರೆ. ಪಂತ್, ಮಾರ್ಕ್ರಂ ಲಯಕ್ಕೆ ಬರಬೇಕಿದೆ. ಬೌಲಿಂಗ್ ವಿಚಾರಕ್ಕೆ ಬಂದರೆ ಮೋಹ್ಸಿನ್, ಶಮಿ ಬಿಟ್ಟರೆ ಇನ್ನುಳಿದವರು ದುಬಾರಿಯಾಗಿದ್ದಾರೆ. ಪ್ರಿನ್ಸ್ ಉತ್ತಮ ಬೌಲಿಂಗ್ ಮಾಡಿದ್ದರೂ ಕಳೆದ ಪಂದ್ಯಗಳಲ್ಲಿ ವಿಕೆಟ್ ಸಿಕ್ಕಿಲ್ಲ.

ಆರ್‌ಸಿಬಿಗೆ ಆತ್ಮವಿಶ್ವಾಸ

ತವರಿನ ಎಲ್ಲಾ ಪಂದ್ಯಗಳನ್ನು ಮುಗಿಸಿಕೊಂಡಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಕಳೆದ ಪಂದ್ಯದಲ್ಲಿ ಸೋತರೂ ಬಲಿಷ್ಠ ಬ್ಯಾಟಿಂಗ್ ಮತ್ತು ಬೌಲಿಂಗ್ ಪಡೆಯನ್ನು ರಜತ್ ಪಡೆ ಹೊಂದಿದೆ. ಮುಖ್ಯವಾಗಿ ವಿರಾಟ್ ಕೊಹ್ಲಿ ಲಯದಲ್ಲಿದ್ದಾರೆ. ಸಾಲ್ಟ್ ಗಾಯದಿಂದಾಗಿ ಲಂಡನಿಗೆ ತೆರಳಿರುವುದು ತಂಡಕ್ಕಾದ ಹಿನ್ನಡೆ. ಅವರ ಬದಲಿಗೆ ಆಡುತ್ತಿರುವ ಬೆಥಲ್ ಲಯ ಕಂಡುಕೊಳ್ಳಬೇಕಿದೆ. ಮಧ್ಯಮ ಕ್ರಮಾಂಕದಲ್ಲಿ ಪಡಿಕ್ಕಲ್, ರಜತ್, ಡೆವಿಡ್ ಮತ್ತು ಕೃಣಾಲ್ ಉತ್ತಮ ಪ್ರದರ್ಶನವನ್ನೇ ನೀಡಿದ್ದಾರೆ. ಬೌಲಿಂಗ್‌ನಲ್ಲಿ ಭುವನೇಶ್ವರ್ ಮತ್ತು ಹ್ಯಾಜೆಲ್ವುಡ್ ವಿಶ್ವಾಸ ಹೆಚ್ಚಿಸಿದರೆ, ಶೇಫರ್ಡ್, ಕೃಣಾಲ್ ಕೂಡ ಉತ್ತಮ ಪ್ರದರ್ಶನ ನೀಡುವ ಭರವಸೆಯಲ್ಲಿದ್ದಾರೆ.

ಪಂದ್ಯದ ವಿವರ

ಯಾವಾಗ: ಗುರುವಾರ, **ಎಲ್ಲಿ:** ಏಕಾನಾ, ಲಖನೌ. **ಸಮಯ:** ಸಂಜೆ 7:30, **ಪ್ರಸಾರ:** ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಪಂಜಾಬ್‌ಗೆ ಕಠಿಣ ಸವಾಲು

ಹೈದರಾಬಾದ್: ಅಗ್ರ ನಾಲ್ಕು ಬ್ಯಾಟರ್‌ಗಳ ಅಬ್ಬರದ ನಡುವೆ ಕಳಪೆ ಫೀಲ್ಡಿಂಗ್‌ನಿಂದ ಕಂಗೆಟ್ಟ ಪಂಜಾಬ್ ಮಹತ್ವದ ಪಂದ್ಯದಲ್ಲಿ ದೊಡ್ಡ ಗುರಿ ಪಡೆಯಿತು. ಅಭಿಷೇಕ್ ಹಾಗೂ ಹೆಡ್ ನೀಡಿದ ಅಬ್ಬರದ ಆರಂಭದ ನಂತರ ಕ್ಲಾಸೆನ್, ಕಿಶನ್ ಮತ್ತು ರೆಡ್ಡಿ ಮಿಂಚಿದ್ದು, ಹೈದರಾಬಾದ್ ತನ್ನ ಅಸಲು ಆಟವಾಡಲು ಶಕ್ಯವಾಯಿತು.

ಪ್ಲೇಆಫ್ ಫೈಟ್ ನಡೆಯುತ್ತಿರುವ ನಡುವೆ ಪಂಜಾಬ್ ಹಾಗೂ ಹೈದರಾಬಾದ್ ತಂಡಗಳು ಬುಧವಾರದ ಪಂದ್ಯದಲ್ಲಿ ಮುಖಾಮುಖಿಯಾಗಿದ್ದವು. ಈ ಪಂದ್ಯದಲ್ಲಿ ಟಾಸ್ ಸೋತು ಬ್ಯಾಟಿಂಗ್‌ಗಿಳಿದ ಹೈದರಾಬಾದ್ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 235 ರನ್ ಗಳಿಸಿದೆ.

ಅಬ್ಬರದ ಆರಂಭ: ಬ್ಯಾಟಿಂಗ್‌ಗಿಳದ ಸನ್‌ಗೆ ಅಭಿ ಮತ್ತು ಹೆಡ್ ಯಥಾಪ್ರಕಾರ ಸ್ಫೋಟಕ ಆರಂಭ ಕೊಟ್ಟರು. ಮೊದಲನೇ ಓವರ್‌ನಿಂದಲೂ ದಂಡಿಸುವ ನೀತಿ ಗೋಚರಿಸಿತು. ನಾನ್‌ಸ್ಟ್ರೈಕ್‌ನಲ್ಲಿ ನಿಂತ ಹೆಡ್ ಸೆಟ್ ಆದರೆ, ಅಭಿ 4 ಸಿಕ್ಸರ್ 2



ಬೌಂಡರಿಯೊಂದಿಗೆ 35 ರನ್ ಚಚ್ಚಿ 13ನೇ ಬಾಲ್‌ನಲ್ಲಿ ಔಟಾದರು. ಮುಂದೆ ಬಂದ ಕಿಶನ್ ಸಿಂಗಲ್‌ಗಳ ಮೂಲಕ ಸಾಥ್ ಕೊಟ್ಟರೆ, ಹೆಡ್ ದಂಡಿಸುವ ಜವಾಬ್ದಾರಿ ಹೊತ್ತರು. ಪವರ್‌ಪ್ಲೇ ಅಂತ್ಯಕ್ಕೆ ಹೈದರಾಬಾದ್ 79 ರನ್ ಗಳಿಸಿತು. ಮಧ್ಯಮ ಓವರ್‌ಗಳ ಆರಂಭದಲ್ಲಿ ಹೆಡ್ ಜತೆಗೆ ಕಿಶನ್ ಕೂಡ ಕೈಚಳಕ ತೋರಿಸಿದರು. ಅಬ್ಬರದ ಬ್ಯಾಟಿಂಗ್ ಮಾಡುತ್ತಿದ್ದ ಹೆಡ್ (38; 19, 3ಬೌ, 3ಸಿ) ಔಟಾದರು. ಕಿಶನ್ ಹಾಗೂ ಕ್ಲಾಸೆನ್ ನಿಂತರು. ನಿಧಾನವಾಗಿ ಸ್ಕೋರ್ ಹೆಚ್ಚಿಸುತ್ತಾ ಬಂದ ಈ ಜೋಡಿ ಮಧ್ಯದಲ್ಲಿ ಬಿರುಸಿನ ಬ್ಯಾಟಿಂಗ್ ಕೂಡ ಮಾಡಿತು. ಮಧ್ಯಮ ಓವರ್‌ಗಳಲ್ಲಿ ಈ ಜೋಡಿ ಉತ್ತಮ ಬ್ಯಾಟಿಂಗ್ ಮಾಡಿತು. ಅಲ್ಲಿ ಹೈದರಾಬಾದ್ 103 ರನ್ ಗಳಿಸಿತು. ಕಿಶನ್ ಅರ್ಧಶತಕ ಬಾರಿಸುತ್ತಿದ್ದಂತೆ ವಿಕೆಟ್ ಒಪ್ಪಿಸಿದರು. ಕ್ಲಾಸೆನ್ ಸೆಟ್ ಆದರು. ಡೆತ್ ಓವರ್‌ಗಳಲ್ಲಿ ಕ್ಲಾಸೆನ ಅಬ್ಬರಿಸಿದರು. ಒಂದು ಹಂತದಲ್ಲಿ ನಿಧಾನ ಬ್ಯಾಟಿಂಗ್ ಮಾಡುತ್ತಿದ್ದ ಅವರು, 4 ಸಿಕ್ಸರ್ 3 ಬೌಂಡರಿಯೊಂದಿಗೆ ಒಟ್ಟು 69★ ರನ್ ಗಳಿಸಿದರು. ಅಂತಿಮದಲ್ಲಿ ರೆಡ್ಡಿ ಕೂಡ ಬಿರುಸಿನ ಬ್ಯಾಟಿಂಗ್ ಮೂಲಕ 29★ ರನ್‌ಗಳಿಸಿದರು. ಡೆತ್‌ನಲ್ಲಿ ಹೈದರಾಬಾದ್ 53 ರನ್ ಚಚ್ಚಿತು.

ಕಳಪೆ ಫೀಲ್ಡಿಂಗ್: ಪಂಜಾಬ್ ತೀರಾ ಕಳಪೆ ಫೀಲ್ಡಿಂಗ್ ಪ್ರದರ್ಶಿಸಿತು. ಕಿಶನ್ ಅವರಿಗೆ 2, ಕ್ಲಾಸೆನ್‌ಗೆ 2 ಜೀವದಾನಗಳು ಸಿಕ್ಕವು. ಕೊನೊಲಿ, ಶಶಾಂಕ್ ಕ್ಯಾಚ್ ಕೈಚೆಲ್ಲಿದರೆ, ಪ್ರಭಸಿಮ್ರನ್ ಸ್ಟಂಪಿಂಗ್ ಬಿಟ್ಟರು. ಇದಲ್ಲದೆ ಪಂಜಾಬ್ ಬೌಂಡರಿ ತಡೆಯುವಲ್ಲಿಯೂ ಹಿನ್ನಡೆ ಅನುಭವಿಸಿತು.

ಸಂಜು ಅಬ್ಬರಕ್ಕೆ ಬಸವಳಿದ ದಿಲ್ಲಿ

ಹೊಸದಿಲ್ಲಿ: ಸಂಜು ಸ್ಯಾಮ್ಸನ್ ಅವರ ಸಮಯೋಚಿತ ಬ್ಯಾಟಿಂಗ್ ನೆರವಿನಿಂದ ದಿಲ್ಲಿ ಕ್ಯಾಪಿಟಲ್ಸ್ ತಂಡವನ್ನು ಮಣಿಸಿರುವ ಚೆನ್ನೈ ಸೂಪರ್ ಕಿಂಗ್ಸ್ ಪ್ಲೇಆಫ್ ರೇಸ್‌ನಲ್ಲಿ ತನ್ನ ಸ್ಪರ್ಧೆ ಇನ್ನಷ್ಟು ಗಟ್ಟಿಯಾಗಿಸಿದೆ.

ಮಹತ್ವದ ಪಂದ್ಯದಲ್ಲಿ ದಿಲ್ಲಿ ಹಾಗೂ ಚೆನ್ನೈ ಮುಖಾಮುಖಿಯಾಗಿದ್ದವು. ದಿಲ್ಲಿಯಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕ್ಯಾಪಿಟಲ್ಸ್ 20 ಓವರ್‌ಗಳಲ್ಲಿ 155 ರನ್‌ಗಳಿಸಿತು. ಚೆನ್ನೈ ಪರ ಪ್ರಖರ ದಾಳಿ ಸಂಘಟಿಸಿದ ನೂರ್ 2 ವಿಕೆಟ್ ಪಡೆದರೆ, ಅಕೀಲ್ 14 ಬಾಲ್ ಡಾಟ್ ಮಾಡಿ ಮಿಂಚಿದರು. ದಿಲ್ಲಿ ಪರ ರಿಜ್ವಿ(40★), ಸ್ಟಬ್ಸ್(38) ರನ್ ಗಳಿಸಿದರು. ಗುರಿ ಬೆನ್ನತ್ತಿದ ಚೆನ್ನೈ 17.1 ಓವರ್‌ಗಳಲ್ಲಿ ಗುರಿ ಮುಟ್ಟಿತು. ಸಂಜು ಸ್ಯಾಮ್ಸನ್(87★), ಕಾರ್ತಿಕ್(41★) ರನ್ ಗಳಿಸಿದರು.

- ಪ್ಲೇಆಫ್ ಕನಸು ಭದ್ರ
- ಸಂಕಷ್ಟದಲ್ಲಿ ದಿಲ್ಲಿ

ಸಂಜು ಮಿಂಚಿನಾಟ: ಗುರಿ ಬೆನ್ನತ್ತುವಾಗ ಚೆನ್ನೈಗೂ ನಿಧಾನ ಆರಂಭ ಸಿಕ್ಕಿತು. ರುತುರಾಜ್ ಗಾಯಕ್ವಾಡ್ ಪರದಾಡಿದರು. ಸಂಜು ಸೆಟ್ ಆಗುವತ್ತ ಸಾಗಿದರು. ರುತುರಾಜ್ ಗಾಯಕ್ವಾಡ್ 6 ರನ್‌ಗೆ ಔಟಾದರು. ಮೂರನೇ ಕ್ರಮಾಂಕದಲ್ಲಿ ಬಂದ ಉರ್ವಿಲ್ ಪಟೇಲ್ ಯಥಾಪ್ರಕಾರ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾದರು. ಪವರ್ ಪ್ಲೇ ಮುಕ್ತಾಯಕ್ಕೆ ಚೆನ್ನೈ 44 ರನ್ ಗಳಿಸಿತು. ಉರ್ವಿಲ್ 2 ಸಿಕ್ಸರ್ ಬಾರಿಸಿದರೂ ಅವರ ಇನ್ನಿಂಗ್ಸ್ 17 ರನ್‌ಗೆ ಮಾತ್ರ ಸೀಮಿತವಾಗಿತ್ತು. ಬಳಿಕ ಬಂದ ಕಾರ್ತಿಕ್ ಕೂಡ ನಿಧಾನ ಆರಂಭ ಮಾಡಿದರು. ಅಷ್ಟೊತ್ತಿಗಾಗಲೇ ಸೆಟ್ ಆಗಿದ್ದ ಸಂಜು ಸ್ಫೋಟಕ ಬ್ಯಾಟಿಂಗ್‌ನತ್ತ ಸಾಗಿದರು. ಯಾದವ್ ಎಸೆದ ಓವರ್‌ನಲ್ಲಿ 2 ಸಿಕ್ಸರ್, ಒಂದು ಬೌಂಡರಿ ಬಾರಿಸಿ ಪಂದ್ಯ ಸಡಿಲುಗೊಳಿಸಿದರು. ಇತ್ತ ಕಾರ್ತಿಕ್ ಪಿಚ್‌ಗೆ ಅಂಟಿಕೊಂಡು ನಿಂತರು. ಸಂಜು ಸಿಕ್ಸರ್‌ಗಳ ಅಬ್ಬರಕ್ಕೆ ಚೆನ್ನೈ ಪಂದ್ಯ ಬಾಚಿಕೊಂಡಿತು. ಕಾರ್ತಿಕ್ ನಾನ್‌ಸ್ಟ್ರೈಕ್‌ನಲ್ಲಿ ನಿಲ್ಲುತ್ತಿದ್ದಂತೆ ನಿಧಾನವಾಗಿ ಪಂದ್ಯ ಗೆಲ್ಲಿಸಿದರು. ನಟರಾಜನ್ ಓವರ್‌ನಲ್ಲಿ ಮತ್ತೆ 2 ಸಿಕ್ಸರ್ ಬಾರಿಸಿದರು. 15ನೇ ಓವರ್‌ನಲ್ಲಿ ಚೆನ್ನೈ ಗೆಲುವು ಖಚಿತಪಡಿಸಿಕೊಂಡಿತು. ಔಪಚಾರಿಕತೆಯಲ್ಲಿ ಕಾರ್ತಿಕ್ ಕೂಡ ಉತ್ತಮ ಬ್ಯಾಟಿಂಗ್ ಮಾಡಿದರು. ಈ ಜೋಡಿ 111 ರನ್‌ಗಳ ಜೊತೆಯಾಟ ನಿರ್ಮಿಸಿತು.

ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ದಿಲ್ಲಿ 155 ರನ್ ಗಳಿಸುವಷ್ಟರಲ್ಲಿ 7 ವಿಕೆಟ್ ಕಳೆದುಕೊಂಡಿತು. ಚೆನ್ನೈ ಸಂಘಟಿತ ಬೌಲಿಂಗ್ ದಾಳಿಗೆ ತತ್ತರಿಸಿದ ನಂತರ ಸ್ಟಬ್ ಆಸರೆಯಾದರು. ಅಂತಿಮದಲ್ಲಿ ಸಮೀರ್ 40★ ರನ್ ಗಳಿಸಿ ಸ್ಕೋರ್ ಹಿಗ್ಗಿಸಿದರು.

ಆರ್ಚರಿ ವಿಶ್ವಕಪ್: ಭಾರತ ತಂಡಕ್ಕೆ ಭಾರೀ ನಿರಾಸೆ

ಶಾಂಘೈ: ಪದಕದ ಭರವಸೆ ಮೂಡಿಸಿದ್ದ ಭಾರತದ ಕಾಂಪೌಂಡ್ ಪುರುಷ ಹಾಗೂ ಮಹಿಳಾ ತಂಡಗಳು ಆರ್ಚರಿ ವಿಶ್ವಕಪ್ ಹಂತ-2ರಲ್ಲಿ ನಿರೀಕ್ಷಿತ ಪ್ರದರ್ಶನ ನೀಡಲು ವಿಫಲವಾಗಿವೆ. ನಿರ್ಣಾಯಕ ಕ್ಷಣಗಳಲ್ಲಿ ಒತ್ತಡ ನಿಭಾಯಿಸಲು ಸಾಧ್ಯವಾಗದೇ ಭಾರತ ಕಾಂಪೌಂಡ್ ವಿಭಾಗದ ಅಭಿಯಾನ ಅಂತ್ಯಗೊಳಿಸಿತು.

ಮಹಿಳಾ ತಂಡದಿಂದ ದೊಡ್ಡ ಹಿನ್ನಡೆ ಉಂಟಾಯಿತು. ಜ್ಯೋತಿ ಸುರೇಖಾ ವೆನ್ನಂ, ಪ್ರಗತಿ ಮತ್ತು ಅದಿತಿ ಸ್ವಾಮಿ ಹೊಂದಿದ್ದ ತಂಡ ಕ್ವಾರ್ಟರ್ ಫೈನಲ್‌ನಲ್ಲಿ ಟರ್ಕಿ ವಿರುದ್ಧ 227–233 ಅಂತರದಲ್ಲಿ ಸೋತು ಹೊರಬಿತ್ತು. ಹಜಲ್ ಬುರುನ್, ಡೆಫ್ನೆ ಚಾಕ್ಮಾಕ್ ಮತ್ತು ಎಮಿನೆ ರಾಬಿಯಾ ಒಗುಜ್ ಹೊಂದಿದ್ದ ಟರ್ಕಿ ತಂಡ ಎರಡನೇ ಅಂತ್ಯದಿಂದಲೇ ನಿಯಂತ್ರಣ ಸಾಧಿಸಿ ಸುಲಭ ಗೆಲುವು ಪಡೆದಿತು. ಮೊದಲ ಹಂತದಲ್ಲಿ ಮೆಕ್ಸಿಕೋದಲ್ಲಿ ಭಾರತಕ್ಕೆ ಏಕೈಕ ಚಿನ್ನ ತಂದುಕೊಟ್ಟಿದ್ದ ಇದೇ ತಂಡದಿಂದ ಈ ಬಾರಿ ನಿರೀಕ್ಷೆ ಹೆಚ್ಚು ಇತ್ತು.

ಪುರುಷರಲ್ಲಿ: ಪುರುಷರ ವಿಭಾಗದಲ್ಲಿ ಓಜಸ್ ದಿಯೋತಲೆ, ಸಾಹಿಲ್ ಜಾಧವ್ ಮತ್ತು ಕುಶಾಲ್



ದಲಾಲ್ ತಂಡ ಸೆಮಿಫೈನಲ್ ತಲುಪಿ ನಿರೀಕ್ಷೆ ಮೂಡಿಸಿತು. ಆದರೆ ನಿರ್ಣಾಯಕ ಹಂತದಲ್ಲಿ ಎರಡು ಸತತ ಸೋಲುಗಳಿಂದ ಪದಕವಿಲ್ಲದೆ ಹಿಂದಿರುಗಬೇಕಾಯಿತು. ಕಂಚಿನ ಪದಕ ಪಂದ್ಯದಲ್ಲಿ ಚೀನಾ ವಿರುದ್ಧ 234–234 ಸಮಬಲದ ಬಳಿಕ ಶೂಟ್ ಆಫ್‌ನಲ್ಲಿ ಸೋಲು ಕಂಡಿತು. ಎರಡೂ ತಂಡಗಳು ಸಮಾನ ಅಚ್ಚುಕಟ್ಟಾದ ಮೂರು ಬಾಣಗಳನ್ನು ಹೊಡೆದರೂ, ಚೀನಾದ ಎರಡು ಬಾಣಗಳು ಕೇಂದ್ರಕ್ಕೆ ಹೆಚ್ಚು ಸಮೀಪವಾಗಿದ್ದರಿಂದ ಭಾರತ ಸೋತಿತು. ಸೆಮಿಫೈನಲ್‌ನಲ್ಲಿ ಅಮೆರಿಕ ವಿರುದ್ಧ 234–235 ಅಂತರದಲ್ಲಿ ಸೋಲು ಕಂಡುದು ಇನ್ನಷ್ಟು ನೋವು ತಂದಿತು. ಮೊದಲ ಮೂರು ಅಂತ್ಯಗಳವರೆಗೆ ಮುನ್ನಡೆ ಕಾಯ್ದುಕೊಂಡಿದ್ದರೂ ಕೊನೆಯ ಕ್ಷಣದಲ್ಲಿ ಕೇವಲ ಮೂರು ಬಾರಿ ದಶ ಅಂಕ ಗಳಿಸಿದರೆ, ಎದುರಾಳಿ ಐದು ಬಾರಿ ದಶ ಅಂಕ ಗಳಿಸಿತು.

ವೈಯಕ್ತಿಕ ವಿಭಾಗದಲ್ಲಿ ಸಮಾಧಾನ: ಆದರೆ ವೈಯಕ್ತಿಕ ವಿಭಾಗದಲ್ಲಿ ಸ್ವಲ್ಪ ಸಮಾಧಾನಕರ ಫಲಿತಾಂಶ ಕಂಡುಬಂದಿದೆ. ಎಲ್ಲಾ ಭಾರತೀಯ ಆಟಗಾರರು ಮೂವತ್ತೆರಡರ ಸುತ್ತಿಗೆ ಪ್ರವೇಶಿಸಿದ್ದಾರೆ. ಪುರುಷರ ವಿಭಾಗದಲ್ಲಿ ಅಭಿಷೇಕ್ ವರ್ಮಾ, ಜಾಧವ್, ಕುಶಾಲ್ ಮತ್ತು ದಿಯೋತಲೆ ಮುಂದಿನ ಹಂತ ತಲುಪಿದ್ದು, ವರ್ಮಾ ಮತ್ತು ಜಾಧವ್ ನಡುವೆ ದೇಶೀಯ ಪೈಪೋಟಿ ನಡೆಯಲಿದೆ. ಮಹಿಳಾ ವಿಭಾಗದಲ್ಲಿ ಮಧುರಾ ಚೀನಾದ ವಾಂಗ್ ಯುಯೆ ವಿರುದ್ಧ ಕಠಿಣ ಗೆಲುವು ಸಾಧಿಸಿದರೆ, ಜ್ಯೋತಿ ಪರಿಪೂರ್ಣ ಪ್ರದರ್ಶನ ನೀಡಿ ಗೆಲುವು ಸಾಧಿಸಿದರು. ಅದಿತಿ ಸ್ವಾಮಿ ಹಾಗೂ ಪ್ರಗತಿ ಕೂಡ ತಮ್ಮ ಪಂದ್ಯಗಳಲ್ಲಿ ಜಯ ಸಾಧಿಸಿ ಮುಂದಿನ ಹಂತಕ್ಕೆ ಅರ್ಹತೆ ಪಡೆದಿದ್ದಾರೆ.

ಇದೀಗ ಮಿಶ್ರ ತಂಡದಲ್ಲಿ ದಿಯೋತಲೆ ಮತ್ತು ಅದಿತಿ ಜೋಡಿ ಮಾತ್ರ ಪದಕದ ಭರವಸೆಯಾಗಿ ಉಳಿದಿದೆ.

ಪದಬಂಧ

▸▸ ರಾಜಾ ಸಂಗಮೇಶ ಹಿರೇಮಠ

1		■	2	■	3	■	4	5
	■	■		■		■	■	
6	7			■	8		9	
■		■	10			■		■
■		■	■	■	■	■		■
11		■	12		13	■	14	15
	■	■		■		■	■	
16				■	17			
	■	■		■		■	■	

5976


ಎಡದಿಂದ ಬಲಕ್ಕೆ
1.ಮರದಿಂದ ಸಿಕ್ಕಿದ ಫಲ (2)
4.ಅಹಂಕಾರದ ಸಮಾನಪದ (2)
6.ರಾತ್ರಿಯ ಅಧಿಪತಿ ಈ ಚಂದ್ರ (4)
8.ಇದು ಹಸಿರು ಕಚ್ಚಾ ಮಾವು (4)
10.ಕಲೆ-ಸೌಂದರ್ಯವನ್ನು ಆಸ್ವಾದಿಸುವವನು (3)
11.ಕೃಷ್ಣನ ಮಾವನಾದ ಮಥುರೆಯ ರಾಜ (2)
12.ದಾಖಲೆ-ನೋಂದಣಿಯಿದು (3)
14.ಕಿರೀಟದ ಅಲಂಕಾರವಾದ ಹಕ್ಕಿಯ ಪುಕ್ಕ (2)
16.ದಾರಿಗನನ್ನು ಹೀಗೂ ಹೇಳಬಹುದು (4)
17.ನೆಲಕ್ಕುರುಳುವುದು (4)


ಮೇಲಿನಿಂದ ಕೆಳಕ್ಕೆ
1.ತೂಕ ಅಥವಾ ಭಾರವಿಲ್ಲದಿರುವುದು(3)
2.ವೇದವ್ಯಾಸರ ತಂದೆ ಈ ಮುನಿ (4)
3.ಪ್ರಾಥಮಿಕ-ಪ್ರೌಢದ ನಡುವಿನ ವ್ಯಾಸಂಗ (4)
5.ಒಣಜಂಬ-ಅತಿಯಾದ ಮೆರೆತವಿದು (3)
7.ಮಂದಿ ನೆಲೆಸಿರುವ ಸ್ಥಳ (4)
9.ಮಾಯಾವಿದ್ಯೆ ತಿಳಿದವನು (4)
11.ಅಫಘಾನಿಸ್ತಾನದ ಅತಿ ದೊಡ್ಡ ನಗರ (4)
12.ಸೊಂಟಪಟ್ಟಿಯನ್ನು ಹೀಗೂ ಹೇಳುತ್ತೇವೆ (4)
13.ಕೆಟ್ಟ ಉಪದೇಶ-ದುಷ್ಟ ಸಲಹೆಯಿದು (4)
15.ಬೆಳೆಯಲ್ಲಿ ಕಡಿತ ಮಾಡುವುದು (4)

5975 ಉತ್ತರ

ಎಡದಿಂದ ಬಲಕ್ಕೆ:
1.ದುರಾಗ್ರಹಪೀಡಿತ
3.ತೊಡಿಸು 5.ಗುಜರಿ
7.ಮಕಮಕಿಸು
8.ಪಾಯಸ 9.ಸುಮನಾ
11.ಸಂನ್ಯಾಸ 13.ಗಜರಿಪು
14.ನಾಗಮುರಿ 15.ದಿಕ್ಕಟ

ಮೇಲಿನಿಂದ ಕೆಳಕ್ಕೆ :
1.ದುಕ್ಕುಡಿ 2.ತನುಜ
3.ತೊಳೆ 4.ಸುಮರಸ
5.ಗುಸುಗುಸು 6.ರಿಣ
8.ಪಾರಂಗತ 10.ನಾಗರಿಕ
11.ಸಂಪುಟ 12.ಸನಾದಿ







Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ

ದಕ್ಷಿಣ ಕನ್ನಡ 33° 27° | ಉಡುಪಿ 33° 27°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಗುರುವಾರ 07, ಮೇ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 2

ಸುಳ್ಯದಲ್ಲಿ ಹೊಸ ಪಡಿತರ ಚೀಟಿಗಾಗಿ ದಿನನಿತ್ಯ ಬಡವರ ಅಲೆದಾಟ!



ಪುಟ 5

ಇಲ್ಲಿ ಬೆಳಿಗ್ಗೆಯಿಂದ ಸಂಜೆವರೆಗೆ ಕೂತರೂ ವ್ಯಾಪಾರವೇ ಇಲ್ಲ!

ಎಲ್ಲೆಡೆ ಸುಡು ಬಿಸಿಲಿದ್ದರೂ ಪಿಲಿಕುಳ ಜೈವಿಕ ಉದ್ಯಾನವನದಲ್ಲಿನ ಪ್ರಾಣಿಗಳು ಕೂಲ್ ಕೂಲ್!



ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಾಪಮಾನ ಸತತವಾಗಿ ಏರಿಕೆಯಾಗುತ್ತಿದ್ದು, ಬೇಸಿಗೆಯ ತೀವ್ರತೆ ಮೂಕ ಪ್ರಾಣಿಗಳನ್ನೂ ಕಾಡುತ್ತಿದೆ. ಮಂಗಳೂರಿನ ಹೊರವಲಯದಲ್ಲಿರುವ ಪಿಲಿಕುಳ ಜೈವಿಕ ಉದ್ಯಾನವನದಲ್ಲಿ ವನ್ಯಜೀವಿಗಳನ್ನು ರಕ್ಷಿಸಲು 'ಬೇಸಿಗೆ ನಿರ್ವಹಣಾ ಯೋಜನೆ' ಜಾರಿಗೆ ತಂದಿದ್ದು ಓವರ್‌ಹೆಡ್ ಸ್ಪ್ರಿಂಕ್ಲರ್ ವ್ಯವಸ್ಥೆ ಅಳವಡಿಸಿ ನಿರಂತರವಾಗಿ ನೀರನ್ನು ಸಿಂಪಡಿಸಿ ತಂಪೆರೆಯಲಾಗುತ್ತಿದೆ.

ಎಲ್‌ಪಿಜಿ ದರ ಏರಿಕೆಗೆ ಮಾಲಕರು ಗರಂ

ಹೊಟೇಲ್ ಬಂದ್!

ಕಾಸರಗೋಡಲ್ಲಿ ದಿನಪೂರ್ತಿ ಪ್ರತಿಭಟನೆ

ಕಾಸರಗೋಡು: ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆಯೇರಿಕೆ, ಪೂರೈಕೆ ವ್ಯತ್ಯಯ ಖಂಡಿಸಿ ಹೊಟೇಲ್ ಆ್ಯಂಡ್ ರೆಸ್ಟೋರೆಂಟ್ ಅಸೋಸಿಯೇಶನ್ ಕಾಸರಗೋಡು ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜಿಲ್ಲೆಯಲ್ಲಿ ಬುಧವಾರ ಹೊಟೇಲ್, ರೆಸ್ಟೋರೆಂಟ್‌ಗಳು, ಬೇಕರಿ, ಕ್ಯಾಂಟೀನ್‌ಗಳನ್ನು ಮುಚ್ಚುಗಡೆಗೊಳಿಸಿ ಪ್ರತಿಭಟನೆ ನಡೆಯಿತು.

ದಿನಪೂರ್ತಿ ನಡೆಯಿತು ಮುಷ್ಕರ

ಬೆಳಗ್ಗೆಯಿಂದ ರಾತ್ರಿ ವರೆಗೆ ಆಯೋಜಿಸಲಾಗಿದ್ದ ಮುಷ್ಕರದಿಂದಾಗಿ ಹೊಟೇಲ್, ರೆಸ್ಟೋರೆಂಟ್, ಬೇಕರಿ, ಕ್ಯಾಂಟೀನ್ ಸಹಿತ ಸಂಬಂಧಪಟ್ಟ ವಲಯಗಳ ವ್ಯಾಪಾರ ವಹಿವಾಟು ಸ್ತಬ್ಧಗೊಂಡಿತು. ಆನ್‌ಲೈನ್ ಮೂಲಕ ಆಹಾರ ವಸ್ತುಗಳ ವಿತರಣಾ ವ್ಯವಸ್ಥೆಯನ್ನು ಸ್ಥಗಿತಗೊಳಿಸಲಾಗಿತ್ತು. ಇದರ ಪರಿಣಾಮವಾಗಿ ಜಿಲ್ಲೆಯ ಜನರು ದಿನಪೂರ್ತಿ ಆಹಾರಕ್ಕಾಗಿ ಅಪಾರ ಸಂಕಷ್ಟ ಅನುಭವಿಸಬೇಕಾಯಿತು. »ಪುಟ 6



ಕುಂಬಳೆಯಲ್ಲಿ ಕೆಎಚ್‌ಆರ್‌ಎ ಪಂಜಿನ ಮೆರವಣಿಗೆ

ವಾಣಿಜ್ಯ ಅಗತ್ಯಗಳಿಗಿರುವ ಗ್ಯಾಸ್ ಸಿಲಿಂಡರ್ ಬೆಲೆ ಹೆಚ್ಚಿಸಿದ ಧೋರಣೆ ಖಂಡಿಸಿ ಕೇರಳ ಹೊಟೇಲ್ ಆ್ಯಂಡ್ ರೆಸ್ಟೋರೆಂಟ್ ಅಸೋಸಿಯೇಶನ್‌ನ ಕುಂಬಳೆ ಯೂನಿಟ್‌ನ ಆಶ್ರಯದಲ್ಲಿ ಕುಂಬಳೆಯಲ್ಲಿ ಪಂಜಿನ ಮೆರವಣಿಗೆ ನಡೆಯಿತು. ಈ ವೇಳೆ ಕೆಎಚ್‌ಆರ್‌ಎ ಜಿಲ್ಲಾ ಕಾರ್ಯದರ್ಶಿ ಬಿಜು ಚುಳ್ಳಿಕ್ಕರ ಮಾತನಾಡಿ, ಸಿಲಿಂಡರ್‌ನ ಅಪಾರ ಬೆಲೆಯೇರಿಕೆಯಿಂದಾಗಿ ಹೊಟೇಲ್‌ಗಳಲ್ಲಿ ಆಹಾರ ಪದಾರ್ಥಗಳಿಗೆ ಇನ್ನಷ್ಟು ಬೆಲೆ ಹೆಚ್ಚಿಸಬೇಕಾಗಿ ಬಂದಿದೆ. ಮಾತ್ರವಲ್ಲದೆ ಹೊಟೇಲ್ ಶಾಶ್ವತ ಬಂದ್ ಮಾಡಬೇಕಾದ ಸ್ಥಿತಿ ಎದುರಾಗಿದೆ ಎಂದರು. »ಪುಟ 6

ಹೊಟೇಲ್‌ಗಳಲ್ಲಿ ಆಹಾರಗಳ ದರ ಹೆಚ್ಚಳ

ಕಾಸರಗೋಡು ಜಿಲ್ಲೆಯ ಹೆಚ್ಚಿನ ಎಲ್ಲಾ ಹೊಟೇಲ್‌ಗಳಲ್ಲಿ ಆಹಾರ ಸಾಮಗ್ರಿಗಳ ಬೆಲೆ ಯಾವುದೇ ಪೂರ್ವ ಸೂಚನೆಗಳಿಲ್ಲದೆ ಕಳೆದ ಕೆಲವು ದಿನಗಳ ಹಿಂದೆಯೇ ದಿಢೀರನೆ ಏರಿಸಲಾಗಿದೆ. ಇದರಿಂದಾಗಿ ಬೆಲೆಯೇರಿಕೆಯ ಎಲ್ಲಾ ಹೊರೆಯನ್ನು ಜನಸಾಮಾನ್ಯರೇ ಅನುಭವಿಸಬೇಕಾಗಿದ್ದು, ಗ್ರಾಹಕರ ಜೇಬಿಗೆ ಮತ್ತಷ್ಟು ಹೊರೆಯಾಗುತ್ತಿದೆ. ಈ ಕುರಿತು ಹೊಟೇಲ್ ಆ್ಯಂಡ್ ರೆಸ್ಟೋರೆಂಟ್ ಅಸೋಸಿಯೇಶನ್ ಯಾವುದೇ ಸ್ಪಷ್ಟನೆ ನೀಡದಿರುವುದು ವಿಪರ್ಯಾಸವಾಗಿದೆ.

ಬೆಚ್ಚಿಬೀಳಿಸಿದ ಗಾಳಿ ಆರ್ಭಟ

ದಕ್ಷಿಣ ಕನ್ನಡದ ವಿವಿಧೆಡೆ ಮಳೆ


ವಿವಿಧ ಕಡೆಗಳಲ್ಲಿ ಪವರ್ ಕಟ್

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಮಂಗಳವಾರ ತಡರಾತ್ರಿ ಭಾರೀ ಗಾಳಿಯೊಂದಿಗೆ ಮಳೆ ಸುರಿದಿದೆ. ಕೆಲವು ತಾಸು ಸತತವಾಗಿ ಸುರಿದ ಮಳೆಯಿಂದಾಗಿ ಉರಿ ಬಿಸಿಲಿನಿಂದ ಕಾದ ಭುವಿ ತಂಪಾಗಿದೆ.

ಜಿಲ್ಲೆಯ ಪುತ್ತೂರು, ಸುಳ್ಯ, ಕಡಬ, ಬಂಟ್ವಾಳ, ಬೆಳ್ತಂಗಡಿ ಮುಂತಾದೆಡೆ ಉತ್ತಮ ಮಳೆಯಾಗಿದೆ. ರಾತ್ರಿ 11 ಗಂಟೆ ವೇಳೆ ಭಾರೀ ಗಾಳಿಯೊಂದಿಗೆ ಮಳೆ ಆರಂಭಗೊಂಡಿತ್ತು.

ಬಂಟ್ವಾಳದಲ್ಲಿ ಗಾಳಿ ಮಳೆ:

ಬಂಟ್ವಾಳ ತಾಲೂಕಿನಲ್ಲಿಯೂ ಉತ್ತಮ ಮಳೆಯಾಗಿದೆ. ಗಾಳಿ, ಮಳೆಯಿಂದಾಗಿ ಕೆಲ ಹೊತ್ತುಗಳ ಕಾಲ ವಿದ್ಯುತ್ ಕೂಡ ಕೈಕೊಟ್ಟಿತು. ಹೆದ್ದಾರಿಯಲ್ಲು ಮಳೆ ನೀರು ಸರಾಗವಾಗಿ ಹರಿದಾಡಲು ಸೂಕ್ತ ವ್ಯವಸ್ಥೆ ಇಲ್ಲದಿದ್ದರಿಂದ ರಸ್ತೆಯಲ್ಲೇ ನೀರು ಹರಿದು ವಾಹನ ಸಂಚಾರಕ್ಕೂ ತೊಡಕಾಯಿತು. »ಪುಟ 6



ಮಂಗಳೂರಿಗೆ ಸಿಗಲಿಲ್ಲ ಮಂಗಳವಾರದ ಮಳೆ ಭಾಗ್ಯ

ಮಂಗಳೂರು ನಗರದಲ್ಲಿ ಮಾತ್ರ, ಮಂಗಳವಾರ ಮಳೆ ವಂಚಿತವಾಗಿತ್ತು. ಗಾಳಿಯ ತೀವ್ರತೆಯ ನಡುವೆ ಕೆಲವು ಹನಿಗಳಷ್ಟೇ ಬಿದ್ದಿದ್ದು, ನಗರದ ಹೊರವಲಯಗಳಲ್ಲಿ ಒಂದಿಷ್ಟು ಸಾಧಾರಣ ಮಳೆಯಾಗಿತ್ತು. ಗಾಳಿಯೂ ಜೊತೆಗಿತ್ತು.

ಸುತ್ತಮುತ್ತ

ಕರಾವಳಿ ಜಿಲ್ಲೆಗಳಲ್ಲಿ ಬಿರುಗಾಳಿ, ಗುಡುಗು ಸಹಿತ ಮಳೆ ಸಾಧ್ಯತೆ?

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆಯ ವಾತಾವರಣ ಇದ್ದರೂ ಬುಧವಾರ ವಾತಾವರಣದ ತಾಪಮಾನ ಮಾತ್ರ ಮತ್ತಷ್ಟು ಏರಿಕೆಯಾಗಿದೆ.

ಗಂಟೆಗೆ 50 ಕಿಮೀ ವೇಗದಲ್ಲಿ ಗಾಳಿ

ಈ ನಡುವೆ ಗುರುವಾರ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಕೆಲವು ಭಾಗಗಳಲ್ಲಿ ಗಂಟೆಗೆ 50 ಕಿಮೀ ವೇಗದ ಗಾಳಿಯ ಸಹಿತ ಗುಡುಗಿನೊಂದಿಗೆ ಮಳೆಯಾಗುವ ಸಾಧ್ಯತೆ ಇದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಪುಣ್ಚಚತ್ತಾರು ಪರಿಸರದಲ್ಲಿ ಕಾಡುಕೋಣ: ಕೃಷಿಕರು, ಸ್ಥಳೀಯರಲ್ಲಿ ಆತಂಕ ಸೃಷ್ಟಿ

ಮಂಗಳೂರು: ಪುತ್ತೂರು ತಾಲೂಕಿನ ಪುಣ್ಚಚತ್ತಾರು ಪರಿಸರದಲ್ಲಿ ಕಾಡುಕೋಣಗಳು ಕಾಣಿಸಿಕೊಂಡಿದ್ದು, ನಾಗರಿಕರು ಹಾಗೂ ಕೃಷಿಕರಿಗೆ ಈ ಬೆಳವಣಿಗೆ ಹೊಸ ಆತಂಕ ತಂದಿಟ್ಟಿದೆ. ಇಲ್ಲಿನ ನೇರೋಳ್ತಡ್ಕ ಎಂಬಲ್ಲಿ ಕಾಡುಕೋಣವನ್ನು ಸ್ಥಳೀಯರು ಕಂಡಿದ್ದಾರೆ. ಮುಖ್ಯ ರಸ್ತೆಯಲ್ಲಿಯೇ ಇದ್ದ ಕಾಡುಕೋಣ ಬಳಿಕ ಮಲೆಕೆರ್ಚಿ ಸಮೀಪಕ್ಕೆ ತೆರಳಿತ್ತು ಎಂದು ಅವರು ಮಾಹಿತಿ ನೀಡಿದ್ದಾರೆ. ಅರಣ್ಯ ಇಲಾಖೆ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಅವರು ಆಗ್ರಹಿಸಿದ್ದಾರೆ.

ಬಂಟ್ವಾಳ ನೇತ್ರಾವತಿ ನದಿ ಕಿನಾರೆಯಲ್ಲಿ ಅಪರಿಚಿತ ಪುರುಷನ ಮೃತದೇಹ ಪತ್ತೆ

ಬಂಟ್ವಾಳ: ಇಲ್ಲಿಯ ನಗರ ಠಾಣಾ ವ್ಯಾಪ್ತಿಯ ನೇತ್ರಾವತಿ ನದಿ ಕಿನಾರೆಯಲ್ಲಿ ಅಪರಿಚಿತ ಪುರುಷನ ಮೃತದೇಹ ಪತ್ತೆಯಾಗಿದೆ. ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಬಿಳಿ ತುಂಬು ತೋಳಿನ ಅಂಗಿ ಧರಿಸಿದ್ದ ಈತನ ಬಲಕೈಯಲ್ಲಿ ಕೆಂಪು ದಾರ ಇರುತ್ತದೆ ಎಂದು ಬಂಟ್ವಾಳ ನಗರ ಠಾಣಾ ಪೊಲೀಸರು ತಿಳಿಸಿದ್ದಾರೆ. ಯಾರಾದರೂ ಪುರುಷ ಕಾಣೆ ಪ್ರಕರಣವಿದ್ದಲ್ಲಿ ಬಂಟ್ವಾಳ ನಗರ ಪೊಲೀಸ್ ಠಾಣೆಯನ್ನು ಸಂಪರ್ಕಿಸುವಂತೆ ಠಾಣೆಯ ಪ್ರಕಟಣೆ ತಿಳಿಸಿದೆ.

ಶಿರ್ವ: ಆಕಸ್ಮಿಕ ಬೆಂಕಿಗೆ ಎರಡು ಎಕ್ರೆ ಪ್ರದೇಶದಲ್ಲಿ ಹಸಿರು ಸಂಪೂರ್ಣ ನಾಶ

ಶಿರ್ವ: ಇಲ್ಲಿನ ಬಂಟಕಲ್ಲು -ವಿಶ್ವಕರ್ಮ ಸಂಘದ ಬದಿಯಿಂದ ಪೊದಮಲೆಗೆ ಹಾದು ಹೋಗುವ ರಸ್ತೆಬದಿಯಲ್ಲಿ ಇರುವ ವಿದ್ಯುತ್ ಟ್ರಾನ್ಸ್ ಫಾರ್ಮರ್ ಸಮೀಪ ಬುಧವಾರ ಮಧ್ಯಾಹ್ನ ಕಿಡಿ ಹೊತ್ತಿದ ಪರಿಣಾಮ ಹುಲ್ಲುಕಡ್ಡಿಗಳಿಗೆ ಬಿದ್ದ ಬೆಂಕಿ ಎರಡು ಎಕ್ರೆಗೂ ಹೆಚ್ಚು ಭಾಗದ ಮರಗಿಡಗಳನ್ನು ಆಹುತಿ ಪಡೆದಿದೆ. ಶಿರ್ವ ಗ್ರಾಪಂ ಮಾಜಿ ಅಧ್ಯಕ್ಷ ಕೆ.ಆರ್.ಪಾಟ್ಕರ್ ಅಗ್ನಿ ಶಾಮಕದಳಕ್ಕೆ ಮಾಹಿತಿ ನೀಡಿ, ಬೆಂಕಿಯನ್ನು ನಂದಿಸಲು ಸಹಕರಿಸಿದರು. ಈ ಸಂದರ್ಭ ಬಂಟಕಲ್ಲು ನಾಗರಿಕ ಸಮಿತಿಯ ಸದಸ್ಯರು, ರಾಘವೇಂದ್ರ ನಾಯಕ್, ಪಾಲಮೆ, ಉಮೇಶ್ ರಾವ್, ಜಗದೀಶ ಆಚಾರ್ಯ, ವಿರೇಂದ್ರ ಪಾಟ್ಕರ್, ಸಂಜಯ್ ನಾಯಕ್, ಕೃಷ್ಣಮುರ್ತಿ ಪಾಟ್ಕರ್ ಸಹಿತ ಸ್ಥಳೀಯರು ನೆರವಾದರು.

ಕಾಸರಗೋಡು ಜಿಲ್ಲೆಯ ವಿವಿಧೆಡೆ ಗುಡುಗು ಸಹಿತ ಗಾಳಿ ಮಳೆಯ ಎಚ್ಚರಿಕೆ

ಕಾಸರಗೋಡು: ಕಾಸರಗೋಡು ಜಿಲ್ಲೆಯೂ ಸೇರಿದಂತೆ ಕೇರಳದ ವಿವಿಧ ಜಿಲ್ಲೆಗಳ ಪ್ರತ್ಯೇಕ ಸ್ಥಳಗಳಲ್ಲಿ ಮೇ 6 ರಿಂದ ಮೇ 10ರ ವರೆಗೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಅಲ್ಲದೆ ಗಂಟೆಗೆ 40–50 ಕಿಲೋ ಮೀಟರ್ ವೇಗದಲ್ಲಿ ಬಲವಾದ ಗಾಳಿ ಬೀಸುವ ಲಕ್ಷಣಗಳಿವೆ ಎಂದು ಕೇಂದ್ರ ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಮೂಡಾ ಅಭಿವೃದ್ಧಿ ಪ್ರಾಧಿಕಾರದತ್ತ ಇದೆ ಮುಲ್ಕಿ ಜನತೆಯ ನಿರೀಕ್ಷೆಯ ನೋಟ

ಅಂತರ್ಜಲ ವೃದ್ಧಿ ಕೆರೆಯ ಅಭಿವೃದ್ಧಿಗೆ ನಿರಾಸಕ್ತಿ

ಮುಲ್ಕಿ: ನಗರ ಪಂಚಾಯತ್ ವ್ಯಾಪ್ತಿಯ ಕಾರ್ನಾಡು ನೂತನ ಪ್ರಜಾಸೌಧದ ಆಡಳಿತದ ಕಚೇರಿ ಬದಿಯ ಅಂತರ್ಜಲ ವೃದ್ಧಿ ಕೆರೆ ಬತ್ತಿ ಹೋಗಿದ್ದು, ಅಭಿವೃದ್ಧಿಪಡಿಸಬೇಕಾದ ಮೂಡಾ ಅಭಿವೃದ್ಧಿ ಪ್ರಾಧಿಕಾರ ಮಾತ್ರ ಈ ಬಗ್ಗೆ ನಿರ್ಲಕ್ಷ್ಯ ವಹಿಸಿದೆ ಎಂದು ಸಾರ್ವಜನಿಕರು ದೂರಿದ್ದಾರೆ.

ಹೂಳೆತ್ತುವ ಕಾಮಗಾರಿ ನಡೆದಿತ್ತು

ಅಂತರ್ಜಲ ಅಭಿವೃದ್ಧಿಗೆ ಕಳೆದ 2017–18ನೇ ಸಾಲಿನ ಹಣಕಾಸು ಯೋಜನೆಯಡಿಯಲ್ಲಿ ಮುಲ್ಕಿ ನಗರ ಪಂಚಾಯತ್ ವತಿಯಿಂದ 1.75 ಲಕ್ಷ ವೆಚ್ಚದಲ್ಲಿ ಕೆರೆಯ ಹೂಳೆತ್ತುವ ಕಾಮಗಾರಿ ನಡೆದಿದ್ದು ಬಳಿಕ 2020 –21 ರಲ್ಲಿ ಸುಮಾರು 5 ಲಕ್ಷ ವೆಚ್ಚದಲ್ಲಿ ಮತ್ತೆ ಕಾಮಗಾರಿ ನಡೆದಿತ್ತು. ಬಳಿಕ ಮಂಗಳೂರಿನ ಮೂಡಾ ಅಭಿವೃದ್ಧಿ ಪ್ರಾಧಿಕಾರ ಕೆರೆ ಅಭಿವೃದ್ಧಿ ಜೊತೆಗೆ ಅಂತರ್ಜಲ ವೃದ್ಧಿ ಕಾಮಗಾರಿ ಲಕ್ಷಾಂತರ ರೂ. ವೆಚ್ಚದಲ್ಲಿ ವಹಿಸಿಕೊಂಡಿದ್ದು, ಕಳಪೆ ಕಾಮಗಾರಿಯಿಂದ ಕೆರೆಯ ಅಭಿವೃದ್ಧಿ ಕುಂಠಿತವಾಗಿದೆ. ಕಳಪೆ ಕಾಮಗಾರಿ ಬಗ್ಗೆ ಸ್ಥಳೀಯರು ಸಂಬಂಧಪಟ್ಟ ಇಲಾಖೆಗೆ ದೂರು ನೀಡಿದರೂ ಯಾವುದೇ ಕ್ರಮ ಕೈಗೊಳ್ಳದೆ ಕೆರೆ ಅಭಿವೃದ್ಧಿಯಾಗಲೇ ಇಲ್ಲ. ಈ ಕೆರೆ ಅಭಿವೃದ್ಧಿಪಡಿಸಿದರೆ ಬೇಸಿಗೆಯಲ್ಲಿ ಮುಲ್ಕಿ ನಗರ ಪಂಚಾಯತ್ ವ್ಯಾಪ್ತಿಗೆ ನೀರಿನ ಕೊರತೆ ನೀಗಿಸಬಹುದು ಎಂದು ಹೇಳುತ್ತಾರೆ ಸ್ಥಳೀಯರು. »ಪುಟ 6



ತ್ಯಾಜ್ಯಗಳ ಡಂಪಿಂಗ್ ಯಾರ್ಡ್ ಆಗುತ್ತಿದೆ

ಅಂತರ್ಜಲ ಅಭಿವೃದ್ಧಿಗೆ ಮೂಡಾ ಅಭಿವೃದ್ಧಿ ಪ್ರಾಧಿಕಾರ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಸ್ಥಳೀಯ ಸಾಮಾಜಿಕ ಕಾರ್ಯಕರ್ತ ಶರತ್ ಕಾರ್ನಾಡ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೆರೆಯ ಬದಿಯಲ್ಲಿ ಅನೇಕರು ತ್ಯಾಜ್ಯ ತಂದು ಬಿಸಾಡುತ್ತಿದ್ದು ತ್ಯಾಜ್ಯದ ನೀರು ಕೂಡ ಕೆರೆಯಲ್ಲಿ ಶೇಖರಣೆಗೊಳ್ಳುವಳ್ಳುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಕರ್ಣಂಗೇರಿಯಲ್ಲಿ ರಥೋತ್ಸವದ ಸಂಭ್ರಮ



ಮಡಿಕೇರಿ ನಗರದ ಹೊರವಲಯದ ಕರ್ಣಂಗೇರಿ ಶ್ರೀ ರಾಜರಾಜೇಶ್ವರಿ ದೇವಾಲಯದ ವಾರ್ಷಿಕೋತ್ಸವ ಹಾಗೂ ರಥೋತ್ಸವ ಶ್ರದ್ಧಾಭಕ್ತಿಯಿಂದ ಜರಗಿತು. ಭಾರೀ ಸಂಖ್ಯೆಯಲ್ಲಿ ಭಕ್ತಾದಿಗಳು ಪಾಲ್ಗೊಂಡಿದ್ದರು.

ಸುಡು ಬಿಸಿಲಿಗೆ ಒಣಗುತ್ತಿರುವ ಕೃಷಿ ಪ್ರದೇಶಗಳು | ನೀರಿನ ಸಮಸ್ಯೆಗೆ ಸದ್ಯ ಬೇಸಿಗೆ ಮಳೆ ಮಾತ್ರ ಪರಿಹಾರ

ಕೆಂಡದ ಮಳೆಗೆ ಬತ್ತಿ ಬರಡಾಗುತ್ತಿದೆ ಕಾಸರಗೋಡು ಜಿಲ್ಲೆಯ ಜಲಮೂಲ

ಕಾಸರಗೋಡು: ಬಿಸಿಲಿನ ತೀವ್ರವಾದ ಹೊಡೆತ, ಕಳೆದ ವರ್ಷದ ಕೊನೆಯಲ್ಲಿ ಅಗತ್ಯದಷ್ಟು ಮಳೆ ಸುರಿಯದಿರುವುದು, ಬೇಸಿಗೆ ಮಳೆ ಇಲ್ಲದಿರುವುದು, ಎಲ್ಲೆಂದರಲ್ಲಿ ಕೊಳವೆ ಬಾವಿ ಕೊರೆಯುವುದು ಮುಂತಾದ ವಿವಿಧ ಕಾರಣಗಳಿಂದ ಜಿಲ್ಲೆಯಲ್ಲಿ ನದಿ ಸೇರಿದಂತೆ ಜಲಮೂಲಗಳು ಬತ್ತಿ ಬರಡಾಗುತ್ತಿವೆ.

ತಾಪಕ್ಕೆ ಪ್ರಾಣಿ, ಸಸ್ಯ ಸಂಕುಲ ಹೈರಾಣಾಗಿವೆ

ಮಾನವರು ಮಾತ್ರವಲ್ಲದೆ ಪ್ರಾಣಿಗಳು, ಪಕ್ಷಿಗಳು, ಉರಗಗಳು ಹಾಗೂ ಸಸ್ಯ ಸಂಕುಲಗಳಿಗೆ ಕೂಡಾ ನೀರು ಅಗತ್ಯದಷ್ಟು ದೊರಕದ ಪರಿಸ್ಥಿತಿಯಿದೆ. ಈ ಮಧ್ಯೆ ಕಾಸರಗೋಡು ಜಿಲ್ಲೆಯ ಬಹುತೇಕ ಹೊಳೆ, ತೋಡುಗಳು ಇನ್ನಷ್ಟು ಬತ್ತುತ್ತಿರುವುದರಿಂದ ಅಡಿಕೆ, ತೆಂಗು, ಕರಿಮೆಣಸು, ಕೊಕ್ಕೋ, ಬಾಳೆ, ತರಕಾರಿ, ಹಣ್ಣುಹಂಪಲು ಸಹಿತ ಕೃಷಿ ಪ್ರದೇಶಗಳಿಗೆ ನೀರು ಲಭಿಸದೆ ಅಕ್ಷರಶಃ ಒಣಗಲಾರಂಭಿಸಿದೆ. ಅದರಲ್ಲೂ ಅಡಿಕೆ ತೋಟಗಳಿಗೆ ಆವಶ್ಯಕತೆಗೆ ಅನುಗುಣವಾಗಿ ನೀರು ಲಭಿಸದೆ ನಾಶಗೊಳ್ಳತೊಡಗಿದೆ. ಈ ನಡುವೆ ಹೊಳೆ ಬದಿ ತೋಟ ಕೂಡಾ ಬಾಡಲಾರಂಭಿಸಿದ್ದು, ಫಸಲಿಗೆ ಬಹುದೊಡ್ಡ ಹೊಡೆತ ಬಿದ್ದಿದೆ.

ಬಿರು ಬಿಸಿಲಿಗೆ ಹೊಳೆಗಳೆಲ್ಲ ಖಾಲಿ ಖಾಲಿ

ಪಯಸ್ವಿನಿ, ಚಂದ್ರಗಿರಿ, ಮಧುವಾಹಿನಿ ಹೊಳೆ ಬತ್ತುತ್ತಿರುವುದರಿಂದ ಜಿಲ್ಲೆಯ ದೇಲಂಪಾಡಿ, ಬೆಳ್ಳೂರು, ಕಾರಡ್ಕ, ಬದಿಯಡ್ಕ, ಕುಂಬ್ಡಾಜೆ, ಮುಳಿಯಾರು, ಕುತ್ತಿಕ್ಕೋಲು, ಬಂದಡ್ಕ, ಚೆಂಗಳ, ಚೆಮ್ನಾಡು, ಮಧೂರು, ಮೊಗ್ರಾಲ್ ಪುತ್ತೂರು ಗ್ರಾಮ ಪಂಚಾಯತ್ ವ್ಯಾಪ್ತಗಳು ಸಂಕಷ್ಟದಲ್ಲಿವೆ. »ಪುಟ 6



ಬಾವಿಕ್ಕೆರೆ ಪಂಪಿಂಗ್ ಹೌಸ್‌ನಲ್ಲೂ ಜಲಕ್ಷಾಮ

ನಗರ ಸಹಿತ ಆಸುಪಾಸಿಗೆ ನೀರುಣಿಸುವ ಮುಳಿಯಾರು ಬಾವಿಕ್ಕೆರೆ ಬೃಹತ್ ನೀರು ಸರಬರಾಜು ಯೋಜನೆಗೂ ಜಲಕ್ಷಾಮ ತಟ್ಟಿದೆ. ಅಗತ್ಯದಷ್ಟು ನೀರು ಲಭಿಸದೆ ಕೆಲವು ಪಂಚಾಯತ್‌ಗಳಲ್ಲಿ ಈ ಯೋಜನೆಯಡಿ ನೀರು ಪೂರೈಕೆ ಸಮರ್ಪಕವಾಗಿ ನಡೆಯುತ್ತಿಲ್ಲ.

ಈ ಬಾರಿ ಜಿಲ್ಲೆಗೆ ಕೈಕೊಟ್ಟಿದೆ ಬೇಸಿಗೆಯಲ್ಲಿ ಬರುವ ಮಳೆ

ಕಳೆದ ವರ್ಷ ಧಾರಾಕಾರ ಮಳೆ, ಪ್ರವಾಹ, ಪ್ರಾಕೃತಿಕ ವಿಕೋಪ ಮುಂತಾದ ಘಟನೆಗಳು ಸಂಭವಿಸಿದರೂ, ಈ ಬಾರಿ ಇನ್ನೂ ಕೂಡಾ ಬೇಸಿಗೆ ಮಳೆಯೇ ಸುರಿಯದಿರುವುದು ಜನರನ್ನು ಸಂಕಷ್ಟಕ್ಕೀಡು ಮಾಡಿದೆ. ಕಳೆದ ವರ್ಷ ಮಾರ್ಚ್ ತಿಂಗಳಿನಲ್ಲಿ ಬೇಸಿಗೆ ಮಳೆ ಸುರಿದ ಹಿನ್ನೆಲೆಯಲ್ಲಿ ಕಳೆದ ಬಾರಿ ನೀರಿಗೆ ಅಷ್ಟೊಂದು ತೊಂದರೆ ಕಂಡುಬಂದಿಲ್ಲ. ಜಿಲ್ಲೆಯಲ್ಲಿ ತಲೆದೋರಿರುವ ಜಲಕ್ಷಾಮದ ವಿಚಾರದಲ್ಲಿ ಸರಕಾರ, ಜಿಲ್ಲಾಡಳಿತ ಮತ್ತು ಸಂಬಂಧಪಟ್ಟ ಇಲಾಖೆ ಅಗತ್ಯದ ಕ್ರಮ ಕೈಗೊಳ್ಳಬೇಕು ಎಂಬುದು ಜನತೆಯ ಬೇಡಿಕೆ.

ಸುತ್ತಮುತ್ತ

ಬಂಟರಯಾನೆ ನಾಡವರ ಸಂಘಕ್ಕೆ ಬಂಟ್ವಾಳದಿಂದ 8 ಮಂದಿ ಅವಿರೋಧ ಆಯ್ಕೆ

ಬಂಟ್ವಾಳ: ಬಂಟರ ಯಾನೆ ನಾಡವರ ಮಾತೃಸಂಘಕ್ಕೆ ಬಂಟ್ವಾಳ ತಾಲೂಕಿನಿಂದ 8 ಮಂದಿ ನಿರ್ದೇಶಕರಾಗಿ ಅವಿರೋಧ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ಬಂಟರ ಯಾನೆ ನಾಡವರ ಮಾತೃಸಂಘಕ್ಕೆ ಬಂಟ್ವಾಳ ತಾಲೂಕಿನಿಂದ 8 ಮಂದಿಗೆ ಚುನಾವಣೆಯಲ್ಲಿ ಸ್ಪರ್ಧೆಗೆ ಅವಕಾಶವಿತ್ತು. ಅದರಂತೆ ಪದ್ಮನಾಭ ರೈ ಕಲ್ಲಡ್ಕ, ಪದ್ಮನಾಭ ಶೆಟ್ಟಿ ಪುಂಚನೆ, ಶಂಕರ ಶೆಟ್ಟಿ ಪರಾರಿಗುತ್ತು, ರಾಜೇಂದ್ರ ರೈ ಪೆರುವಾಯಿ, ಚಂದ್ರಶೇಖರ ಶೆಟ್ಟಿ ಆರಳ, ಶಾಂತಶೆಟ್ಟಿ ಫರಂಗಿಪೇಟೆ, ಸುಭಾಶ್ಚಂದ್ರ ಶೆಟ್ಟಿ ಕುಳಾಲು ಹಾಗೂ ದಿಲೀಪ್ ರೈ ಅವರು ನಾಮಪತ್ರ ಸಲ್ಲಿಸಿದ್ದು ಇವರೆಲ್ಲರೂ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ನಿರ್ದೇಶಕ ಪದ್ಮನಾಭ ರೈ ಕಲ್ಲಡ್ಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭೂಮಾಪಕರ ಮುಷ್ಕರದಿಂದ ಜನಸಾಮನ್ಯರಿಗೆ ಸಮಸ್ಯೆ

ಬಂಟ್ವಾಳ: ಪರವಾನಿಗೆ ಭೂಮಾಪಕರ ಬೇಡಿಕೆಗಳನ್ನು ಈಡೇರಿಸಿ ಜನಸಾಮಾನ್ಯರ ಸಮಸ್ಯೆಗೆ ಪರಿಹಾರ ನೀಡಲು ಮುಂದಾಗುವಂತೆ ಬಂಟ್ವಾಳ ತಾಲೂಕು ಪಂಚಾಯತ್‌ನ ಮಾಜಿ ಸದಸ್ಯ ಪ್ರಭಾಕರ ಪ್ರಭು



ಅವರು ರಾಜ್ಯದ ಕಂದಾಯ ಸಚಿವ ಕೃಷ್ಣಭೈರೇಗೌಡ ಅವರಿಗೆ ಲಿಖಿತ ಮನವಿಯ ಮೂಲಕ ಒತ್ತಾಯಿಸಿದ್ದಾರೆ.

ಕಂದಾಯ ಇಲಾಖೆಯಡಿಯಲ್ಲಿ ಬರುವ ಭೂಮಾಪನ ಇಲಾಖೆಯ ಪರವಾನಿಗೆ ಪಡೆದಿರುವ ಭೂಮಾಪಕರು ಮಾರ್ಚ್ ತಿಂಗಳಿನಿಂದ ನಡೆಸುತ್ತಿರುವ ಮುಷ್ಕರದಿಂದಾಗಿ ಜಮೀನು ಮಾರಾಟ ಮತ್ತು ಖರೀದಿ, ಕುಟುಂಬ ದೊಳಗಿನ ವಿಭಾಗ ಪತ್ರ, 11 ಇ-ನಕ್ಷೆ, ತತ್ಕಾಲ್ ಪೋಡಿ ಇನ್ನಿತರ ಆಳತೆ ಸಂಬಂಧಿತ ಕೆಲಸ ಕಾರ್ಯಗಳು ಸಂಪೂರ್ಣ ಸ್ಥಗಿತವಾಗಿದ್ದು ರೈತರು ಮತ್ತು ಜನಸಾಮಾನ್ಯರಿಗೆ ತುಂಬಾ ತೊಂದರೆ ಆಗುತ್ತಿದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ. ಭೂಮಾಪಕರ ಮುಷ್ಕರದಿಂದಾಗಿ ಕಳೆದ 2 ತಿಂಗಳಿನಿಂದ ರಾಜ್ಯದಲ್ಲಿ ಲಕ್ಷಾಂತರ ಅರ್ಜಿಗಳು ಹಾಗೂ ದ.ಕ. ಜಿಲ್ಲೆಯಲ್ಲಿ ಸುಮಾರು 15 ಸಾವಿರ ಹಾಗೂ ಬಂಟ್ವಾಳ ತಾಲೂಕೊಂದರಲ್ಲಿಯೇ 3 ಸಾವಿರಕ್ಕೂ ಅಧಿಕ ಅರ್ಜಿಗಳ ವಿಲೇವಾರಿಯಾಗದೇ ಬಾಕಿಯಾಗಿದೆ. ಇದರಿಂದಾಗಿ ಫಲಾನುಭವಿಗಳು ತೊಂದರೆಗೀಡಾಗಿದ್ದಾರೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

2023ರ ಮಸೂದೆ ಜಾರಿಗೊಳಿಸಲಿ: ಬಂಟ್ವಾಳ ಕಾಂಗ್ರೆಸ್

ಬಂಟ್ವಾಳ: ನಾರಿಶಕ್ತಿವಂದನ್ ಅಧಿನಿಯಮ- 2023 ರ ಕಾಯಿದೆಯನ್ನು ಕೂಡಲೇ ಜಾರಿಗೊಳಿಸುವಂತೆ ದ.ಕ.ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಪ್ರಚಾರ ಸಮಿತಿ ಜಿಲ್ಲಾಧ್ಯಕ್ಷ ಮಹಮ್ಮದ್ ಆಲಿ ಅವರು ಒತ್ತಾಯಿಸಿದ್ದಾರೆ. ಬುಧವಾರ ಬಂಟ್ವಾಳ ಪ್ರೆಸ್ ಕ್ಲಬ್ ನಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಮಹಿಳಾ ಮೀಸಲಾತಿ ವಿಚಾರಕ್ಕೆ ಸಂಬಂಧಿಸಿದಂತೆ ಬಿಜೆಪಿಯು ಕಾಂಗ್ರೆಸ್ ಪಕ್ಷದ ವಿರುದ್ಧ ಅಪಪ್ರಚಾರ ಮಾಡುತ್ತಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ಪಕ್ಷ ಯಾವತ್ತೂ ಮಹಿಳೆಯರ ಪರವಾಗಿದ್ದು, ಆದರೆ ಗುಜರಾತ್, ಮಣಿಪುರ ಸಹಿತ ನಾನಾ ಕಡೆಗಳಲ್ಲಿ ಮಹಿಳೆಯರಿಗೆ ದೌರ್ಜನ್ಯ ಎಸಗಿದ ಪ್ರಕರಣಗಳಲ್ಲಿ ಆರೋಪಿಗಳ ಕೃತ್ಯ ಖಂಡಿಸುವ ಪ್ರಯತ್ನವನ್ನು ಬಿಜೆಪಿ ಮಾಡಿರಲಿಲ್ಲ ಎಂದರು.

ಕಾಂಗ್ರೆಸ್ ಸರಕಾರ ದ.ಕ.ಜಿಲ್ಲೆಯ ಅರ್ಹ ಮಹಿಳೆಯರನ್ನು ಗುರುತಿಸಿ ವಿವಿಧ ನಿಗಮಗಳಲ್ಲಿ ಸ್ಥಾನಮಾನವನ್ನು ನೀಡಿದೆಯಲ್ಲದೆ ಗೃಹಲಕ್ಷ್ಮೀ, ಶಕ್ತಿ ಯೋಜನೆ ಜಾರಿಗೆ ತಂದಿದೆ ಎಂದರು. ಬಿಜೆಪಿಗೆ ಮಹಿಳೆಯರ ಕುರಿತು ಎಳ್ಳಷ್ಟೂ ಗೌರವವಿಲ್ಲ ಆದರೆ ಕಾಂಗ್ರೆಸ್ ಸದಾ ಕಾಲ ಮಹಿಳೆಯರ ಪರ ಇತ್ತು ಎಂದ ಅವರು, ಕಾಂಗ್ರೆಸ್ ಮಸೂದೆ ಮಂಡಿಸಿದಾಗ ಅಡ್ಡಿಪಡಿಸಲಾಯಿತು, 2023ರಲ್ಲಿ ಮೋದಿ ಸರಕಾರ ನಾರಿಶಕ್ತಿ ವಂದನ್ ಅಧಿನಿಯಮ ಜಾರಿಗೊಳಿಸಿದಾಗ ಕಾಂಗ್ರೆಸ್ ಬೆಂಬಲಿಸಿತ್ತು. ಇದನ್ನೇ ಎರಡು ವರ್ಷದ ಬಳಿಕ ಪುನರ್ ಮಂಡನೆ ಮಾಡಿ, ಕ್ಷೇತ್ರ ಪುನರ್ ವಿಂಗಡಣೆ ಮಾಡುವ ಹುನ್ನಾರವಾಗಿದ್ದ ಕಾರಣ ಮಸೂದೆ ಬಿದ್ದು ಹೋಯಿತು ಎಂದರು.

ಬಂಟ್ವಾಳ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಾಲಕೃಷ್ಣ ಅಂಚನ್, ಬಂಟ್ವಾಳ ವಿಧಾನಸಭಾ ಕ್ಷೇತ್ರ ಪ್ರಚಾರ ಸಮಿತಿ ಅಧ್ಯಕ್ಷ ಉಮೇಶ್ ಬೋಳಂತೂರು, ಬಂಟ್ವಾಳ ಬ್ಲಾಕ್ ಪ್ರಚಾರ ಸಮಿತಿ ಅಧ್ಯಕ್ಷ ಲಾದ್ರು ಮಿನೇಜಸ್, ಪಾಣೆಮಂಗಳೂರು ಬ್ಲಾಕ್ ಪ್ರಚಾರ ಸಮಿತಿ ಅಧ್ಯಕ್ಷ ಎ.ಬಿ.ಅಬ್ದುಲ್ಲಾ ಕೊಳ್ನಾಡು ಉಪಸ್ಥಿತರಿದ್ದರು.

ಅರ್ಜಿ ಸಲ್ಲಿಕೆಗೆ ಇಲ್ಲ ಅವಕಾಶ | ಸರ್ಕಾರದ ಸವಲತ್ತುಗಳಿಂದ ವಂಚಿತರಾಗುತ್ತಿದ್ದಾರೆ ಸುಳ್ಯದ ಜನರು

ಹೊಸ ಪಡಿತರ ಚೀಟಿಗಾಗಿ ದಿನನಿತ್ಯ ಬಡವರ ಅಲೆದಾಟ!

■ ಮಿಥುನ್ ಕರ್ಲಪ್ಪಾಡಿ



ಸಂಗಮ ವಿಶೇಷ

ಸುಳ್ಯ: ಸುಳ್ಯ ತಾಲೂಕು ಹೇಳಿ ಕೇಳಿ ಮೀಸಲು ಕ್ಷೇತ್ರ. ಇಲ್ಲಿ ಅತೀ ಹೆಚ್ಚು ಬಡವರು ಮತ್ತು ಮಧ್ಯಮ ವರ್ಗದ ಜನರೇ ವಾಸಿಸುತ್ತಿದ್ದಾರೆ. 2023ರ ಬಳಿಕ ಹೊಸ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಲು ತಾಲೂಕಿನ ಜನ ಕಾದು ಕಾದು ಜನರು ಈಗ ರೋಸಿ ಹೋಗಿದ್ದು, ಸರ್ಕಾರವು ಕೂಡ ಹೊಸ ಪಡಿತರ ಚೀಟಿ ವಿತರನೆಗೆ ಮೀನಮೇಷ ಎಣಿಸುತ್ತಿದೆ.

2023ರಲ್ಲಿ ಸರಿ ಸುಮಾರು 243 ಪಡಿತರ ಚೀಟಿಗಳನ್ನು ವಿತರಿಸಲಾಗಿತ್ತು. ಆ ಬಳಿಕ ಯಾವುದೇ ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಅವಕಾಶ ಲಭ್ಯವಿಲ್ಲದೇ ಇದೀಗ ಸರಿ ಸುಮಾರು 209ಕ್ಕೂ ಅಧಿಕ ಮಂದಿ ಪ್ರತಿನಿತ್ಯ ಆಹಾರ ಇಲಾಖೆ ಕಚೇರಿಗೆ ಬಂದು ವಿಚಾರಿಸಿ ಸಪ್ಪೆ ಮೋರೆಯಲ್ಲಿ ಹಿಂತಿರುಗುವಂತಾಗಿದೆ.

ಕುಟುಂಬಗಳ ಏರಿಕೆ

ತಾಲೂಕು ರಚನೆಗೊಂಡು 60 ವರ್ಷ ಕಳೆದಿದ್ದು ಜನಸಂಖ್ಯೆಯ ಜೊತೆಗೆ ಕುಟುಂಬಗಳ ಸಂಖ್ಯೆ ಏರಿಕೆಯಾಗಿದೆ. ಸರಕಾರ ಪಡಿತರ ಚೀಟಿ ಅರ್ಜಿ ಸಲ್ಲಿಕೆಗೆ ಸುಳ್ಯ ತಾಲೂಕಿಗೆ ವಿಶೇಷ ಅವಕಾಶ ಕಲ್ಪಿಸಬೇಕಿದ್ದು, ಇದೀಗ ಕೆಲ ಕುಟುಂಬಗಳು ಪಡಿತರ ಚೀಟಿ ಇಲ್ಲದೇ ಸರಕಾರಿ ಹಾಗೂ ಸರಕಾರೇತರ ಸೌಕರ್ಯಗಳಿಂದ ವಂಚಿತ ರಾಗುತ್ತಿದ್ದಾರೆ. ಅವಿದ್ಯಾವಂತ ಬಡವರು ಅರಿವಿನ ಕೊರತೆಯಿಂದಾಗಿ ಕೆಲ ಕುಟುಂಬಗಳು ಆಧಾರ್ ಜೋಡಣೆ ನಡೆಸದೇ ಚೀಟಿ ರದ್ದಾದರೆ ಇನ್ನು ಕೆಲವು ಬೇರೆ ಸ್ಥಳಗಳಲ್ಲಿ ಕೆಲಸಕ್ಕೆ ತೆರಳಿ ಪಡಿತರ ಪಡೆಯದೇ ಅನರ್ಹರಾಗಿದ್ದಾರೆ. ಇದೀಗ ಇವರೆಲ್ಲರ ಜೊತೆಗೆ ಕುಟುಂಬಗಳ ಸಂಖ್ಯೆ ಹೆಚ್ಚಳವಾಗಿ ಮಕ್ಕಳು ಬೇರೆ ಮನೆಗಳನ್ನು ಮಾಡಿದಾಗ ಅವರಿಗೆ ಪಡಿತರ ಚೀಟಿ ಪಡೆಯಲು ಅಸಾಧ್ಯವಾಗಿದೆ.

2023ರಲ್ಲಿ ಕೊನೆಯದಾಗಿ ಪಡಿತರ ಚೀಟಿ ರಚಿಸಲು ಆಹ್ವಾನಿಸಿ ಅಂದು ಸರಿ ಸುಮಾರು 246 ಪಡಿತರ ಚೀಟಿಗಳನ್ನು ನೀಡಲಾಗಿದ್ದು, ಆ ಬಳಿಕ ಸರಕಾರವು ಕೇವಲ ಕೊರಗ ಸಮುದಾಯ, ಅನಾರೋಗ್ಯ ಪೀಡಿತರು ಮತ್ತು ಈ ಶ್ರಮ್ ಕಾರ್ಡ್ ದಾರರಿಗೆ ಮಾತ್ರವೇ ಹೊಸ ಪಡಿತರ ಚೀಟಿ ಅರ್ಜಿ ಸಲ್ಲಿಸಿ ಪಡೆಯಲು ಅವಕಾಶ ಕಲ್ಪಿಸಿದ ಫಲವಾಗಿ ಸುಳ್ಯದಲ್ಲಿ ಕೊರಗ ಸಮುದಾಯದ 13 ಕುಟುಂಬ ಮತ್ತು ಈ ಶ್ರಮ್ ಕಾರ್ಡ್‌ನಲ್ಲಿ 49 ಕುಟುಂಬಗಳಿಗೆ ಪಡಿತರ ವಿತರಿಸಲಾಗಿದೆ.

ನ್ಯಾಯಾಧೀಶರಿಂದಲೂ ಸೂಚನೆ

ಸುಳ್ಯ ತಾಲೂಕಿನ ಪಂಜ ಹೋಬಳಿಯ ಕಲ್ಮಡ್ಕದಲ್ಲಿ ಕರ್ನಾಟಕ ಉಚ್ಛ ನ್ಯಾಯಾಲಯದ ಆದೇಶದ ಮೇರೆಗೆ ಸುಳ್ಯ ಹಿರಿಯ ನ್ಯಾಯಾಧೀಶರು ಅಶಕ್ತ ಕುಟುಂಬದ ಮನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಗ್ರಾಮದಲ್ಲಿ ಇದೇ ಮಾದರಿಯಲ್ಲಿ ಹಲವು ಜನರಿಗೆ ಪಡಿತರ ಚೀಟಿ ಇಲ್ಲದಿರುವ ಬಗ್ಗೆ ತಿಳಿದು ಬಂದಿತ್ತು. ಅದರಂತೆ ನ್ಯಾಯಾಲಯದ ಪ್ಯಾನಲ್ ವಕೀಲರ ಮೂಲಕ ಮಾಹಿತಿ ಸಂಗ್ರಹಿಸಿ ವಿಶೇಷವಾಗಿ ಸುಳ್ಯದಲ್ಲಿ ಆಧಾರ್, ಪಡಿತರ ಚೀಟಿ ಇಲ್ಲದೇ ಇರುವ ಬಗ್ಗೆ ಮಾಹಿತಿಯನ್ನು ಸರಕಾರ ಸಂಗ್ರಹಿಸಿ ಸೂಕ್ತ ರೀತಿಯಲ್ಲಿ ಕ್ರಮ ಕೈಗೊಳ್ಳಲು ಕೂಡ ಪತ್ರಗಳನ್ನು ಪ್ರಾಧಿಕಾರದ ಮೂಲಕ ಬರೆಯಲಾಗಿತ್ತು. ಆದರೂ ರಾಜ್ಯ ಸರ್ಕಾರ ಮಾತ್ರ ಹೊಸ ಪಡಿತರ ಚೀಟಿ ವಿತರಣೆಗೆ ವ್ಯವಸ್ಥೆ ಮಾಡಿಲ್ಲ, ಅಲ್ಲದೇ ಆನ್‌ಲೈನ್ ಸೇವೆಯನ್ನು ನೀಡುವಂತೆ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಕೆಗೆ ಕಾಯುತ್ತಿರುವವರ ಆಗ್ರಹಿಸುತ್ತಿದ್ದಾರೆ.

ಅರ್ಜಿ ಉಳಿಕೆಯಾಗಿಲ್ಲ

ನಮ್ಮಲ್ಲಿ ಪ್ರತಿನಿತ್ಯ ಬಿಪಿಎಲ್, ಎಪಿಎಲ್ ಪಡಿತರ ಚೀಟಿಗಳ ವಿಲೇವಾರಿ ಕ್ರಮ ವಹಿಸಲಾಗಿದೆ. ಆನ್‌ಲೈನ್ ಅರ್ಜಿಗಳಲ್ಲಿ ನಮ್ಮಲ್ಲಿ ಯಾವುದೇ ಉಳಿಕೆಯಾಗಿಲ್ಲ. ಇನ್ನು ಅರ್ಜಿ ಸಲ್ಲಿಸಲು ಉಳಿದಿರುವ ಕೆಲ ಬಡವರು ಕಾಯುತ್ತಿದ್ದು ಆಧಾರ್ ಜೋಡಣೆ ಮತ್ತು ಪಡಿತರ ಪಡೆಯದೇ ರದ್ದಾದ ಕಾರ್ಡ್‌ಗಳು ಇವೆ ಎಂದು ಆಹಾರ ಇಲಾಖಾ ಅಧಿಕಾರಿಗಳು ಹೇಳುತ್ತಾರೆ.

ಸಿಗುತ್ತಿಲ್ಲ ಸೌಲಭ್ಯ

ಸರಕಾರದ ಆದೇಶದನ್ವಯ ಯಾವುದೇ ಹೊಸ ಪಡಿತರ ಚೀಟಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶವಿಲ್ಲದೇ ಜನರು ಪ್ರತಿನಿತ್ಯ ಕಚೇರಿಗೆ ಅಲೆದಾಡುತ್ತಿದ್ದಾರೆ. ರೈತರು ತಮ್ಮ ಬೆಳೆಸಾಲ, ವಿಭಕ್ತ ಕುಟುಂಬಗಳು ಸರಕಾರಿ ಉಪಯೋಗಗಳಿಗೆ ಪಡಿತರ ಚೀಟಿ ದೊರೆಯದೆ ಸಂಕಷ್ಟಕ್ಕೀಡಾಗಿ ನಿತ್ಯ ನರಕಯಾತನೆ ಅನುಭವಿಸುವಂತಾಗಿದೆ.

ಆಳ್ವಾಸ್ ಪದವಿ ಸ್ವಾಯತ್ತ ಕಾಲೇಜಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸಂಸ್ಥಾಪನಾ ದಿನ



ಮೂಡುಬಿದಿರೆ: ಕನ್ನಡದ ಅಭಿವೃದ್ಧಿಗೆ ಮಹತ್ತರ ಕೊಡುಗೆ ನೀಡಿರುವ ಕನ್ನಡ ಸಾಹಿತ್ಯ ಪರಿಷತ್ತು ಸಂಸ್ಥೆಯ ಸಂಸ್ಥಾಪನಾ ದಿನಾಚರಣೆ ಮೂಡಬಿದಿರೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಘಟಕದ ಆಶ್ರಯದಲ್ಲಿ ಆಳ್ವಾಸ್ ಪದವಿ ಸ್ವಾಯತ್ತ ಕಾಲೇಜಿನಲ್ಲಿ ನಡೆಯಿತು.

ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಭಾಗವಹಿಸಿದ ಪ್ರಾಧ್ಯಾಪಕ ರಾಮಪ್ರಸಾದ ಕಾಂಚೋಡು ಮಾತನಾಡಿ, ಕನ್ನಡದ ಕಟ್ಟಾಳುಗಳ ಬೆವರಿನ ಫಲವೇ ಕನ್ನಡ ಸಾಹಿತ್ಯ ಪರಿಷತ್ತು. ಅದರ ಹುಟ್ಟುಹಬ್ಬವನ್ನು ಆಚರಿಸುವುದು ಪ್ರತಿಯೊಬ್ಬ ಕನ್ನಡಿಗನೂ ಹೆಮ್ಮೆಯ ವಿಷಯ. ಇಂದಿನ ಕನ್ನಡದ ವೈಭವದ ಹಿಂದೆ ಕನ್ನಡ ಸಾಹಿತ್ಯ ಪರಿಷತ್ತು ಕೈಗೊಂಡ ಅನೇಕ ಕಾರ್ಯಗಳಿವೆ ಎಂದು ಅವರು ಅಭಿಪ್ರಾಯಪಟ್ಟರು.

ಕನ್ನಡ ಭಾಷೆಯ ಅಭಿವೃದ್ಧಿಗೆ ಹಲವು ದಶಕಗಳಿಂದ ಸೇವೆ ಸಲ್ಲಿಸುತ್ತಿರುವ ಸಾಹಿತ್ಯ ಪರಿಷತ್ತು, ಗ್ರಂಥ ಪ್ರಕಾಶನ, ಸಂಶೋಧನೆ, ಸಾಹಿತ್ಯ ಸಮ್ಮೇಳನಗಳು ಹಾಗೂ ಸಂಸ್ಕೃತಿ ಸಂರಕ್ಷಣೆ ಮುಂತಾದ ಕ್ಷೇತ್ರಗಳಲ್ಲಿ ವಿಶಿಷ್ಟ ಕೊಡುಗೆ ನೀಡಿದೆ. ಮಹಾಕಾವ್ಯಗಳು, ಶಾಸನಗಳು ಮತ್ತು ಮೌಖಿಕ ಸಾಹಿತ್ಯ ಸಂಗ್ರಹಿಸಿ ಗ್ರಂಥರೂಪದಲ್ಲಿ ಉಳಿಸುವ ಮೂಲಕ ಕನ್ನಡದ ಪರಂಪರೆ ಮುಂದಿನ ಪೀಳಿಗೆಗಳಿಗೆ ಪರಿಚಯಿಸುವ ಕಾರ್ಯ ಇದು ನಿರಂತರ ಮಾಡುತ್ತಿದೆ ಎಂದರು.

ಅಂತರ್ಜಾಲದಲ್ಲಿ ವಿದ್ಯಾರ್ಥಿಗಳಲ್ಲಿ ಕನ್ನಡಾಭಿಮಾನ ಬೆಳೆಸುವುದು ಹಾಗೂ ತಂತ್ರಜ್ಞಾನ ಅರ್ಥಪೂರ್ಣವಾಗಿ ಬಳಸಿ ಕೊಂಡು ಕನ್ನಡವನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿ ಎಂದರು.

ಮೂಡಬಿದಿರೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವೇಣುಗೋಪಾಲ ಶೆಟ್ಟಿ ಅಧ್ಯಕ್ಷತೆ ವಹಿಸಿದರು. ಆಳ್ವಾಸ್ ಪದವಿ ಸ್ವಾಯತ್ತ ಕಾಲೇಜಿನ ವಾಣಿಜ್ಯ ವಿಭಾಗದ ಮುಖ್ಯಸ್ಥ ಡಾ. ರಾಮಕೃಷ್ಣ ಶೆಟ್ಟಿ ಪ್ರಾರ್ಥಿಸಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ. ಯೋಗೀಶ್ ಕೈರೋಡಿ ನಿರೂಪಿಸಿದರು.

ವ್ಯಕ್ತಿಗಿಂತ ಪಕ್ಷ, ಪಕ್ಷಕ್ಕಿಂತ ದೇಶ ಮುಖ್ಯ ಎಂಬುದು ಬಿಜೆಪಿಯ ಸಿದ್ಧಾಂತ: ನಳಿನ್



ಮಂಗಳೂರು: ಭಾರತೀಯ ಜನತಾ ಪಾರ್ಟಿ ಮಂಗಳೂರು ನಗರ ದಕ್ಷಿಣ ಮಂಡಲದ ವತಿಯಿಂದ ಒಡ್ಡೂರು ಫಾರ್ಮ್ಸ್ ನಲ್ಲಿ ನಡೆದ ಎರಡು ದಿನಗಳ ಪಂ.ದೀನ್ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ-2026 ವರ್ಗವು ಯಶಸ್ವಿಯಾಗಿ ಸಮಾಪ್ತಿಗೊಂಡಿತು.

ಸಮಾರೋಪ ಸಮಾರಂಭದಲ್ಲಿ ಪ್ರಶಿಕ್ಷಣಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಮಾಜಿ ಸಂಸದ ನಳಿನ್ ಕುಮಾರ್ ಕಟೀಲು, ಅಭ್ಯಾಸ ವರ್ಗ, ಕಾರ್ಯಕಾರಿಣಿ ಸಭೆ, ಪದಾಧಿಕಾರಿಗಳ ಸಭೆ, ಪ್ರಶಿಕ್ಷಣ, ಹೀಗೆ ನಿರಂತರ ಕಾರ್ಯ ಚಟುವಟಿಕೆಗಳೇ ಬಿಜೆಪಿ ಜಗತ್ತಿನ ಅತ್ಯಂತ ದೊಡ್ಡ ರಾಜಕೀಯ ಪಕ್ಷವಾಗಿ ಬೆಳೆಯಲು ಕಾರಣ. ವ್ಯಕ್ತಿಗಿಂತ ಪಕ್ಷ ಮುಖ್ಯ, ಪಕ್ಷಕ್ಕಿಂತ ದೇಶ ಮುಖ್ಯ ಎಂಬ ಸಿದ್ಧಾಂತದ ಭಾರತೀಯ ಜನತಾ ಪಾರ್ಟಿಯು ಪ್ರತಿಯೊಬ್ಬ ಕಾರ್ಯಕರ್ತರನ್ನು ಗುರುತಿಸಿ ಜವಾಬ್ದಾರಿ ನೀಡಿ ರಾಷ್ಟ್ರ ಕಾರ್ಯಕ್ಕೆ ಅಣಿಯಾಗಿಸುತ್ತದೆ. ಭಾರತವನ್ನು ಪರಮ ವೈಭವದೆಡೆಗೆ ಕೊಂಡೊಯ್ಯುವುದೇ ನಮ್ಮೆಲ್ಲರ ಗುರಿಯಾಗಿದ್ದು, ಆ ನಿಟ್ಟಿನಲ್ಲಿ ಜೊತೆಯಾಗಿ ಸಾಗೋಣ ಎಂದರು.

ಶಾಸಕರಾದ ಡಿ.ವೇದವ್ಯಾಸ ಕಾಮತ್, ರಾಜೇಶ್ ನ್ಯಾಕ್, ಕಿಶೋರ್ ಕುಮಾರ್ ಪುತ್ತೂರು, ಮಂಗಳೂರು ದಕ್ಷಿಣ ಮಂಡಲ ಅಧ್ಯಕ್ಷ ರಮೇಶ್ ಕಂಡೆಟ್ಟು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರೇಮಾನಂದ ಶೆಟ್ಟಿ, ಮಂಡಲದ ಪ್ರಧಾನ ಕಾರ್ಯದರ್ಶಿ ರಮೇಶ್ ಹೆಗ್ಡೆ ಹಾಗೂ ಲಲ್ಲೇಶ್ ಕುಮಾರ್, ಜಿಲ್ಲಾ ಪದಾಧಿಕಾರಿಗಳು, ನಿಕಟ ಪೂರ್ವ ಮನಪಾ ಸದಸ್ಯರು, ಮಂಡಲ ಪದಾಧಿಕಾರಿಗಳು, ಜಿಲ್ಲೆ ಮತ್ತು ಮಂಡಲದ ಮೋರ್ಚಾದ ಪದಾಧಿಕಾರಿಗಳು, ಪ್ರಕೋಷ್ಠದ ಪ್ರಮುಖರು, ಮಹಾಶಕ್ತಿ ಕೇಂದ್ರದ ಪ್ರಮುಖರು, ಶಕ್ತಿಕೇಂದ್ರದ ಪ್ರಮುಖರು, ಬೂತ್ ಪ್ರಮುಖರು ಉಪಸ್ಥಿತರಿದ್ದರು

ಉಳ್ಳಾಲ ಮಾರುತಿ ಜನಸೇವಾ ಸಂಘದಿಂದ 2ನೇ ಮನೆ ಹಸ್ತಾಂತರ



ಉಳ್ಳಾಲ: ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಉಳ್ಳಾಲ ಮೊಗವೀರ ಪಟ್ಣದ ಮಾರುತಿ ಜನಸೇವಾ ಸಂಘ, ಮಾರುತಿ ಯುವಕ ಮಂಡಲದ 40ನೇ ವರ್ಷದ ಸಂಭ್ರಮ 'ಮಾರುತಿ ಮಾಣಿಕ್ಯ ಮಹೋತ್ಸವ'ದ ಪ್ರಯುಕ್ತ ಬುಧವಾರ ಉಳ್ಳಾಲ ಉಳಿಯ ಪಡುಮನೆ ನಿವಾಸಿ ಜ್ಯೋತಿ ನವೀನ್ ಕುಟುಂಬಕ್ಕೆ ನಿರ್ಮಿಸಲಾದ ಎರಡನೇ ನೂತನ ಮನೆ 'ಮಾರುತಿ ಆಶ್ರಯ' ಹಸ್ತಾಂತರ ಕಾರ್ಯಕ್ರಮ ನಡೆಯಿತು.

ಕರ್ನಾಟಕ ಅಲೈಡ್ ಮತ್ತು ಹೆಲ್ತ್ ಕೇರ್ ಕೌನ್ಸಿಲ್ ಅಧ್ಯಕ್ಷ ಹಾಜಿ. ಯು.ಟಿ.ಇಫ್ತಿಕಾರ್ ಫರೀದ್ ಭಾಗವಹಿಸಿ, ಮಾತನಾಡಿದರು. ಬ್ಯಾಡ್ಮಿಂಟನ್ ಅಸೋಸಿಯೇಷನ್‌ನ ದ.ಕ. ಜಿಲ್ಲಾಧ್ಯಕ್ಷ ಸಂತೋಷ್ ಕುಮಾರ್ ಶೆಟ್ಟಿ ಮಾತನಾಡಿದರು. ಉಳಿಯ ಶ್ರೀ ಉಳ್ಳಾಲ್ತಿ ಧರ್ಮ ಅರಸು ಕ್ಷೇತ್ರದ ಗುರಿಕಾರ ಸುರೇಶ್ ಗುರಿಕಾರ ಮನೆಯ ಕೀಲಿಕೈ ಫಲಾನುಭವಿಗೆ ಹಸ್ತಾಂತರಿಸಿದರು. ಉಳ್ಳಾಲ ಮೊಗವೀರಸಂಘದ ಅಧ್ಯಕ್ಷ ಯಶವಂತ ಅಮೀನ್ ಅಧ್ಯಕ್ಷತೆ ವಹಿಸಿದ್ದರು. ಉಳ್ಳಾಲ ನಗರಸಭೆಯ ಮಾಜಿ ಉಪಾಧ್ಯಕ್ಷ ಆಯೂಬ್ ಮಂಚಿಲ, ಮಾಜಿ ಸದಸ್ಯೆ ವೀಣಾ ಡಿಸೋಜ, ಉಳ್ಳಾಲ ಮೊಗವೀರ ಸಂಘದ ಮಾಜಿ ಅಧ್ಯಕ್ಷ ಸದಾನಂದ ಬಂಗೇರ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಮಾರುತಿ ಜನಸೇವಾ ಸಂಘದ ಅಧ್ಯಕ್ಷ ಸಂದೀಪ್ ಪುತ್ರನ್, ಗೌರವಾಧ್ಯಕ್ಷ ವರದ್ ರಾಜ್ ಬಂಗೇರ, ಪ್ರಧಾನ ಸಂಚಾಲಕ ಸುಧೀರ್ ವಿ.ಅಮೀನ್ ,ಉಪಾಧ್ಯಕ್ಷ ಪ್ರಶಾಂತ್ ಬಿ.ಉಳ್ಳಾಲ್, ಪ್ರಧಾನ ಕಾರ್ಯದರ್ಶಿ ಕಪಿಲ್ ಎಸ್. ಬಂಗೇರ, ಜತೆ ಕಾರ್ಯದರ್ಶಿ ಪವನ್ ಉಳ್ಳಾಲ್,ಕೋಶಾಧಿಕಾರಿ ಅನಿಲ್ ಚರಣ್,ಕ್ರೀಡಾ ಕಾರ್ಯದರ್ಶಿ ಮಹೇಶ್ ಸಾಲ್ಯಾನ್, ಪ್ರಮುಖರಾದ ಕಿರಣ್ ಪುತ್ರನ್,ದಿನೇಶ್ ಕರ್ಕೇರ, ಅಶ್ವಿನ್,ಮಹೇಶ್ ಕುಮಾರ್, ಪ್ರಕಾಶ್, ಪುನೀತ್ ಬಂಗೇರ, ಕಮಲಾಕ್ಷ, ಸುಧೀರ್ ಸುವರ್ಣ, ಮನೋಹರ್, ರೂಪೇಶ್, ತಿಲಕ್, ಸುರೇಶ್ ಉಳ್ಳಾಲ್, ರೋಮಿತ್, ಪವನ್, ವರುಣ್, ವಾಸುದೇವ್, ಅಜಿತ್ ಸುವರ್ಣ ಮೊದಲಾದವರು ಉಪಸ್ಥಿತರಿದ್ದರು. ಆರ್.ಜೆ.ಪ್ರಸನ್ನ ಕಾರ್ಯಕ್ರಮ ನಿರೂಪಿಸಿದರು.

ಪರಿಶ್ರಮದ ಜ್ಞಾನಾರ್ಜನೆಯಿಂದ ಉಜ್ವಲ ಭವಿಷ್ಯ: ವಿವೇಕ್ ಆಳ್ವ ಅಭಿಮತ



ಸುಬ್ರಹ್ಮಣ್ಯ: ಯುವ ವಿದ್ಯಾರ್ಥಿಗಳು ಕಷ್ಟ ಪರಿಶ್ರಮದಿಂದ ಜ್ಞಾನಾರ್ಜನೆ ಮಾಡಬೇಕು. ಇದರಿಂದ ಉಜ್ವಲ ಭವಿಷ್ಯ ಪ್ರಾಪ್ತವಾಗುತ್ತದೆ. ವ್ಯಾಸಂಗದ ಅವಧಿಯಲ್ಲಿಯೇ ತನ್ನ ಭವಿಷ್ಯದ ಗುರಿಯತ್ತ ಹೆಚ್ಚು ಗಮನ ಕೊಟ್ಟರೆ ಬದುಕು ಪ್ರಜ್ವಲವಾಗುತ್ತದೆ ಎಂದು ಮೂಡಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಮ್ಯಾನೇಜಿಂಗ್ ಟ್ರಸ್ಟಿ ವಿವೇಕ್ ಆಳ್ವ ಹೇಳಿದರು.

ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತಕ್ಕೊಳಪಟ್ಟ ಕೆ.ಎಸ್.ಎಸ್. ಕಾಲೇಜಿನಲ್ಲಿ ಬುಧವಾರ ನಡೆದ ವಾರ್ಷಿಕೋತ್ಸದಲ್ಲಿ ಶೈಕ್ಷಣಿಕ ಸಾಧಕರನ್ನು ಗೌರವಿಸಿ ಅವರು ಮಾತನಾಡಿದರು.

ಪರಿಸರ ಸಂರಕ್ಷಣೆಗೆ ಕೊಡುಗೆ

ಆಧುನಿಕ ವಿದ್ಯಾರ್ಥಿಗಳು ಪ್ಲಾಸ್ಟಿಕ್ ಉಪಯೋಗದ ವಿರುದ್ಧ ಜಾಗೃತಿ ಮೂಡಿಸುವ ಕಾರ್ಯವನ್ನು ಮಾಡಬೇಕು. ಈ ಮೂಲಕ ಪರಿಸರ ಸಂರಕ್ಷಣೆಗೆ ತಮ್ಮದೇ ಆದ ಕೊಡುಗೆ ನೀಡಬೇಕು. ಸ್ಪರ್ಧಾತ್ಮಕ ಯುಗದಲ್ಲಿ ನಾಯಕತ್ವ ಗುಣಗಳೊಂದಿಗೆ ಮಾನವೀಯ ಮೌಲ್ಯಗಳನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ಮಾನವೀಯತೆ ಮತ್ತು ಸಹಕಾರ ಮನೋಭಾವ ಬದುಕಿಗೆ ಗೌರವವನ್ನು ನೀಡುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶೈಕ್ಷಣಿಕ ಸಾಧಕರನ್ನು ಸನ್ಮಾನಿಸಿ, ದತ್ತಿನಿಧಿ ಬಹುಮಾನ ವಿತರಿಸಲಾಯಿತು. ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಸದಸ್ಯ ಅಜಿತ್ ಪಾಲೇರಿ, ಕಾಲೇಜಿನ ಪ್ರಾಂಶುಪಾಲ ಡಾ. ದಿನೇಶ್ ಪಿ.ಟಿ., ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷ ಡಾ. ರವಿ ಕಕ್ಕೆಪದವು, ಪ್ರಾಕ್ತನ ವಿದ್ಯಾರ್ಥಿ ಸಂಘದ ಅಧ್ಯಕ್ಷ ಗಣೇಶ್ ಪ್ರಸಾದ್ ಎನ್., ಐಕ್ಯುಎಸಿ ಸಂಯೋಜಕಿ ಲತಾ ಬಿ.ಟಿ., ವಿದ್ಯಾರ್ಥಿ ಸಂಘದ ಅಧ್ಯಕ್ಷೆ ನಿಶಾ ಗೌರಿ, ಉಪಾಧ್ಯಕ್ಷ ಕೀರ್ತನ್, ಕಾರ್ಯದರ್ಶಿ ದೀಕ್ಷಾ ವೇದಿಕೆಯಲ್ಲಿದ್ದರು. ಉದಯ ಕುಮಾರ್ ವಂದಿಸಿದರು. ಉಪನ್ಯಾಸಕಿ ಪುಷ್ಪಾ ಡಿ. ನಿರ್ವಹಿಸಿದರು.

ಪುತ್ತೂರು ಕ್ಷೇತ್ರದ ವ್ಯಾಪ್ತಿಯಲ್ಲಿ 21 ಅಕ್ರಮ-ಸಕ್ರಮ ಬೈಠಕ್: ಅಶೋಕ್ ರೈ



ಪುತ್ತೂರು: ಕ್ಷೇತ್ರದ ವ್ಯಾಪ್ತಿಯಲ್ಲಿ 21 ಅಕ್ರಮ-ಸಕ್ರಮ ಬೈಠಕ್ ನಡೆಸುವ ಮೂಲಕ ರಾಜ್ಯದಲ್ಲಿಯೇ ಹೊಸ ಇತಿಹಾಸವನ್ನು ನಿರ್ಮಾಣ ಮಾಡಿದ್ದೇವೆ. ರಾಜ್ಯದ ಯಾವ ವಿಧಾನಸಭಾ ಕ್ಷೇತ್ರದಲ್ಲಿಯೂ ಇಷ್ಟೊಂದು ಪ್ರಮಾಣದಲ್ಲಿ ಅಕ್ರಮ-ಸಕ್ರಮ ಕಡತ ವಿಲೇವಾರಿ ನಡೆದಿಲ್ಲ, ಪುತ್ತೂರಿನಲ್ಲಿ 1500ಕ್ಕೂ ಅಧಿಕ ಕಡತಗಳನ್ನು ಮಂಜೂರು ಮಾಡಲಾಗಿದೆ. ಈ ಸಾಧನೆಗೆ ಬಗ್ಗೆ ರಾಜ್ಯದ ಐಎಎಸ್ ಅಧಿಕಾರಿಗಳು ನಮ್ಮಲ್ಲಿ ಮಾಹಿತಿ ಕೇಳಿ ಚರ್ಚಿಸುತ್ತಿದ್ದಾರೆ ಎಂದು ಶಾಸಕ ಅಶೋಕ್ ರೈ ಹೇಳಿದರು.

ಪುತ್ತೂರಿನ ನರಿಮೊಗರು ಕೃಷಿ ಪತ್ತಿನ ಸಹಕಾರ ಸಂಘದ ಸಭಾಂಗಣದಲ್ಲಿ ಮಂಗಳವಾರ ನಡೆದ ಅಕ್ರಮ-ಸಕ್ರಮ ಕಡತ ವಿಲೇವಾರಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಹಿಂದೆ ಮಾಡಿದ ಅಕ್ರಮ-ಸಕ್ರಮದಲ್ಲಿ ಕೇವಲ ಆರ್‌ಟಿಸಿಯಲ್ಲಿ ಮಾತ್ರ ನಿಮ್ಮ ಹೆಸರು ಇತ್ತು. ಆದರೆ, ಅದು ಪ್ಲಾಟಿಂಗ್ ಆಗುತ್ತಿರಲಿಲ್ಲ, ಈಗ ಮಾಡಲಾಗುತ್ತಿರುವ ಅಕ್ರಮ-ಸಕ್ರಮದಲ್ಲಿ ಪ್ಲಾಟಿಂಗ್ ಆಗಿಯೇ ನಿಮ್ಮ ದಾಖಲಾತಿ ದೊರೆ ಯುತ್ತದೆ. ಹಾಗಾಗಿ ದಾಖಲಾತಿ ಸಿಗಲು ಸ್ವಲ್ಪ ವಿಳಂಬವಾಗುತ್ತಿದೆ. ಸಿಕ್ಕಿದ ಮೇಲೆ ಅದು ಶಾಶ್ವತ ದಾಖಲೆಯಾಗುತ್ತದೆ ಎಂದರು.

ಅಕ್ರಮ-ಸಕ್ರಮ ಸಮಿತಿ ಸದಸ್ಯ ಮಹಮ್ಮದ್ ಬಡಗನ್ನೂರು ಮಾತನಾಡಿ, ಶಾಸಕರು 21 ಗ್ರಾಮಗಳಲ್ಲಿ ಅಕ್ರಮ-ಸಕ್ರಮ ಬೈಠಕ್ ನಡೆಸುವ ಮೂಲಕ ಅಕ್ರಮ-ಸಕ್ರಮ, 94 ಸಿ, 94 ಸಿಸಿ ಕಡತಗಳನ್ನು ಮಂಜೂರು ಮಾಡುವ ಮೂಲಕ ಸಾಮಾಜಿಕ ನ್ಯಾಯ ಒದಗಿಸುವ ಕೆಲಸ ಮಾಡುತ್ತಿದ್ದಾರೆ. ಎಂದರು.

ತಹಶೀಲ್ದಾರ್ ಎಸ್.ಜಿ. ಕೂಡಲಗಿ ಪ್ರಾಸ್ತಾವಿಸಿದರು. ಗ್ಯಾರಂಟಿ ಸಮಿತಿ ಅಧ್ಯಕ್ಷ ಉಮಾನಾಥ ಶೆಟ್ಟಿ ಪೆರ್ನೆ, ಅಕ್ರಮ-ಸಕ್ರಮ ಸಮಿತಿ ಸದಸ್ಯರಾದ ರಾಮಣ್ಣ ಪಿಲಿಂಜ ಮತ್ತು ರೂಪರೇಖಾ ಆಳ್ವ ಉಪಸ್ಥಿತರಿದ್ದರು. ಕಂದಾಯ ಇಲಾಖೆಯ ರೆವಿನ್ಯೂ ಇನ್ಸ್‌ಪೆಕ್ಟರ್ ಗೋಪಾಲ್ ಸ್ವಾಗತಿಸಿದರು.

ತೋಕೂರು ಶ್ರೀಕ್ಷೇತ್ರಕ್ಕೆ ಮಾಜಿ ಶಾಸಕ ಸೋಮಶೇಖರ್ ರೆಡ್ಡಿ ಭೇಟಿ



ಮುಲ್ಕಿ: ಇತಿಹಾಸ ಪ್ರಸಿದ್ಧ ಮುಲ್ಕಿ ಸೀಮೆಯ ಒಂಬತ್ತು ಮಾಗಣೆಯ ತೋಕೂರು ಶ್ರೀ ಸುಬ್ರಹ್ಮಣ್ಯ ಮಹಾಗಣಪತಿ ದೇವಸ್ಥಾನಕ್ಕೆ ಬಳ್ಳಾರಿ ಜಿಲ್ಲೆಯ ಮಾಜಿ ಶಾಸಕ, ಕೆ.ಎಂ.ಎಫ್ ನ ಮಾಜಿ ಅಧ್ಯಕ್ಷ ಸೋಮಶೇಖರ ರೆಡ್ಡಿ ಭೇಟಿ ನೀಡಿ ಪ್ರಸಾದ ಸ್ವೀಕರಿಸಿದರು

ಶಾಸಕರ, ನಾಯಕರ ಸಾಥ್

ಈ ಸಂದರ್ಭ ಕಾಪು ಕ್ಷೇತ್ರದ ಶಾಸಕ ಗುರ್ಮೆ ಸುರೇಶ್ ಶೆಟ್ಟಿ,ಮಾಜಿ ಸಂಸದ ನಳಿನ್ ಕುಮಾರ್ ಕಟೀಲು, ಬಿರುವೆರ್ ಕುಡ್ಲ ಮಂಗಳೂರು ಘಟಕದ ಉದಯ ಪೂಜಾರಿ, ಶ್ರೀ ಕ್ಷೇತ್ರ ಕಟೀಲು ದೇವಸ್ಥಾನದ ಅರ್ಚಕ ವಾಸುದೇವ ಆಸ್ರಣ್ಣ ಅನಂತ ಪದ್ಮನಾಭ ಆಸ್ರಣ್ಣ ಹಾಗೂ ತೋಕೂರು ದೇವಸ್ಥಾನದ ತಂತ್ರಿಗಳಾದ ವೇ. ಮೂ. ಶಿಬರೂರು ಗೋಪಾಲಕೃಷ್ಣ ತಂತ್ರಿ ಪ್ರದಾನ ಅರ್ಚಕ ಟಿ.ಕೆ. ಮಧುಸೂಧನ್ ಆಚಾರ್ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ ಗುರುರಾಜ್ ಎಸ್. ಪೂಜಾರಿ, ಮತ್ತು ಸದಸ್ಯರಾದ ಪುರುಷೋತ್ತಮ ಕೋಟ್ಯಾನ್, ಅಶೋಕ್ ಕುಂದರ್, ಸವಿತಾ ಶರತ್, ಶೋಭಾ ವಿ. ಅಂಚನ್, ನಿಕಟ ಪೂರ್ವ ಅಧ್ಯಕ್ಷ ಹರಿದಾಸ್ ಭಟ್, ರೂಪಶ್ರೀ ತೋಕೂರು ಮತ್ತು ರಾಘವೇಂದ್ರ ರಾವ್ ಮನೆ, ಬೆಳ್ಳಾಣ್ (ಬಳ್ಳಾರಿ) ಮತ್ತಿತರರು ಉಪಸ್ಥಿತರಿದ್ದರು.

ಕಡಬ ಪಟ್ಟಣ ಪಂಚಾಯತ್ ಸಭಾಂಗಣದಲ್ಲಿ ಸಾಮಾನ್ಯ ಸಭೆ | ತ್ಯಾಜ್ಯ ವಿಲೇವಾರಿ ವಿಚಾರದಲ್ಲಿ ಪ್ರತಿಪಕ್ಷ ಸದಸ್ಯರಿಂದ ರಾಜಕೀಯ ಆರೋಪ

ಕಕ್ಕೆತ್ತಿಮಾರ್ ತ್ಯಾಜ್ಯ ಘಟಕದ ಬಳಿ ಮಲ ತ್ಯಾಜ್ಯ ಘಟಕ ನಿರ್ಮಾಣಕ್ಕೆ ಸದಸ್ಯರಿಂದ ತೀವ್ರ ಆಕ್ಷೇಪ

ಕಡಬ: ಪಟ್ಟಣ ಪಂಚಾಯತ್‌ನ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಸಂಗ್ರಹವಾಗಿರುವ ತ್ಯಾಜ್ಯವನ್ನು ವಿಲೇವಾರಿ ಮಾಡುವ ನಿಟ್ಟಿನಲ್ಲಿ ಹಿಂದಿನ ಸಭೆಯಲ್ಲಿ ತೀರ್ಮಾನವಾಗಿದ್ದರೂ, ರಾಜಕೀಯ ಉದ್ದೇಶದಿಂದ ತ್ಯಾಜ್ಯ ವಾಹನವನ್ನು ತಡೆದು ಪ್ರತಿಭಟಿಸಲಾಗಿದೆ. ಪ್ರತಿಭಟನೆಗೆ ಹೆದರಿ ತ್ಯಾಜ್ಯ ವಿಲೇವಾರಿ ಮಾಡಿಲ್ಲ, ಅದಕ್ಕೂ ಮೊದಲೇ ಪಚ್ಚನಾಡಿಗೆ ತ್ಯಾಜ್ಯವನ್ನು ಸಾಗಾಟ ಮಾಡಲು ಸಿದ್ಧತೆ ನಡೆದಿತ್ತು ಎಂದು ಸ್ಥಾಯಿ ಸಮಿತಿ ಅಧ್ಯಕ್ಷ ಕೆ.ಎಂ. ಹನೀಫ್ ಹೇಳಿದ್ದು, ಸದಸ್ಯರೊಳಗೆ ತೀವ್ರ ವಾಕ್ಸಮರಕ್ಕೆ ಕಾರಣವಾಯಿತು.

ಕಡಬ ಪಟ್ಟಣ ಪಂಚಾಯತ್ ಸಭಾಂಗಣದಲ್ಲಿ ಅಧ್ಯಕ್ಷೆ ತಮನ್ನಾ ಜಬೀನ್ ಅಧ್ಯಕ್ಷತೆಯಲ್ಲಿ ಬುಧವಾರ ಜರಗಿದ ಸಾಮಾನ್ಯ ಸಭೆಯಲ್ಲಿ ಈ ಕುರಿತು ಪ್ರಸ್ತಾಪಿಸಿದ ಹನೀಫ್ ಅವರ ಮಾತಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಪ್ರತಿಪಕ್ಷದ ಸದಸ್ಯೆ ಅಕ್ಷತಾ ಬಾಲಕೃಷ್ಣ ಕಕ್ಕೆತ್ತಿಮಾರ್‌ನಲ್ಲಿ ತ್ಯಾಜ್ಯ ಘಟಕ ಬೇಡ ಎಂದು ಒತ್ತಾಯಿಸಿದರು. ಈ ಬಗ್ಗೆ ಸುದೀರ್ಘ ಚರ್ಚೆ ನಡೆಯಿತು. ವಾರ್ಡ್ ಸದಸ್ಯ ಸೈಮನ್ ಸಿ.ಜೆ. ಮಾತನಾಡಿ, ಅಭಿವೃದ್ಧಿಯ ವಿಚಾರದಲ್ಲಿ ಯಾವುದೇ ರಾಜಕೀಯ ಸಲ್ಲದು ಎಂದರು. ಪೌರ ಕಾರ್ಮಿಕರ ಕೊರತೆ, ಅಪಾಯಕಾರಿ ಮರಗಳ ತೆರವು, ಮೆಸ್ಕಾಂ ಲೈನ್‌ಮೆನ್‌ಗಳ ಕೊರತೆ, ರಸ್ತೆ ಪಕ್ಕದ ಚರಂಡಿಯ ಹೂಳೆತ್ತುವುದು ಇತ್ಯಾದಿ ವಿಚಾರಗಳನ್ನು ಚರ್ಚಿಸಲಾಯಿತು. ಪ.ಪಂ. ವ್ಯಾಪ್ತಿಯಲ್ಲಿನ ಬೀದಿ ದೀಪಗಳ ನಿರ್ವಹಣೆಯನ್ನು ಗುತ್ತಿಗೆದಾರರು ಸರಿಯಾಗಿ ನಡೆಸುತ್ತಿಲ್ಲ, ಅವರನ್ನು ಬದಲಾಯಿಸಿ ಬೇರೆಯವರಿಗೆ ಗುತ್ತಿಗೆ ನೀಡಬೇಕು ಎಂದು ಸದಸ್ಯರು ಆಗ್ರಹಿಸಿದರು. ಅದಕ್ಕೆ ಉತ್ತರಿಸಿದ ಇಂಜಿನಿಯರ್ ಗುತ್ತಿಗೆ ಅವಧಿ ಮುಗಿದ ಕಾರಣ ಹೊಸದಾಗಿ ಗುತ್ತಿಗೆದಾರರನ್ನು ನೇಮಿಸಲು ಟೆಂಡರ್ ಕರೆಯಲಾಗಿತ್ತು. ಆದರೆ, ಹಿಂದಿನ ಗುತ್ತಿಗೆದಾರರನ್ನು ಹೊರತುಪಡಿಸಿ ಬೇರೆ ಯಾರೂ ಬಿಡ್ ಹಾಕಿಲ್ಲ ಎಂದು ಮಾಹಿತಿ ನೀಡಿದರು. ಅದಕ್ಕೆ ಮರು ಟೆಂಡರ್ ಕರೆಯುವಂತೆ ಸದಸ್ಯರು ಸೂಚಿಸಿದರು.

ಪ.ಪಂ. ಉಪಾಧ್ಯಕ್ಷೆ ನೀಲಾವತಿ ಶಿವರಾಮ್, ಸದಸ್ಯ ದಯಾನಂದ ಪಿಜಕ್ಕಳ, ಕೃಷ್ಣಪ್ಪ ಬೈಲಂಗಡಿ, ರೋಹಿತ್ ಪಣೆಮಜಲು, ಮಹಮ್ಮದ್ ಫೈಝಲ್, ಅಕ್ಷತಾ ಮಣಿಮುಂಡ, ಗುಣವತಿ ರಘುರಾಮ, ಮೋಹನ, ಕೃಷ್ಣಪ್ಪ ನಾಯ್ಕ್, ಕುಸುಮ ಅಂಗಡಿಮನೆ, ನಾಮ ನಿರ್ದೇಶಿತ ಸದಸ್ಯ ಫಝಲ್ ಕೋಡಿಂಬಾಳ, ಮೋಹನದಾಸ ಮೂರಾಜೆ, ಶಾಲಿನಿ ಸತೀಶ್ ನ್ಯಾಕ್ ಮೇಲಿನಮನೆ ಚರ್ಚೆಯಲ್ಲಿ ಇದ್ದರು. ಮುಖ್ಯಾಧಿಕಾರಿ ಲೀಲಾವತಿ ಇ., ಇಂಜಿನಿಯರ್ ಶಿವಕುಮಾರ್ ಎಂ.ಆರ್., ಹಿರಿಯ ಆರೋಗ್ಯ ನಿರೀಕ್ಷಕಿ ಶ್ವೇತಾ ಕಿರಣ್, ಸಿಬ್ಬಂದಿ ಬಾಲಕೃಷ್ಣ ಪಂಬದ, ವಾರಿಜಾ, ಕೀರ್ತನ್, ಹರೀಶ್ ಬೆದ್ರಾಜೆ ಮಾಹಿತಿ ನೀಡಿದರು.



ಕೋಡಿಂಬಾಳದಲ್ಲಿ ಸಿದ್ಧತೆ

ಕೆಲವು ವರ್ಷಗಳ ಹಿಂದೆಯೇ ಕೋಡಿಂಬಾಳದ ಕಕ್ಕೆತ್ತಿಮಾರ್ ಘನ ತ್ಯಾಜ್ಯ ಘಟಕದ ಬಳಿ ಮಲತ್ಯಾಜ್ಯ ಘಟಕ ಆರಂಭಿಸಲು 2.5 ಎಕರೆ ಜಾಗ ನಿಗದಿ ಮಾಡಲಾಗಿತ್ತು. ಅಲ್ಲಿ ಮರಗಳು ಇರುವುದರಿಂದ ಅರಣ್ಯ ಇಲಾಖೆ ಆಕ್ಷೇಪದ ಕಾರಣದಿಂದಾಗಿ ತಿಮರಡ್ಡದಲ್ಲಿ ಕಾಮಗಾರಿ ಆರಂಭಿಸಲಾಗಿತ್ತು. ಪ್ರಸ್ತುತ ತಿಮರಡ್ಡದಲ್ಲಿ ಜನರ ವಿರೋಧ ಇರುವುದರಿಂದ ಕಾಮಗಾರಿ ಸ್ಥಗಿತಗೊಂಡಿದೆ. ಡಿಸಿ ಸೂಚನೆಯಂತೆ ಕಕ್ಕೆತ್ತಿಮಾರ್‌ನಲ್ಲಿ ನಿಗದಿಯಾಗಿರುವ ಜಾಗದಲ್ಲಿ ಅರ್ಧ ಎಕರೆಯಲ್ಲಿ ಮರಗಳನ್ನು ತೆರವುಗೊಳಿಸಿ ಮಲತ್ಯಾಜ್ಯ ಘಟಕ ಆರಂಭಿಸಲು ಅರಣ್ಯ ಇಲಾಖೆಯ ನಿರಾಕ್ಷೇಪಣಾ ಪತ್ರ ಪಡೆಯಲು ಸಿದ್ಧತೆ ನಡೆದಿದೆ ಎಂದು ಪ.ಪಂ. ಇಂಜಿನಿಯರ್ ಶಿವಕುಮಾರ್ ಎಂ.ಆರ್. ಮಾಹಿತಿ ನೀಡಿದರು. ಅದಕ್ಕೆ ಪ್ರತಿಕ್ರಿಯಿಸಿದ ಸದಸ್ಯೆ ಅಕ್ಷತಾ ಬಾಲಕೃಷ್ಣ ಬೇರೆ ಕಡೆ ಜಾಗ ಗುರುತಿಸುವಂತೆ ಆಗ್ರಹಿಸಿದರು.

ಸುತ್ತಮುತ್ತ

ನಾಳೆ ಕೊಲಕಾಡಿ ದೇಗುಲದಲ್ಲಿ ನಿಧಿ ಕುಂಭ, ಷಡಾಧಾರ ಪ್ರತಿಷ್ಠೆ

ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಶ್ರೀ ಕಾಳಿಕಾಂಬ ದೇವಸ್ಥಾನದ ನೂತನ ಶಿಲಾಮಯ ಗರ್ಭಗುಡಿಯನಿಧಿ ಕುಂಭ ಹಾಗೂ ಷಡಾಧಾರ ಪ್ರತಿಷ್ಠೆಯು ಪಡು ಕುತ್ಯಾರು ಆನೆಗುಂದಿ ಸಂಸ್ಥಾನದ ಕಾಳಹಸ್ತೇಂದ್ರ ಸರಸ್ವತೀ ಶ್ರೀಗಳು ಹಾಗೂ ಹಾಸನ ಅರೆಮಾದನ ಹಳ್ಳಿ ಶ್ರೀ ವಿಶ್ವಕರ್ಮ ಜಗದ್ಗುರು ಮಠದ ಶಿವ ಸುಜ್ಞಾನತೀರ್ಥ ಶ್ರೀಗಳ ಶುಭಾಶೀರ್ವಾದದೊಂದಿಗೆ ಮೇ 8ರಂದು ಬೆಳಗ್ಗೆ 9.51ಕ್ಕೆ ನಡೆಯಲಿದೆ. ವಾಸ್ತು ಶಿಲ್ಪಿ ಉಮೇಶ್ ಆಚಾರ್ಯರ ಮಾರ್ಗದರ್ಶನದಲ್ಲಿ ಬ್ರಹ್ಮಶ್ರೀ ಪುರೋಹಿತ್ ಕೇಶವ ತಂತ್ರಿಗಳ ಆಚಾರ್ಯತ್ವ ಕ್ಷೇತ್ರದ ಪ್ರಧಾನ ಅರ್ಚಕ ಕಮಲಾಕ್ಷ ಆಚಾರ್ಯ ಹಾಗೂ ವೈದಿಕರ ಸಹಭಾಗಿತ್ವದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಬೆಳಿಗ್ಗೆ ಶ್ರೀ ಗುರು ಗಣಪತಿ ಪೂಜೆ, ಆಧಾರ ಶಿಲಾ ಪ್ರತಿಷ್ಠೆ ನಿಧಿಕುಂಭಗಳಿಗೆ ಸಂಸ್ಕಾರ, ಹೋಮ ಹವನಗಳು ಮತ್ತು ನಿಧಿ ಕಲಶ ಸ್ಥಾಪನೆ, ನಿಧಿ ಕುಂಭಕ್ಕೆ ಚಿನ್ನ ಬೆಳ್ಳಿ ನವರತ್ನಾದಿ ದ್ರವ್ಯಗಳ ಸಮರ್ಪಣೆ ಹಾಗೂ ನಿಧಿ ಕುಂಭ ಪ್ರತಿಷ್ಠೆ ಮಧ್ಯಾಹ್ನ ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ ನಡೆಯಲಿದೆ. ನಿಧಿ ಕುಂಭಕ್ಕೆ ಹಾಕುವ ಶುದ್ಧ ಚಿನ್ನ ಬೆಳ್ಳಿ, ನವರತ್ನಗಳನ್ನು ಭಕ್ತರು ಸಮರ್ಪಿಸಲು ಹಾಗೂ ಮುಷ್ಟಿ ಕಾಣಿಕೆಯನ್ನು ಬ್ರಹ್ಮಕಲಶೋತ್ಸವ ಪರ್ಯಂತ ಸಮರ್ಪಿಸಲು ಕ್ಷೇತ್ರದ ವತಿಯಿಂದ ವ್ಯವಸ್ಥೆ ಮಾಡಲಾಗಿದೆ ಎಂದು ಸಮಿತಿಯ ಪ್ರಕಟಣೆ ತಿಳಿಸಿದೆ.

ನಾಳೆ ವಿದ್ಯುತ್ ವ್ಯತ್ಯಯ

ಮಂಗಳೂರು: ಕದ್ರಿ ಉಪಕೇಂದ್ರದಿಂದ ಹೊರಡುವ ಕದ್ರಿ ಟಾಲ್‌ಗೇಟ್ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ, ಮೇ 8ರಂದು ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ಅಭಿನಂದನ್, ಟಾಲ್‌ಗೇಟ್, ತಾರೆತೋಟ, ನಂತೂರು ಬಸ್‌ಸ್ಟ್ಯಾಂಡ್, ಕರಾವಳಿ ಲೇನ್, ಕೊಚ್ಚಿನ್ ಬೇಕರಿ, ಜೋಗಿಮಠ, ಸರ್ಕ್ಯೂಟ್ ಹೌಸ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ.
ನೆಹರೂ ಮೈದಾನ್ ಉಪಕೇಂದ್ರದಿಂದ ಹೊರಡುವ ಮಾರ್ಕೆಟ್ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ, ಸೆಂಟ್ರಲ್ ಮಾರ್ಕೆಟ್, ಜಿಎಚ್‌ಎಸ್ ರಸ್ತೆ, ಜ್ಯುವೆಲ್ಲರಿ ರೋಡ್, ಮೈದಾನ್ 1ನೇ ಕ್ರಾಸ್, ಪಿವಿಎಸ್ ರಾವ್ ರೋಡ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 8ರಂದು ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಕರ್ನಪಾಡಿ ದೈವಸ್ಥಾನಕ್ಕೆ ಧರ್ಮಸ್ಥಳದ ಸಹಾಯಧನ ಹಸ್ತಾಂತರ

ನಿಡ್ಪಳ್ಳಿ: ನಿಡ್ಪಳ್ಳಿ ಗ್ರಾಮದ ಕರ್ನಪಾಡಿ ಕೊಡಮಣಿತ್ತಾಯ ದೈವಸ್ಥಾನ ನಿರ್ಮಾಣಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಮಂಜೂರಾದ ರೂ.45 ಸಾವಿರ ಮೊತ್ತದ ಚೆಕ್ಕನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಪುತ್ತೂರು ಇದರ ಯೋಜನಾಧಿಕಾರಿ ಶಶಿಧರ್ ಎಂ. ಶ್ರೀ ಬ್ರಹ್ಮ ಬೈದರ್ಕಳ ಗರಡಿ ಸೇವಾ ಸಮಿತಿ ಅಧ್ಯಕ್ಷ ಶಿವಪ್ಪ ಪೂಜಾರಿ ನುಳಿಯಾಲು ಅವರಿಗೆ ಹಸ್ತಾಂತರಿಸಿದರು. ಗರಡಿ ಸೇವಾ ಸಮಿತಿಯ ಅಧ್ಯಕ್ಷ ಶಿವಪ್ಪ ಪೂಜಾರಿ ಶ್ರೀ ಕ್ಷೇತ್ರ ಧರ್ಮಸ್ಥಳದ ಸಹಾಯವನ್ನು ಸ್ವೀಕರಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಗರಡಿ ಸೇವಾ ಸಮಿತಿಯ ಕಾರ್ಯದರ್ಶಿ ಮಾಧವ ಪೂಜಾರಿ ರೆಂಜ, ಸದಸ್ಯರಾದ ತಿಮ್ಮಪ್ಪ ಪೂಜಾರಿ, ರಮೇಶ್ ಪೂಜಾರಿ, ದಯಾನಂದ ಪೂಜಾರಿ, ಸಂಕಪ್ಪ ಪೂಜಾರಿ ನವೀನ್ ತಲೆಪ್ಪಾಡಿ, ಗ್ರಾಮಾಭಿವೃದ್ಧಿ ಯೋಜನೆಯ ನಿಡ್ಪಳ್ಳಿ ಕಾರ್ಯಕ್ಷೇತ್ರದ ಸೇವಾ ಪ್ರತಿನಿಧಿ ಶಾಲಿನಿ ಕೆ. ಉಪಸ್ಥಿತರಿದ್ದರು. ಕೊಡಮಣಿತ್ತಾಯ ದೈವಸ್ಥಾನ ಅಭಿವೃದ್ಧಿ ಸಮಿತಿ ಕಾರ್ಯದರ್ಶಿ ರಾಧಾಕೃಷ್ಣ ಆರ್. ಕೋಡಿ ಸ್ವಾಗತಿಸಿ, ವಂದಿಸಿದರು.

ಬೇಸಿಗೆ ಶಿಬಿರ ಸಂಪನ್ನ

ಕುಂದಾಪುರ: ಮಕ್ಕಳ ಜ್ಞಾನ ವಿಸ್ತಾರವಾಗಲು ಶಾಲಾ ಪಠ್ಯ ಪುಸ್ತಕಗಳ ಅಧ್ಯಯನಕ್ಕೆ ಹೊರತಾದ ಚಟುವಟಿಕೆಗಳು ಸಹಕಾರಿ. ಅಂತಹ ಚಟುವಟಿಕೆಗಳ ಕೇಂದ್ರೀಕೃತ ವ್ಯವಸ್ಥೆ ಬೇಸಿಗೆ ಶಿಬಿರಗಳಲ್ಲಿ ನಡೆಯುತ್ತವೆ. ಕಳೆದ 20 ವರ್ಷಗಳಿಂದ ಕೆನರಾ ಕಿಡ್ ಸಂಸ್ಥೆ ನಡೆಸುತ್ತಿರುವ ಬೇಸಿಗೆ ಶಿಬಿರಗಳಿಂದ ಈ ಭಾಗದ ಬಹುತೇಕ ಮಕ್ಕಳ ವ್ಯಕ್ತಿತ್ವ ವಿಕಸನವಾಗಿರುವುದನ್ನು ಸಮಾಜ ಗುರುತಿಸಿದೆ ಎಂದು ಸಮಾಜ ಸೇವಕ, ಕೈಗಾರಿಕೋದ್ಯಮಿ ಸುರೇಶ್ ಬೆಟ್ಟಿನ್ ಹೇಳಿದರು. ಕೋಟೇಶ್ವರದ ಬೀಜಾಡಿಯ ಕೆನರಾ ಕಿಡ್ಸ್ ಸಂಸ್ಥೆ ಹಮ್ಮಿಕೊಂಡಿದ್ದ ಬೇಸಿಗೆ ಶಿಬಿರದ ಸಮಾರೋಪದಲ್ಲಿ ಮಾತನಾಡಿದರು. ಮುಖ್ಯ ಅತಿಥಿಯಾಗಿದ್ದ ಉಪನ್ಯಾಸಕಿ ಜಯಶೀಲ ಕಾಮತ್ ಭಾಗವಹಿಸಿದರು. ಮಕ್ಕಳಿಂದ ವಿವಿಧ ಮನರಂಜನಾ ಕಾರ್ಯಕ್ರಮಗಳು ನಡೆದವು. ಶಾಲಾ ಶಿಕ್ಷಕಿ ಸುಜಾತ ಶೆಟ್ಟಿ, ಶೋಭಾ ಐತಾಳ್, ಮನಿಷಾ, ಲತಾ, ಮಲ್ಲಿಕಾ, ಕಲಾವತಿ, ದ್ರಾಕ್ಷಾಯಿಣಿ, ಜ್ಯೋತಿ, ರಾಜೀವಿ ವಿವಿಧ ಚಟುವಟಿಕೆಗಳನ್ನು ನಿರ್ವಹಿಸಿದರು. ಕರಾಟೆ ಶಿಕ್ಷಕ ನಟರಾಜ್ ಮತ್ತು ನೃತ್ಯ ಸಂಯೋಜಕ ಆಕಾಶ್, ಸಂಗೀತ ನಿರ್ದೇಶಕ ರವಿ ಬನ್ನಾಡಿ ತಂಡ ಮನೋರಂಜನಾ ಕಾರ್ಯಕ್ರಮ ನೀಡಿದರು.

ಲಾರಿ ಡಿಕ್ಕಿ: ಬೈಕ್ ಸವಾರ ಸಾವು

ಕುಂದಾಪುರ: ಉಡುಪಿ ಕಡೆಯಿಂದ ಕುಂದಾಪುರದ ಕಡೆಗೆ ಹೋಗುತ್ತಿದ್ದ ಲಾರಿಯೊಂದು ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಕುಂದಾಪುರದ ಬೀಜಾಡಿ ಜಂಕ್ಷನ್ ಬಳಿ ಮುಂದಕ್ಕೆ ಬರುತ್ತಿದ್ದ ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಪರಸಪ್ಪ ಚಂದಪ್ಪ ಲಮಾಣಿ (57) ಅವರು ಗಂಭೀರವಾಗಿ ಗಾಯಗೊಂಡಿದ್ದು, ಗಾಯಾಳುವನ್ನು ಸ್ಥಳೀಯರು ಚಿಕಿತ್ಸೆಗೆ ಕುಂದಾಪುರ ತಾಲೂಕು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಲ್ಲಿ ವೈದ್ಯರು ಪರೀಕ್ಷಿಸಿ ಪರಸಪ್ಪ ಚಂದಪ್ಪ ಲಮಾಣಿ ಅದಾಗಲೇ ಮೃತಪಟ್ಟಿರುವುದಾಗಿ ದೃಢಪಡಿಸಿದ್ದಾರೆ. ಕುಂದಾಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪುತ್ತೂರು ವಿವೇಕಾನಂದ ಕಾಲೇಜಿನಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣ | ಪ್ರೊ. ಗೋಪ ಕುಮಾರ್ ಸಲಹೆ

ಅಭಿವೃದ್ಧಿಗಾಗಿ ಯುವಜನತೆ ವಿಕಸಿತ ಭಾರತದ ಭಾಗವಾಗಲಿ



ಪುತ್ತೂರು: ಇಂದಿನ ಯುವಜನತೆಯು ಭಾರತದ ಭದ್ರ ಭವಿಷ್ಯದತ್ತ ಗಮನಹರಿಸಬೇಕಾದುದು ಅತೀ ಅಗತ್ಯ. ಭಾರತದ ಒಟ್ಟು ಜನಸಂಖ್ಯೆಯನ್ನು ಗಮನಿಸುವುದಾದರೆ ನಮ್ಮ ಪೀಳಿಗೆಯೇ ಶೇ.50ರಷ್ಟಿದ್ದಾರೆ. ಭಾರತದ ಐತಿಹಾಸಿಕ ಹಿನ್ನೆಲೆಯನ್ನು ನಾವು ಎಂದಿಗೂ ಮರೆಯಬಾರದು. 5000 ವರ್ಷಗಳಷ್ಟು ಸುದೀರ್ಘ ಅಸ್ತಿತ್ವದ ಕುರಿತು ನಾವು ಹೆಮ್ಮೆ ಪಡಬೇಕು. ನಾವು ಶಿಕ್ಷಣಕ್ಕೂ ಹೆಚ್ಚಿನ ಮಹತ್ವ ನೀಡಬೇಕು. ಈ ಮೂಲಕ ದೇಶದ ಸಮಗ್ರ ಅಭಿವೃದ್ಧಿಯಲ್ಲಿ ಪಾಲ್ಗೊಂಡು ಆ ಮೂಲಕ ವಿಕಸಿತ ಭಾರತದ ಭಾಗವಾಗಬೇಕು ಎಂದು ಕೇರಳದ ಕೇಂದ್ರೀಯ ವಿಶ್ವವಿದ್ಯಾಲಯದ ವಿಶ್ರಾಂತ ಉಪಕುಲಪತಿ ಪ್ರೊ. ಗೋಪ ಕುಮಾರ್ ಹೇಳಿದರು.
ನಗರದ ವಿವೇಕಾನಂದ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ(ಸ್ವಾಯತ್ತ) ರಾಜ್ಯಶಾಸ್ತ್ರ ವಿಭಾಗ, ವಿವೇಕಾನಂದ ಸಂಶೋಧನಾ ಕೇಂದ್ರ, ಐಕ್ಯೂಎಸಿ ಸಂಘ ಹಾಗೂ ಮಾನವಿಕ ವಿಭಾಗಗಳ ಸಹಯೋಗದಲ್ಲಿ 'ರಿ ಇಮ್ಯಾಜಿನಿಂಗ್ ಇಂಡಿಯಾ: ಫ್ರಮ್ ಪೊಲಿಟಿಕಲ್ ಡಿಸ್‌ಕೋರ್ಸ್ ಟು ಕನ್ ಟೆಪರಿರಿ ರಿಯಾಲಿಟಿಸ್' ಎನ್ನುವ ವಿಚಾರದ ಮೇಲೆ ನಡೆದ ರಾಷ್ಟ್ರೀಯ ವಿಚಾರ ಸಂಕಿರಣ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.
ಅಧ್ಯಕ್ಷತೆ ವಹಿಸಿದ್ದ ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಕಲ್ಲಡ್ಕ ಪ್ರಭಾಕರ ಭಟ್, ಭಾರತ ಧರ್ಮ, ಸಂಸ್ಕೃತಿಗೆ ಹೆಸರುವಾಸಿಯಾದ ದೇಶ. ಧರ್ಮದ ಆಧಾರದಲ್ಲಿಯೇ ನಾವು ನಡೆಯಬೇಕು. ನಮ್ಮ ದೇಶಕ್ಕೆ ಅಬ್ದುಲ್ ಕಲಾಂ, ಚಿದಂಬರಂ ಮೊದಲಾದ ವಿಜ್ಞಾನಿಗಳ ಕೊಡುಗೆ ಅಪಾರ. ದೇಶ ಕೇವಲ ಒಬ್ಬರಿಗೆ ಸೇರಿದ್ದಲ್ಲ, ಎಲ್ಲರೂ ರಾಷ್ಟ್ರ ಕಾರ್ಯದಲ್ಲಿ ಭಾಗಿಗಳಾದಾಗ ನಿಜವಾದ ಪ್ರಜಾಪ್ರಭುತ್ವ ರಾಷ್ಟ್ರವಾಗಲು ಸಾಧ್ಯ ಎಂದರು.
ವೇದಿಕೆಯಲ್ಲಿ ಕಾಲೇಜಿನ ಆಡಳಿತ ಮಂಡಳಿಯ ಸಂಚಾಲಕ ಮುರಳಿಕೃಷ್ಣ ಕೆ.ಎನ್., ಸ್ನಾತಕೋತ್ತರ ವಿಭಾಗದ ಡೀನ್ ಹಾಗೂ ರಾಷ್ಟ್ರೀಯ ವಿಚಾರ ಸಂಕಿರಣದ ಸಂಯೋಜಕಿ ಡಾ. ವಿಜಯ ಸರಸ್ವತಿ ಬಿ. ಉಪಸ್ಥಿತರಿದ್ದರು. ಕಾಲೇಜಿನ ಪ್ರಾಂಶುಪಾಲ ಪ್ರೊ. ಶ್ರೀಕೃಷ್ಣ ಗಣರಾಜ್ ಭಟ್ ಸ್ವಾಗತಿಸಿ, ರಾಜ್ಯಶಾಸ್ತ್ರ ವಿಭಾಗ ಮುಖ್ಯಸ್ಥೆ ಹಾಗೂ ರಾಷ್ಟ್ರೀಯ ವಿಚಾರ ಸಂಕಿರಣದ ಸಂಯೋಜಕಿ ಅನಿತಾ ಕಾಮತ್ ವಂದಿಸಿದರು. ಇಂಗ್ಲಿಷ್ ವಿಭಾಗದ ಉಪನ್ಯಾಸಕಿ ಡಾ. ನಿಶಿತಾ ಪುತ್ತೂರು ಹಾಗೂ ಕನ್ನಡ ವಿಭಾಗ ಉಪನ್ಯಾಸಕ ಮಧುಕುಮಾರ್ ನಿರ್ವಹಿಸಿದರು.
ಸಭೆಯ ನಂತರ ನಡೆದ ವಿವಿಧ ವಿಚಾರಗಳ ಕುರಿತ ವಿಚಾರ ಸಂಕಿರಣದಲ್ಲಿ ಹೊಸದಿಲ್ಲಿಯ ಜವಹಾರ್ ಲಾಲ್ ನೆಹರೂ ವಿವಿಯ ಪ್ರೊ. ಡಾ.ಅಂಶು ಜೋಷಿ, ಪಾಂಡಿಚೇರಿ ವಿವಿ ರಾಜ್ಯಶಾಸ್ತ್ರ ವಿಭಾಗದ ಅಸೋಸಿಯೇಟ್ ಪ್ರೊಫೆಸರ್ ಡಾ. ನಂದ ಕಿಶೋರ್ ಎಂ.ಎಸ್., ಹೊಸದಿಲ್ಲಿಯ ಸೆಂಟರ್ ಫಾರ್ ಮೆರಿಟೈಂ ಎಕಾನಮಿ ಹಾಗೂ ಆರ್‌ಐಎಸ್, ಎಂಇಎ ಇದರ ಕನ್ಸಲ್ಟೆಂಟ್ ಡಾ. ಜಸ್ವಂತ್ ಸಿಂಗ್ ಕೈನ್ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಸಮನ್ವಯಕಾರರಾಗಿ ಮಾಜಿ ವಿಧಾನಸಭಾ ಸದಸ್ಯ ಕ್ಯಾ. ಗಣೇಶ್ ಕಾರ್ಣಿಕ್ ಭಾಗವಹಿಸಿದರು. ವಿಚಾರ ಸಂಕಿರಣದ ಸಾರಾಂಶ ಪುಸ್ತಕ ಬಿಡುಗಡೆಗೊಳಿಸಲಾಯಿತು.

ಸಮಾರೋಪ ಸಮಾರಂಭ

ಉನ್ನತ ಶಿಕ್ಷಣದತ್ತ ಒಲವು ಹೆಚ್ಚಾದಂತೆ ಉದ್ಯೋಗದ ಕೊರತೆಯೂ ಹೆಚ್ಚಾಗುತ್ತಿದೆ. ನಾವು ನಮ್ಮ ಯೋಚನಾ ಶೈಲಿಯನ್ನು ಬದಲಾಯಿಸಿಕೊಂಡು, ಋಣಾತ್ಮಕ ಆಲೋಚನೆಯನ್ನು ತೊಡೆದು ಹಾಕಬೇಕು ಎಂದು ಮಾಜಿ ವಿಧಾನ ಪರಿಷತ್ ಸದಸ್ಯ ಕ್ಯಾ. ಗಣೇಶ್ ಕಾರ್ಣಿಕ್ ಹೇಳಿದರು.
ಅಧ್ಯಕ್ಷತೆ ವಹಿಸಿದ್ದ ವಿವೇಕಾನಂದ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ.ಕೆ.ಎಂ. ಕೃಷ್ಣ ಭಟ್, ಭಾರತ ಬದಲಾವಣೆಗೊಂಡು ಯಾವ ರೀತಿ ಮುಂದುವರೆಯಬೇಕು ಎಂದು ಯೋಚಿಸುವುದು ಅಗತ್ಯ. ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಉನ್ನತ ರೀತಿಯಲ್ಲಿ ಅಭಿವೃದ್ಧಿಗೊಂಡಾಗ ಮಾತ್ರ ಜಗತ್ತಿನ ಅತ್ಯಂತ ಪ್ರಬಲ ರಾಷ್ಟ್ರಗಳ ಸಾಲಿನಲ್ಲಿ ಭಾರತ ಗುರುತಿಸಿಕೊಳ್ಳಲು ಸಾಧ್ಯ ಎಂದು ಹೇಳಿದರು.
ವೇದಿಕೆಯಲ್ಲಿ ಕಾಲೇಜ್ ಆಡಳಿತ ಮಂಡಳಿಯ ಅಧ್ಯಕ್ಷ ಡಾ. ಶ್ರೀಪತಿ ಕಲ್ಲೂರಾಯ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಸಮಾಜಶಾಸ್ತ್ರ ವಿಭಾಗ ಮುಖ್ಯಸ್ಥೆ ಡಾ. ವಿದ್ಯಾ ಎಸ್. ಸ್ವಾಗತಿಸಿ, ರಾಜ್ಯಶಾಸ್ತ್ರ ವಿಭಾಗದ ಉಪನ್ಯಾಸಕಿ ಡಾ. ಕವಿತಾ ಬಿ. ವಂದಿಸಿದರು.

ತೆಕ್ಕಟ್ಟೆಯಲ್ಲಿ 'ರಜಾರಂಗು-26' ವಿಶೇಷ ಕಾರ್ಯಾಗಾರ ಉದ್ಘಾಟನೆ



ಕೋಟ: ಸಾಂಸ್ಕೃತಿಕ ಕಾರ್ಯಕ್ರಮಗಳು ಸಮಾಜದ ಮುಖ್ಯ ಭಾಗ. ಕರ್ನಾಟಕದ ಸಾಂಸ್ಕೃತಿಕ ಕಲೆಗಳು ವಿಶ್ವವ್ಯಾಪಿಯಾಗಿದೆ. ಇಂತಹ ಕಲೆಗಳಿಂದ ಗ್ರಾಮ ಪಂಚಾಯತ್ ಹೊರತಲ್ಲ. ಈ ಕಲೆಗಳ ಬಗೆಗೆ ಅರಿವನ್ನು ಮೂಡಿಸುವ ಕಾರ್ಯಕ್ಕೆ ಪಂಚಾಯತ್‌ನ ಪೂರ್ಣ ಬೆಂಬಲವಿರುತ್ತದೆ ಎಂದು ಕಾರ್ಯಕ್ರಮವನ್ನು ಉದ್ಘಾಟಿಸಿದ ತೆಕ್ಕಟ್ಟೆ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಸಂತೋಷ್ ಕುಮಾರ್ ಮಾತನ್ನಾಡಿದರು.
ತೆಕ್ಕಟ್ಟೆ ಗ್ರಾಮ ಪಂಚಾಯತ್‌ನ ಅರಿವು ಕೇಂದ್ರದ ಸಹಕಾರದಲ್ಲಿ ಯಶಸ್ವಿ ಕಲಾವೃಂದ ಕೊಮೆ ತೆಕ್ಕಟ್ಟೆ ಆಯೋಜಿಸಿದ ತೆಕ್ಕಟ್ಟೆ ಆಚಾರ್ಯ ಸಹೋದರರ ಪರಿಸರದ ಮಡಿಲಲ್ಲಿ 'ರಜಾರಂಗು-26' ವಿಶೇಷ ಕಾರ್ಯಾಗಾರ ಕಾರ್ಯಕ್ರಮವನ್ನು ಮಂಗಳವಾರ ದೀಪ ಬೆಳಗಿಸಿ ಉದ್ಘಾಟಿಸಿ ಮಾತನ್ನಾಡಿದರು.
ಹೆರಿಯ ಮಾಸ್ಟರ್ ಪ್ರಾಸ್ತಾವಿಕ ಮಾತನ್ನಾಡಿ, ನಿರಂತರವಾಗಿ ಕಾರ್ಯಕ್ರಮವನ್ನು ಮಕ್ಕಳಿಗಾಗಿಯೇ ಮಾಡುತ್ತಿರುವಂತಹ ಈ ಭಾಗದ ಏಕೈಕ ಸಂಸ್ಥೆ ಯಶಸ್ವಿ ಕಲಾವೃಂದ. ಇಂತಹ ಸಂಸ್ಥೆಗಳಿಗೆ ಸ್ಥಳೀಯವಾಗಿ ಬೆಂಬಲಿಸುವ ಸಂಸ್ಥೆಗಳು ವಿರಳ. ಇಂತಹ ಸಂಸ್ಥೆಗಳನ್ನು ಪೋಷಿಸಿ ಉಳಿಸುವುದು ಸಮಾಜದ ಪ್ರಜ್ಞಾವಂತ ನಾಗರಿಕರ ಜವಾಬ್ದಾರಿಯಾಗಿದೆ ಎಂದರು.
ಶಿಬಿರದ ನಿರ್ದೇಶಕ ರೋಹಿತ್ ತೀರ್ಥಹಳ್ಳಿ, ತೆಕ್ಕಟ್ಟೆ ಗ್ರಂಥಾಲಯದ ಅಧಿಕಾರಿ ಆಶಾ ಪೂಜಾರಿ ಉಪಸ್ಥಿತರಿದ್ದರು.
ಹರ್ಷಿತ ಅಮೀನ್ ಸ್ವಾಗತಿಸಿದರು. ಪರಿಣಿತ ವೈದ್ಯ ಧನ್ಯವಾದಗೈದರು. ಪವನ್ ಆಚಾರ್ ಕುಂದಾಪುರ ಕಾರ್ಯಕ್ರಮ ನಿರ್ವಹಣೆ ಮಾಡಿದರು.

ಪಂಚರಾಜ್ಯ ಚುನಾವಣೆ: ಮುಡಿಪು ಕಂಬಳಪದವಿನಲ್ಲಿ ಬಿಜೆಪಿ ವಿಜಯೋತ್ಸವ



ಕೊಣಾಜೆ: ಭಾರತೀಯ ಜನತಾ ಪಾರ್ಟಿ ಮಂಗಳೂರು ಮಂಡಲದ ವತಿಯಿಂದ ಪಂಚ ರಾಜ್ಯ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ, ಅಸ್ಸಾಂ ಹಾಗೂ ಪುದುಚೇರಿಯಲ್ಲಿ ಬಿಜೆಪಿ ಪಕ್ಷವು ಪ್ರಚಂಡ ಬಹುಮತದಿಂದ ಜಯ ಭಾರಿಸಿದ ಪ್ರಯುಕ್ತ ಕಂಬ್ಳಪದವಿನ ಶ್ರೀ ದುರ್ಗಾಕಾಳಿ ದೇವಸ್ಥಾನದ ವಠಾರದಲ್ಲಿ ಬಿಜೆಪಿ ಮಂಗಳೂರು ಮಂಡಲ ಅಧ್ಯಕ್ಷ ಜಗದೀಶ್ ಆಳ್ವಕುವೆತ್ತಬೈಲ್ ಅಧ್ಯಕ್ಷತೆಯಲ್ಲಿ ವಿಜಯೋತ್ಸವ ಆಚರಿಸಲಾಯಿತು.
ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಮಾತನಾಡಿದರು.
ಮಂಡಲ ಪ್ರಭಾರಿ, ಜಿಲ್ಲಾ ಉಪಾಧ್ಯಕ್ಷೆ ಪೂಜಾ ಪೈ, ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಮೋಹನ್ ರಾಜ್ ಕೆ.ಆರ್., ದಯಾನಂದ ತೊಕ್ಕೊಟ್ಟು, ಆತ್ಮ ನಿರ್ಭರ ಭಾರತ್ ಜಿಲ್ಲಾ ಸಂಯೋಜಕಿ ಜಯಶ್ರೀ ಕರ್ಕೇರ, ಮಂಡಲ ಉಪಾಧ್ಯಕ್ಷರಾದ ಸುಮನ ಹರೀಶ್ ಶೆಟ್ಟಿ, ಯಶವಂತ್ ದೇರಾಜೆ, ಹುಕ್ರಪ್ಪ ನಾಯ್ಕ ಮಂಡಲ ಕಾರ್ಯದರ್ಶಿ ಗಳಾದ ಕಿಶೋರ್ ಕುತ್ತಾರ್, ಸುರೇಖಾ ಮುನ್ನೂರು, ಮಂಡಲ ಕಾರ್ಯಾಲಯ ಕಾರ್ಯದರ್ಶಿ ಸುಜಾತಾ ಬಿ. ಶೆಟ್ಟಿ, ಜಿಲ್ಲಾ ಮಾಧ್ಯಮ ಪ್ರಮುಖರಾದ ಹೇಮಂತ್ ಶೆಟ್ಟಿ ದೇರಳಕಟ್ಟೆ, ಅಲ್ಪಸಂಖ್ಯಾತ ಮೋರ್ಚಾ ರಾಜ್ಯ ಕಾರ್ಯಕಾರಣಿ ಸದಸ್ಯರಾದ ಸಿರಾಜುದ್ದೀನ್ ಮುಡಿಪು, ಜಿಲ್ಲಾ ಅಲ್ಪಸಂಖ್ಯಾತ ಮೋರ್ಚಾ ಉಪಾಧ್ಯಕ್ಷ ಸಿದ್ದಿಕ್ ತಲಪಾಡಿ, ಮಂಡಲ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷರಾದ ಗಣೇಶ್ ಸುವರ್ಣ ತುಂಬೆ, ಮಂಡಲ ರೈತ ಮೋರ್ಚಾ ಅಧ್ಯಕ್ಷಪದ್ಮನಾಭ ಗಟ್ಟಿ ಮಂಡಲ ಯುವಮೋರ್ಚಾ ಅಧ್ಯಕ್ಷ ಮುರಳಿಧರ ಕೊಣಾಜೆ, ಪ್ರಧಾನ ಕಾರ್ಯದರ್ಶಿ ಶರಣ್ ಶೆಟ್ಟಿ, ಸೋಮೇಶ್ವರ ಮಹಾ ಶಕ್ತಿಕೇಂದ್ರ ಅಧ್ಯಕ್ಷರಾದ ಪುರುಷೋತ್ತಮ ಗಟ್ಟಿ ಮಂಜನಾಡಿ ಮಹಾಶಕ್ತಿ ಕೇಂದ್ರ ಅಧ್ಯಕ್ಷರಾದ ನಿತ್ಯಾನಂದ ಭಂಡಾರಿ, ಸೋಮೇಶ್ವರ ಮಹಾ ಶಕ್ತಿಕೇಂದ್ರ ಪ್ರಧಾನ ಕಾರ್ಯದರ್ಶಿ ಅರುಣ್ ಬೀರಿ, ಶಿಕ್ಷಕರ ಪ್ರಕೋಷ್ಠದ ಜಿಲ್ಲಾ ಸಂಚಾಲಕರಾದ ವಸಂತ ಕೋಡಿ, ವೃತ್ತಿಪರ ಪ್ರಕೋಷ್ಠದ ಜಿಲ್ಲಾ ಸಹಸಂಚಾಲಕರಾದ ಸುಕೇಶ್ ಭಂಡಾರಿ, ಪ್ರಮುಖರಾದ ಹರೀಶ್ ಕುಂಪಲ, ಶಕ್ತಿ ಕೇಂದ್ರ ಪ್ರಮುಖರಾದ ನಿತಿನ್ ಪೂಜಾರಿ, ಶರತ್ ಶೆಟ್ಟಿ, ದಾಮೋದರ ಆಚಾರ್ಯ, ರವಿಶಂಕರ್ ಭಟ್, ಪಾರ್ಥ ಸಾರಥಿ ಕಿನ್ಯ ಮತ್ತಿತರರು ಇದ್ದರು

ಪೆರುವಾಜೆ ಕಾಲೇಜಿನಲ್ಲಿ ಮಹಿಳಾ, ಮಕ್ಕಳ ದೌರ್ಜನ್ಯ-ಸುರಕ್ಷತೆ ಜಾಗೃತಿ



ಸುಳ್ಯ: ಬೆಳ್ಳಾರೆ-ಪೆರುವಾಜೆಯ ಡಾ.ಕೆ. ಶಿವರಾಮ ಕಾರಂತ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಹಿಳಾ ಕೋಶ, ಆಂತರಿಕ ಗುಣಮಟ್ಟ ಭರವಸಾ ಕೋಶ ಹಾಗೂ ದ.ಕ. ಜಿಲ್ಲಾ ಅಕ್ಕ ಪಡೆ ಸಹಭಾಗಿತ್ವದಲ್ಲಿ ಮಹಿಳಾ ಮತ್ತು ಮಕ್ಕಳ ದೌರ್ಜನ್ಯ ಹಾಗೂ ಸುರಕ್ಷತೆಯ ಕುರಿತು ಜಾಗೃತಿ ಕಾರ್ಯಕ್ರಮ ಸೋಮವಾರ ನಡೆಯಿತು.
ಬೆಳ್ಳಾರೆ ಪೊಲೀಸ್ ಠಾಣೆಯ ಮಹಿಳಾ ಪೊಲೀಸ್ ಪೇದೆ ಪೂಜಾ, ದಕ್ಷಿಣ ಕನ್ನಡ ಅಕ್ಕ ಪಡೆ ತಂಡದ ಸಿಬ್ಬಂದಿ ನವ್ಯ ಹಾಗೂ ರೇವತಿ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ, ಮಹಿಳೆಯರ ಮೇಲೆ ನಡೆಯುವ ವಿವಿಧ ರೀತಿಯ ದೌರ್ಜನ್ಯಗಳು, ಸೈಬರ್ ವಂಚನೆಗಳು ಅವುಗಳಿಗೆ ಸಂಬಂಧಿಸಿದ ಕಾನೂನುಗಳು, ಮಹಿಳಾ ಸಹಾಯವಾಣಿ ಮತ್ತು ಮಹಿಳೆಯರು ಪಡೆಯಬಹುದಾದ ರಕ್ಷಣಾ ಕ್ರಮಗಳ ಕುರಿತು ಮತ್ತು ಸಾಮಾಜಿಕ ಜಾಲತಾಣಗಳ ಸುರಕ್ಷಿತ ಬಳಕೆಯ ಕುರಿತು ಮಾಹಿತಿ ನೀಡಿದರು.
ಪ್ರಾಂಶುಪಾಲ ಡಾ. ಬಾಲಸುಬ್ರಹ್ಮಣ್ಯ ಪಿ.ಎಸ್. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಮಹಿಳಾ ಕೋಶದ ವಿದ್ಯಾರ್ಥಿನಿ ಪ್ರತಿನಿಧಿಗಳಾದ ಶ್ರೇಯಾ, ಅನ್ವಿತಾ ಉಪಸ್ಥಿತರಿದ್ದರು. ಮಹಿಳಾ ಕೋಶದ ಸಂಯೋಜಕ ಶಾಲಿನಿ ಆರ್. ಸ್ವಾಗತಿಸಿದರು.

ನವಜೀವನ ಸಮಿತಿ ಸದಸ್ಯರ ಸಂದರ್ಶನ



ಬಂಟ್ವಾಳ: ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ವತಿಯಿಂದ ನಡೆಯುತ್ತಿರುವ ಮದ್ಯವರ್ಜನ ಶಿಬಿರಗಳಲ್ಲಿ ಪಾನಮುಕ್ತರಾದ ನವಜೀವನ ಸಮಿತಿ ಸದಸ್ಯರ ಸಂದರ್ಶನ ಕಾಯಕ್ರಮವನ್ನು ಹೈದರಾಬಾದಿನ ಇಂಡಿಯನ್ ಸ್ಕೂಲ್ ಆಫ್ ಬುಸಿನೆಸ್ ಸಂಸ್ಥೆಯವರು ಮಂಗಳವಾರ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಂಟ್ವಾಳ ಇದರ ಯೋಜನಾ ಕಚೇರಿಯ ಉನ್ನತಿ ಸೌಧದಲ್ಲಿ ನಡೆಯಿತು.
ಐಎಸ್‌ಬಿ ಸಂಶೋಧನಾ ಸಂಸ್ಥೆಯ ಸಹ ನಿರ್ದೇಶಕ ಆನಂದ್ ಎಸ್. ದೀಪ ಬೆಳಗಿಸಿದರು. ಜನಜಾಗೃತಿ ವೇದಿಕೆ ರಾಜ್ಯ ಕಾರ್ಯದರ್ಶಿ ಪ್ರಾದೇಶಿಕ ನಿರ್ದೇಶಕ ವಿವೇಕ್ ವಿ. ಪಾಯಸ್ ಮಾರ್ಗದರ್ಶನ ನೀಡಿದರು. ಐಎಸ್‌ಬಿ ಸಂಸ್ಥೆ ಚಂದ್ರಕಲಾ, ಸಿದ್ಧಾರ್ಥ್, ಅರ್ಜುನ್, ಅಖಿಲ್, ಎಂಐಎಸ್ ಯೋಜನಾಧಿಕಾರಿ ಪ್ರೇಮನಾಥ್, ಕೇಂದ್ರ ಕಚೇರಿ ಯೋಜನಾಧಿಕಾರಿ ನಿಖಿಲೇಶ್ ಮಹೇಶ್, ಜನಜಾಗೃತಿ ಮೇಲ್ವಿಚಾರಕ ನಿತೇಶ್ ಕೆ. ಇದ್ದರು.

ಮುಡಿಪು: ಯೆನೆಪೋಯದಿಂದ ಐದು ದಿನಗಳ ಪ್ರಕೃತಿ ಚಿಕಿತ್ಸಾ ಶಿಬಿರ



ಮುಡಿಪು: ಯೆನೆಪೋಯ ನೇಚುರೋಪತಿ ಮತ್ತು ಯೋಗಿಕ್ ಸೈನ್ಸ್ ಕಾಲೇಜು ಆಸ್ಪತ್ರೆ ಎನರ್ಜಿ ಮೆಡಿಸಿನ್, ಆಕ್ಯುಪಂಕ್ಚರ್ ವಿಭಾಗ ಮತ್ತು ಜನ ಶಿಕ್ಷಣ ಟ್ರಸ್ಟ್ ಸಹಯೋಗದಲ್ಲಿ 5 ದಿನಗಳ ಉಚಿತ ಪ್ರಕೃತಿ ಚಿಕಿತ್ಸಾ ಶಿಬಿರ ಮುಡಿಪು ಸರ್ವೋದಯ ಮಂಟಪದಲ್ಲಿ ಆರಂಭವಾಗಿದೆ.
ಮೇ 5ರಿಂದ 9ರ ವರೇಗೆ ಬೆಳಿಗ್ಗೆ 9.30 ರಿಂದ 12.30ರ ತನಕ ನಡೆಯುವ ಈ ಶಿಬಿರದಲ್ಲಿ ಸುಸ್ಥಿರ ಆರೋಗ್ಯ ಜಾಗೃತಿಯೊಂದಿಗೆ ಪ್ರಕೃತಿ ಚಿಕಿತ್ಸಾ ಪದ್ಧತಿಗಳ ಅರಿವು ಮೂಡಿಸಿ ಆಕ್ಯುಪಂಕ್ಚರ್, ಆಕ್ಯುಪ್ರೆಷರ್, ಆಯಿಲ್ ಕಪ್ಪಿಂಗ್ ಚಿಕಿತ್ಸೆ ಜೀವನ ಶೈಲಿ ಮಾರ್ಗದರ್ಶನ, ಆರೋಗ್ಯ ಕರ ಆಹಾರ ನಿಯಮ, ಸರಳ ಯೋಗಾಭ್ಯಾಸಗಳ ಮೂಲಕ ಸ್ನಾಯು ನೋವು, ಸಂಧಿ ನೋವು, ಜೀರ್ಣ ಕ್ರಿಯೆ, ಋತು ಶ್ರಾವ ಸಂಬಂಧಿಸಿದ ಸಮಸ್ಯೆ ಅಧಿಕ ರಕ್ತದೊತ್ತಡ, ಮಧು ಮೇಹ, ಪಾರ್ಶ್ವವಾಯು, ಮೈಗ್ರೇನ್ – ಸೈನಸೈಟಿಸ್, ನಿದ್ರಾಹೀನತೆ ಇತ್ಯಾದಿ ಸಮಸ್ಯೆಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಶಿಬಿರವನ್ನು ಜನ ಜೀವನ ಬಾಳೆಪುಣಿ ಅಧ್ಯಕ್ಷ ರಾಧಾಕೃಷ್ಣ ರೈ ಉಮಿಯ ಉದ್ಘಾಟಿಸಿ ಉಚಿತ ಆರೋಗ್ಯ ಸೇವೆ ನೀಡಲು ಮುಂದಾದ ಸಂಘಟಕರನ್ನು ಅಭಿನಂದಿಸಿದರು. ಯಾವುದೇ ಅಡ್ಡ ಪರಿಣಾಮಗಳಿಲ್ಲದ ಪ್ರಕೃತಿ ಚಿಕಿತ್ಸಾ ಶಿಬಿರದ ಸದುಪಯೋಗವನ್ನು ಸಾರ್ವಜನಿಕರು ಪಡೆದು ಕೊಳ್ಳುವಂತೆ ನರೇಗಾ ಮಾಜಿ ಒಂಬುಡ್ಸ್‌ಮೆನ್ ಶೀನ ಶೆಟ್ಟಿ ತಿಳಿಸಿದರು.
ಶಿಬಿರದ ಸಂಯೋಜನಾಧಿಕಾರಿ ಡಾ. ಪದ್ಮಶ್ರೀ, ವೈದ್ಯಾಧಿಕಾರಿಗಳಾದ ಡಾ.ಅಭಿಜ್ಞಾ, ಡಾ.ಪ್ರತೀಕ್ಷಾ ವೈದ್ಯ ವಿದ್ಯಾರ್ಥಿಗಳ ಸಹಕಾರದೊಂದಿಗೆ ಶಿಬಿರವನ್ನು ನಿರ್ವಹಿಸುತ್ತಿದ್ದಾರೆ. ಅಬ್ದುಲ್ ರಝಾಕ್, ಗಫೂರ್ ಟ್ರಸ್ಟ್ ನಿರ್ದೇಶಕರು, ಸಂಯೋಜಕರು, ಶಿಕ್ಷಕಿಯರು ಸಹಕರಿಸುತ್ತಿದ್ದಾರೆ.

ಕೋಟ ಗ್ರಾಮ ಪಂಚಾಯತ್‌ನಲ್ಲಿ ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರ ಉದ್ಘಾಟನೆ



ಕೋಟ: ಬೇಸಿಗೆ ಶಿಬಿರಗಳು ಗ್ರಾಮೀಣ ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಪೂರಕ ಎಂದು ಕೋಟದ ಮಣೂರು ಗೀತಾನಂದ ಫೌಂಡೇಶನ್ ಪ್ರವರ್ತಕ ಆನಂದ್ ಸಿ. ಕುಂದರ್ ಹೇಳಿದರು.
ಮಂಗಳವಾರ ಕೋಟ ಪಂಚಾಯತ್ ಸಭಾಂಗಣದಲ್ಲಿ ಕೋಟ ಪಂಚಾಯತ್, ಅರಿವು ಕೇಂದ್ರ ಡಿಜಿಟಲ್ ಗ್ರಂಥಾಲಯ ಮಾಹಿತಿ ಕೇಂದ್ರ ಕೋಟ, ಪಂಚವರ್ಣ ಸಂಘಟನೆ ಕೋಟ, ಇಂಡಿಕಾ ಕಲಾ ಬಳಗ ಪಡುಕರೆ, ಪ್ರಕೃತಿ ಸಂಜೀವಿ ಒಕ್ಕೂಟ ಆಶ್ರಯದಲ್ಲಿ ಐದು ದಿನಗಳ ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.
ಮಕ್ಕಳಲ್ಲಿ ಹುದುಗಿರುವ ಪ್ರತಿಭೆಗಳಿಗೆ ಶಿಬಿರಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲಿದೆ. ಇಂತಹ ಶಿಬಿರಗಳಲ್ಲಿ ಹೆಚ್ಚು ಹೆಚ್ಚು ಮಕ್ಕಳು ಪ್ರಯೋಜನ ಪಡೆಯುವಂತಾಗಲಿ ಎಂದು ಹಾರೈಸಿದರು.
ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ರಾಜ್ಯ ಪ್ರಶಸ್ತಿ ಪುರಸ್ಕೃತ ನಿವೃತ್ತ ಮುಖ್ಯ ಶಿಕ್ಷಕ ಕೆ. ರಾಜಾರಾಂ ಐತಾಳ್ ಭಾಗವಹಿಸಿದರು. ಸಭೆಯ ಅಧ್ಯಕ್ಷತೆಯನ್ನು ಕೋಟ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಉಮೇಶ್ ವಹಿಸಿ ಸ್ವಾಗತಿಸಿದರು.
ಸಭೆಯಲ್ಲಿ ಪಂಚವರ್ಣ ಯುವಕ ಮಂಡಲದ ಅಧ್ಯಕ್ಷ ಮನೋಹರ್ ಪೂಜಾರಿ, ಮಹಿಳಾ ಮಂಡಲದ ಅಧ್ಯಕ್ಷೆ ಲಲಿತಾ ಪೂಜಾರಿ, ಇಂಡಿಕಾ ಕಲಾ ಬಳಗದ ಅಧ್ಯಕ್ಷ ಎಂ. ಜಯರಾಮ ಶೆಟ್ಟಿ ಪ್ರಕೃತಿ ಸಂಜೀವಿನಿ ಒಕ್ಕೂಟದ ಅಧ್ಯಕ್ಷೆ ಮಾಲತಿ ಶೇಖರ್ ಉಪಸ್ಥಿತರಿದ್ದರು. ಪಂಚವರ್ಣದ ರವೀಂದ್ರ ಕೋಟ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮವನ್ನು ಪಂಚಾಯತ್ ಲೆಕ್ಕಾಧಿಕಾರಿ ಶೇಖರ್ ಮರವಂತೆ ನಿರೂಪಿಸಿದರು. ಕಾರ್ಯದರ್ಶಿ ಜಲಜಾಕ್ಷಿ ವಂದಿಸಿದರು.



ಕುಂದಾಪುರದ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ವೃತ್ತಿ ಮಾರ್ಗದರ್ಶನ ಮತ್ತು ತರಬೇತಿ ಘಟಕದ ಆಶ್ರಯದಲ್ಲಿ ಉನ್ನತ ಶಿಕ್ಷಣದ ಅವಕಾಶಗಳ ಉಪನ್ಯಾಸ ಕಾರ್ಯಕ್ರಮ ನಡೆಯಿತು. ಪ್ರಾಧ್ಯಾಪಕ ಸಪ್ನ ರಘುಪತಿ, ಡಾ. ರಿಚರ್ಡ್ ರಾಯನ್ ಸಿಕ್ವೇರಿಯಾ, ಸ್ಟೀನ್ ಕುರಿಯಾಕೋಸ್, ಅಶ್ವಿನಿ ಆಚಾರ್, ವಂದನಾ ಶೆಣೈ, ಮತ್ತು ರಚನಾ ಎಸ್., ಪ್ರಾಂಶುಪಾಲ ಪ್ರೊ. ಡಾ. ಕೆ.ಉಮೇಶ ಶೆಟ್ಟಿ, ತಿಮ್ಮಪ್ಪ ಡಿ.ಎಸ್. ಭಾಗವಹಿಸಿದ್ದರು.

ಪುತ್ತೂರಿನ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣದಲ್ಲಿ ಕನ್ನಡ ಸಾಹಿತ್ಯ ಪರಿಷತ್‌ನ 111ನೇ ಸಂಸ್ಥಾಪನಾ ದಿನ ವಿನೂತನವಾಗಿ ಆಚರಣೆ

ಜನಸಾಮಾನ್ಯರ ಸಾಹಿತ್ಯ ಪ್ರೇಮಕ್ಕೆ ಸಾಕ್ಷಿಯಾದ ಕನ್ನಡ ರಸಪ್ರಶ್ನೆ, ಪುಸ್ತಕ ಬಹುಮಾನ





ಪುತ್ತೂರು: ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಪುತ್ತೂರು ತಾಲೂಕು ಘಟಕದ ವತಿಯಿಂದ ಕನ್ನಡ ಸಾಹಿತ್ಯ ಪರಿಷತ್ತಿನ 111ನೇ ಸಂಸ್ಥಾಪನಾ ದಿನಾಚರಣೆಯನ್ನು ಇಂದು ಅತ್ಯಂತ ವಿನೂತನವಾಗಿ ಆಚರಿಸಲಾಯಿತು. ಪುತ್ತೂರಿನ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣದ ಆವರಣದಲ್ಲಿ ಸಾರ್ವಜನಿಕರಿಗೆ ನಡೆದ ಕನ್ನಡ ರಸಪ್ರಶ್ನೆ ಹಾಗೂ ಪುಸ್ತಕ ಬಹುಮಾನ ಕಾರ್ಯಕ್ರಮವು ಜನಸಾಮಾನ್ಯರ ಸಾಹಿತ್ಯ ಪ್ರೇಮಕ್ಕೆ ಸಾಕ್ಷಿಯಾಯಿತು.

ಕಾರ್ಯಕ್ರಮ ಉದ್ಘಾಟನೆ

ಪುತ್ತೂರು ಕೆಎಸ್ಸಾರ್ಟಿಸಿ ಘಟಕದ ಮೇಲ್ವಿಚಾರಕ ಪೂರ್ಣೇಶ್ ಕಾರ್ಯಕ್ರಮವನ್ನು ಉದ್ಘಾಟಿಸಿ ಶುಭ ಹಾರೈಸಿದರು. ಮುಖ್ಯ ಅತಿಥಿಗಳಾಗಿ ಕೆಎಸ್ಸಾರ್ಟಿಸಿ ಅಧಿಕಾರಿ ಭಾಸ್ಕರ ಶೆಟ್ಟಿ, ಪುತ್ತೂರು ತಾಲೂಕು ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಅಬ್ದುಲ್ ಸಮದ್ ಭಾವ ಉಪಸ್ಥಿತರಿದ್ದರು. ಪುತ್ತೂರು ತಾಲೂಕು ಕ.ಸಾ.ಪ. ಅಧ್ಯಕ್ಷ ಪುತ್ತೂರು ಉಮೇಶ್ ನಾಯಕ್ ಅಧ್ಯಕ್ಷತೆ ವಹಿಸಿದ್ದರು. ಕ.ಸಾ.ಪ. ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಗಡಿನಾಡ ಧ್ವನಿ ಶ್ರೇಯೋಭಿವೃದ್ಧಿ ಟ್ರಸ್ಟ್ ಸಂಸ್ಥಾಪಕ ಡಾ. ಹಾಜಿ ಎಸ್. ಅಬೂಬಕ್ಕರ್ ಆರ್ಲಪದವು ಆಶಯ ನುಡಿಗಳನ್ನಾಡಿದರು. ಕ.ಸಾ.ಪ. ಕಾರ್ಯಕಾರಿ ಸಮಿತಿ ಸದಸ್ಯೆ ಶಂಕರಿ ಶರ್ಮ ಕಾರ್ಯಕ್ರಮ ನಿರ್ವಹಿಸಿದರು.

ಮುಗಿ ಬಿದ್ದು ಉತ್ತರಿಸಿದರು

ರಸಪ್ರಶ್ನೆಯನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟ ರಂಗಕರ್ಮಿ ರಂಗಯ್ಯ ಬಲ್ಲಾಳ್ ಕನ್ನಡ ಅವರ ಪ್ರಶ್ನೆಗಳಿಗೆ ಕೆಎಸ್ಸಾರ್ಟಿಸಿ ಸಿಬ್ಬಂದಿಗಳು, ಶಾಲಾ ಕಾಲೇಜ್ ವಿದ್ಯಾರ್ಥಿಗಳು ಹಾಗೂ ನಿಲ್ದಾಣದಲ್ಲಿದ್ದ ಸಾರ್ವಜನಿಕರು ಮುಗಿ ಬಿದ್ದು ಉತ್ತರಿಸಿದರು. ಸುಮಾರು 500ಕ್ಕೂ ಹೆಚ್ಚು ಮಂದಿ ಪ್ರಯಾಣಿಕರು ರಸಪ್ರಶ್ನೆಯಲ್ಲಿ ಭಾಗವಹಿಸಿ ಪುಸ್ತಕಗಳನ್ನು ಬಹುಮಾನ ಪಡೆದುಕೊಂಡು ಸಂಭ್ರಮಿಸಿದರು.

ಜ್ಞಾನದ ಹಬ್ಬ

ಬಸ್ಸಿಗಾಗಿ ಕಾಯುತ್ತಿದ್ದ ಪ್ರಯಾಣಿಕರಿಗೆ ಈ ಕಾರ್ಯಕ್ರಮವು ಕೇವಲ ಮನೋರಂಜನೆಯಾಗಿರದೆ, ಜ್ಞಾನದ ಹಬ್ಬವಾಗಿಯೂ ಮೂಡಿ ಬಂತು. ಪ್ರತಿಯೊಬ್ಬ ಪ್ರಯಾಣಿಕರ ಕೈಯಲ್ಲಿ ಟಿಕೇಟಿನ ಜೊತೆಗೆ ಕನ್ನಡ ಪುಸ್ತಕಗಳು ರಾರಾಜಿಸುತ್ತಿತ್ತು. ಸಾಹಿತ್ಯ ಪರಿಷತ್ತಿನ ಈ ವಿನೂತನ ಕಾರ್ಯಕ್ಕೆ ಸಾರ್ವಜನಿಕ ವಲಯದಿಂದ ವ್ಯಾಪಕ ಮೆಚ್ಚುಗೆ ವ್ಯಕ್ತವಾಯಿತು.

ಸುತ್ತ ಮುತ್ತ

ಇಂದು, ನಾಳೆ ವಿದ್ಯುತ್ ವ್ಯತ್ಯಯ


ಬೆಳ್ತಂಗಡಿ: ತುರ್ತು ನಿರ್ವಹಣಾ ಕಾಮಗಾರಿ ಹಿನ್ನೆಲೆಯಲ್ಲಿ ಬೆಳ್ತಂಗಡಿ ಮೆಸ್ಕಾಂ ಉಪ ವಿಭಾಗದ ವ್ಯಾಪ್ತಿಯ ಹಲವು ಪ್ರದೇಶಗಳಲ್ಲಿ ಮೇ 7 ರಂದು ಬೆಳಗ್ಗೆ 10 ರಿಂದ ಸಂಜೆ ಗಂಟೆ 5.30ರ ತನಕ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ. ವಾಣಿಶಾಲೆ, ಚರ್ಚ್ ರಸ್ತೆ, ರೆಂಕೆದಗುತ್ತು, ಸಂತೆಕಟ್ಟೆ, ಜ್ಯೂನಿಯರ್ ಕಾಲೇಜು, ಬೆಳ್ತಂಗಡಿ ಪೇಟೆ, ಸುಧೆಮುಗೇರು, ಲಾಯಿಲ, ಕಾಶಿಬೆಟ್ಟು, ನಡ, ನಾವೂರು, ಇಂದಬೆಟ್ಟು ಹಾಗೂ ಕೊಲ್ಲಿ ಪರಿಸರಗಳಲ್ಲಿ ಹಾಗೂ ಧರ್ಮಸ್ಥಳ ಚಿಪಲ್, ಕನ್ಯಾಡಿ, ನಿಡ್ಲೆ, ಪುದುವೆಟ್ಟು ಪಟ್ರಮೆ, ಅರಸಿನಮಕ್ಕಿ ಫೀಡರ್ ವಿದ್ಯುತ್ ನಿಲುಗಡೆ ಗೊಳ್ಳಲಿದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಉಜಿರೆ ಪರಿಸರ

ಉಜಿರೆ ಮೆಸ್ಕಾಂ ಉಪವಿಭಾಗ ವ್ಯಾಪ್ತಿಯ ಕೆಲವು ಸ್ಥಳಗಳಲ್ಲಿ ಮೇ 8ರಂದು ಬೆಳಗ್ಗೆ 10 ರಿಂದ ಸಂಜೆ 4ರ ತನಕ ವಿದ್ಯುತ್ ನಿಲುಗಡೆಗೊಳ್ಳಲಿದೆ. ತೋಟತ್ತಾಡಿ, ಚಿಬಿದ್ರೆ, ನೆರಿಯ ಚಾರ್ಮಾಡಿ, ಕಡಿರುದ್ಯಾವರ, ಮಿತ್ತಬಾಗಿಲು, ಮಲವಂತಿಗೆ ಮುಂಡಾಜೆ, ಕಲ್ಮಂಜ ದಿಡುಪೆ,ಕೊಲ್ಲಿ ಮೊದಲಾದ ಭಾಗಗಳಲ್ಲಿ ವಿದ್ಯುತ್ ನಿಲುಗಡೆಗೊಳ್ಳಲಿದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಕೊಡಗು ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ರಶೀದ್


ಮಡಿಕೇರಿ: ಕುಶಾಲನಗರ ತಾಲೂಕಿನ ಸುಂಟಿಕೊಪ್ಪ ದಲ್ಲಿ ಮೇ 29, 30ರಂದು ನಡೆಯಲಿರುವ ಕೊಡಗು ಜಿಲ್ಲಾ 17ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಸಾಹಿತಿ, ಕವಿ, ಕತೆಗಾರ ಅಬ್ದುಲ್ ರಶೀದ್ ಆಯ್ಕೆಯಾಗಿದ್ದಾರೆ. ಕೊಡಗು ಪತ್ರಿಕಾ ಭವನ ಸಭಾಂಗಣದಲ್ಲಿ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಪಿ. ಕೇಶವ ಕಾಮತ್



ಅವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಒಮ್ಮತದಿಂದ ಸರ್ವಾಧ್ಯಕ್ಷರ ಆಯ್ಕೆ ಮಾಡಲಾಗಿದೆ. ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕ ಡಾ. ಮಂಥರ್ ಗೌಡ ಅವರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿ ರಚಿಸಲಾಗಿದೆ. 11ಕ್ಕೂ ಹೆಚ್ಚು ಉಪಸಮಿತಿಗಳನ್ನು ರಚಿಸಿ ಸಮ್ಮೇಳನದ ತಯಾರಿಗೆ ಚಾಲನೆ ನೀಡಲಾಗಿದೆ. ಅಬ್ದುಲ್ ರಶೀದ್ ಒಬ್ಬ ಕನ್ನಡದ ಬರಹಗಾರ, ಕವಿ, ಸಂಪಾದಕ ಮತ್ತು ಅನುವಾದಕ. 2004ರಲ್ಲಿ ಅವರು ಜೀವಮಾನ ಸಾಧನೆಗಾಗಿ ಸಾಹಿತ್ಯ ಅಕಾಡೆಮಿಯ ಸುವರ್ಣ ಮಹೋತ್ಸವ ಪ್ರಶಸ್ತಿ ಪಡೆದಿದ್ದಾರೆ. ರಶೀದ್ ಅವರ ಪ್ರಶಸ್ತಿ ವಿಜೇತ ಕೃತಿಗಳಲ್ಲಿ ನಾಲ್ಕು ಸಣ್ಣ ಕಥೆಗಳ 'ಪ್ರಾಣಪಕ್ಷಿ', 'ಹಲ್ಲು ಕುಳಿಗಳ ಹುಡುಗ', 'ಸಂಪೂರ್ಣ ಪಾರಿಜಾತ' ಮತ್ತು ಈತನಕದ ಕೇತೆಗಳು' ಸೇರಿವೆ. ಅವರ ಕೃತಿಗಳನ್ನು ಸಾಹಿತ್ಯ ಅಕಾಡೆಮಿ ಗುರುತಿಸಿ 2004 ರಲ್ಲಿ ತನ್ನ ಸುವರ್ಣ ಮಹೋತ್ಸವ ಪ್ರಶಸ್ತಿ ನೀಡಿ ಗೌರವಿಸಿತು. ಅವರು ತಮ್ಮ 'ಹಾಲು ಕುಡಿಗೆ ಹುಡುಗ' ಪುಸ್ತಕಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಸಹ ಪಡೆದರು. ಇದಲ್ಲದೇ ಅವರು ಪತ್ರಿಕೋದ್ಯಮಕ್ಕಾಗಿ ಸಂದೇಶ ಪ್ರಶಸ್ತಿ, ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆಗಾಗಿ ಕೆಂಪೇಗೌಡ ಪ್ರಶಸ್ತಿ, ಸೇರಿದಂತೆ ಹಲವಾರು ಇತರ ಸಾಹಿತ್ಯ ಪ್ರಶಸ್ತಿ ಪಡೆದಿದ್ದಾರೆ.

ಮಡಿಕೇರಿ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ರಮೇಶ್ ಉತ್ತಪ್ಪ ಆಯ್ಕೆ

ಮಡಿಕೇರಿ: ಮಡಿಕೇರಿ ತಾಲೂಕು 12ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಸಾಹಿತಿ ಕವಿ ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ ಆಯ್ಕೆ. ಕೊಡಗು ಪತ್ರಿಕಾ ಭವನ ಸಭಾಂಗಣದಲ್ಲಿ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಪಿ ಕೇಶವ ಕಾಮತ್ ಅವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಒಮ್ಮತದಿಂದ ಸರ್ವಾಧ್ಯಕ್ಷರ ಆಯ್ಕೆ ಮಾಡಲಾಗಿದೆ.



ಮಡಿಕೇರಿ ತಾಲೂಕು 12ನೇ ಕನ್ನಡ ಸಾಹಿತ್ಯ ಸಮ್ಮೇಳನವು ಮಡಿಕೇರಿ ತಾಲೂಕಿನ ಕಡಂಗ (ಅರಪಟ್ಟು) ಗ್ರಾಮದಲ್ಲಿ ಮೇ 20ಕ್ಕೆ ನಡೆಯಲಿದೆ. ಐತಿಚಂಡ ರಮೇಶ್ ಉತ್ತಪ್ಪ ಅವರು ಕೊಡಗು ಮೂಲದ ಹಿರಿಯ ಪತ್ರಕರ್ತರು ಮತ್ತು ಹೆಸರಾಂತ ಲೇಖಕರು. ಕೊಡಗು ಜಿಲ್ಲೆಯ ಮಡಿಕೇರಿ ತಾಲೂಕಿನ ಕರಡ ಗ್ರಾಮದಲ್ಲಿ ಜನಿಸಿದ ಇವರು ತಮ್ಮ ವಿದ್ಯಾಭ್ಯಾಸವನ್ನು ಕೊಡಗು ಜಿಲ್ಲೆ ಮತ್ತು ಮೈಸೂರಿನಲ್ಲಿ ಪೂರೈಸಿದ್ದಾರೆ. ಅವರು ಕನ್ನಡ ಜಾನಪದ ಮತ್ತು ಇತಿಹಾಸದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ವನ್ಯಜೀವಿ ಸಾಹಿತ್ಯದಲ್ಲಿ ಆಸಕ್ತರಾಗಿದ್ದು ವಿಶೇಷವಾಗಿ ಆನೆಗಳ ಬಗ್ಗೆ ಅಪಾರ ಜ್ಞಾನ ಹೊಂದಿರುವ ಇವರು, ಆನೆಗಳ ಕುರಿತೇ ಸುಮಾರು 10 ಪುಸ್ತಕ ಬರೆದಿದ್ದಾರೆ. ಕೊಡವ ಭಾಷೆಯಲ್ಲಿಯೂ ಹಲವಾರು ಕೃತಿ ರಚಿಸಿದ್ದಾರೆ. ಇವರ 'ಕೊಡಗಿನ ಆಟಿ ತಿಂಗಳ ಆಚರಣೆಯ ಆಚ್ಚರಿಗಳು' ಎಂಬ ಲೇಖನವು ಆದಿಚುಂಚನಗಿರಿ ವಿವಿಯ ಬಿ.ಎಸ್ಸಿ ಪಠ್ಯ ಪುಸ್ತಕದಲ್ಲಿ ಸೇರ್ಪಡೆಯಾಗಿದೆ.

ಮಾರಣಾಂತಿಕ ಹಲ್ಲೆ: ಪ್ರಕರಣ ದಾಖಲು

ಸಾವೋಕ್ಲು: ಆಟೋ ಚಾಲಕರೊಬ್ಬರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ಆರೋಪಿಗಳು ಪರಾರಿಯಾದ ಘಟನೆ ಸೋಮವಾರ ಸಂಜೆ ಇಲ್ಲಿಯ ಪೊಲೀಸ್ ಠಾಣಾ ವ್ಯಾಪ್ತಿಯ ಬೇತುಗ್ರಾಮದಲ್ಲಿ ನಡೆದಿದೆ. ಹಲ್ಲೆಗೊಳಗಾದ ಆಟೋಚಾಲಕ ಝುಕರಿಯ ಇವರು ತೀವ್ರ ರಕ್ತಸ್ರಾವದಿಂದ ಚರಂಡಿಗೆ ಬಿದ್ದಿದ್ದನ್ನು ಗಮನಿಸಿದ ಸ್ಥಳೀಯರು ಹಾಗೂ ಪೊಲೀಸರು ಆತನಿಗೆ ಇಲ್ಲಿಯ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ನೀಡಿ ಬಳಿಕ ಮಡಿಕೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ. ಆಸ್ತಿ ವೈಷಮ್ಯದ ಹಿನ್ನೆಲೆಯಲ್ಲಿ ಈ ಹಲ್ಲೆ ನಡೆದಿದೆ ಎನ್ನಲಾಗಿದೆ. ಸ್ಥಳೀಯ ಠಾಣಾಧಿಕಾರಿ ರಾಘವೇಂದ್ರ ಬಿ.ಜಿ ಭೇಟಿ ನೀಡಿ, ಪ್ರಕರಣ ಕೈಗೆತ್ತಿಕೊಂಡಿದ್ದಾರೆ.

ಕೊಡಗು ಜಿಲ್ಲಾ ಮಟ್ಟದ ತ್ರೈ ಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳಿಗೆ ಭೋಸರಾಜು ಸೂಚನೆ

ರಸಗೊಬ್ಬರ ಚೀಲದಲ್ಲಿ ತೂಕದ ವ್ಯತ್ಯಾಸದ ಬಗ್ಗೆ ಪರಿಶೀಲಿಸಿ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಶೀಘ್ರದಲ್ಲೇ ಮುಂಗಾರು ಆರಂಭವಾಗಲಿದ್ದು, ಜಿಲ್ಲೆಯ ಕೃಷಿಕರಿಗೆ ಬೇಕಾಗುವ ರಸಗೊಬ್ಬರವನ್ನು ಸರಿಯಾಗಿ ಪೂರೈಸ ಬೇಕು. ದೂರು ಬಾರದಂತೆ ಎಚ್ಚರ ವಹಿಸುವುದು ಅತ್ಯಗತ್ಯ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಅವರು ಸೂಚಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಜಿಲ್ಲಾ ಮಟ್ಟದ ತ್ರೈ ಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ರಸಗೊಬ್ಬರ ಪೂರೈಕೆಗೆ ಸಂಬಂಧಿಸಿದಂತೆ ಮಾಹಿತಿ ಪಡೆದು ಮಾತನಾಡಿದ ಅವರು, ರಸಗೊಬ್ಬರ ಚೀಲದ ತೂಕದಲ್ಲಿ ವ್ಯತ್ಯಾಸ ಕಂಡು ಬರುತ್ತಿರುವ ಬಗ್ಗೆ ದೂರುಗಳು ಕೇಳಿ ಬರುತ್ತಿದ್ದು ಈ ಸಂಬಂಧ ರ‍್ಯಾಂಡಮ್ ಆಗಿ ಪರಿಶೀಲಿಸಬೇಕು ಎಂದು ಸೂಚನೆ ನೀಡಿದರು.

ಈ ಸಂಬಂಧ ಕೃಷಿ ಸಚಿವರ ಜೊತೆಗೂ ಚರ್ಚಿಸ ಲಾಗುವುದು. ರಾಜ್ಯದ ವಿವಿಧ ಭಾಗದಲ್ಲಿ ಕಂಡು ಬಾರದ ರಸಗೊಬ್ಬರ ತೂಕದಲ್ಲಿನ ವ್ಯತ್ಯಾಸ, ಕೊಡಗು ಜಿಲ್ಲೆಯಲ್ಲಿ ಮಾತ್ರ ಯಾಕಾಗುತ್ತಿದೆ ಎಂಬ ಬಗ್ಗೆ ಪರಿಶೀಲಿಸಬೇಕಿದೆ ಎಂದರು.



ರಸಗೊಬ್ಬರ ಲಭ್ಯ

ಪ್ರಸಕ್ತ ಸಾಲಿನಲ್ಲಿ 2,453 ಮೆಟ್ರಿಕ್ ಟನ್ ರಸಗೊಬ್ಬರ ಪೂರೈಕೆಯಾಗಿದ್ದು ಇದುವರೆಗೆ 40,971 ಮೆಟ್ರಿಕ್ ಟನ್ ರಸಗೊಬ್ಬರ ಲಭ್ಯವಿದೆ. ಇದರಲ್ಲಿ 2,189 ಟನ್ ರಸಗೊಬ್ಬರ ವಿತರಿಸಲಾಗಿದೆ ಎಂದು ಭೋಸರಾಜು ಹೇಳಿದರು.

ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರು, ಸಹಾಯಕ ಕೃಷಿ ಅಧಿಕಾರಿಗಳು ಸ್ಥಳೀಯ ಮಟ್ಟದಲ್ಲಿ ಪರಿಶೀಲನೆ ನಡೆಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವರು ಸಲಹೆ ಮಾಡಿದರು.

ಅಕ್ರಮ ಸಾಗಾಟ

ರೈತರ ಹಿತಾಸಕ್ತಿಯನ್ನು ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಆ ನಿಟ್ಟಿನಲ್ಲಿ ರಸಗೊಬ್ಬರ ಚೀಲದ ತೂಕದಲ್ಲಿ ವ್ಯತ್ಯಾಸ ಉಂಟಾಗ ದಂತೆ ಗಮನಹರಿಸಬೇಕು ಎಂದ ಸಚಿವರು, ನೆರೆ ರಾಜ್ಯಗಳಿಗೆ ರಸಗೊಬ್ಬರ ಅಕ್ರಮ ಸಾಗಾಣೆ ನಡೆಯುತ್ತಿರುವ ಬಗ್ಗೆ ದೂರುಗಳು ಕೇಳಿ ಬರುತ್ತಿದ್ದು ಸಂಬಂಧಪಟ್ಟ ಇಲಾಖೆಗಳು ಎಚ್ಚರವಹಿಸಬೇಕು ಎಂದು ತಾಕೀತು ಮಾಡಿದರು.

> **ದಾಖಲೆ ಒದಗಿಸಿ ಗೊಬ್ಬರ ಖರೀದಿಸಿ**
>
> **ಕೊಡಗು ಜಿಲ್ಲೆಯಲ್ಲಿ ರಸಗೊಬ್ಬರ ದಾಸ್ತಾನು ಇದೆ. ಯಾವುದೇ ಅಭಾವ ಇಲ್ಲ, ಯುದ್ಧ ಭೀತಿಯಲ್ಲಿ ಕೆಲವರು ರಸಗೊಬ್ಬರ ಖರೀದಿಗೆ ಮುಗಿ ಬಿದ್ದಿದ್ದರು. ಆದರೆ ಈಗ ರಸಗೊಬ್ಬರ ಖರೀದಿ ಕೇಂದ್ರಗಳಲ್ಲಿ ಅಂತಹ ಜನಸಂದಣಿ ಇಲ್ಲ. ದಾಖಲೆಗಳನ್ನು ಒದಗಿಸಿ ಕೃಷಿಕರು ಗೊಬ್ಬರ ಖರೀದಿಸುವುದು ಈಗ ಕಡ್ಡಾಯವಾಗಿದೆ.**
>
> ● ಎನ್.ಎಸ್.ಭೋಸರಾಜು, ಕೊಡಗು ಜಿಲ್ಲಾ ಉಸ್ತುವಾರಿ ಸಚಿವ

ಮೂಲ ಸೌಲಭ್ಯಕ್ಕೆ ಒತ್ತು

ಈ ಕುರಿತು ಮಾತನಾಡಿದ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಚಂದ್ರಶೇಖರ್ ಅವರು, ಜಿಲ್ಲೆಯಲ್ಲಿ ರಸಗೊಬ್ಬರ ದಾಸ್ತಾನು ಇದ್ದು ರಸಗೊಬ್ಬರ ಪೂರೈಕೆ ಯಾಗುತ್ತಿದೆ. ಯೂರಿಯಾ, ಡಿಎಪಿ, ಎಂಒಪಿ, ಕಾಂಪ್ಲೆಕ್ಸ್, ಎಸ್‌ಎಸ್‌ಪಿ ಸೇರಿದಂತೆ ಎಲ್ಲಾ ರೀತಿಯ ರಸಗೊಬ್ಬರವನ್ನು ತರಿಸಿಕೊಳ್ಳಲಾಗಿದೆ ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷ ಬಾಂಡ್ ಗಣಪತಿ ಅವರು, ರಸಗೊಬ್ಬರ ಚೀಲದಲ್ಲಿ ತೂಕದ ವ್ಯತ್ಯಾಸ ಆಗುತ್ತಿದ್ದು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸಚಿವರ ಗಮನಸೆಳೆದರು. ಬೇಸಿಗೆಯಲ್ಲಿ ಜಾನುವಾರುಗಳಿಗೆ ಮೇವು ಕೊರತೆ ಆಗದಂತೆ ಗಮನಹರಿಸಬೇಕು ಎಂದು ಸಚಿವರು, ಕುಡಿಯುವ ನೀರು ಪೂರೈಕೆಯಲ್ಲೂ ವ್ಯತ್ಯಯವಾಗಬಾರದು. ಮೂಲ ಸೌಲಭ್ಯಕ್ಕೆ ಒತ್ತು ನೀಡಬೇಕೆಂದು ಸೂಚಿಸಿದರು.

ಹೋಂ ಸ್ಟೇ ಸಂಬಂಧಿಸಿದಂತೆ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು. ಬಳಿಕ ಸಚಿವರ ಹಲವು ಸಲಹೆ ಸೂಚನೆ ನೀಡಿದರು.

ಕವಿ, ಗಮಕಿ, ಉಪನ್ಯಾಸಕ ಲಕ್ಷ್ಮಣ ಆಕಾಶೆಯವರಿಗೆ ಗೌರವಾಭಿನಂದನೆ



ಮಂಗಳೂರು: ಅಖಿಲ ಕರ್ನಾಟಕ ಆರ್ಯವೈಶ್ಯ ಮಹಿಳಾ ಮಹಾಸಭಾ ಬೆಂಗಳೂರು ಮತ್ತು ವಿಜಯನಗರ ವಾಸವಿ ಮಹಿಳಾ ಮಂಡಳಿ ಬೆಂಗಳೂರು ಇವರ ಜಂಟಿ ಆಶ್ರಯದಲ್ಲಿ ಬೆಂಗಳೂರು ವಿಜಯನಗರದ ಶ್ರೀ ವಾಸವಿ ಕನ್ಯಕಾ ಪರಮೇಶ್ವರಿ ದೇವಸ್ಥಾನದಲ್ಲಿ ವಾಸವೀ ಜಯಂತಿ ಪ್ರಯುಕ್ತ ಕನ್ಯಕಾ ಸಿರಿ ವಾಸವಿ ಜೀವನ ಚರಿತ್ರೆ ಸಾಮೂಹಿಕ ಪಾರಾಯಣ ಕಾರ್ಯಕ್ರಮವನ್ನು ಇತ್ತೀಚೆಗೆ ಆಯೋಜಿಸಲಾಗಿತ್ತು.

ಕಾರ್ಕಳ ತಾಲೂಕು ದುರ್ಗ ಗ್ರಾಮದ ಕವಿ, ಗಮಕಿ, ಉಪನ್ಯಾಸಕ ಲಕ್ಷ್ಮಣ ಆಕಾಶೆಯವರು ಬರೆದ ಭಾಮಿನಿ ಷಟ್ಪದಿ ಕೃತಿ 'ಕನ್ಯಕಾಸಿರಿ'ಯ ಸಾಮೂಹಿಕ ಗಾಯನ ಪ್ರಸ್ತುತಗೊಂಡಿತು. ಬಳಿಕ ಕನ್ಯಕಾಸಿರಿ ಕಾವ್ಯಕಾರ ಲಕ್ಷ್ಮಣ ಆಕಾಶೆ ಅವರನ್ನು ಗೌರವಿಸಲಾಯಿತು. ಅಖಿಲ ಭಾರತ ಪೆನುಗೊಂಡ ಟ್ರಸ್ಟ್ ಅಧ್ಯಕ್ಷ ಡಾ. ಗೋವಿಂದ ರಾಜುಲು, ಆರ್ಯ ವೈಶ್ಯ ಸಂಘಗಳ ಒಕ್ಕೂಟದ ಸ್ಥಾಪಕ ಅಧ್ಯಕ್ಷ ಸಮರ್ಥ್, ಸಾಹಿತ್ಯ ಪರಿಷತ್ತು ವ್ಯವಸ್ಥಾಪಕ ವಿಜಯ ಸಮರ್ಥ್, ಅಖಿಲ ಕರ್ನಾಟಕ ಆರ್ಯ ವೈಶ್ಯ ಮಹಿಳಾ ಮಹಾಸಭಾ ಅಧ್ಯಕ್ಷೆ ಉಮಾ ಸಾಯಿರಾಂ, ಅಖಿಲ ಕರ್ನಾಟಕ ಆರ್ಯ ವೈಶ್ಯ ಮಹಿಳಾ ಮಹಾಸಭಾ ಪ್ರಧಾನ ಕಾರ್ಯದರ್ಶಿ ಸಂಧ್ಯಾ ಜಗದೀಶ್ ಉಪಸ್ಥಿತರಿದ್ದರು.

ಸಮಾಜಮುಖಿ ಸೇವೆಯಲ್ಲಿ ಮಾದರಿ ಸಂಘಟನೆ: ಶಾಸಕ ವೇದವ್ಯಾಸ್ ಕಾಮತ್



ಮಂಗಳೂರು: ಸಮಾಜಮುಖಿ ಚಟುವಟಿಕೆಗಳ ಮೂಲಕ ವಿಶಿಷ್ಟ ಗುರುತನ್ನು ಮೂಡಿಸಿಕೊಂಡಿರುವ ಸೂಟರ್‌ಪೇಟೆ ಪ್ರಜ್ವಲ್ ಯುವಕ ಮಂಡಲವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾದರಿ ಸಂಘಟನೆಯಾಗಿ ಹೊರಹೊಮ್ಮಿದೆ ಎಂದು ಶಾಸಕ ಡಿ. ವೇದವ್ಯಾಸ ಕಾಮತ್ ಹೇಳಿದರು.

ಸೂಟರ್‌ಪೇಟೆ ಶ್ರೀ ಕೋರ್ದಬ್ಬು ದೇವಸ್ಥಾನದ ಬಬ್ಬುಸ್ವಾಮಿ ರಂಗಮಂದಿರ ದಲ್ಲಿ ನಡೆದ ಪ್ರಜ್ವಲ್ ಯುವಕ ಮಂಡಲದ 28ನೇ ವಾರ್ಷಿಕೋತ್ಸವದಲ್ಲಿ ಅವರು ಮಾತನಾಡಿದರು.

ಪ್ರಜ್ವಲ್ ಯುವಕ ಮಂಡಲದ ಗೌರವಾಧ್ಯಕ್ಷ, ನಿವೃತ್ತ ತಹಶೀಲ್ದಾರ್ ಬಾಬು ಪಿ. ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸೂಟರ್ ಪೇಟೆ ಶ್ರೀ ಕೋರ್ದಬ್ಬು ದೈವಸ್ಥಾನದ ಗುರಿಕಾರ ಎಸ್. ರಾಘವೇಂದ್ರ, ಸುರತ್ಕಲ್ ಬಂಟರ ಸಂಘದ ಅಧ್ಯಕ್ಷ ಪುಷ್ಪರಾಜ್ ಶೆಟ್ಟಿ, ಅಭಿಮತ ವಾಹಿನಿಯ ನಿರ್ದೇಶಕಿ ಮಮತಾ ಶೆಟ್ಟಿ, ನಿಕಟಪೂರ್ವ ಕಾರ್ಪೊರೇಟರ್ ಭರತ್ ಕುಮಾರ್, ಆರ್‌ಡಿಪಿಆರ್ ಇಲಾಖೆಯ ವಿಶ್ವನಾಥ್ ಉಳ್ಳಾಲ್, ಯುವಕ ಮಂಡಲದ ಗೌರವ ಸಲಹೆಗಾರರಾದ ಕೆ.ಕೆ. ಪೇಜಾವರ, ಎಸ್. ಜಗದೀಶ್ಚಂದ್ರ ಅಂಚನ್, ಅಧ್ಯಕ್ಷ ಅಭಿಲಾಷ್ ಉಪಸ್ಥಿತರಿದ್ದರು.

ಪುಸ್ತಕ ವಿತರಣೆ, ಸಾಧಕರಿಗೆ ಸನ್ಮಾನ

ಸಮಾರಂಭದಲ್ಲಿ 300ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕಗಳನ್ನು ವಿತರಿಸಲಾಯಿತು. ಈಚೆಗೆ ಡಾಕ್ಟರೇಟ್ ಪದವಿ ಪಡೆದ ಮಂಗಳೂರು ಶ್ರೀ ಗೋಕರ್ಣನಾಥೇಶ್ವರ ಕಾಲೇಜಿನ ಅಸಿಸ್ಟೆಂಟ್ ಪ್ರೊಫೆಸರ್ ಡಾ. ಯತೀನ್ ಕುಮಾರ್ ಅಂಚನ್ ಅವರನ್ನು ಸನ್ಮಾನಿಸಲಾಯಿತು. ಪಿಯುಸಿ ಹಾಗೂ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತ್ಯಧಿಕ ಅಂಕಗಳಿಸಿದ ಧನ್ಯಾ ಯು. ಎಸ್. ಹಾಗೂ ಪ್ರೇರಣಾ ಎನ್.ಪಿ. ಮತ್ತು ಕ್ರೀಡಾ ಕ್ಷೇತ್ರದಲ್ಲಿ ಸಾಧನೆಗೈದ ಆಶ್ಲೇಷ್ ಡಿ. ಉಳ್ಳಾಲ್ ಅವರನ್ನು ಸನ್ಮಾನಿಸಲಾಯಿತು.

ಶ್ರದ್ಧಾಂಜಲಿ

ಇತ್ತೀಚೆಗೆ ನಿಧನ ಹೊಂದಿದ್ದ ಪ್ರಜ್ವಲ್ ಯುವಕ ಮಂಡಲದ ಮಾಜಿ ಅಧ್ಯಕ್ಷ ಕಿಶೋರ್ ಕುಮಾರ್ ಅವರಿಗೆ ಶ್ರದ್ಧಾಂಜಲಿ ಅರ್ಪಿಸಿ, ಗೌರವ ಸಲಹೆಗಾರ ಎಸ್. ಜಗದೀಶ್ಚಂದ್ರ ಅಂಚನ್ ನುಡಿನಮನ ಸಲ್ಲಿಸಿದರು. ಕೆ.ಕೆ. ಪೇಜಾವರ ಸ್ವಾಗತಿಸಿದರು. ಸೃಜನ್ ಮಾನವ್ ವಂದಿಸಿದರು. ನಂತರ ಬೆನಕ ಆರ್ಟ್ಸ್ ಕುಡ್ಲ ತಂಡದಿಂದ 'ಪೊರಿಪುದಪ್ಪೆ ಜಲದುರ್ಗೆ' ಎಂಬ ಭಕ್ತಿ ಪ್ರಧಾನ ನಾಟಕ ಪ್ರದರ್ಶನಗೊಂಡಿತು.

ನಿತ್ಯ ಮಂತ್ರ ಪಠಣದಿಂದ ಶರೀರದಲ್ಲಿ ಸಕಾರಾತ್ಮಕ ಶಕ್ತಿಗಳ ವೃದ್ಧಿ: ಪುನರೂರು



ಮಂಗಳೂರು: ನಿತ್ಯ ಮಂತ್ರ ಪಠಣದಿಂದ ಶರೀರದಲ್ಲಿ ಸಕಾರಾತ್ಮಕ ಶಕ್ತಿ ವೃದ್ಧಿಯಾಗಿ ಮಾನಸಿಕ ಒತ್ತಡ ಕಡಿಮೆಯಾಗಲು ಸಹಕಾರಿಯಾಗುತ್ತದೆ ಎಂದು ಧರ್ಮದರ್ಶಿ ಹರಿಕೃಷ್ಣ ಪುನರೂರು ನುಡಿದರು.

ಅವರು ಕೊಟ ಮಹಾಜನಗಣ ಮಂಗಳೂರು ಅಂಗಸಂಸ್ಥೆಯ ಆಶ್ರಯದಲ್ಲಿ ಪಾಂಡೇಶ್ವರದ ಗುರು ನರಸಿಂಹ ಸಭಾಭವನದಲ್ಲಿ ಹಮ್ಮಿಕೊಂಡಿರುವ 21 ದಿನಗಳ 25ನೇ ವರ್ಷದ ವಸಂತ ವೇದ ಪಾಠ ಶಿಬಿರದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ, ಮಾತನಾಡಿದರು.

ಇದೊಂದು ಆಧ್ಯಾತ್ಮಿಕ ಪ್ರಕ್ರಿಯೆ, ಪ್ರಕೃತಿಯ ಆರಾಧನೆ. ನಿತ್ಯ ಅನುಷ್ಠಾನ ಮಾಡುವುದರಿಂದ ಮನಸ್ಸು ಸಾತ್ವಿಕವಾಗಿ, ಮಕ್ಕಳ ಮನಸ್ಸು ವಿಚಲಿತವಾಗದೆ ಶಿಕ್ಷಣದ ಕಡೆಗೆ ಕೇಂದ್ರೀಕೃತವಾಗಲು ಸಾಧ್ಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಶ್ರೀಧರ ಹೊಳ್ಳ, ಪವಿತ್ರ ಶ್ಲೋಕಗಳನ್ನೊಳಗೊಂಡ ಮಂತ್ರೋಚ್ಛಾರಣೆಯ ಲಯಬದ್ಧ ಪುನರಾವರ್ತನೆಯಿಂದ ಮಾತಿನಲ್ಲಿ ಸ್ಪಷ್ಟತೆ ಬರಲು ಸಾಧ್ಯ ಅಲ್ಲದೆ ಮೆದುಳಿನ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಸಹಕಾರಿಯಾಗುತ್ತದೆ ಎಂದರು.

ಶಿಬಿರದ ಗುರುಗಳಾದ ಶ್ರೀಕರ ಭಟ್, ಕಾರ್ಯಾನ್ನ ನಿಧಿ ಭಟ್ ಬದುಕಿನಲ್ಲಿ ಶಿಸ್ತಿನ ಜೀವನ ನಡೆಸಲು ಇಂತಹ ವೇದ ಪಾಠ ಶಿಬಿರಗಳು ಅತ್ಯಂತ ಸಹಕಾರಿ. ಮುಂದಿನ ದಿನಗಳಲ್ಲಿ ಪ್ರತಿಯೊಬ್ಬ ಬ್ರಾಹ್ಮಣನೂ ಕೂಡ ಮಕ್ಕಳನ್ನು ಇಂತಹ ಶಿಬಿರಗಳಿಗೆ ಕಳುಹಿಸಿ ಸದುಪಯೋಗ ಪಡೆಯಬೇಕೆಂದು ಹೇಳಿದರು. ಮಕ್ಕಳು ಗುರುದ್ವಯರಿಗೆ ಗುರುವಂದನ ಸಲ್ಲಿಸಿದರು. ವೇದ ಪಾಠ ಶಿಬಿರದ ಬಗ್ಗೆ ಪೋಷಕರು ಮೆಚ್ಚುಗೆಯ ಮಾತುಗಳನ್ನಾಡಿದರು. ಮಹಿಳಾ ವೇದಿಕೆಯ ಅಧ್ಯಕ್ಷೆ ಪ್ರಭಾ ಎಸ್. ರಾವ್ ಮ್ಯಾನೇಜರ್ ಶಿವರಾಂ ರಾವ್ ಕೋಶಾಧಿಕಾರಿ ಪದ್ಮನಾಭ ಮಯ್ಯ, ಕೃಷ್ಣ ಮಯ್ಯ ಮತ್ತಿತರರಿದ್ದರು. ವಿದುಷಿ ಪ್ರತಿಮಾ ಶ್ರೀಧರ್ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು.

ಜೆಸಿಐ ಬೈಂದೂರು ಸಿಟಿ ವತಿಯಿಂದ ಕಲಾವಿದ ತ್ರಿವಿಕ್ರಮ್ ರಾವ್‌ಗೆ ಸನ್ಮಾನ



ಬೈಂದೂರು: ಜೆಸಿಐ ಬೈಂದೂರು ಸಿಟಿ ವತಿಯಿಂದ ಪ್ರತಿ ತಿಂಗಳ ಸೆಲ್ಯೂಟ್‌ದ ಸೈಲೆಂಟ್ ಸ್ಟಾರ್ ಅಭಿಯಾನದಡಿಯಲ್ಲಿ ಖ್ಯಾತ ಪ್ರಸಾದನ ಕಲಾವಿದ ತ್ರಿವಿಕ್ರಮ್ ರಾವ್ ಉಪ್ಪುಂದ ಅವರನ್ನು ಗುರುತಿಸಿ ಗೌರವಿಸಲಾಯಿತು.

ತ್ರಿವಿಕ್ರಮ್ ರಾವ್ ಅವರು ಕಲಾ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದವರಾಗಿದ್ದು ನೂರಾರು ನಾಟಕಗಳಿಗೆ ಅದ್ಭುತವಾಗಿ ಮೇಕಪ್ (ಬಣ್ಣಗಾರಿಕೆ) ಮತ್ತು ವಸ್ತ್ರ ವಿನ್ಯಾಸಕಾರರಾಗಿ ಕಾರ್ಯ ನಿರ್ವಹಿಸಿರುವುದು ಅವರ ಪ್ರಮುಖ ಸಾಧನೆ ಯಾಗಿದೆ. ಮಣ್ಣಿನ ಕಲಾಕೃತಿಗಳನ್ನು ಅತ್ಯಂತ ಸುಂದರವಾಗಿ ನಿರ್ಮಿಸುವ ಕಲೆ ಅವರಿಗೆ ಸಿದ್ಧಿಸಿದೆ. ಗಣಪತಿ ಮತ್ತು ಶಾರದಾ ಮೂರ್ತಿಗಳನ್ನು ನಿರ್ಮಿಸುವಲ್ಲಿ ಅಪ್ರತಿಮ ಕಲಾ ನೈಪುಣ್ಯತೆ ಹೊಂದಿದ್ದಾರೆ ಎಂದು ಜೆಸಿಐ ಬೈಂದೂರು ಸಿಟಿ ಅಧ್ಯಕ್ಷೆ ಚೈತ್ರಾ ಸತೀಶ್ ಅವರು ತಮ್ಮ ತಿಂಗಳ ಸ್ಟಾರ್ ಆಯ್ಕೆಯನ್ನು ಸಮರ್ಥಿಸಿಕೊಂಡರು. ತೆರೆಯ ಮರೆಯಲ್ಲಿದ್ದುಕೊಂಡು ಕಲಾ ಸೇವೆ ಮಾಡುವ ಇಂತಹ ಸಾಧಕರನ್ನು ಗುರುತಿಸಿ ಗೌರವಿಸುವುದು ಮಾದರಿ ಕೆಲಸವಾಗಿದೆ. ತ್ರಿವಿಕ್ರಮ್ ರಾವ್ ಅವರ ಕಲಾ ಬದುಕು ಮುಂದಿನ ತಲೆಮಾರಿಗೆ ಸ್ಫೂರ್ತಿಯಾಗಲಿ ಎಂದರು. ಜೆಸಿಐ ಬೈಂದೂರು ಸಿಟಿ ನಿಕಟಪೂರ್ವಾಧ್ಯಕ್ಷ ರಾಜು ಮೊಗವೀರ, ಕಾರ್ಯದರ್ಶಿ ಪ್ರೇಮಾ ವಿ. ಶೆಟ್ಟಿ ಸಂಯೋಜಕಿ ಸೂರ್ಯಕಾಂತಿ, ಸದಸ್ಯ ಸುರೇಂದ್ರ ಶೇಟ್, ರಾಘವೇಂದ್ರ ಹೊಳ್ಳ ಅವಿನಾಶ್ ಇದ್ದರು.

ಮಂಜೇಶ್ವರ ಎಸ್‌ಎಟಿ ಶಾಲೆಯ ನೂತನ ಕಟ್ಟಡದ ಲೋಕಾರ್ಪಣೆ



ಮಂಜೇಶ್ವರ: ಇಲ್ಲಿನ ಮಂಜೇಶ್ವರ ಶ್ರೀಮದ್ ಅನಂತೇಶ್ವರ ದೇವಸ್ಥಾನಗಳ ಅಧೀನದಲ್ಲಿರುವ ಎಸ್‌ಎಟಿ ಶಾಲೆಯ ಶತಮಾನೋತ್ಸವ ಅಂಗವಾಗಿ ಹೊಸದಾಗಿ ನಿರ್ಮಿಸಿದ ಟಿ. ವಿಮಲಾ ವಿ.ಪೈ ಮೆಮೋರಿಯಲ್ ಎಸ್‌ಎಟಿ ಸೆಂಟಿನರಿ ಬಿಲ್ಡಿಂಗ್ ಅನ್ನು ಭಾನುವಾರ ಉದ್ಯಮಿ ಟಿ.ವಿ. ಮೋಹನದಾಸ್ ಪೈ ಅವರು ಉದ್ಘಾಟಿಸಿದರು.

ತಮ್ಮ ತಾಯಿ ಟಿ. ವಿಮಲಾ ಪೈ ಎಸ್ ಎಟಿ ಶಾಲೆಯ ಹಳೆ ವಿದ್ಯಾರ್ಥಿಯಾಗಿ 10ನೇ ತರಗತಿ ವರೆಗೂ ವಿದ್ಯಾಭ್ಯಾಸ ಮಾಡಿದ ಸವಿನೆನಪಿಗಾಗಿ ಈ ನೂತನ ಕಟ್ಟಡ ಮಹಾದಾನಿಯಾಗಿ ಈ ಶಾಲೆಯನ್ನು ಅವರು ಸಮಾಜಕ್ಕೆ ಅರ್ಪಿಸಿದರು. ಕಾರ್ಯಕ್ರಮದಲ್ಲಿ ಪ್ರಮುಖರಾದ ಸುಮಲತಾ ಪೈ, ಪ್ರಣವ ಪೈ, ಸಂದೀಪ ಶೆಣೈ, ಪ್ರದೀಪ ಶೆಣೈ, ಉಪಶಿಕ್ಷಣಾಧಿಕಾರಿ ಜಾಜ್ ಕ್ರಾಸ್ತಾ ಭಾಗವಹಿಸಿದರು. ಸ್ಥಳೀಯ ಟಿ. ನರಸಿಂಹ ಕಾಮತ್ ಅವರ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು. ಪ್ರಶಾಂತ್ ಹೆಗ್ಡೆ ಅತಿಥಿಗಳನ್ನು ಸ್ವಾಗತಿಸಿದರು. ತೇಜಸ್ ಕಿರಣ್ ಶಾಲಾ ಶತಮಾನೋತ್ಸವ ಕಾರ್ಯಕ್ರಮದ ವರದಿ ಸಲ್ಲಿಸಿದರು. ಮಂಜೇಶ್ವರ ಶ್ರೀಮದ್ ಅನಂತೇಶ್ವರ ದೇವಸ್ಥಾನದ ಆಡಳಿತ ಮೊಕ್ತೇಸರ ಟಿ. ಗಣಪತಿ ಪೈ ಮಾತನಾಡಿ, ಟಿ.ವಿ. ಮೋಹನ್ ದಾಸ್ ಪೈ ಜನತಾ ಸೇವೆಯೇ ಜನಾರ್ದನ ಸೇವೆ ಎಂಬಂತೆ ಸಮಾಜಕ್ಕೆ ಕೊಡುಗೆ ಸಲ್ಲಿಸುತ್ತಿದ್ದಾರೆ ಎಂದು ಬಣ್ಣಿಸಿದರು. ಶಾಲಾ ಕಟ್ಟಡ ನಿರ್ಮಿಸಿಕೊಟ್ಟ ಶ್ರೀನಿವಾಸ ಪೈ ಅವರನ್ನು ಸನ್ಮಾನಿಸಿದರು. ಅಧ್ಯಾಪಕ ನಾಗೇಶ ವಂದಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಮಜಿ ಶಾಲೆಗೆ ನೆರವು



ಬಂಟ್ವಾಳ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಮುದಾಯ ಅಭಿವೃದ್ಧಿ ವಿಭಾಗ ದಿಂದ ಬಂಟ್ವಾಳ ತಾಲೂಕು ವೀರಕಂಭ ಗ್ರಾಮದ ಮಜಿ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ನೂತನ ಸಭಾ ಭವನ ರಚನೆಗೆ 75 ಸಾ.ರೂ. ಮಂಜೂರಾಗಿದ್ದು, ಇದರ ಮಂಜೂರಾತಿ ಪತ್ರವನ್ನು ಶಾಲಾಭಿವೃದ್ಧಿ ಸಮಿತಿಗೆ ಹಸ್ತಾಂತರಿಸಲಾಯಿತು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವಿಟ್ಲ ತಾಲೂಕು ಯೋಜನಾಧಿಕಾರಿ ಸುರೇಶ್ ಗೌಡ ಮಂಜೂರಾತಿ ಪತ್ರ ಹಸ್ತಾಂತರಿಸಿ ಮಾತನಾಡಿ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಪ್ರಾತಿನಿಧ್ಯ ನೀಡುವ ಸಲುವಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಡಾ. ವೀರೇಂದ್ರ ಹೆಗ್ಗಡೆ ದೂರ ದೃಷ್ಟಿಯ ಹಲವಾರು ಯೋಜನೆಗಳಿದ್ದು ಗ್ರಾಮೀಣ ಪ್ರದೇಶದ ಶಾಲೆಗಳ ಅಭಿವೃದ್ಧಿಯ ಜೊತೆಗೆ ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಸಹಕಾರಿ ಎಂದರು.

ಬಂಟ್ವಾಳ ತಾಲೂಕು ಜನಜಾಗೃತಿ ವೇದಿಕೆಯ ಸದಸ್ಯ ವೀರಪ್ಪ ಮೂಲ್ಯ ಬೆತಸರವ್, ಚಿನ್ನಾ ಮೈರಾ, ಕಲ್ಲಡ್ಕ ವಲಯದ ಮೇಲ್ವಿಚಾರಕ ಸುಖರಾಜ್, ವೀರಕಂಭ ಕಾರ್ಯಕ್ಷೇತ್ರದ ಸೇವಾ ಪ್ರತಿನಿಧಿ ವಿಜಯ, ಶೌರ್ಯ ವಿಪತ್ತು ನಿರ್ವಹಣಾ ಘಟಕ ಕಲ್ಲಡ್ಕ ಅಧ್ಯಕ್ಷ ಮಾಧವ ಸಾಲಿಯಾನ್ ಕುದ್ರೆಬೆಟ್ಟು, ನಿಯೋಜಿತ ಅಧ್ಯಕ್ಷ ಗಣೇಶ್, ಕಲ್ಲಡ್ಕ ವಲಯದ ಮಾಜಿ ಅಧ್ಯಕ್ಷ ಶೇಖರ ಕಾಣಕೋಡಿ, ವೀರಕಂಬ ಒಕ್ಕೂಟ ಅಧ್ಯಕ್ಷೆ ಶಾಂಭವಿ ಆಚಾರ್ಯ, ಪದಾಧಿಕಾರಿಗಳಾದ ಆನಂದ ಮಜಿ, ಪ್ರೇಮ ಆಚಾರ್ಯ, ಮಜಿ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಕೊರಗಪ್ಪ ನಾಯ್ಕ ಸಿಂಗೇರಿ, ಶಾಲಾ ಹಿರಿಯ ಶಿಕ್ಷಕಿ ಸಂಗೀತ ಶರ್ಮ ಪಿ.ಜಿ., ಗೌರವ ಶಿಕ್ಷಕಿ ಹರಿಣಾಕ್ಷಿ, ಪಲ್ಲವಿ, ಮಕ್ಕಳ ಪೋಷಕ ರಶ್ಮಿತಾ ಮತ್ತಿತರರಿದ್ದರು.

ಉಳಿಯ ಶ್ರೀ ಸೋಮೇಶ್ವರೀ ದೇವಸ್ಥಾನ, ಪರಿವಾರ ದೈವಸ್ಥಾನದ ಪುನರ್ ಪ್ರತಿಷ್ಠೆ, ಬ್ರಹ್ಮಕಲಶೋತ್ಸವ ಕಾರ್ಯಕ್ರಮ

ದೇವಸ್ಥಾನ ನಿರ್ಮಾಣ ಕಾರ್ಯ ಭಕ್ತಿ, ಶ್ರದ್ಧೆಯ ಪ್ರತೀಕ: ದೇವು ಮೂಲ್ಯಣ್ಣ

ಬಂಟ್ವಾಳ: ಸೋಮನಾಥ ಉಳಿಯ ಮತ್ತು ಉಳ್ಳಾಲ ಉಳಿಯ ಕ್ಷೇತ್ರಗಳಿಗೆ ಅವಿನಾಭಾವ ಸಂಬಂಧವಿದ್ದು, ಗಾಳದ ಕೊಂಕಣಿ ಸಣ್ಣ ಸಮುದಾಯ ದೇವರ ಮೇಲಿನ ಭಕ್ತಿ, ಶ್ರದ್ಧೆ, ನಂಬಿಕೆಯ ಪ್ರತೀಕವಾಗಿ ದೇವಸ್ಥಾನ ನಿರ್ಮಾಣದಂತ ದೊಡ್ಡ ಕಾರ್ಯ ಸಾಧನೆ ಮಾಡಿ ತೋರಿಸಿದೆ. ಉಳ್ಳಾಲ ಉಳಿಯ ಕ್ಷೇತ್ರಕ್ಕೂ ಈ ಸಮಾಜದ ಕೊಡುಗೆಯು ಅಪಾರವಾಗಿದೆ ಎಂದು ಉಳ್ಳಾಲ ಉಳಿಯ ಶ್ರೀ ಧರ್ಮ ಅರಸು ಕ್ಷೇತ್ರದ ಧರ್ಮದರ್ಶಿ ದೇವು ಮೂಲ್ಯಣ್ಣ ನುಡಿದರು.

ಮುನ್ನೂರು ಗ್ರಾಮದ ಶ್ರೀ ಕೇತ್ರ ಸೋಮನಾಥ ಉಳಿಯದ ಶ್ರೀ ಸೋಮೇಶ್ವರೀ ದೇವಸ್ಥಾನ, ಶ್ರೀ ನಾಗದೇವರು ಹಾಗೂ ಶ್ರೀ ಅರಸು, ಧೂಮಾವತಿ ಬಂಟ ಮತ್ತು ಪರಿವಾರ ದೈವಸ್ಥಾನದ ಪುನರ್ ಪ್ರತಿಷ್ಠೆ ಬ್ರಹ್ಮಕಲಶೋತ್ಸವದ ಪ್ರಯುಕ್ತ ಮಂಗಳವಾರ ನಡೆದ ಧಾರ್ಮಿಕ ಸಭೆ ಉದ್ಘಾಟಿಸಿ ಅವರು ಆಶೀರ್ವಚನಗೈದರು.



ಇಡೀ ಭಾರತ ದೇಶ ಹಿಂದುತ್ವದ ಭಾವನೆ ಮೂಡುತ್ತಿದ್ದು, ಭಾರತೀಯತೆ, ಸನಾತನ ಹಿಂದೂ ಧರ್ಮ, ನಮ್ಮ ಸಂಸ್ಕೃತಿ ಇಂತಹ ಧಾರ್ಮಿಕ ಕೇಂದ್ರದಿಂದ ಮಾತ್ರ ಉಳಿಯಲು ಸಾಧ್ಯ ಎಂದ ಅವರು ಯಾವುದೇ ಒಂದು ಗ್ರಾಮದ ಕ್ಷೇತ್ರ ಅಭಿವೃದ್ಧಿಯಾದಾಗ ಇಡೀ ಊರೇ ಅಭಿವೃದ್ಧಿಯಾದಂತೆ ಎಂದರು.

ಕ್ಷೇತ್ರದ ತಂತ್ರಿವರ್ಯ ಕುಂಟಾರು ರವೀಶ್ ತಂತ್ರಿ ಧಾರ್ಮಿಕ ಉಪನ್ಯಾಸಗೈದರು. ಮುಖ್ಯ ಅತಿಥಿಯಾಗಿದ್ದ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರನಾಥ ಗಟ್ಟಿ ಮಾತನಾಡಿದರು.

ಕ್ಷೇತ್ರದ ಗಡಿಪ್ರಧಾನ ಬಸಪ್ಪ ಯಾನೆ ಜೆ.ರವೀಂದ್ರ ನಾಯಕ್ ಸಭಾಧ್ಯಕ್ಷತೆ ವಹಿಸಿದ್ದರು. ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಬೋಳಾರ ಮಾರಿಗುಡಿ ದೇವಳದ ಮಾಜಿ ಆಡಳಿತ ಟ್ರಸ್ಟಿ ಲಯನ್ ತಾರನಾಥ ಶೆಟ್ಟಿ ಕುಲಪುರೋಹಿತರಾದ ಪ್ರಶಾಂತ್ ಉಡುಪ ಅಂಬ್ಲಮೊಗರು, ಶ್ರೀ ಅರಸು,ಧೂಮಾವತಿ ಬಂಟ ದೈವಸ್ಥಾನದ ಅರ್ಚಕ ಪ್ರಕಾಶ್ ಮೂಲ್ಯಣ್ಣ ಸಹ ಅರ್ಚಕ ವಿನೋದ್ ಗುರಿಕಾರ, ಸಮುದಾಯದ ಹಿರಿಯರಾದ ಸುರೇಂದ್ರ ನಾಯಕ್ ಕಾಪಿಕಾಡ್, ಕ್ಷೇತ್ರದ ಆಡಳಿತ ಸಮಿತಿ ಗೌರವಾಧ್ಯಕ್ಷ ಯು. ದಯಾನಂದ ನಾಯಕ್, ಗಾಳದಕೊಂಕಣಿ ಅಭ್ಯುದಯ ಸಂಘದ ಅಧ್ಯಕ್ಷ ನರಸಿಂಹ ನಾಯಕ್ ಹರೇಕಳ ಇದ್ದರು. ದೇವಳದ ಆಡಳಿತ ಸಮಿತಿ ಅಧ್ಯಕ್ಷ ಉಮಾನಾಥ ನಾಯಕ್ ಉಳ್ಳಾಲ ಪ್ರಸ್ತಾವನೆಗೈದರು. ಪ್ರ.ಕಾರ್ಯದರ್ಶಿ ವೆಂಕಟೇಶ್ ಬಂಟ್ವಾಳ ಸ್ವಾಗತಿಸಿ, ಜತೆ ಕಾರ್ಯದರ್ಶಿ ಆಶಾ ಎಸ್.ನಾಯಕ್ ವಂದಿಸಿದರು. ಪ್ರಕಾಶ್ ಪುತ್ತೂರು ನಿರೂಪಿಸಿದರು.

> **ಸ್ವಾರ್ಥಕ್ಕಾಗಿ ದೇವರ ಮುಂದೆ ಪ್ರಾರ್ಥನೆ ಸಲ್ಲದು. ಭಗವಂತ ಕೊಟ್ಟ ಅವಕಾಶ ಸದುಪಯೋಗಪಡಿಸಿ ತಮ್ಮ ಜೀವನ ಸಾರ್ಥಕ್ಯಗೊಳಿಸಬೇಕು. ಒಳ್ಳೆಯ ಕೆಲಸ ಮಾಡುವಾಗ ಸಮಾಜದಲ್ಲಿ ಟೀಕೆಗಳು ಸಹಜ, ಅವುಗಳನ್ನೆಲ್ಲಾ ಮೆಟ್ಟಿ ನಿಂತು ಸಮಾಜದ ಕಾರ್ಯದಲ್ಲಿ ನಿರಂತರವಾಗಿ ತೊಡಗಿಸಬೇಕು. ಧರ್ಮದ ಮರ್ಮ ಅರಿತು ಮುಂದುವರಿಯಬೇಕು. ಪ್ರಸಕ್ತ ಕಾಲಘಟ್ಟದಲ್ಲಿ ಸಮಸ್ತ ಹಿಂದೂ ಸಮಾಜ ಒಗ್ಗಟ್ಟಾಗುವ ಅನಿವಾರ್ಯತೆ ಇದೆ.**
>
> ● ರವೀಶ್ ತಂತ್ರಿ

ಸುತ್ತ ಮುತ್ತ

ಬಿಜೆಪಿ ಕಾರ್ಯಕರ್ತರ ಮಧ್ಯೆ ಗೊಂದಲ ಸೃಷ್ಟಿಸಲು ಯತ್ನ: ಎಂ.ಎಲ್.ಅಶ್ವಿನಿ

ಕಾಸರಗೋಡು: ವಿಧಾನಸಭಾ ಚುನಾವಣಾ ಫಲಿತಾಂಶ ಹೊರಬಂದ ನಂತರ ಸುಳ್ಳು ಸುದ್ದಿಗಳನ್ನು ಹರಡುವ ಮೂಲಕ ಬಿಜೆಪಿ ಕಾರ್ಯಕರ್ತರ ಮಧ್ಯೆ ಗೊಂದಲ ಮೂಡಿಸಲು ಮತ್ತು ಅವರನ್ನು ಪ್ರಚೋದಿಸಿ ನಾಡಿನ ಸಾಮುದಾಯಿಕ ಸೌಹಾರ್ದತೆ ಹಾಳುಮಾಡಲು ವ್ಯವಸ್ಥಿತ ಸಂಚು ನಡೆಯುತ್ತಿದೆ ಎಂದು ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಪ್ರತಿಕ್ರಿಯಿಸಿದ್ದಾರೆ.
ಕಾಸರಗೋಡು ಮತ್ತು ಮಂಜೇಶ್ವರ ವಿಧಾನಸಭಾ ಕ್ಷೇತ್ರಗಳ ಚುನಾವಣಾ ಉಸ್ತುವಾರಿ ಹೊಂದಿದ್ದ ಕರ್ನಾಟಕದ ಶಾಸಕರ ನೇತೃತ್ವದಲ್ಲಿ ಈ ಬಾರಿ ಅತ್ಯುತ್ತಮ ಚುನಾವಣಾ ಕಾರ್ಯ ಚಟುವಟಿಕೆಗಳು ನಡೆದಿವೆ. ಮಂಜೇಶ್ವರದಲ್ಲಿ ಬಿಜೆಪಿ ಇತಿಹಾಸದಲ್ಲೇ ಅತಿ ಹೆಚ್ಚಿನ ಮತಗಳನ್ನು ಈ ಬಾರಿ ಗಳಿಸಿದೆ. ಕಾಸರಗೋಡು ಕ್ಷೇತ್ರದಲ್ಲೂ ಬಿಜೆಪಿ ಅತ್ಯುತ್ತಮ ಪ್ರದರ್ಶನ ನೀಡಿದೆ. ಕೇರಳದಲ್ಲೇ ಅತಿ ಹೆಚ್ಚು ಮತಗಳನ್ನು ಪಡೆದ ಕ್ಷೇತ್ರಗಳ ಪಟ್ಟಿಯಲ್ಲಿ ಕಾಸರಗೋಡು ಮತ್ತು ಮಂಜೇಶ್ವರ ಸೇರಿವೆ. ಹಾಗಾಗಿ ಈಗ ಹರಡುತ್ತಿರುವ ಸುದ್ದಿಗಳೆಲ್ಲವೂ ಸುಳ್ಳು ಎಂಬುದು ಸ್ಪಷ್ಟವಾಗುತ್ತದೆ.
ಮಂಜೇಶ್ವರ ಕ್ಷೇತ್ರದ ಅಭ್ಯರ್ಥಿ ಕೆ.ಸುರೇಂದ್ರನ್ ಅವರ ಫ್ಲೆಕ್ಸ್ ಬೋರ್ಡ್‌ನ್ನು ಸ್ಫೋಟಕ ವಸ್ತುಗ ಳನ್ನು ಬಳಸಿ ನಾಶಪಡಿಸುವ ವಿಡಿಯೋಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಡಿ ಸಮಾಜದ ಶಾಂತಿ ಕದಡಲು ಯತ್ನಿಸುತ್ತಿರುವವರ ವಿರುದ್ಧ ಬಿಜೆಪಿ ಕಾರ್ಯಕರ್ತರು ಮತ್ತು ಪೊಲೀಸರು ಜಾಗರೂಕರಾಗಿರಬೇಕು.
ಕಾಸರಗೋಡು ಬಿಜೆಪಿಗೆ ಸಂಬಂಧಿಸಿದಂತೆ ನಿರಂತರ ಸುಳ್ಳು ಸುದ್ದಿಗಳನ್ನು ಹರಡುತ್ತಿರುವ ಹಿನ್ನೆಲೆಯಲ್ಲಿ ಕಾನೂನು ಹೋರಾಟ ಕೈಗೊಳ್ಳುವ ಕುರಿತು ಚಿಂತನೆ ನಡೆಸಲಾಗುತ್ತಿದೆ ಎಂದು ಎಂ.ಎಲ್.ಅಶ್ವಿನಿ ತಿಳಿಸಿದ್ದಾರೆ.

ಹಗ್ಗಜಗ್ಗಾಟ: ಜಿಮ್ನಾನಾ ಮಾವುಂಗಾಲ್ ಪ್ರಥಮ

ಕಾಸರಗೋಡು: ಶ್ರೀ ಕಾಳರಾತ್ರಿ ಭಗವತಿ ಕ್ಷೇತ್ರ ಚಾರಿಟೇಬಲ್ ಟ್ರಸ್ಟ್ ಆಯೋಜಿಸಿದ್ದ ಪುರುಷ – ಮಹಿಳಾ ವಿಭಾಗದ ಹಗ್ಗಜಗ್ಗಾಟ ಸ್ಪರ್ಧೆ ಕುಂಡಂಗುಳಿಯಲ್ಲಿ ನಡೆಯಿತು. ಪುರುಷ ವಿಭಾಗದಲ್ಲಿ ಮೀತಲ್ ಫ್ರೆಂಡ್ಸ್ ಪೆರ್ಲಡ್ಕ ಪ್ರಾಯೋಜಕತ್ವದಲ್ಲಿ ಸ್ಪರ್ಧಿಸಿದ ಜಿಮ್ನಾನಾ ಮಾವುಂಗಾಲ್ ಪ್ರಥಮ ಸ್ಥಾನ ಪಡೆಯಿತು. ಉದುಮದ ಮಾಜಿ ಶಾಸಕ ಕೆ.ಕುಂಞರಾಮನ್ ಉದ್ಘಾಟಿಸಿದರು. ಕಾಸರಗೋಡು ಜಿಲ್ಲಾ ಹಗ್ಗಜಗ್ಗಾಟ ಆಟಗಾರರ ಕಲ್ಯಾಣ ಸಂಘದ ಸಹಯೋಗ ದೊಂದಿಗೆ ಕೊಳತ್ತೂರು ಚಾರಿಟೇಬಲ್ ಟ್ರಸ್ಟ್ ಹಗ್ಗಜಗ್ಗಾಟ ಸ್ಪರ್ಧೆಯನ್ನು ಆಯೋಜಿಸಿತು. ಸಂಘಟಕ ಸಮಿತಿ ಅಧ್ಯಕ್ಷ ರಾಧಾಕೃಷ್ಣನ್ ಚಾಳಕಾಡ್ ಅಧ್ಯಕ್ಷತೆ ವಹಿಸಿದ್ದರು. ಹೋಮಿಯೋ ವೈದ್ಯರಾದ ಡಾ.ಶ್ರೀನಿಶ್ ಅತಿಥಿಯಾಗಿದ್ದರು. ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಕ್ಷೇತ್ರಗಳ ಪ್ರಮುಖರು ಮಾತನಾಡಿದರು. ಪ್ರಧಾನ ಸಂಚಾಲಕ ನಾರಾಯಣನ್ ಸ್ವಾಗತಿಸಿ, ಮೋಹನನ್ ಪಾಂಡಿಕಂಡ ವಂದಿಸಿದರು.

ಕೈಲ್ ಐಎಎಸ್ ಅಕಾಡೆಮಿ ನೋಂದಣಿ

ಕಾಸರಗೋಡು: ಕೈಲ್‌ನಲ್ಲಿ 1 ವರ್ಷದ ಐಎಎಸ್ ತರಬೇತಿ ಜೂನ್ ಮೊದಲ ವಾರದಲ್ಲಿ ಆರಂಭವಾಗ ಲಿದೆ. ಪದವಿ ವಿದ್ಯಾರ್ಹತೆಯಾಗಿದೆ. ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬ ಹುದು. ಕಲ್ಯಾಣ ನಿಧಿ ಮಂಡಳಿಯಲ್ಲಿ ಹೆಸರು ನೋಂದಾಯಿಸಲಾದ ಸದಸ್ಯರ ಮಕ್ಕಳಿಗೆ ಕೋರ್ಸ್ ಶುಲ್ಕದಲ್ಲಿ ಶೇಕಡಾ 50ರಷ್ಟು ಸಬ್ಸಿಡಿ ಲಭಿಸುತ್ತದೆ. ಕಣ್ಣೂರು, ಕಾಸರಗೋಡು ಜಿಲ್ಲೆಗಳಲ್ಲಿ ಕೇರಳ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಯೋಜನೆಯಲ್ಲಿ ಸದಸ್ಯತ್ವ ಪಡೆದ, ನಿಯಮಿತವಾಗಿ ಶುಲ್ಕ ಪಾವತಿಸುತ್ತಿರುವ ಆಸಕ್ತ ಸದಸ್ಯರು ಈ ಸೌಲಭ್ಯ ಬಳಸಬಹುದು.

ಶಿಕ್ಷಕರ ನೇಮಕಾತಿ

ಕಾಸರಗೋಡು: ಚೆರ್ಕಳ ಸರ್ಕಾರಿ ಹೈಯರ್ ಸೆಕೆಂಡರಿ ಶಾಲೆ ಎ ಅರೇಬಿಕ್, ಇಂಗ್ಲಿಷ್, ಭೂಗೋಳ, ಇತಿಹಾಸ, ಅರ್ಥಶಾಸ್ತ್ರ ಮತ್ತು ವಾಣಿಜ್ಯ ವಿಷಯಗಳಿಗೆ ಹಿರಿಯ ಶಿಕ್ಷಕರು ಮತ್ತು ಹಿಂದಿ, ವಾಣಿಜ್ಯ, ಮಲೆಯಾಳ, ಪ್ರಾಣಿಶಾಸ್ತ್ರ ಕಂಪ್ಯೂಟರ್ ಅಪ್ಲಿಕೇಶನ್ ಗಳು ಮತ್ತು ಇತಿಹಾಸ ವಿಷಯಗಳಿಗೆ ಕಿರಿಯ ಶಿಕ್ಷಕರ ನೇಮಕಾತಿಗೆ ಸಂದರ್ಶನ ಮೇ 23 ರಂದು ಬೆಳಿಗ್ಗೆ 10 ಕ್ಕೆ ಶಾಲಾ ಕಚೇರಿಯಲ್ಲಿ ನಡೆಯಲಿದೆ.



ಕಾಸರಗೋಡು ಜಿಲ್ಲೆಯ ಪೆರಿಯ ಸಮೀಪದ ಬೇಕಲ ಗೋಕುಲಂ ಗೋಶಾಲೆ ಯಲ್ಲಿ ಪರಂಪರಾ ವಿದ್ಯಾಪೀಠದ ಆಶ್ರಯದಲ್ಲಿ ಹಮ್ಮಿಕೊಳ್ಳ ಲಾಗಿರುವ 3ನೇ ರಾಷ್ಟ್ರೀಯ ನೃತ್ಯೋತ್ಸವದಲ್ಲಿ ಮಲೆಯಾಳ , ತಮಿಳು ಚಿತ್ರರಂಗದ ಖ್ಯಾತ ನಟಿ ಸಿಂಧು ಶ್ಯಾಮ್ ಭರತನಾಟ್ಯ ಪ್ರಸ್ತುತಪಡಿಸಿದರು.

ಬಾಗಿಲು ತೆರೆದ ಸ್ಪೀಡಲ್ಲೇ ವಾಪಸ್ ಮುಚ್ಚಿದ ವ್ಯಾಪಾರ ಕೇಂದ್ರ | ಲಕ್ಷಾಂತರ ರೂ.ವೆಚ್ಚದ ಯೋಜನೆ ವ್ಯರ್ಥ?

ಬೆಳಿಗ್ಗೆಯಿಂದ ಸಂಜೆವರೆಗೆ ಕೂತರೂ ವ್ಯಾಪಾರವೇ ಇಲ್ಲ!





ಕಾಸರಗೋಡು: ನಗರಸಭೆಯ ನೇತೃತ್ವದಲ್ಲಿ ಬೀದಿ ವ್ಯಾಪಾರಿಗಳಿಗಾಗಿ ನಿರ್ಮಿಸಿದ ಪುನರ್ವಸತಿ ಕೇಂದ್ರ ಯೋಜನೆಯು ಪೋಲಾಗುತ್ತಿದ್ದು, ಹೊಸ ಬಸ್ ನಿಲ್ದಾಣ ಸಮೀಪ ಲಕ್ಷಾಂತರ ರೂಪಾಯಿ ವಿನಿಯೋ ಗಿಸಿ ನಿರ್ಮಿಸಲಾದ ಬೀದಿ ವ್ಯಾಪಾರ ಕೇಂದ್ರದ ಅಂಗಡಿ ಕೊಠಡಿಗಳು ಬಹುತೇಕ ಮುಚ್ಚಿಕೊಂಡಿವೆ.
ಕಳೆದ ವರ್ಷಾಂತ್ಯದಲ್ಲಿ ನಗರಸಭೆಯು ಬೀದಿ ವ್ಯಾಪಾರಿಗಳಿಗಾಗಿ ಪುನರ್ವಸತಿ ಕೇಂದ್ರ ನಿರ್ಮಿಸಿ ಉದ್ಘಾಟಿಸಲಾಗಿತ್ತು. ಎರಡು ಬದಿಗಳಲ್ಲಿ 28 ಅಂಗಡಿ ಕೊಠಡಿಗಳು ಈ ಸಮುಚ್ಚಯದಲ್ಲಿವೆ. ಆರಂಭದಲ್ಲಿ ಎಲ್ಲಾ ವ್ಯಾಪಾರಿಗಳು ಉತ್ಸುಕತೆಯಿಂದ ಅಂಗಡಿಗಳನ್ನು ತೆರೆದಿದ್ದರೂ, ಪ್ರಸ್ತುತ ಬಹುತೇಕ ಮಂದಿ ಅಂಗಡಿಗಳನ್ನು ಮುಚ್ಚಿದ್ದಾರೆ.
ಬೆಳಿಗ್ಗಿನಿಂದ ಸಂಜೆಯವರೆಗೆ ಕುಳಿತರೂ ಯಾವುದೇ ವ್ಯಾಪಾರ ನಡೆಯದ ಹಿನ್ನೆಲೆಯಲ್ಲಿ ಅಂಗಡಿಗಳನ್ನು ಮುಚ್ಚಿರುವುದಾಗಿ ಒಂದು ವಿಭಾಗ ವ್ಯಾಪಾರಿಗಳು ದೂರುತ್ತಿದ್ದಾರೆ. ಇದೇ ಸಂದರ್ಭ ಅಂಗಡಿಗಳನ್ನು ಖಾಯಂ ಆಗಿ ತೆರೆದು ಕಾರ್ಯಾಚರಿಸದೇ ಇರುವುದರಿಂದ ಗ್ರಾಹಕರು ಬರುತ್ತಿಲ್ಲ ಎಂದು ಇನ್ನೊಂದು ವಿಭಾಗ ವ್ಯಾಪಾರಿಗಳು ದೂರುತ್ತಿದ್ದಾರೆ.

ಒಂದು ವರ್ಷಕ್ಕೆ 9 ಸಾವಿರ ಬಾಡಿಗೆ

ವ್ಯಾಪಾರ ತೀರಾ ಇಲ್ಲದಿದ್ದರೂ ವರ್ಷದಲ್ಲಿ 9000 ರೂ. ನಗರಸಭೆಗೆ ಬಾಡಿಗೆ ನೀಡಬೇಕಾದ ದುಃಸ್ಥಿತಿ ವ್ಯಾಪಾರಿಗಳದ್ದಾಗಿದೆ. ಇದು ಜನಸಾಮಾನ್ಯರಾದ ವ್ಯಾಪಾರಿಗಳಿಗೆ ಆರ್ಥಿಕ ಹೊರೆಯಾಗಿ ಬೀದಿ ವ್ಯಾಪಾರಿ ಪುನರ್ವಸತಿ ಕೇಂದ್ರ ಪರಿಣಮಿಸುತ್ತಿದೆ. ಜನರು ಸುಲಭದಲ್ಲಿ ತಲುಪುವ ಸ್ಥಳಗಳಲ್ಲೆಲ್ಲಾ ಪುನರ್ವಸತಿ ಕೇಂದ್ರ ಸ್ಥಾಪಿಸಿರುವುದಾಗಿ ವ್ಯಾಪಾರಿ ಗಳ ಪ್ರಧಾನ ಆಕ್ಷೇಪವಾಗಿದೆ.
ಈ ಹಿಂದೆ ಹಳೆ ಬಸ್ ನಿಲ್ದಾಣ ಸಮೀಪ ಬೀದಿ ಬದಿಗಳಲ್ಲಿ ವ್ಯಾಪಾರ ನಡೆಸುತ್ತಿದ್ದ ಸಂದರ್ಭ ಉತ್ತಮ ಆದಾಯ ಲಭಿಸುತ್ತಿತ್ತು. ಇದು ಪಾದಚಾರಿಗಳಿಗೆ ಸಮಸ್ಯೆಯುಂಟು ಮಾಡುತ್ತಿದೆ ಎಂಬ ಕಾರಣದಿಂದ ನಗರಸಭೆಯು ಹೊಸ ಬಸ್ ನಿಲ್ದಾಣ ಸಮೀಪ ಬೀದಿ ವ್ಯಾಪಾರ ಕೇಂದ್ರ ನಿರ್ಮಿಸಿತ್ತು. ವ್ಯಾಪಾರಿಗಳು ಈಗಿರುವ ವ್ಯಾಪಾರ ಕೇಂದ್ರವನ್ನು ನಗರಸಭೆಯ ಇತರ ಆವಶ್ಯಕತೆಗಳಿಗಾಗಿ ಉಪಯೋಗಿಸಿ ಜನರು ಹೆಚ್ಚಾಗಿ ಸೇರುವ ಸ್ಥಳದಲ್ಲಿ ನೂತನ ವ್ಯಾಪಾರ ಕೇಂದ್ರ ನಿರ್ಮಿಸಿ ನೀಡಬೇಕು ಎಂದು ಆಗ್ರಹಿಸುತ್ತಿದ್ದಾರೆ.

- ನನೆಗುದಿಗೆ ಬಿದ್ದ ನಗರಸಭೆ ನೇತೃತ್ವ ದಲ್ಲಿ ಬೀದಿ ವ್ಯಾಪಾರಿಗಳಿಗೆ ನಿರ್ಮಿಸಿದ ಪುನರ್ವಸತಿ ಕೇಂದ್ರ
- ಯಾವುದೇ ವ್ಯಾಪಾರ ನಡೆಯದ ಹಿನ್ನೆಲೆ ಅಂಗಡಿ ಮುಚ್ಚಿರುವುದಾಗಿ ವ್ಯಾಪಾರಸ್ಥರ ಅಳಲು
- ವ್ಯಾಪಾರ ಇಲ್ಲದಿದ್ದರೂ ವರ್ಷದಲ್ಲಿ 9000 ರೂ. ನಗರಸಭೆಗೆ ಬಾಡಿಗೆ ನೀಡಬೇಕಾದ ದುಃಸ್ಥಿತಿ

ಜನ ಸಂಚಾರವಿರುವ ಸ್ಥಳಗಳಲ್ಲಿ ವ್ಯಾಪಾರ ಕೇಂದ್ರ ನಿರ್ಮಿಸಿ

ಈ ಹಿಂದೆ ಹಳೆ ಬಸ್ ನಿಲ್ದಾಣ ಕೇಂದ್ರದಲ್ಲಿ ಬೀದಿ ವ್ಯಾಪಾರ ನಡೆಸುತ್ತಿದ್ದಾಗ ಉತ್ತಮ ರೀತಿಯಲ್ಲಿ ವ್ಯಾಪಾರ ನಡೆಯುತ್ತಿತ್ತು. ಆದರೆ ಪಾದಚಾರಿಗಳಿಗೆ ತೊಂದರೆ ಉಂಟಾಗುತ್ತದೆ ಎಂಬ ದೃಷ್ಟಿಯಿಂದ ನಗರಸಭೆಯು ಹೊಸ ಬಸ್ ನಿಲ್ದಾಣದ ಜನ ಸಂಚಾರವಿಲ್ಲದ ಜಾಗದಲ್ಲಿ ಬೀದಿ ವ್ಯಾಪಾರ ಕೇಂದ್ರ ನಿರ್ಮಿಸಿ ನೀಡಿದೆ. ಆರಂಭದಲ್ಲಿ ವ್ಯಾಪಾರಿಗಳು ಕೊಠಡಿಯನ್ನು ಬಾಡಿಗೆಗೆ ತೆಗೆದುಕೊಂಡಿದ್ದರೂ ನಂತರ ಯಾವುದೇ ವ್ಯಾಪಾರವಿಲ್ಲದ ಹಿನ್ನೆಲೆಯಲ್ಲಿ ಹೆಚ್ಚಿನ ಅಂಗಡಿಗಳು ಮುಚ್ಚುಗಡೆಗೊಂಡಿವೆ. ಹೆಚ್ಚಾಗಿ ಜನಸಂಚಾರವಿರುವ ಸ್ಥಳಗಳಲ್ಲಿ ಇಂತಹ ವ್ಯಾಪಾರ ಕೇಂದ್ರವನ್ನು ನಿರ್ಮಿಸಿ ನೀಡಿದರೆ ವ್ಯಾಪಾರಿಗಳಿಗೆ ಪ್ರಯೋಜನವಾಗಬಹುದಾಗಿದೆ. ಇಲ್ಲವಾದರೆ ವ್ಯಾಪಾರಿಗಳ ಸ್ಥಿತಿ ಚಿಂತಾಜನಕ ಎಂದು ವ್ಯಾಪಾರಿಗಳು ತಮ್ಮ ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ನವವಿಧ ಭಕ್ತಿಮಯ ನೃತ್ಯ ವೈಭವ: ಬೇಕಲ ಗೋಕುಲಂನಲ್ಲಿ ರಾಷ್ಟ್ರೀಯ ನೃತ್ಯೋತ್ಸವ



ಕಾಸರಗೋಡು: ಪೆರಿಯ ಬೇಕಲ ಗೋಕುಲಂ ಗೋಶಾಲೆಯಲ್ಲಿ ಪರಂಪರಾ ವಿದ್ಯಾಪೀಠದ ಆಶ್ರಯದಲ್ಲಿ ಆಯೋಜಿಸ ಲಾಗಿರುವ ಮೂರನೇ ರಾಷ್ಟ್ರೀಯ ನೃತ್ಯೋತ್ಸವದಲ್ಲಿ ಚೆನ್ನೈನ ಖ್ಯಾತ ನೃತ್ಯಗಾರ್ತಿ ಪ್ರಿಯಾ ಮುರ್ಲೆ ಮತ್ತು ತಂಡದವರು ಪ್ರಸ್ತುತಪಡಿಸಿದ ನವವಿಧ ಭಕ್ತಿ ನೃತ್ಯ ರೂಪಕವು ಕಲಾಭಿಮಾನಿಗಳಿಗೆ ನವ್ಯ ಅನುಭೂತಿಯನ್ನು ನೀಡಿತು.
ಈ ನೃತ್ಯೋತ್ಸವದಲ್ಲಿ ಮಲೆಯಾಳ ಹಾಗೂ ತಮಿಳು ಚಿತ್ರರಂಗದ ಖ್ಯಾತ ನಟಿ ಸಿಂಧು ಶ್ಯಾಮ್ ಅವರು ಭರತನಾಟ್ಯವನ್ನು ಪ್ರಸ್ತುತಪಡಿಸಿದರು. ಅವರ ನೃತ್ಯದ ನಯ ಮತ್ತು ಭಾವಾಭಿನಯವು ಪ್ರೇಕ್ಷಕರ ಅಪಾರ ಮೆಚ್ಚುಗೆಗೆ ಪಾತ್ರವಾಯಿತು.
ಈ ಸಂದರ್ಭ ಉದುಮ ವಿಧಾನಸಭಾ ಕ್ಷೇತ್ರದಲ್ಲಿ ವಿಜೇತರಾದ ಕಾಂಗ್ರೆಸ್ ಅಭ್ಯರ್ಥಿ, ವಕೀಲ ಕೆ.ನೀಲಕಂಠನ್ ಮತ್ತು ಕಾಸರಗೋಡು ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್ ಅವರು ಗೋಶಾಲೆಗೆ ಭೇಟಿ ನೀಡಿ ಕಾರ್ಯಕ್ರಮವನ್ನು ವೀಕ್ಷಿಸಿ ಶುಭಕೋರಿದರು. ಗೋಶಾಲೆಯ ಸಂಸ್ಥಾಪಕರು ಹಾಗೂ ಪರಂಪರಾ ವಿದ್ಯಾಪೀಠದ ಆಚಾರ್ಯರಾದ ವಿಷ್ಣು ಹೆಬ್ಬಾರ್ ಅವರು ಶಾಸಕರು ಮತ್ತು ಸಂಸದರನ್ನು ಗೌರವಪೂರ್ವಕವಾಗಿ ಸನ್ಮಾನಿಸಿದರು.

ನಾಳೆ ಸಮಾಲೋಚನಾ ಸಭೆ

ಕಾಸರಗೋಡು: ಸಿರಿಬಾಗಿಲು ವೆಂಕಪ್ಪಯ್ಯ ಸಾಂಸ್ಕೃತಿಕ ಪ್ರತಿಷ್ಠಾನದ ಶ್ರೀ ಕೇಶವಾನಂದ ಭಾರತೀ ಸ್ಮೃತಿ ಮಂದಿರ ಲೋಕಾರ್ಪಣೆಯು ಶೃಂಗೇರಿ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳವರ ದಿವ್ಯ ಹಸ್ತದಲ್ಲಿ ಮೇ 12ರಂದು ಸಂಜೆ 4 ಗಂಟೆಗೆ ನಡೆಯಲಿದೆ.
ಈ ಕುರಿತು ಸಮಾಲೋಚನೆ ನಡೆಸುವ ನಿಟ್ಟಿನಲ್ಲಿ ಸದಸ್ಯರ ಹಾಗೂ ಹಿತೈಷಿಗಳ ಸಭೆ ಮೇ 8ರಂದು ಸಂಜೆ 5 ಗಂಟೆಗೆ ಸಿರಿಬಾಗಿಲು ಪ್ರತಿಷ್ಠಾನದಲ್ಲಿ ಜರಗಲಿದೆ. ಎಲ್ಲಾ ಸದಸ್ಯರು ಸಭೆಗೆ ಆಗಮಿಸಿ ಸಲಹೆ ಸೂಚನೆಯನ್ನು ನೀಡಿ ಯಶಸ್ವಿಗೊಳಿಸಬೇಕಾಗಿ ಸಿರಿಬಾಗಿಲು ಪ್ರತಿಷ್ಠಾನದ ಪ್ರಕಟಣೆಯಲ್ಲಿ ವಿನಂತಿಸಲಾಗಿದೆ.

ಕಿಳಿಂಗಾರು ದಿ. ಸಾಯಿರಾಂ ಭಟ್ ಕುಟುಂಬದಿಂದ ಧನಸಹಾಯ ವಿತರಣೆ



ಬದಿಯಡ್ಕ: ಬಡಜನರ ಆಶೋತ್ತರಗಳನ್ನು ಈಡೇರಿಸುವಲ್ಲಿ ನಿರಂತರ ತೊಡಗಿ ಕೊಂಡಿರುವ ಕಿಳಿಂಗಾರು ದಿ.ಸಾಯಿರಾಂ ಭಟ್ ಕುಟುಂಬದ ವತಿಯಿಂದ ಬುಧವಾರ ಬಡಜನತೆಗೆ ವಿವಿಧ ನೆರವುಗಳನ್ನು ವಿತರಿಸಿ, ಶುಭಹಾರೈಸಲಾಯಿತು.
ಸಾಯಿರಾಂ ಕೃಷ್ಣ ಭಟ್ ಅವರು ಪ್ರಾಸ್ತಾವಿಕ ಮಾತುಗಳನ್ನಾಡಿ ಸ್ವಾಗತಿಸಿದರು.
ಕುಲ ಪುರೋಹಿತರಾದ ವೇದಮೂರ್ತಿ ಮಹಾಲಿಂಗೇಶ್ವರ ಉಪಾಧ್ಯಾಯ ಮಣಿಮುಂಡ, ವೇದಮೂರ್ತಿ ಕಿಳಿಂಗಾರು ನಡುಮನೆ ಗೋಪಾಲಕೃಷ್ಣ ಭಟ್ ನೆರವು ಹಸ್ತಾಂತರಿಸಿದರು. ಫಲಾನುಭವಿಗಳಾದ ರಮೇಶ್ ಬೇರಿಕೆ ಅವರಿಗೆ ಚಿಕಿತ್ಸಾ ಧನಸಹಾಯ, ಭವ್ಯಾ ಬಾಂಜತ್ತಡ್ಕ, ರಾಜೀವಿ ಬೇಳ ಹಾಗೂ ನಾರಾಯಣ ಮಣಿಯಾಣಿ ಅವರಿಗೆ ಮನೆ ದುರಸ್ತಿಗೆ ಮತ್ತು ಯಶೋಧಾ ಬೇಳ ಅವರಿಗೆ ಮದುವೆಗೆ ಧನಸಹಾಯ ನೀಡಲಾಯಿತು.
ಕಾರ್ಯಕ್ರಮದಲ್ಲಿ ಬದಿಯಡ್ಕ ಗ್ರಾಮ ಪಂಚಾಯತ್ ಅಧ್ಯಕ್ಷ ಶಂಕರ ಡಿ., ಗೋಪಾಲಕೃಷ್ಣ ಭಟ್ ಅಡ್ಯನಡ್ಕ, ಸಂದೇಶ, ವೇಣುಗೋಪಾಲ ಕಿಳಿಂಗಾರು, ಸಂಜೀವ ರೈ ಮೊದಲಾದವರು ಉಪಸ್ಥಿತರಿದ್ದರು.

ಮೇ 8-12ರವರೆಗೆ ಮಲ್ಲ ಶ್ರೀ ಕ್ಷೇತ್ರದಲ್ಲಿ ಶತ ಚಂಡಿಕಾ ಯಾಗ, ಲಕ್ಷಾರ್ಚನಾ ಕಲಶಾಭಿಷೇಕ



ಕಾಸರಗೋಡು: ಮಲ್ಲ ಶ್ರೀ ದುರ್ಗಾಪರ ಮೇಶ್ವರಿ ದೇವಸ್ಥಾನದಲ್ಲಿ ಶ್ರೀ ಸತ್ಯನಾರಾ ಯಣ ಸ್ವಾಮಿಯ ಪ್ರತಿಷ್ಠಾ ಸುವರ್ಣ ಮಹೋತ್ಸವದ ಅಂಗವಾಗಿ ಶತ ಚಂಡಿಕಾ ಯಾಗ ಹಾಗೂ ಲಕ್ಷಾರ್ಚನಾ ಕಲಶಾಭಿಷೇಕ ಮೇ 8ರಿಂದ 12ರ ತನಕ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ.

ಅಷ್ಟೋತ್ತರ ಶತನಾಳಿಕೇರ ಗಣಪತಿ ಹವನ

ಮೇ 8ರಂದು ಬೆಳಿಗ್ಗೆ 8.30ಕ್ಕೆ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಅವರ ದಿವ್ಯ ಸಾನಿಧ್ಯದಲ್ಲಿ ಅಷ್ಟೋತ್ತರ ಶತನಾಳಿಕೇರ ಗಣಪತಿ ಹವನ, ಸ್ವಸ್ತಿ ಪುಣ್ಯಾಹ ವಾಚನ, ಶತ ಚಂಡೀಋತ್ವಿಕ್ ವರಣ, ಸಪ್ತಶತೀ ಪಾರಾಯಣ, ಚತುರ್ವೇದ ಪಾರಾಯಣ, ವಿಷ್ಣು ಭಾಗವತ, ದೇವಿ ಭಾಗವತ ಪಾರಾಯಣ ಆರಂಭಗೊಳ್ಳಲಿದೆ.

ಮೃತ್ಯುಂಜಯ ಹವನ

ಮೇ 9ರಂದು ಬೆಳಗ್ಗೆ 11.30ಕ್ಕೆ ಮೃತ್ಯುಂ ಜಯ ಹವನ ನಡೆಯಲಿದ್ದು, ಮೇ ಮೇ 10ರಂದು ಬೆಳಗ್ಗೆ 11.30ಕ್ಕೆ ಪವಮಾನ ವನ, ಏಕಮತ್ಯಹವನ ನಡೆಯಲಿದೆ.

ಶೃಂಗೇರಿ ಜಗದ್ಗುರು ಶ್ರೀ ಭೇಟಿ

ಮೇ 11ರಂದು ಸಂಜೆ 6.30ಕ್ಕೆ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸನ್ನಿದಾನಂಗಳವರಿಗೆ ಪೂರ್ಣಕುಂಭ ಸ್ವಾಗತ, ಶ್ರೀ ದೇವೀ ದರ್ಶನ, ಧೂಳೀ ಪಾದಪೂಜೆ, ಶ್ರೀ ಚಂದ್ರಮೌಳೀಶ್ವರ ದೇವರ ಪೂಜೆ ಜರಗಲಿದೆ.

ಶತಚಂಡಿಕಾ ಯಾಗ ಪೂರ್ಣಾಹುತಿ

ಮೇ 12ರಂದು ಬೆಳಿಗ್ಗೆ 11 ಗಂಟೆಗೆ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸನ್ನಿಧಾನಗಳವರ ಸಾನಿಧ್ಯದಲ್ಲಿ ಶತ ಚಂಡಿಕಾಯಾಗದ ಪೂರ್ಣಾಹುತಿ, ಗುರುದರ್ಶನ, ಪಾದುಕಾಪೂಜೆ, ಭಿಕ್ಷಾವಂದನೆ, ಫಲಮಂತ್ರಾಕ್ಷತೆ, ರಾತ್ರಿ ಗುರುದರ್ಶನ, ಪಾದುಕಾಪೂಜೆ, ಶ್ರೀ ಚಂದ್ರಮೌಳೀಶ್ವರ ದೇವರ ಪೂಜೆ ಜರಗಲಿದೆ.

ಲಕ್ಷಾರ್ಚನಾ ಕಲಶಾಭಿಷೇಕ

ಮೇ 13ರಂದು ಬೆಳಗ್ಗೆ 9.30ಕ್ಕೆ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳ ವರಿಂದ ಶ್ರೀ ಸತ್ಯನಾರಾಯಣ ದೇವರಿಗೆ ಲಕ್ಷಾರ್ಚನಾ ಕಲಶಾಭಿಷೇಕ, ಅನುಗ್ರಹ ಭಾಷಣ, ಶ್ರೀ ಗುರುದರ್ಶನ, ಪಾದುಕಾಪೂಜೆ, ಗುರುಕಾಣಿಕೆ, ಫಲಮಂತ್ರಾಕ್ಷತೆ ಜರಗಲಿದೆ.

ಅಂಗನವಾಡಿ ಕಾರ್ಯಕರ್ತೆ ಯಶೋದಾ ಟೀಚರ್‌ಗೆ ಬೀಳ್ಕೊಡುಗೆ ಸಮಾರಂಭ



ಮಂಜೇಶ್ವರ: ಉದ್ಯಾವರ ಗುತ್ತು ಅಂಗನವಾಡಿಯಲ್ಲಿ ಕಾರ್ಯಕರ್ತೆಯಾಗಿ ನಿವೃತ್ತಿ ಹೊಂದಿದ ಯಶೋಧಾ ಟೀಚರ್‌ಗೆ ಕೇಂದ್ರದ ಮಕ್ಕಳ ಪೋಷಕರು ಹಾಗೂ ಸ್ಥಳೀಯ ನಾಗರಿಕರ ಪರವಾಗಿ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಲಾಯಿತು.

ಸೇವಾ ಬದ್ಧತೆ ಇತರರಿಗೆ ಮಾದರಿ

ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿದ ಮಂಜೇಶ್ವರ ಗ್ರಾಮ ಪಂಚಾಯತ್ ಉಪಾಧ್ಯಕ್ಷೆ ಫಾತಿಮತ್ ಜೌರಾ ಮಾತನಾಡಿ, ಯಶೋಧಾ ಟೀಚರ್ ಅವರ ಸೇವಾ ಬದ್ಧತೆ ಇತರರಿಗೆ ಮಾದರಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಸರಕಾರದ ಯೋಜನೆಗಳನ್ನು ಜನರ ಬಳಿಗೆ ತಲುಪಿಸುವಲ್ಲಿ ಹಾಗೂ ಅಂಗನವಾಡಿಗೆ ಆಗಮಿಸುವ ಪುಟಾಣಿಗಳ ಕಾಳಜಿ ಮಾಡುವಲ್ಲಿ ಯಶೋಧಾ ಟೀಚರ್ ಅವರಿಗೆ ವಿಶೇಷ ಶ್ರದ್ಧೆ ಆಸಕ್ತಿ, ಪ್ರಾಮಾಣಿಕತೆ ಇತ್ತು ಎಂದು ಅವರು ಶ್ಲಾಘಿಸಿದರು.
ಸಮಗ್ರ ಶಿಶು ಅಭಿವೃದ್ಧಿ ಸೇವೆ ಯೋಜನೆ (ಐಸಿಡಿಎಸ್) ಮೇಲ್ವಿಚಾರಕಿ ಸುಮತಿ ಮಾತನಾಡಿ, ಓರ್ವ ಜನಾನುರಾಗಿ ಅಂಗನವಾಡಿ ಕಾರ್ಯಕರ್ತೆಯನ್ನು ಊರಿನ ಜನರು ಯೋಗ್ಯ ರೀತಿಯಲ್ಲಿ ಬೀಳ್ಕೊಡುತ್ತಿರುವುದು ಒಂದು ಆರೋಗ್ಯಕರ ಸಮಾಜದ ಲಕ್ಷಣವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಸ್ಥಳೀಯ ಮುಖಂಡರಾದ ನೈನಾರ್ ಅಹಮ್ಮದ್, ನಾರಾಯಣ ನಾಯ್ಕ್, ನಾರಾಯಣನ್, ರವಿಚಂದ್ರ, ಸುಲೋಚನಾ ಶುಭಾಶಂಸನೆಗೈದರು.
ಆರೋಗ್ಯ ಇಲಾಖೆಯ ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು ಹಾಗೂ ಮಕ್ಕಳ ಪೋಷಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಆಶಾ ಕಾರ್ಯಕರ್ತೆ ಸೀತಾ ಸ್ವಾಗತಿಸಿ, ರವಿಚಂದ್ರ ಕುಮಾರ್ ಕಾರ್ಯಕ್ರಮ ನಿರೂಪಿಸಿದರು.

ನಮಸ್ತೆ ಕಲೆಕ್ಟರ್ ಯೋಜನೆ: ಮಂಜೇಶ್ವರ ಗೇರುಕಟ್ಟೆ ಉನ್ನತಿ ಮಕ್ಕಳು, ಶಿಕ್ಷಕರು ಭಾಗಿ



ಕಾಸರಗೋಡು: ಜಿಲ್ಲೆಯ ಭವಿಷ್ಯದ ಅಭಿವೃದ್ಧಿಗಾಗಿ ಹೊಸ ಪೀಳಿಗೆಯ ದೃಷ್ಟಿಕೋನಗಳನ್ನು ತಿಳಿದುಕೊಳ್ಳಲು ಮತ್ತು ವಿವಿಧ ಕ್ಷೇತ್ರಗಳ ವಿದ್ಯಾರ್ಥಿಗಳು ಜಿಲ್ಲಾಧಿಕಾರಿಗಳೊಂದಿಗೆ ಸಂವಹನ ನಡೆಸಲು ಕಾಸರಗೋಡು ಜಿಲ್ಲಾಡಳಿತವು ಪ್ರಾರಂಭಿಸಿದ ನಮಸ್ತೆ ಕಲೆಕ್ಟರ್ ಯೋಜನೆಯಡಿ ಬುಧವಾರ ಕಲೆಕ್ಟರೇಟ್‌ನಲ್ಲಿ ಮಂಜೇಶ್ವರದ ಗೇರುಕಟ್ಟೆ ಉನ್ನತಿ (ಕಾಲನಿ)ಯ ಮಕ್ಕಳು– ಶಿಕ್ಷಕರು ಭಾಗವಹಿಸಿದ್ದರು.
ಮಕ್ಕಳು ಜಿಲ್ಲಾಧಿಕಾರಿಗಳಿಗೆ ಹಲವಾರು ಪ್ರಶ್ನೆಗಳನ್ನು ಕೌತುಕದಿಂದ ಕೇಳಿದರು. ನಾಗರಿಕ ಸೇವಾ ಪರೀಕ್ಷೆಯಲ್ಲಿ ಹೇಗೆ ಉತ್ತೀರ್ಣರಾಗಬೇಕು, ಪರೀಕ್ಷೆಗೆ ಹೇಗೆ ಅಧ್ಯಯನ ಮಾಡಬೇಕು, ಏನು ಅಧ್ಯಯನ ಮಾಡಬೇಕು, ಪರೀಕ್ಷಾ ಕೇಂದ್ರಗಳು ಎಲ್ಲಿವೆ ಮೊದಲಾದ ಇನ್ನೂ ಅನೇಕ ವಿಷಯಗಳನ್ನು ನಮಸ್ತೆ ಕಲೆಕ್ಟರ್ ಯೋಜನೆ ಮೂಲಕ ಮಕ್ಕಳು ಕೇಳಿದರು ಮತ್ತು ಉತ್ತರ ಪಡೆದುಕೊಂಡರು.
ಎಲ್ಲಾ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರ ನೀಡಿದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್, ಕಾರ್ಯಕ್ರಮದಲ್ಲಿ ಭಾಗವಹಿಸಿದ ಮಕ್ಕಳಲ್ಲಿ ಕನಿಷ್ಠ ಒಬ್ಬರಾದರೂ ಐಎಎಸ್ ಪಡೆಯಬೇಕು ಎಂದರು. ಅಧ್ಯಯನ ಕೊಠಡಿ ಇಲ್ಲ ಎಂದು ಹೇಳಿದ ಮಗುವಿಗೆ ಸಾಧ್ಯವಾದಷ್ಟು ಬೇಗ ಅಧ್ಯಯನ ಮಾಡಲು ಅಗತ್ಯದ ಕ್ರಮ ತ್ವರಿತಗೊಳಿಸುವಂತೆ ಜಿಲ್ಲಾಧಿಕಾರಿಯವರು ಅಧಿಕಾರಿಗಳಿಗೆ ಸೂಚಿಸಿದರು. ಎಲ್ಲಾ ಸವಾಲುಗಳನ್ನು ಯಶಸ್ಸಿನ ಮೆಟ್ಟಿಲುಗಳಾಗಿ ಪರಿವರ್ತಿಸಬೇಕು ಎಂದು ಹೇಳಿದ ಡೀಸಿ, ಮೊಬೈಲ್, ಸಾಮಾಜಿಕ ಮಾಧ್ಯಮ ಉತ್ತಮ ಉದ್ದೇಶ ಗಳಿಗೆ, ಶೈಕ್ಷಣಿಕಮಟ್ಟ ಸುಧಾರಿಸಲು ಬಳಸಬೇಕೆಂದು ಸಲಹೆ ನೀಡಿದರು.
ಮಕ್ಕಳು ಜಿಲ್ಲಾಧಿಕಾರಿಗಳಲ್ಲಿ ಚಾರಣ ಮತ್ತು ಪರ್ವತಾರೋಹಣ ಆಸಕ್ತಿಗಳ ಬಗ್ಗೆ ಕೇಳಿದರು.
ಕುಟುಂಬಶ್ರೀ ಜಿಲ್ಲಾ ಮಿಷನ್ ಸಂಯೋಜಕ ರತೀಶ್ ಪಿಲಿಕ್ಕೋಡ್ , ಕೊರಗ ವಿಭಾಗದ ಜಿಲ್ಲಾ ಯೋಜನಾ ಸಹಾಯಕ ಸಂಯೋಜಕ ಯದುರಾಜ್ ಪಾಲ್ಗೊಂಡಿದ್ದರು. ಕಳೆದ ಬಾರಿ ಮಂಜೇಶ್ವರ ಗೋವಿಂದ ಪೈ ಸ್ಮಾರಕ ಸರ್ಕಾರಿ ಕಾಲೇಜಿನ ಎನ್ನೆಸ್ಸೆಸ್ ಸ್ವಯಂ ಸೇವಕರು ಜಿಲ್ಲಾಧಿಕಾರಿ ಅವರೊಂದಿಗೆ ಮುಖಾಮುಖಿ ಸಂವಾದ ನಡೆಸಿದ್ದರು.

ವಿಶಿಷ್ಟ ಅನುಭವ

ಕುಟುಂಬಶ್ರೀ ಜಿಲ್ಲಾ ಮಿಷನ್ ನೇತೃತ್ವದಲ್ಲಿ ನಮಸ್ತೆ ಕಲೆಕ್ಟರ್ ಕಾರ್ಯಕ್ರಮ ಜರಗಿತು. ಉನ್ನತಿಯ ಮಕ್ಕಳಿಗೆ ಜಿಲ್ಲಾಧಿಕಾರಿಗಳೊಂದಿಗೆ ಸಂವಹನ ನಡೆಸುವ ಅವಕಾಶ ಒಂದು ವಿಶಿಷ್ಟ ಅನುಭವವಾಗಿತ್ತು. ಈ ವರ್ಗದ ಮಕ್ಕಳು ಜಿಲ್ಲಾಧಿಕಾರಿಗಳೊಂದಿಗೆ ಸಂವಹನ ನಡೆಸುವ ಅವಕಾಶ ಪಡೆಯುವ ಮೂಲಕ ತಮ್ಮ ಹಕ್ಕುಗಳು, ಸವಲತ್ತುಗಳನ್ನು ಕೇಳುವಲ್ಲಿ ನಿರ್ಭೀತ ರಾಗಬೇಕು.



ಮಂಜೇಶ್ವರ ತಾಲೂಕಿನ ವರ್ಕಾಡಿ ಶ್ರೀ ಕಾವೀಃ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಮೇ 30ರಂದು ನಡೆಯಲಿರುವ ಸಾಮೂಹಿಕ ಶ್ರೀ ಶನೈಶ್ಚರ ಪೂಜೆಯ ಆಮಂತ್ರಣ ಪತ್ರಿಕೆಯನ್ನು ಶ್ರೀ ದೇವರ ಸನ್ನಿಧಿಯಲ್ಲಿ ಬಿಡುಗಡೆಗೊಳಿಸಲಾಯಿತು. ಆಡಳಿತ ಮೊಕ್ತೇಸರ ಸುಭಾಶ್ಚಂದ್ರ ಅಡಪ ಕಲ್ಲೂರುಬೀಡು, ಮೊಕ್ತೇಸರರಾದ ಕಿಶೋರ್ ಶೆಟ್ಟಿ ಬಿಟ್ಟುಗದ್ದೆ ಸುರೇಂದ್ರ ನಲ್ಲೆಂಗಿಪದವು, ಅಭಿವೃದ್ಧಿ ಸಮಿತಿ ಅಧ್ಯಕ್ಷ ಪ್ರಭಾಕರ ರೈ ಕಲ್ವನೆ ಮತ್ತಿತರರು ಈ ಸಂದರ್ಭದಲ್ಲಿ ಹಾಜರಿದ್ದರು.

ಅಂತಾರಾಷ್ಟ್ರೀಯ ದಿವ್ಯಾಂಗರ ಪುನರ್ವಸತಿ ಕೇಂದ್ರದ ಬಗ್ಗೆ ವಿಶಿಷ್ಟ ಜಾಗೃತಿ

ಕಾಸರಗೋಡಿನಲ್ಲಿ ಮನಸೂರೆಗೊಂಡ 'ಎಂ.ಕ್ಯೂಬ್' ಕಾರ್ಯಕ್ರಮ

ಕಾಸರಗೋಡು: ಜಿಲ್ಲೆಯ ಮಡಿಕ್ಕೈಯಲ್ಲಿ ಡಿಫರೆಂಟ್ ಆರ್ಟ್ ಸೆಂಟರ್ ನೇತೃತ್ವದಲ್ಲಿ ದಿವ್ಯಾಂಗರ ಪುನಶ್ಚೇತನ, ದಿವ್ಯಾಂಗ ಮಕ್ಕಳಿಗೆ ತರಬೇತಿ ಹಾಗೂ ಅವರನ್ನು ಸ್ವಾವಲಂಬಿಗಳನ್ನಾಗಿಸುವ ಉದ್ದೇಶದಿಂದ ನಿರ್ಮಾಣಗೊಳ್ಳಲಿರುವ ಅಂತಾರಾಷ್ಟ್ರೀಯ ದಿವ್ಯಾಂಗರ ಪುನರ್ವಸತಿ ಕೇಂದ್ರದ ಬಗ್ಗೆ ಜಾಗೃತಿ ಹಾಗೂ ಧನಸಂಗ್ರಹ ನಿಟ್ಟಿನಲ್ಲಿ 'ಎಂ ಕ್ಯೂಬ್' ಎಂಬ ವಿಶಿಷ್ಟ ಕಾರ್ಯಕ್ರಮ ಕಾಸರಗೋಡು ಉದಯಗಿರಿ ಸನಿಹದ ಚೆಟ್ಟುಂಗುಳಿಯ ರಾಯಲ್ ಕನ್ವೆನ್ಶನ್ ಸಭಾಂಗಣದಲ್ಲಿ ಆಯೋಜಿಸಲಾಯಿತು.
ಡಿಫರೆಂಟ್ ಆರ್ಟ್ ಸೆಂಟರ್ ನೇತೃತ್ವದಲ್ಲಿ ಇನ್‌ಸ್ಟಿಟ್ಯೂಟ್ ಫಾರ್ ಪೀಪಲ್ ವಿತ್ ಡಿಸೇಬಿಲಿಟೀಸ್ (ಐಐಪಿಡಿ) ಹಾಗೂ ಗೋಪಿನಾಥ್ ಮುತ್ತುಕ್ಕಾಡ್ ತಂಡ ಸುಮಾರು 3 ತಾಸುಗಳ ಕಾಲ ನಡೆಸಿಕೊಟ್ಟ ಮ್ಯೂಸಿಕ್ – ಸಂಗೀತ ಕಾರ್ಯಕ್ರಮಕ್ಕೆ ಧಾರ್ಮಿಕ ಮುಖಂಡ ಮುನವರಲಿ ಶಿಹಾಬ್ ತಂಙಳ್, ಸಿ.ಎಚ್.ಕುಞಂಬು, ಮಾಜಿ ಫುಟ್ಬಾಲ್ ತಾರೆ ಐ.ಎಂ.ವಿಜಯನ್ ಅತಿಥಿಗಳಾಗಿದ್ದರು.
ಕಾಸರಗೋಡು ಪ್ರೆಸ್‌ಕ್ಲಬ್ ಅಧ್ಯಕ್ಷ ಸಿಜು ಕಣ್ಣನ್ ಕಾರ್ಯಕ್ರಮದ ಸಂವಹನಕಾರರಾಗಿ ಸಹಕರಿಸಿದರು. ಗೋಪಿನಾಥ್ ಮುತ್ತುಕ್ಕಾಡ್ ತಂಡದ ಅದ್ಭುತ ಮ್ಯಾಜಿಕ್ ಶೋಗೆ ಹಿನ್ನೆಲೆ ಗಾಯಕರಾದ ಆರ್.ರವಿಶಂಕರ್, ಚಿತ್ರಾ ಅರುಣನ್, ಪಿಟೀಲು ವಾದಕ ವಿಷ್ಣು ಅಶೋಕ್ ಜೊತೆಯಾಗಿದ್ದರು.



ಮನಸೂರೆಗೊಳಿಸಿತು

ಖ್ಯಾತ ಜಾದೂಗಾರ ಗೋಪಿನಾಥ್ ಮುತ್ತುಕ್ಕಾಡ್ ನೇತೃತ್ವದಲ್ಲಿ ಮ್ಯಾಜಿಕ್ , ಸಂಗೀತ ಸಂಯೋಜಿಸಿಕೊಂಡು ಕಾಸರಗೋಡು ಜಿಲ್ಲೆಯ ಎಂಡೋಸಲ್ಫಾನ್ ದುಷ್ಪರಿಣಾಮ ಪೀಡಿತರು ಸೇರಿದಂತೆ ಕೇರಳದ ದಿವ್ಯಾಂಗ ಮಕ್ಕಳನ್ನು ಸೇರಿಸಿಕೊಂಡು ನಡೆಸಿದ ಮ್ಯಾಜಿಕ್, ಸಂಗೀತ ಕಾರ್ಯಕ್ರಮ ಪ್ರೇಕ್ಷಕರ ಮನಸೂರೆಗೊಳಿಸಿತು.

ಕಾಸರಗೋಡಿನಲ್ಲಿ ನಡೆದ ಮೊದಲ ಕಾರ್ಯಕ್ರಮ

ಕಾಸರಗೋಡಿನ ಮಡಿಕ್ಕೈಯಲ್ಲಿ ಡಿಫರೆಂಟ್ ಆರ್ಟ್ ಸೆಂಟರ್‌ನ ನೇತೃತ್ವದ ಐಐಪಿಡಿ ಮೂಲಕ ದಿವ್ಯಾಂಗ ಮಕ್ಕಳಿಗೆ ತರಬೇತಿ ನೀಡುವ ಮತ್ತು ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡುವ ಉದ್ದೇಶ ದಿಂದ 120 ಕೋಟಿ ರೂ. ವೆಚ್ಚದಲ್ಲಿ ಸುಸಜ್ಜಿತ ಕೇಂದ್ರ ತಲೆಯೆತ್ತಲಿದೆ. 'ಎಂ ಕ್ಯೂಬ್' ಕಾರ್ಯಕ್ರಮದ ಮೂಲಕ ಈಗಾಗಲೇ ವಿಶ್ವದ 9 ದೇಶಗಳಲ್ಲಿ ಕಾರ್ಯಕ್ರಮ ನಡೆಸಿಕೊಡಲಾಗಿದ್ದು, ಕಾಸರಗೋಡಿನಲ್ಲಿ ನಡೆದ ಕಾರ್ಯಕ್ರಮ ದೇಶದ ಮೊದಲ ಕಾರ್ಯಕ್ರಮವಾಗಿತ್ತು.

ಕುಂಬಳೆ ಶೇಡಿಕಾವು ಮೈದಾನದಲ್ಲಿ ಸೀನಿಯರ್ ಟೀಚರ್ಸ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾಟ

ಕುಂಬಳೆ: ಸೀನಿಯರ್ ಟೀಚರ್ಸ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾಟ ಕುಂಬಳೆ ಶೇಡಿಕಾವು ಮೈದಾನದಲ್ಲಿ ಜರಗಿತು. ನಿವೃತ್ತ ದೈಹಿಕ ಶಿಕ್ಷಕ ಬಾಲಕೃಷ್ಣ ಶೆಟ್ಟಿ ಕಾಟುಕುಕ್ಕೆ ಕ್ರಿಡಾ ಕೂಟವನ್ನು ಉದ್ಘಾಟಿಸಿದರು.

ಮಾನಸಿಕ– ದೈಹಿಕ ಆರೋಗ್ಯಕ್ಕೆ ಕ್ರೀಡೆ ಪೂರಕ

ಈ ಸಂದರ್ಭ ಮಾತನಾಡಿದ ಅವರು, ದೈಹಿಕ ಆರೋಗ್ಯದ ಕ್ಷಮತೆ ಹೆಚ್ಚಿಸುವ ಈ ಅಧ್ಯಾಪಕರ ಪಂದ್ಯಾಟವು ಪ್ರಶಂಸನೀಯವಾಗಿದೆ. ಕ್ರಿಯಾತ್ಮಕ ಕಲಿಕೆಯ ಜೊತೆಗೆ ಮಕ್ಕಳ ಜೊತೆ ಬೆರೆಯುವ ಅಧ್ಯಾಪಕರೆಲ್ಲರೂ ಒಂದು ಕಡೆ ಒಟ್ಟು ಸೇರಿ ಕ್ರೀಡೆಯಲ್ಲಿ ಭಾಗವಹಿಸುವುದು ಮಾನಸಿಕ– ದೈಹಿಕ ಆರೋಗ್ಯಕ್ಕೂ ಇದು ಪೂರಕವಾಗಿದೆ ಎಂದರು.
ಕ್ರೀಡಾಕೂಟ ಸಂಘಟಕರಾದ ಅಶೋಕ್ ಮಾಸ್ಟರ್ ಕೊಡ್ಲಮೊಗರು ಅಧ್ಯಕ್ಷೆಯಲ್ಲಿ ಜರಗಿದ ಕಾರ್ಯಕ್ರಮ ದಲ್ಲಿ ತೀರ್ಪುಗಾರರಾದ ಕೋಟಿ ಪೂಜಾರಿ, ನಿವೃತ್ತ ಶಿಕ್ಷಕ ಮಹಾಲಿಂಗೇಶ್ವರ ಎನ್., ದಿನೇಶ್ ಮಾಸ್ಟರ್ ಕುಂಬಳೆ, ಮಿಥುನ್ ಸ್ವರ್ಗ, ಹರಿನಾಥ ಶೆಟ್ಟಿ ಕುಬಣೂರು, ಪ್ರಶಾಂತ್ ಕುಂಟಿಕಾನ, ಉದಯ ಶೆಟ್ಟಿ ಸುಳ್ಯಮೆ ಮೊದಲಾದವರು ಈ ಸಂದರ್ಭ ಉಪಸ್ಥಿತರಿದ್ದರು. ಕ್ರಿಡಾ ಸಂಚಾಲಕ ಉದಯ ಸರಂಗ ನಿರೂಪಿಸಿದರು.



website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb

ಸುತ್ತಮುತ್ತ

ಅವಧಿ ವಿಸ್ತರಣೆ

ಉಡುಪಿ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಾಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ -1 ರ ಅಲೆಮಾರಿ, ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ 2025-26 ನೇ ಸಾಲಿಗೆ ಇಲಾಖೆಯ ಮೂಲಕ ನೀಡಲಾಗುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ, ಅಲೆಮಾರಿ, ಅರೆ ಅಲೆಮಾರಿ ಜನಾಂಗದ ಮೆಟ್ರಿಕ್ ನಂತರದ ಅರ್ಹತಾ ವಿದ್ಯಾರ್ಥಿವೇತನ, ಶುಲ್ಕ ಮರುಪಾವತಿ ಮತ್ತು ವಿದ್ಯಾಸಿರಿ ಊಟ ಮತ್ತು ವಸತಿ ಸಹಾಯ ಯೋಜನೆಯ ಸೌಲಭ್ಯಕ್ಕಾಗಿ ವೆಬ್‌ಸೈಟ್ https://ssp.postmatric.karnataka.gov.inನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಧಿಯನ್ನು ಮೇ 16 ರ ವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ 805077004 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಇಲಾಖೆಯ ಅಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಮೊದಲನೇ ಪುಟದಿಂದ

ವಿವಿಧೆಡೆ ಮಳೆ

ಮಂಗಳೂರು ಗ್ರಾಮಾಂತರದ ಹಲವೆಡೆ ಉತ್ತಮ ಮಳೆಯಾಗಿದ್ದು, ಕೈಕಂಬ, ಗಂಜಿಮಠ, ಮಳಲಿ, ಮುತ್ತೂರು, ಬೊಳಿಯ, ಎಡಪದವು ಮತ್ತು ಕುಪ್ಪೆಪದವು ಸುತ್ತಮುತ್ತ ಮಂಗಳವಾರ ರಾತ್ರಿ ಸಾಧಾರಣ ಮಳೆ ಸುರಿದಿದೆ. ಬೊಳಿಯ, ಮುತ್ತೂರು, ಕುಪ್ಪೆಪದವು ಮತ್ತು ಮಳಲಿ ಸುತ್ತಮುತ್ತ ಭಾರೀ ಮಳೆ ಸುರಿದಿದ್ದು, ಎಡಪದವು, ಗುರುಪುರ ಸುತ್ತಮುತ್ತ ಸಾಧಾರಣ ಮಳೆ ಸುರಿದಿದೆ. ಮಳೆಯ ಜೊತೆ ಸಾಧಾರಣವಾಗಿ ಬೀಸಿದ ಗಾಳಿಗೆ ಅಲ್ಲಲ್ಲಿ ವಿದ್ಯುತ್ ಕೈ ಕೊಟ್ಟಿತ್ತು. ವಿಪರೀತ ಸೆಖೆಗೆ ಮಳೆ ಸ್ವಲ್ಪ ಮಟ್ಟಿಗೆ ತಂಪೆರೆದಿದ್ದರೂ ಬುಧವಾರ ಸೆಖೆ ಹೆಚ್ಚಾಗುವಂತೆ ಮಾಡಿತ್ತು. ಪುತ್ತೂರು ಮತ್ತು ಸುಳ್ಯದ ಗ್ರಾಮೀಣ ಪ್ರದೇಶಗಳಲ್ಲಿ ರಾತ್ರಿ ವೇಳೆ ಉತ್ತಮವಾಗಿ ಮಳೆ ಸುರಿಯಿತು.

ಹೊಟೇಲ್ ಬಂದ್

ಪ್ರತಿಭಟನಾ ಮುಷ್ಕರಕ್ಕೆ ಕೇರಳ ವ್ಯಾಪಾರಿ ವ್ಯವಸಾಯಿ ಏಕೋಪನಾ ಸಮಿತಿ, ಆಲ್ ಕೇರಳ ಕೇಟರರ್ಸ್ ಅಸೋಸಿ ಯೇಶನ್, ಹಾಸ್ಟೆಲ್ ಓನರ್ಸ್ ಅಸೋಸಿಯೇಶನ್ ಮುಂತಾದ ಸಂಘಟನೆಗಳು ಬೆಂಬಲ ಸೂಚಿಸಿದ್ದವು. ಮುಷ್ಕರ ನಿರತ ಸಂಘಟನೆಗಳು ಕಾಸರಗೋಡು ಜಿಲ್ಲೆಯ ವಿವಿಧ ಕೇಂದ್ರ ಸರಕಾರಿ ಕಚೇರಿಗಳ ಮುಂಭಾಗದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದವು.
ಅಸೋಸಿಯೇಶನ್‌ನ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಕಾಸರಗೋಡು ನಗರದಲ್ಲಿ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಯಿತು. ಸಂಘಟನೆಯ ಜಿಲ್ಲಾಧ್ಯಕ್ಷ ಕೆ.ರಘುವೀರ್ ಪೈ, ಕಾರ್ಯದರ್ಶಿ ಬಿಜು ಚುಳ್ಳಿಕ್ಕರ, ರಾಜ್ಯ ಸಮಿತಿ ಕಾರ್ಯದರ್ಶಿ ನಾರಾಯಣ ಪೂಜಾರಿ, ಇತರ ಪದಾಧಿಕಾರಿಗಳಾದ ಮೊಹಮ್ಮದ್ ಗಸ್ಸಾಲಿ, ಕೆ.ಬಿ.ಅಜೇಶ್, ಪ್ರಕಾಶನ್, ಶ್ರೀಧರ ಉಪ್ಪಳ, ರಾಜನ್ ಕಳ್ಕರ ಪ್ರತಿಭಟನೆಗೆ ನೇತೃತ್ವ ವಹಿಸಿದ್ದರು. ಕೇರಳ ರಾಜ್ಯದಾದ್ಯಂತ ಪ್ರತಿಭಟನೆ ಆಯೋಜಿಸಲಾಗಿತ್ತು.

ಪಂಜಿನ ಮೆರವಣಿಗೆ

ಜಿಲ್ಲಾ ಕೋಶಾಧಿಕಾರಿ ಮೊಹಮ್ಮದ್ ಗಸ್ಸಾಲಿ, ಕುಂಬಳೆ ಘಟಕದ ಅಧ್ಯಕ್ಷ ಸಿದ್ದಿಕ್ ಮುಬಾರಕ್, ಕಾರ್ಯದರ್ಶಿ ಸವಾದ್, ಕೋಶಾಧಿಕಾರಿ ಚರಣ್ ಕುಮಾರ್, ಜೊತೆ ಕಾರ್ಯದರ್ಶಿಗಳಾದ ಆರ್.ಅಫ್ರಾತ್, ಮುನೀರ್, ಎನ್.ಅಬ್ದುಲ್ಲ ಮಮ್ಮು ಮುಬಾರಕ್, ವೆಂಕಟೇಶ್ವರ ಹೆಬ್ಬಾರ್ ಮುಂತಾದವರು ಪಾಲ್ಗೊಂಡಿದ್ದರು.

ಕೆರೆ

ಮೂಡಾ ಅಭಿವೃದ್ಧಿ ಪ್ರಾಧಿಕಾರ ಮುಲ್ಕಿ ಜನತೆಯ ತೆರಿಗೆ ಮಾತ್ರ ಸಂಗ್ರಹಿಸುತ್ತದೆ ವಿನಹ ಯಾವುದೇ ಸೌಲಭ್ಯಗಳನ್ನು ನೀಡುತ್ತಿಲ್ಲ ಎಂದು ಅವರು ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೂಡಲೇ ಮೂಡಾ ಅಭಿವೃದ್ಧಿ ಪ್ರಾಧಿಕಾರ ಕೆರೆ ಅಭಿವೃದ್ಧಿ ಕಾಮಗಾರಿ ನಡೆಸಬೇಕು ಇಲ್ಲದಿದ್ದರೆ ಸಂಬಂಧಪಟ್ಟ ಇಲಾಖೆ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಅವರು ಎಚ್ಚರಿಸಿದ್ದಾರೆ.

ಜಲಮೂಲ

ಕಾಸರಗೋಡು ನಗರಸಭಾ ವ್ಯಾಪ್ತಿಯಲ್ಲಿ ನೀರಿನ ಭಾರೀ ತತ್ವಾರ ಕಂಡುಬಂದಿದೆ. ಹೊಳೆಗಳಲ್ಲಿ ನೀರಿನ ಹರಿವು ಬಹುತೇಕವಾಗಿ ನಿಂತಿದ್ದು ಇದರಿಂದಾಗಿ ಕೃಷಿಗೆ ಆವಶ್ಯಕತೆಗೆ ತಕ್ಕಂತೆ ನೀಡು ಲಭಿಸದೆ ಕೃಷಿಕರು ಕಂಗಾಲಾಗಿದ್ದಾರೆ. ಬೇಸಿಗೆ ಮಳೆ ಇನ್ನೂ ಕೆಲವು ದಿನಗಳ ಕಾಲ ಸುರಿಯದಿದ್ದರೆ ಅಡಿಕೆ, ತೆಂಗಿನ ತೋಟಗಳಿಗೆ ಅಲ್ಲದೆ ಜನರಿಗೆ ಕುಡಿಯಲು ನೀರಿಲ್ಲದೆ ಹಾಹಾಕಾರ ತಲೆದೋರುವ ಆತಂಕ ಎದುರಾಗಿದೆ.

ಶ್ರೀ ಪಂಚಲಿಂಗೇಶ್ವರ ದೇವಸ್ಥಾನ, ಪ್ರವಾಸಿ ಸ್ಥಳಗಳನ್ನು ವೀಕ್ಷಿಸಿದ ಸಚಿವ ಎಚ್.ಕೆ.ಪಾಟೀಲ್ ಭರವಸೆ

ಐತಿಹಾಸಿಕ ಬಾರಕೂರು ಗತವೈಭವ ಮತ್ತೆ ಮರುಕಳಿಸಲು ಕ್ರಮ



ಉಡುಪಿ: ಬಾರಕೂರಿನ ಐತಿಹಾಸಿಕ ಮಹತ್ವವುಳ್ಳ ಕೋಟೆ-ಕೊತ್ತಲ, ಗುಡಿ ಗೋಪುರ ಸೇರಿದಂತೆ ಇಲ್ಲಿನ ಗತವೈಭವವನ್ನು ಸಾರುವ ಆಸ್ತಿಗಳನ್ನು ಸಂರಕ್ಷಿಸಿ, ಅವುಗಳ ಮೂಲಸ್ವರೂಪಕ್ಕೆ ಧಕ್ಕೆಯಾಗದ ರೀತಿಯಲ್ಲಿ ದುರಸ್ತಿ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಪುನರುಜ್ಜೀವನ ಗೊಳಿಸಿ, ಇಲ್ಲಿನ ಭವ್ಯ ಪರಂಪರೆಯನ್ನು ಹಾಗೂ ಈ ನಾಡನ್ನು ಆಳಿದ ಆಳುಪರ ಆಡಳಿತ ವ್ಯವಸ್ಥೆ ಬಗ್ಗೆ ಮುಂದಿನ ಪೀಳಿಗೆಗೆ ತಿಳಿಸುವ ಕೆಲಸ ಆಗಬೇಕಿದೆ ಎಂದು ಪ್ರವಾಸೋದ್ಯಮ ಇಲಾಖೆ ಸಚಿವ ಎಚ್.ಕೆ. ಪಾಟೀಲ್ ಹೇಳಿದರು.

ಬ್ರಹ್ಮಾವರ ತಾಲೂಕು ಬಾರಕೂರಿನ ಶ್ರೀ ಪಂಚಲಿಂಗೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ, ಸುತ್ತಮುತ್ತಲಿನ ಪ್ರವಾಸಿ ಸ್ಥಳಗಳ ವೀಕ್ಷಿಸಿ, ನಂತರ ಪಂಚಲಿಂಗೇಶ್ವರ ದೇಗುಲ ಆವರಣದಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಇತಿಹಾಸದ ಸಂರಕ್ಷಣೆ ಆದ್ಯ ಕರ್ತವ್ಯ

ಇತ್ತೀಚಿನ ದಿನಗಳಲ್ಲಿ ಗತವೈಭವನ್ನು ತಿಳಿಸುವ ನಮ್ಮ ನಾಡಿನ ಇತಿಹಾಸ ಮರೆಯಾಗಿ ಹೋಗುತ್ತಿದ್ದು ಅತ್ಯಂತ ಜವಾಬ್ದಾರಿ ಹೊಂದಿರುವ ಅಧಿಕಾರಿಗಳು ಈ ಬಗ್ಗೆ ಹೆಚ್ಚಿನ ಗಮನ ಹರಿಸಬೇಕಿದೆ. ನಮ್ಮ ಇತಿಹಾಸವನ್ನು ನೆನಪಿಸಿಕೊಳ್ಳುವಂತಹ, ಇತಿಹಾಸದ ಮಹತ್ವವನ್ನು ಸಾರುವಂತಹ ಪ್ರತೀ ಕಲ್ಲುಗಳನ್ನು ಸಂರಕ್ಷಿಸುವ ಕೆಲಸ ನಮ್ಮ ಆದ್ಯ ಕರ್ತವ್ಯವಾಗಿದೆ. ಇದರಲ್ಲಿ ವಿಫಲರಾಗಬಾರದು ಎಂದರು.

ಜಗದೀಶ್ ಶೆಟ್ಟರ್ ನೇತೃತ್ವದಲ್ಲಿ ಸಮಿತಿ

ಬಾರಕೂರಿನ ಐತಿಹಾಸಿಕ ಶ್ರೀಮಂತಿಕೆಯನ್ನು ಮರುಸೃಷ್ಟಿಸುವ ನಿಟ್ಟಿನಲ್ಲಿ ಜಗದೀಶ್ ಶೆಟ್ಟರ್ ಅವರ ನೇತೃತ್ವದಲ್ಲಿ ಅಧಿಕೃತ ಸಮಿತಿಯನ್ನು ರಚಿಸುವುದರೊಂದಿಗೆ ಬಾರಕೂರು ಇತಿಹಾಸವನ್ನು ಪುನರುಜ್ಜೀವನ ಗೊಳಿಸಲು ಅಗತ್ಯವಿರುವ ಯೋಜನಾ ವರದಿಯನ್ನು ಶೀಘ್ರವಾಗಿ ನೀಡುವಂತೆ ತಿಳಿಸಿದ ಅವರು, ಮೂಲಸ್ವರೂಪಕ್ಕೆ ಧಕ್ಕೆ ಆಗದಂತೆ ಬಾರಕೂರಿನ ಗತವೈಭವ ಮತ್ತೆ ವಿಜೃಂಭಿಸಲು ಕ್ರಮವಹಿಸಲಾಗುವುದು ಎಂದರು.

ಲಕ್ಕುಂಡಿಯಲ್ಲಿ ಮ್ಯೂಸಿಯಂ

ಇತ್ತೀಚೆಗೆ ಲಕ್ಕುಂಡಿಯ ಬಾವಿ, ಕೆರೆ-ಕಟ್ಟೆಗಳಲ್ಲಿ ದೊರೆತ ಅತ್ಯದ್ಭುತವಾದ ಸುಮಾರು 3500 ಪ್ರಾಚ್ಯಾವಶೇಷಗಳನ್ನು ಸಂಗ್ರಹಿಸಿ, ಬಯಲು ಮ್ಯೂಸಿಯಂ ಮಾಡಲು ನಿರ್ಧರಿಸಲಾಗಿದೆ. ಒಂದೇ ಹಳ್ಳಿಯಲ್ಲಿ ಭಾರೀ ಪ್ರಮಾಣದಲ್ಲಿ ಪ್ರಾಚ್ಯಾವಶೇಷ ದೊರೆತಿದ್ದು ಈ ಸ್ಥಳಕ್ಕೆ ಬಹುದೊಡ್ಡ ಇತಿಹಾಸವಿದೆ. ಈಗಾಗಲೇ ಸುಮಾರು 35 ದೇವಸ್ಥಾನ, 35 ಬಾವಿ ಗುರುತಿಸಿ, ಸಂರಕ್ಷಿಸಿ, ದುರಸ್ತಿಗೊಳಿಸಿ, ರಕ್ಷಣೆ ಮಾಡುತ್ತಿದ್ದು ಅವುಗಳ ಮೂಲ ಸ್ವರೂಪಕ್ಕೆ ತರಲಾಗುತ್ತಿದೆ. ವರ್ಷ ಪೂರ್ಣಗೊಳ್ಳುವ ಒಳಗೆ ಇತಿಹಾಸದಲ್ಲಿ ಉಲ್ಲೇಖಿಸಿದಂತೆ ಲಕ್ಕುಂಡಿಯಲ್ಲಿರುವ 101 ಬಾವಿ, 101 ದೇವಸ್ಥಾನಗಳನ್ನು ಗುರುತಿಸಿ, ಅವುಗಳನ್ನು ಅನಾವರಣಗೊಳಿಸುವ ಯೋಜನೆ ರೂಪಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಕರಾವಳಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಂ.ಎ. ಗಫೂರ್, ಪಂಚ ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿಯ ಜಿಲ್ಲಾ ಅಧ್ಯಕ್ಷ ಅಶೋಕ್ ಕುಮಾರ್ ಕೊಡವೂರು, ಜಗದೀಶ್ ಶೆಟ್ಟರ್, ಶ್ರೀ ಪಂಚಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಸುಗ್ಗಿ ಸುಧಾಕರ ಶೆಟ್ಟಿ, ನಾಯಕರಾದ ಮೊಳಹಳ್ಳಿ ದಿನೇಶ್, ಹಿರಿಯರಾದ ಶಾಂತಾರಾಮ್ ಶೆಟ್ಟಿ ಆಳುಪ ಮನೆತನದ ಆಕಾಶ್‌ರಾಜ್ ಜೈನ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಬಾರ್ಕೂರು ಆಡಳಿತ ಮುಂದಿನ ಪೀಳಿಗೆಗೆ ಮಾದರಿ

ಬಾರ್ಕೂರು ರಾಜ್ಯವನ್ನು ಆಳುಪರು ದೀರ್ಘಾವಧಿ ಆಳಿದರು ಎಂಬುದೇ ಜಾಗತಿಕ ಇತಿಹಾಸ. ಇಷ್ಟು ದೊಡ್ಡ ಮಟ್ಟದಲ್ಲಿ ಆಳ್ವಿಕೆ ನಡೆಸಿರುವ ಆಳುಪರ ಆಡಳಿತ ವೈಖರಿ, ಯುವಪೀಳಿಗೆಗೆ ತಿಳಿಸಬೇಕಿದೆ ಎಂದು ಸಚಿವ ಎಚ್.ಕೆ. ಪಾಟೀಲ್ ಹೇಳಿದರು. ಆಳ್ವಿಕೆ ವೇಳೆ ಜನರು ದಂಗೆ ಏಳದೇ, ಅಕ್ಕಪಕ್ಕದ ರಾಜ್ಯದ ರಾಜರು ಹೋರಾಟ ಮಾಡದೇ ಶಾಂತಿಯುತವಾಗಿ ಆಡಳಿತ ನಡೆಸಿದ ರಾಜರನ್ನು ನೆನಪಿನಲ್ಲಿ ಇಟ್ಟುಕೊಳ್ಳುವಂತ ಮನಸ್ಥಿತಿ ಪ್ರತಿಯೊಬ್ಬರಲ್ಲಿಯೂ ಇರಬೇಕು ಎಂದರು.

ಬಿಜೆಪಿ ಯುವಮೋರ್ಚಾದಿಂದ ಜಿಲ್ಲಾಧಿಕಾರಿಗಳಿಗೆ ಮನವಿ

ಉಡುಪಿ ಅಗ್ನಿಶಾಮಕ ದಳ ಬಲವರ್ಧನೆ ಆಗ್ರಹ



ಉಡುಪಿ: ಜಿಲ್ಲೆಯ ಬಗ್ಗೆ ರಾಜ್ಯ ಸರ್ಕಾರದ ನಿರ್ಲಕ್ಷ್ಯ ಧೋರಣೆ ಕೈಬಿಟ್ಟು ಜಿಲ್ಲೆಯ ಅಗ್ನಿಶಾಮಕ ದಳದ ಬಲವರ್ಧನೆ ಮಾಡಿ ಅಗ್ನಿಶಾಮಕ ದಳಕ್ಕೆ ಹೆಚ್ಚುವರಿ ವಾಹನ ಹಾಗೂ ಅಗತ್ಯ ಸಿಬ್ಬಂದಿ ನೇಮಕ ಮಾಡುವಂತೆ ಆಗ್ರಹಿಸಿ ಬಿಜೆಪಿ ಯುವಮೋರ್ಚಾ ವತಿಯಿಂದ ಮುಖ್ಯಮಂತ್ರಿಗಳಿಗೆ ಉಡುಪಿ ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಿದರು.

ಉಡುಪಿ ಜಿಲ್ಲೆಯ ಬಗ್ಗೆ ರಾಜ್ಯ ಸರ್ಕಾರದ ನಿರ್ಲಕ್ಷ್ಯ ಧೋರಣೆಯ ಕುರಿತು ಜಿಲ್ಲೆಯ ಅಗ್ನಿಶಾಮಕ ದಳದ ತುರ್ತು ಸೇವಾ ವೈಫಲ್ಯವೇ ಸಾಕ್ಷಿ. ಮೊನ್ನೆ ಉಡುಪಿ ನಗರದ ಹೃದಯ ಭಾಗದಲ್ಲಿ ಅಗ್ನಿ ಅವಘಡ ಸಂಭವಿಸಿದಾಗ ಕೇವಲ 2 ಕಿ.ಮೀ. ದೂರದ ಘಟನಾ ಸ್ಥಳಕ್ಕೆ ಅಗ್ನಿಶಾಮಕ ದಳ ತಲುಪಲು 45 ನಿಮಿಷ ತೆಗೆದುಕೊಳ್ಳುವ ಮೂಲಕ ಅಗ್ನಿಶಾಮಕ ದಳದ ತುರ್ತು ಕಾರ್ಯಾಚರಣೆ ಸಾಮರ್ಥ್ಯದ ಬಗ್ಗೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಈ ಬಗ್ಗೆ ಹಲವು ಬಾರಿ ಸರ್ಕಾರಕ್ಕೆ ಉಡುಪಿ ನಗರದ ಅಗ್ನಿಶಾಮಕ ದಳಕ್ಕೆ ಹೆಚ್ಚುವರಿ ವಾಹನ ಹಾಗೂ ಖಾಲಿ ಹುದ್ದೆಗಳ ಭರ್ತಿ ಮಾಡುವಂತೆ ಮನವಿ ಮಾಡಿದ್ದರೂ ಈವರೆಗೂ ಪೂರಕವಾಗಿ ಸ್ಪಂದಿಸಿಲ್ಲ, ಉಡುಪಿ ಜಿಲ್ಲೆಯಾಗಿ 28 ವರ್ಷಗಳು ಕಳೆದರೂ ತುರ್ತು ಕಾರ್ಯಾಚರಣೆ ಸಂದರ್ಭದಲ್ಲಿ ನೆರೆಯ ಜಿಲ್ಲೆಯನ್ನು ಅವಲಂಬಿಸುವ ಸನ್ನಿವೇಶ ನಿರ್ಮಾಣವಾಗಿರುವುದು ದುರದೃಷ್ಟಕರ. ಮಣಿಪಾಲ ಹಾಗೂ ಬ್ರಹ್ಮಾವರ ಭಾಗಕ್ಕೆ ಅಗ್ನಿಶಾಮಕ ದಳದ ಬೇಡಿಕೆಗೆ ಈಗ ಮಂಜೂರಾತಿ ನೀಡಿದ್ದರೂ, ಬ್ರಹ್ಮಾವರ ಅಗ್ನಿಶಾಮಕದಳ ಘಟಕಕ್ಕೆ ಇನ್ನು ಅನುದಾನ ಮಂಜೂರಾತಿ ಆಗಿಲ್ಲ, ಅಗ್ನಿಶಾಮಕ ದಳದಲ್ಲಿ 15 ವರ್ಷ ಹಳೆಯದಾದ ವಾಹನಗಳು ಸೇವೆಗೆ ಲಭ್ಯವಾಗದ ಕಾರಣ ಹೊಸ ವಾಹನಗಳ ಮಂಜೂರಾತಿಗೂ ರಾಜ್ಯ ಸರಕಾರ ಮೀನ ಮೇಷ ಎಣಿಸುತ್ತಿರುವುದು ಆತಂಕಕರವಾಗಿದೆ. ಮೊನ್ನೆ ಉಡುಪಿಯಲ್ಲಿ ಅಗ್ನಿ ಅವಘಡದಿಂದ ಕೋಟ್ಯಾಂತರ ರೂಪಾಯಿ ನಷ್ಟ ಅನುಭವಿಸಿದ ಅಂಗಡಿ ಮಾಲೀಕರಿಗೆ ಸರಕಾರ ತಕ್ಷಣ ಗರಿಷ್ಠ ಪರಿಹಾರ ನೀಡಬೇಕು. ಅಲ್ಲದೇ, ಮೀನುಗಾರಿಕೆ, ಆರೋಗ್ಯ, ಶಿಕ್ಷಣ, ಬ್ಯಾಂಕಿಂಗ್, ಕೈಗಾರಿಕಾ ಕ್ಷೇತ್ರದಲ್ಲಿ ದಿನೇ ದಿನೇ ಬೆಳೆಯುತ್ತಿರುವ ಉಡುಪಿ ಜಿಲ್ಲೆಗೆ ಅತ್ಯಾಧುನಿಕ ಸೌಲಭ್ಯ ಹೊಂದಿರುವ ಅಗ್ನಿಶಾಮಕ ದಳ ಅತ್ಯಂತ ಅಗತ್ಯವಾಗಿದ್ದು ತುರ್ತು ಸೇವೆಗಳ ಬಗ್ಗೆ ವಿಶೇಷ ಆದ್ಯತೆ ನೀಡಿ ಸಾರ್ವಜನಿಕರ ಜೀವ ಹಾಗೂ ಆಸ್ತಿ ಪಾಸ್ತಿ ರಕ್ಷಣೆಗೆ ವಿಶೇಷ ಆದ್ಯತೆ ನೀಡಬೇಕು. ರಾಜ್ಯ ಸರ್ಕಾರ ಉಡುಪಿ ಜಿಲ್ಲೆಯ ಜನತೆಯ ತಾಳ್ಮೆ ಪರೀಕ್ಷೆ ಮಾಡಲು ಮುಂದಾದರೆ ಉಗ್ರ ಹೋರಾಟ ಅನಿವಾರ್ಯವಾಗಲಿದೆ ಎಂದು ಎಚ್ಚರಿಕೆ ನೀಡುವುದಾಗಿ ಮನವಿಯಲ್ಲಿ ಹೇಳಿದ್ದಾರೆ.

ಈ ವೇಳೆ ಬಿಜೆಪಿ ಯುವಮೋರ್ಚಾ ಪದಾಧಿಕಾರಿಗಳಾದ ಪ್ರದೀಪ್ ಕುಂದರ್, ಸುಶಾಂತ್ ಪೂಜಾರಿ, ಮಿಥುನ್ ಅಮೀನ್, ಸಚಿನ್ ಪೂಜಾರಿ, ಗಣೇಶ್ ಸೂರಲು, ಭರತ್ ಪೂಜಾರಿ, ಅವಿನಾಶ್,ನಿತಿನ್ ಪೈ , ನಿಖಿಲ್ ಮಡಿವಾಳ್ , ಭೂಷಣ್ ಕುಮಾರ್ ಮೊದಲಾದವರು ಉಪಸ್ಥಿತರಿದ್ದರು.

ಹಂಗಾರಕಟ್ಟೆಯಲ್ಲಿ ಗೋಪಾಲಕೃಷ್ಣ ನಾಯರಿ ರಂಗಪ್ರಶಸ್ತಿ ಪ್ರದಾನ

ನಾಯರಿ ಶ್ರೇಷ್ಠ ಕಲಾವಿದರು: ಜಯಪ್ರಕಾಶ್ ಹೆಗ್ಡೆ



ಕೋಟ: ಅವಕಾಶಗಳು ಯಾರನ್ನೂ ಹುಡುಕಿ ಬರುವುದಿಲ್ಲ, ಸಿಕ್ಕ ಅವಕಾಶವನ್ನು ಸರಿಯಾಗಿ ಬಳಸಿಕೊಂಡರೆ ಮಾತ್ರ ಸಾಧನೆ ಸಾಧ್ಯ ಎಂದು ಮುಖಂಡ ಕೆ.ಜಯಪ್ರಕಾಶ್ ಹೆಗ್ಡೆ ಹೇಳಿದರು.

ಯಕ್ಷಗಾನ ಕಲಾ ಕೇಂದ್ರ ಹಂಗಾರಕಟ್ಟೆಯ ಸದಾನಂದ ರಂಗಮಂಟಪದಲ್ಲಿ ಬೆಂಗಳೂರಿನ ಸಮಸ್ತ ರಂಗ ಸಂಶೋಧನಾ ಕೇಂದ್ರದವತಿಯಿಂದನಡೆದಗೋಪಾಲಕೃಷ್ಣ ನಾಯರಿ ಅವರ ಸಂಸ್ಮರಣೆ ಮತ್ತು ರಂಗಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಗೋಪಾಲಕೃಷ್ಣ ನಾಯರಿ ಅವರಂತಹ ಕಲಾವಿದರಿಗೆ ಯಾರೂ ಅವಕಾಶವನ್ನು ಸೃಷ್ಟಿಸಿಕೊಟ್ಟಿಲ್ಲ, ಸ್ವತಃ ಅವಕಾಶವನ್ನು ಮಾಡಿಕೊಂಡು ಮೇಲೆ ಬಂದವರು. ನಾನು ಕೂಡ ಕಲಾವಿದ ಬದುಕಿನ ಬಗ್ಗೆ ಅವರೊಂದಿಗೆ ಬಹಳಷ್ಟು ಚರ್ಚೆ ಮಾಡಿದ್ದೇನೆ ಎಂದರು.

ಸಂಸ್ಮರಣಾ ಮಾತನ್ನಾಡಿದ ರಸರಂಗ ಕೋಟದಸುಧಾಮಣೂರುಗೋಪಾಲಕೃಷ್ಣ ನಾಯರಿ ಅವರೊಂದಿಗಿನ ಒಡನಾಟವನ್ನು ಸ್ಮರಿಸಿದರು. ಗಣೇಶ್ ರಾವ್ ಎಲ್ಲೂರು ಅಭಿನಂದನಾ ನುಡಿಗಳನ್ನಾಡಿದರು. ಗೋಪಾಲಕೃಷ್ಣ ನಾಯರಿ ಅವರ ಹಿರಿಯ ಸಹೋದರ ಕೆ. ರಾಧಾಕೃಷ್ಣ ನಾಯರಿ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಗ್ರಾಮೀಣ ಬ್ಯಾಂಕ್ ನಿವೃತ್ತ ಸಹಾಯಕ ಮಹಾ ಪ್ರಬಂಧಕ ಸೋಮಶೇಖರ ನಾಯರಿ ಇದ್ದರು. ಡಾ. ಕೀರ್ತಿರಾಜ್ ಸ್ವಾಗತಿಸಿದರು. ರಾಜಶೇಖರ ಹೆಬ್ಬಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ರಾಘವೇಂದ್ರ ನಾಯರಿ ನಿರೂಪಿಸಿದರು.

ನೃತ್ಯ ವೈವಿಧ್ಯ, ಯಕ್ಷಗಾನ ಪ್ರದರ್ಶನ

ಸಭಾ ಕಾರ್ಯಕ್ರಮದ ಪೂರ್ವದಲ್ಲಿ ನೃತ್ಯ ವೈವಿಧ್ಯ, ನಂತರ ಹಿರಿಯ ಕಲಾವಿದರಿಂದ ಭೀಷ್ಮ ಪ್ರತಿಜ್ಞೆ ಎಂಬ ಯಕ್ಷಗಾನ ಪ್ರದರ್ಶನ ನಡೆಯಿತು.

- **ಗೋಪಾಲಕೃಷ್ಣ ನಾಯರಿ ಅವರಂತಹ ಕಲಾವಿದರಿಗೆ ಯಾರೂ ಅವಕಾಶ ಸೃಷ್ಟಿಸಿಕೊಟ್ಟಿಲ್ಲ**
- **ಸ್ವತಃ ಅವಕಾಶ ಮಾಡಿಕೊಂಡು ಮೇಲೆ ಬಂದವರು**

ನಾಟಕದಿಂದ ಮಾನಸಿಕವಾಗಿ ನೆಮ್ಮದಿ

ನಾವು ಹವ್ಯಾಸಿ ಕಲಾವಿದರು. ನಮಗೆ ನಾಟಕ ಎನ್ನುವುದು ಒಂದು ಚಟ. ನಾಟಕ ಆರ್ಥಿಕವಾಗಿ ಏನು ಲಾಭವಿಲ್ಲದಿದ್ದರೂ ಮಾನಸಿಕವಾಗಿ ನೆಮ್ಮದಿ ಕೊಡುತ್ತದೆ ಎಂದು ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಕಲಾವಿದ ಎಂ.ಎಸ್. ಭಟ್, ಹೇಳಿದರು. ಅಭಿಮಾನಿಗಳ ಪ್ರೀತಿ ಮತ್ತು ನೂರಾರು ಜನರ ಗೆಳೆತನ ಕೊಡುತ್ತದೆ. ಇದಕ್ಕಿಂತ ದೊಡ್ಡ ಸಂಬಳ ಇನ್ನಾವುದೂ ಇಲ್ಲ ಎಂದರು.

ಅಡುಗೆ ಅನಿಲ ದರ ಏರಿಕೆ ವಿರುದ್ಧ

ಕಾರ್ಕಳ ಕಾಂಗ್ರೆಸ್‌ನಿಂದ ಪ್ರತಿಭಟನೆ



ಕಾರ್ಕಳ: ಕೇಂದ್ರದ ಬಿಜೆಪಿ ಸರ್ಕಾರವು ಅಡುಗೆ ಅನಿಲ ದರ ಏರಿಸುವ ಮೂಲಕ ಜನಸಾಮಾನ್ಯರ ಮೇಲೆ ನಿರಂತರವಾಗಿ ಸವಾರಿ ಮಾಡುತ್ತಿದೆ ಎಂದು ಆರೋಪಿಸಿ, ಕಾರ್ಕಳ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಗುರುವಾರ ತಾಲೂಕು ಕಚೇರಿ ಮುಂಭಾಗ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಕಾಂಗ್ರೆಸ್ ಮುಖಂಡ ಉದಯಕುಮಾರ್ ಶೆಟ್ಟಿ ಮುನಿಯಾಲು, ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಖಾಲಿ ಗ್ಯಾಸ್ ಸಿಲಿಂಡರ್‌ಗಳನ್ನು ತಲೆಯ ಮೇಲೆ ಹೊತ್ತು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಗ್ಯಾರಂಟಿ ಸಮಿತಿ ಅಧ್ಯಕ್ಷ ಅಜಿತ್ ಹೆಗ್ಡೆ ಜಿಲ್ಲಾ ಮಾಧ್ಯಮ ವಕ್ತಾರ ಬಿಪಿನ್ ಚಂದ್ರಪಾಲ್ ನಕ್ರೆ, ಮುಖಂಡ ಶೇಖರ್ ಮಡಿವಾಳ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶುಭದ ರಾವ್, ಮಹಿಳಾ ಕಾಂಗ್ರೆಸ್‌ನ ಭಾನುಭಾಸ್ಕರ್, ಯುವ ಕಾಂಗ್ರೆಸ್‌ನ ಸೂರಜ್ ಶೆಟ್ಟಿ ಮುಖಂಡರಾದ ಮಲ್ಲಿಕಾ, ಅನಿತ ಡಿಸೋಜಾ, ಸುಧಾಕರ ಶೆಟ್ಟಿ ಸುನಿಲ್ ಭಂಡಾರಿ, ಪ್ರತಿಮಾ ರಾಣೆ ಸೇರಿದಂತೆ ಅನೇಕ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು.

ಅಣಕು ಪ್ರದರ್ಶನ

ರಸ್ತೆಯಲ್ಲೇ ಒಲೆ ಹೂಡಿ, ಬೆಂಕಿ ಉರಿಸದೆಯೇ ಅದರ ಮೇಲೆ ಅಡುಗೆ ಪಾತ್ರೆಗಳನ್ನು ಇಟ್ಟು ಅಣಕು ಪ್ರದರ್ಶನ ನಡೆಸುವ ಮೂಲಕ ಬೆಲೆ ಏರಿಕೆಯ ತೀವ್ರತೆಯನ್ನು ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಟ್ಟರು.

ಸಾಲಿಗ್ರಾಮ: ವಸಂತ ವೇದ ಪಾಠ ಶಿಬಿರ



ಕೋಟ: ಸಾಲಿಗ್ರಾಮ ಶ್ರೀ ಗುರುನರಸಿಂಹ ದೇವಸ್ಥಾನ ಇವರ ಆಶ್ರಯದಲ್ಲಿ ದೇವಳದಲ್ಲಿ ವಸಂತ ವೇದ ಪಾಠ ಶಿಬಿರವನ್ನು ಆಯೋಜಸಲಾಯಿತು. ಮಂಗಳೂರಿನ ವಾಗೀಶ್ವರಿ ಪ್ರಕಾಶನದ ಅಧ್ಯಕ್ಷೆ ಡಾ. ವಾಗೀಶ್ವರಿ ಶಿವರಾಂ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿದ್ದರು. ಕೂಟ ಮಹಾಜಗತ್ತು ಸಾಲಿಗ್ರಾಮ ಅಂಗಸಂಸ್ಥೆಯ ಮಾಜಿ ಅಧ್ಯಕ್ಷ ಶ್ರೀಪತಿ ಅಧಿಕಾರಿ ಸ್ವಾಗತಿಸಿದರು. ದೇಗುಲದ ಉಪಾಧ್ಯಕ್ಷ ಚಂದ್ರಶೇಖರ್ ಉಪಾಧ್ಯಾಯ, ದೇಗುಲದ ಟ್ರಸ್ಟಿ ತಾರಾನಾಥ ಹೊಳ್ಳ ಕೃತಜ್ಞತೆ ಸಲ್ಲಿಸಿದರು.



ಬೈಂದೂರು ತಾಲೂಕಿನ ಶಿರೂರು ಅಳ್ವೆಗದ್ದೆ ನೂತನ ಶಿಲಾಮಯ ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ಮಂಗಳವಾರ ಅಂಗಾರಕ ಸಂಕಷ್ಟಿ ಪೂಜೆ ನೆರವೇರಿತು. ದೇವಸ್ಥಾನದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ರಾಮ ಎನ್. ಅಳ್ವೆಗದ್ದೆ, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಗಣಪತಿ ಎಸ್. ಮೊಗವೀರ, ಗೌರವಾಧ್ಯಕ್ಷ ನಾರಾಯಣ ಟಿ. ಅಳ್ವೆಗದ್ದೆ ಇದ್ದರು.

ಡಾ.ಬಿ.ಬಿ. ಹೆಗ್ಡೆ ಕಾಲೇಜಿನ ಪ್ರಾಕ್ತನ

ವಿದ್ಯಾರ್ಥಿ ಸಂಘದ 'ಅಲುಮ್ನಿ ಡೇ'



ಕುಂದಾಪುರ: ಕಾಲೇಜಿನ ಶ್ರೇಯೋಭಿವೃದ್ಧಿ ಹಾಗೂ ಮೌಲ್ಯಪೂರ್ಣ ಪರಂಪರೆಯನ್ನು ಉಳಿಸಿ ಬೆಳೆಸುವಲ್ಲಿ ಪ್ರಾಕ್ತನ ವಿದ್ಯಾರ್ಥಿ ಸಂಘದ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಜೊತೆಗೆ ಪ್ರಾಕ್ತನ ವಿದ್ಯಾರ್ಥಿಗಳು ಸಂಸ್ಥೆಯೊಂದಿಗೆ ನಿರಂತರ ಬಾಂಧವ್ಯವನ್ನು ಉಳಿಸಿಕೊಂಡು, ಪ್ರಸಕ್ತ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಿರುವುದು ಶ್ಲಾಘನೀಯ ಎಂದು ಕಾಲೇಜಿನ ಪ್ರಾಂಶುಪಾಲ ಪ್ರೊ. ಡಾ.ಕೆ.ಉಮೇಶ ಶೆಟ್ಟಿ ಹೇಳಿದರು.

ಕುಂದಾಪುರದ ಡಾ.ಬಿ.ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ಪ್ರಾಕ್ತನ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಕಾಲೇಜು ವಾರ್ಷಿಕೋತ್ಸವದ ಸಂದರ್ಭ ಕಾಲೇಜಿನ ಬಿ.ಎಂ.ಎಸ್. ಕ್ರೀಡಾಂಗಣದಲ್ಲಿ ನಡೆದ 'ಅಲುಮ್ನಿ ಡೇ' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಇದೇ ಸಂದರ್ಭದಲ್ಲಿ ಮಂಗಳೂರು ವಿವಿ ಪದವಿ ಪರೀಕ್ಷೆಯಲ್ಲಿ ರ‍್ಯಾಂಕ್ ವಿಜೇತ ವಿದ್ಯಾರ್ಥಿನಿಯರಾದ ಶ್ರೇಯಾ, ಸುಹಾನಿ, ನಿಖಿತಾ ಹಾಗೂ ಶ್ರದ್ಧಾ ಆರ್. ಅವರನ್ನು ಪ್ರಾಕ್ತನ ವಿದ್ಯಾರ್ಥಿ ಸಂಘದಿಂದ ಸನ್ಮಾನಿಸಲಾಯಿತು. ಉಪ ಪ್ರಾಂಶುಪಾಲ ಡಾ.ಚೇತನ ಶೆಟ್ಟಿ ಕೋವಾಡಿ, ಆಡಳಿತ ನಿಕಾಯಕ ರಕ್ಷಿತ್ ರಾವ್ ಗುಜ್ಜಾಡಿ, ಪ್ರಾಕ್ತನ ವಿದ್ಯಾರ್ಥಿ ಸಂಘದ ಅಧ್ಯಕ್ಷ ಯೋಗೀಶ ಶ್ಯಾನುಭೋಗ್ ಹಾಗೂ ಖಜಾಂಚಿ ಸಚಿನದ ದೇವಾಡಿಗ ಇದ್ದರು.

ದೀಪಾ ಪೂಜಾರಿ ವಾರ್ಷಿಕ ವರದಿ ವಾಚಿಸಿದರು. ಪ್ರೀತಿ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಕೋಟ ಮೆಸ್ಕಾಂ ಕಚೇರಿಯಲ್ಲಿ ಜನಸಂಪರ್ಕ ಸಭೆ | ಪ್ರತಿ ಮಂಗಳವಾರ ಹೆದ್ದಾರಿ ಕಾಮಗಾರಿ ನೆಪದಲ್ಲಿ ವಿದ್ಯುತ್ ಕಡಿತ, ಒಪನ್ ಕೇಬಲ್ ಅಳವಡಿಕೆಗೆ ಆಕ್ಷೇಪ

ಮಾಸಿಕ ವಿದ್ಯುತ್ ಶುಲ್ಕದ ಜೊತೆ ಹೆಚ್ಚುವರಿ ಮೊತ್ತ ವಸೂಲಿ ವಿರುದ್ಧ ಮೆಸ್ಕಾಂ ಗ್ರಾಹಕರ ಆಕ್ರೋಶ



ಕೋಟ: ವಿದ್ಯುತ್ ಮಾಸಿಕ ಬಿಲ್‌ನಲ್ಲಿ ಹೆಚ್ಚುವರಿ ಶುಲ್ಕ ಅಳವಡಿಸಿ ನೀಡಲಾಗುತ್ತಿದೆ ಎಂದು ಜನಸಂಪರ್ಕ ಸಭೆಯಲ್ಲಿ ಆಕ್ರೋಶ ಹೊರಹಾಕಿದ ಘಟನೆ ಬುಧವಾರ ನಡೆಯಿತು.

ಕೋಟ ಮೆಸ್ಕಾಂ ಉಪವಿಭಾಗದ ಕಚೇರಿಯ ಸಭಾಂಗಣದಲ್ಲಿಮೆಸ್ಕಾಂಉಪವಿಭಾಗದಜನಸಂಪರ್ಕ ಸಭೆಯಲ್ಲಿ ಕೋಟತಟ್ಟು ಗ್ರಾಮಪಂಚಾಯತ್ ಮಾಜಿ ಸದಸ್ಯ ರವೀಂದ್ರ ತಿಂಗಳಾಯ ಸಹಿತ ಹಲವರು ಬಿಲ್ ಹಿಡಿದು ಪ್ರತಿಭಟಿಸಿ ಮೆಸ್ಕಾಂ ಪ್ರಸ್ತುತ ಸರ್ಕಾರ ಗೃಹಜ್ಯೋತಿ ಯೋಜನೆಯ ನೆಪದಲ್ಲಿ ಗ್ರಾಹಕರಿಗೆ ಬರೆ ಎಳೆಯುತ್ತಿದ್ದು ಹಗಲು ದರೋಡೆ ರೀತಿಯಲ್ಲಿ ಡಿಜಿಟಲ್ ಹಗರಣ ನಡೆಸುತ್ತಿದೆ.ಇದಕ್ಕೆ ಪರಿಹಾರ ಕಂಡುಕೊಳ್ಳದ ವಿನಃ ಸಭೆಯಿಂದ ತೆರಳುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ರಾಘವೇಂದ್ರ ಐರೋಡಿ ಧ್ವನಿಗೂಡಿಸಿ, ತನ್ನದು ಇದೇ ಸಮಸ್ಯೆ. ಹಾಗಾದರೆ ನಮ್ಮ ಹಣಕ್ಕೆ ಬೆಲೆಯೇ ಇಲ್ಲವೇ ಎಂದು ಪ್ರಶ್ನಿಸಿದರು. ಈ ಬಗ್ಗೆ ಮೆಸ್ಕಾಂ ಜಿಲ್ಲಾ ಅಧೀಕ್ಷಕ ಇಂಜಿನಿಯರ್ ಬಿ.ರಾಕೇಶ್ ಈ ಬಗ್ಗೆ ಮೆಸ್ಕಾಂ ಮೇಲಾಧಿಕಾರಿಗಳಿಗೆ ಪತ್ರಬರೆದು ಪರಿಹಾರ ಕಂಡುಕೊಳ್ಳಲಿದೆ ಎಂದು ಗ್ರಾಹಕರನ್ನು ಸಮಾಧಾನ ಪಡಿಸಿದರು.

ಪ್ರತಿ ಮಂಗಳವಾರ ಹೆದ್ದಾರಿ ಕಾಮಗಾರಿ ನೆಪದಲ್ಲಿ ವಿದ್ಯುತ್ ಕಡಿತ ಮಾಡಲಾಗುತ್ತಿದೆ ಎಂದು ಸಾಮಾಜಿಕ ಕಾರ್ಯಕರ್ತ ನಾಗರಾಜ್ ಗಾಣಿಗ ಮತ್ತು ಸುರೇಶ್ ಗಿಳಿಯಾರ್ ದೂರಿದರು. ಈ ಬಗ್ಗೆ ಮುಂದಿನ ದಿನಗಳಲ್ಲಿ ಹೀಗಾಗದಂತೆ ಕ್ರಮ ವಹಿಸುವುದಾಗಿ ತಿಳಿಸಿದರು.

ಟಿಸಿ ಸ್ಥಳಾಂತರದ ವಿರುದ್ಧ ಆಕ್ರೋಶ

ಖಾಸಗಿ ಸಂಸ್ಥೆಯೊಂದಿಗೆ ಒಡಂಬಡಿಕೆ ಅನುಮಾನ ಕೋಟದ ಬಟ್ಟೆ ಮಳಿಗೆಯೊಂದರ ಎದುರು ಇರುವ ವಿದ್ಯುತ್ ಪರಿವರ್ತಕವನ್ನು ಕೋಟ ಗ್ರಾ.ಪಂ. ಕುಡಿಯುವ ನೀರಿನ ಘಟಕದ ಸಮೀಪ ಸ್ಥಳಾಂತರಿಸಲಾಗಿದೆ. ಇದು ಸರಿಯಲ್ಲ, ಅವರ ಮಳಿಗೆಗೆ ಖಾಸಗಿಯಾಗಿ ಟಿಸಿ ನೀಡಲಾಗಿದೆ. ಅದು ಸಹ ಅವರ ಸ್ವಂತ ಸ್ಥಳದಲ್ಲಿ ಅಳವಡಿಸಬೇಕೆಂಬ ನಿಯಮವಿದೆ. ಆದರೆ ಪ್ರಸ್ತುತ ರಾಷ್ಟ್ರೀಯ ಹೆದ್ದಾರಿ ಒತ್ತವರಿ ಪಡಿಸಿಕೊಂಡ ಸ್ಥಳದಲ್ಲಿ ಇರಿಸಲಾಗಿದೆ ಅದಲ್ಲದೆ ಮಳಿಗೆ ಕಟ್ಟಡ ಕಬ್ಬಿಣದ ಪೈಪ್ ಅಳವಡಿಸಿ ಶೆಡ್ ರೀತಿ ಮೂರು ಅಂತಸ್ತಿನ ಮಳಿಗೆಯಾಗಿ ಪರಿವರ್ತಿಸಿ ಯಾವುದೇ ದಾಖಲೆಗಳನ್ನು ನೀಡದೆ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದಾರೆ. ಈ ಬಗ್ಗೆ ಕ್ರಮ ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಸಾಮಾಜಿಕ ಕಾರ್ಯಕರ್ತ ಸುರೇಶ್ ಗಿಳಿಯಾರು ಮತ್ತು ನಾಗರಾಜ್ ಗಾಣಿಗ ಆಗ್ರಹಿಸಿದರು.

ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಜಿಲ್ಲಾ ಮೆಸ್ಕಾಂ ಅಧೀಕ್ಷಕರು ಕೋಟ ಮೆಸ್ಕಾಂ ಇಂಜಿನಿಯರ್ ಪ್ರಶಾಂತ್ ಶೆಟ್ಟಿ ಸೂಚಿಸಿದರು.

ಸಾಲಿಗ್ರಾಮ ರಾಷ್ಟ್ರೀಯ ಹೆದ್ದಾರಿ ಸರ್ವಿಸ್ ರಸ್ತೆ ಕಾಮಗಾರಿ ನಡೆಯುತ್ತಿದ್ದು ಚೇಂಪಿ ಸಮೀಪದ ಡಿವೈನ್ ಪಾರ್ಕ್ ಎದುರು ಮೆಸ್ಕಾಂ ಅಂಡರ್ ಗ್ರೌಂಡ್ ಕೇಬಲ್ ಅಳವಡಿಸಲಾಗಿದೆ ಇದು ಸರಿಯೇ ಎಂದು ಪ್ರಶ್ನಿಸಿದ ನಾಗರಾಜ ಗಾಣಿಗ, ಅಲ್ಲೆ ಸಮೀಪದ ಕಟ್ಟಡ ಎದುರು ಒಪನ್ ಕೇಬಲ್ ಅಳವಡಿಸಲಾಗಿದೆ. ಡಿವೈನ್ ಪಾರ್ಕ್‌ನವರಿಗೆ ಅಂಡರ್ ಗ್ರೌಂಡ್‌ನಲ್ಲಿ ಅಳವಡಿಸಿರುವುದನ್ನು ಎಂದು ಪ್ರಶ್ನಿಸಿದರು.

ಈ ಬಗ್ಗೆ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಚರ್ಚಿಸಿ ಮುಂದಿನ ಕ್ರಮಕೈಗೊಳ್ಳುವುದಾಗಿ ಮೆಸ್ಕಾಂ ಅಧೀಕ್ಷಕ ರಾಕೇಶ್ ಕುಮಾರ್ ಉತ್ತರಿಸಿದರು.

ಕುಂದಾಪುರ ಕಾರ್ಯನಿರ್ವಾಹಕ ಇಂಜಿನಿಯರ್ ಯಶವಂತ, ಕುಂದಾಪುರ ಉಪ ವಿಭಾಗದ ಲೆಕ್ಕಾಧಿಕಾರಿ ಶಿವ ಕುಮಾರ್, ಕೋಟ ವಿಭಾಗದ ಸಹಾಯಕ ಕಾರ್ಯವಾಹಕ ಇಂಜಿನಿಯರ್ ಪ್ರತಾಪ್‌ಚಂದ್ರ ಶೆಟ್ಟಿ ಸಹಾಯಕ ಇಂಜಿನಿಯರ್ (ತಾಂತ್ರಿಕ) ಶ್ರೀಕಾಂತ್, ಕೋಟ ಮೆಸ್ಕಾಂ ಇಂಜಿನಿಯರ್ ಪ್ರಶಾಂತ್ ಶೆಟ್ಟಿ ವಿವಿಧ ಶಾಖಾಧಿಕಾರಿಗಳಾದ ಮಹೇಶ್, ವೈಭವ್ ಶೆಟ್ಟಿ, ಲೆಕ್ಕಾಧಿಕಾರಿ ಕೆ.ಮಹೇಶ್ ಇದ್ದರು.